UNIVERSAL LIBRARY
OU_198649
UNIVERSAL LIBRARY

OUP—55—7-7-66—10,000

**OSMANIA UNIVERSITY LIBRARY**

Call No. K83 N72R

Accession No. K436

Author

Title ರಂಗಮ್ಮನ ವಠಾರ

This book should be returned on or before the date last marked below.

# ರಂಗಮ್ಮನ ವಠಾರ

ನಿರಂಜನ

ವಾಹಿನಿ ಪ್ರಕಾಶನ
ಜಯಚಾಮರಾಜ ರಸ್ತೆ, ಬೆಂಗಳೂರು-೨

ಮೊದಲನೆಯ ಮುದ್ರಣ : ೧೯೫೪

ಮುಖಚಿತ್ರ :

**ಆರ್. ಜಿ. ಮಧುಸೂದನ್**

ಮುದ್ರಕರು :

ಎಂ. ಎಸ್. ಚಿಂತಾಮಣಿ, ಬಿ. ಎಸ್ಸಿ.,

"ಈಸ್ಟರ್ನ್ ಪ್ರೆಸ್", ಜಯಚಾಮರಾಜ ರಸ್ತೆ,

ಬೆಂಗಳೂರು–೨.

ಮೋಟಾರು ಮೈಮೇಲೆ ಹರಿದು

ಅಪಮೃತ್ಯುವಿಗೆ ತುತ್ತಾದ

ಪ್ರಖ್ಯಾತ ಬರೆಹಗಾರ-ಪತ್ರಿಕೋದ್ಯೋಗಿ

**ಎಂ. ಹರಿದಾಸರಾಯರ**

ನೆನಪಿಗೆ

# ೧

ಅಂಗಳದಲ್ಲಿ ಹೆಂಗಸರು ಗುಂಪುಕಟ್ಟಿಕೊಂಡು ಗುಸು ಗುಸು ಮಾತನಾಡುತ್ತಿದ್ದರು. ಆ ಮಾತುಕತೆಯ ನಡುವೆ ಒಮ್ಮೆಲೆ ಅವರು ಕಿವಿ ನಿಗುರಿಸಬೇಕಾಯಿತು. ಸದ್ದು, ಮೊದಲು ಅಸ್ಪಷ್ಟವಾಗಿದ್ದುದು ಕ್ರಮೇಣ ಸ್ಪಷ್ಟವಾಗಿಯೆ ಕೇಳಿಸಿತು.

ಟಕ್-ಟಕ್-ಟಕ್....

ವಠಾರದ ನಡುವಿನ ಎರಡಡಿ ಅಗಲದ ಓಣಿಯಲ್ಲಿ ನಡೆಗೋಲನ್ನೂರಿಕೊಂಡು ರಂಗಮ್ಮ ನಡೆದು ಬರುತಿದ್ದರು. ಎಂದಿನಂತೆ, ಆ ಸದ್ದಿನ ಜತೆಯಲ್ಲೆ ಇದ್ದ ಕೆಲವು ಹಲ್ಲುಗಳನ್ನು ಕಡಿಯುವ ಸಪ್ಪಳ. ಆದರೊಡನೆ ಬೆರೆಯಲೆಂದು ಗಂಟಲಿನಿಂದ ಹೊರಟು ಅಲ್ಲಿಯೆ ಇಂಗುತಿದ್ದ ಆಂ-ಊಂ-ನರಳಾಟ.

ವಯಸ್ಸಾಗಿದ್ದ ರಂಗಮ್ಮ ಮೆಲ್ಲನೆ ನಡೆದುಬಂದು ಹೆಂಗಸರ ಗುಂಪಿನೆದುರು ನಿಂತರು. ಬಾಗಿದ್ದ ಅವರ ಬೆನ್ನು ಕ್ಷಣಕಾಲ ನೇರವಾಗಿರಲು ಯತ್ನಿಸಿತು. ಆ ಯತ್ನಕ್ಕೆ ಬೆಂಬಲವಾಗಿ ಬಲಗೈ ಸೊಂಟದ ಮೇಲೇರಿತು.

ಉಳಿದೆಲ್ಲರ ಮುಖಗಳೂ ಪ್ರಶ್ನಾರ್ಥಕ ಚಿಹ್ನೆಯಾಗಿ ರಂಗಮ್ಮನತ್ತ ತಿರುಗಿದುವು. ರಂಗಮ್ಮ ನಿಟ್ಟುಸಿರು ಬಿಟ್ಟರು, ತಲೆಯಾಡಿಸಿದರು. ಏನು ಅದರರ್ಥ ? ಆಸೆ ಇಲ್ಲವೆ ಹಾಗಾದರೆ ? ನಾರಾಯಣಿ ಬದುಕುವ ಆಸೆಯೇ ಇಲ್ಲವೆ ?

ರಂಗಮ್ಮ ಮತ್ತಷ್ಟು ಬಿಗಿಯಾಗಿ ತುಟಿಗಳನ್ನು ಬಿಗಿದುಕೊಂಡರು. ಬೆನ್ನು ಮೊದಲಿನಂತೆ ಬಾಗಿತು. ಕಾಲುಗಳು ಹಿಂತಿರುಗಿ

ದುವು. ಟಕ್–ಟಕ್–ಟಕ್....ರಂಗಮ್ಮ ಸಾವಧಾನವಾಗಿ ನಡೆದು, ಆ ನಡುಹಗಲಲ್ಲೂ ಕತ್ತಲಾಗಿಯೇ ಕಾಣಿಸುತ್ತಿದ್ದ ತಮ್ಮ ಗೂಡಿ ನೊಳಕ್ಕೆ ಸೇರಿಕೊಂಡರು.

ಮತ್ತೆ ಹೆಂಗಸರ ಗುಸು ಗುಸು ಮಾತು........

"ಅಯ್ಯೋ ಪಾಪ !"

"ಆ ಪುಟ್ಟ ಪುಟ್ಟ ಕೂಸುಗಳ್ನ ಯಾರು ನೋಡ್ಕೊಳ್ತಾರು ಇನ್ನು ?"

"ಆತನ ಕೆಲಸ ಬೇರೆ ಹೋಯ್ತಂತೆ."

"ಹೌದೆ ? ನಿಜವೆ ? ಅಯ್ಯೊ !"

ಆ ವಠಾರಕ್ಕೆ ಅದೇ ವರ್ಷ ಬಿಡಾರ ಬಂದಿದ್ದ, ಮಕ್ಕಳು ಮರಿ ಕಾಹಿಲೆ ಕಸಾಲೆ ಎಂದರೇನೆಂಬುದನ್ನು ತಿಳಿಯದ, ಎಳೆಯ ಗೃಹಿಣಿ ಯೊಬ್ಬಳು ದೇವರನ್ನು ಟೀಕಿಸಿದಳು.

"ಆ ಪರಮಾತ್ಮ ಇಂಥ ಕಷ್ಟ ಕೊಡಬಾರದು !"

ಎಲ್ಲರೂ ಆ ಸ್ವರ ಕೇಳಿ ಅತ್ತ ನೋಡಿದರು. ಆದರೆ ಯಾರೂ ಮಾತನಾಡಲಿಲ್ಲ. ಆ ಪುಟ್ಟ ಮನೆಯೊಡತಿಯ ಮುಖ ಕೆಂಪೇರಿ ಆಕೆ ತನ್ನ ಬಿಲ ಸೇರಿಕೊಂಡಳು.

ಹುಟ್ಟಿದ್ದ ನಾಲ್ಕು ಮಕ್ಕಳನ್ನೂ ಕಳೆದುಕೊಂಡಿದ್ದ ಬಡ ಹೆಂಗ ಸೊಬ್ಬಳು, ಒಳಹೋದ ಆ ಯುವತಿಯನ್ನೆ ತನ್ನ ದೃಷ್ಟಿಯಿಂದ ಹಿಂಬಾ ಲಿಸಿ, "ಹೂಂ" ಎಂದು ನಿಟ್ಟುಸಿರು ಬಿಟ್ಟಳು.

"ಆತ ಇದಾರೋ ?"

"ಇಲ್ದೇನು ಮಾಡ್ತಾರೆ ಪಾಪ ! ಹುಡುಗರಿಗೆ ಗಂಜಿ ಬೇಯಿಸಿ ಯಾದರೂ ಹಾಕೋದು ಬೇಡ್ವೆ ?"

"ಇಲ್ಲ ಕಣ್ರೀ. ಆತ ಒಲೆ ಹಚ್ಚೇ ಇಲ್ಲ. ಬೆಳಿಗ್ಗೆ ನಾನೇ ಒಂದಿಷ್ಟು ದೋಸೆ ಹುಯ್ದು ಹುಡುಗರಿಗೆ ಕೊಟ್ಟೆ."

ಹಾಗೆ ಹೇಳಿದ ಹೆಂಗಸು ಮೂರು ಮಕ್ಕಳ ತಾಯಿ. ಆಕೆಗೂ ನಾರಾಯಣಿಗೂ ಹೇಳಿಕೊಳ್ಳುವಂತಹ ಸ್ನೇಹವೇನೂ ಇರಲಿಲ್ಲ. ಅವರೊಳಗೆ ವೈಮನಸ್ಸಿತ್ತು, ಎಂದರೆ ಹೆಚ್ಚು ಸರಿಹೋಗಬಹುದು.

ನಾರಾಯಣಿಯ ಎಂಟು ವರ್ಷದ ಹಿರಿಯ ಮಗ ಮಹಾ ತುಂಟ ನಾಗಿದ್ದ. ಆತನ ಧಾಳಿಯಿಂದ ತನ್ನ ಗುಬ್ಬಚ್ಚಿಗಳನ್ನು ಕಾಪಾಡುವದೇ ಆ ಹೆಂಗಸಿನ ಪಾಲಿಗೊಂದು ಮಹಾ ಸಾಹಸವಾಗಿತ್ತು. ಹೀಗಿದ್ದರೂ, ಮರಣಶಯ್ಯೆಯಲ್ಲಿ ಮಲಗಿದ್ದ ನಾರಾಯಣಿಯ ಮಕ್ಕಳಿಗೆ ಆಕೆ ಈ ದಿನ ತಿನಿಸು ಕೊಟ್ಟಿದ್ದಳು.

ಅದು ಹೆಮ್ಮೆಪಡುವಂತಹ ಔದಾರ್ಯವೆಂದು ಭಾವಿಸಿ ಆಕೆ ಆ ವಿಷಯ ಪ್ರಸ್ತಾಪಿಸಿರಲಿಲ್ಲ. ಹಾಗೆ ಮಾಡಿದುದು ಆಡಿದುದು ಅಸ್ವಾಭಾವಿಕವಾಗಿಯೂ ಇತರರಿಗೆ ತೋರಲಿಲ್ಲ.

ಸದ್ಗುಣ ಸಂಪನ್ನೆಯಾಗಿರಲಿಲ್ಲ ನಾರಾಯಣಿ–ಮಹಾ ಸಾಧ್ವಿ ಯಾಗಿರಲಿಲ್ಲ. ಆ ವಠಾರಕ್ಕೆ ಆಕೆ ಬಂದುದು ಚೊಚ್ಚಲ ಬಾಣಂತಿ ಯಾಗಿ. ಯುದ್ಧ ನಡೆಯುತ್ತಿದ್ದ ಕಾಲ. ವಿಮಾನ ಕಾರ್ಖಾನೆಯಲ್ಲಿ ಗಂಡನಿಗೆ ಕೆಲಸವಿತ್ತು. ಸ್ವಲ್ಪ ದಿನ ಅವರು, ನಾಲ್ಕು ಜನ ಅಸೂಯೆ ಪಡುವ ಹಾಗೆಯೇ ಇದ್ದರೆನ್ನಬಹುದು. ಯುದ್ಧ ಮುಗಿಯಿತು. ನಾರಾಯಣಿ ಗಂಡ, ಕೆಲಸ ಕಳೆದುಕೊಂಡ ಸಹಸ್ರ ಸಹಸ್ರ ಜನರಲ್ಲಿ ಒಬ್ಬನಾದ. ನಿರುದ್ಯೋಗ, ಆ ಬಳಿಕ ಸಣ್ಣ ಪುಟ್ಟ ಕೆಲಸ, ಮತ್ತೆ ನಿರುದ್ಯೋಗ, ಮತ್ತೊಮ್ಮೆ ಎಲ್ಲಾದರೂ ಕೆಲಸ. ಸಾಕಷ್ಟು ಸಂಪಾದನೆಯಿಲ್ಲದೆ ಬಾಳು ಸಂಕಟಮಯವಾಯಿತು. ಹೀಗಿದ್ದರೂ ಮಕ್ಕಳಾಗುವುದು ನಿಲ್ಲಲಿಲ್ಲ. ಈ ಏಳು ವರ್ಷಗಳ ಅಂತರದಲ್ಲಿ ಮೂರು. ಪ್ರತಿಯೊಂದು ಹೆರಿಗೆಯಾದಂತೆ ನಾರಾಯಣಿ ಹೆಚ್ಚು ಹೆಚ್ಚು ಬಡವಾಗುತ್ತ ನಡೆದಳು. ಇತ್ತೀಚೆಗೆ ಬಾಣಂತಿಯಾಗಿ ಒಂದು ವರ್ಷವಾದರೂ ಆಕೆ ಚೇತರಿಸಿಕೊಳ್ಳುವ ಚಿಹ್ನೆ ತೋರಲಿಲ್ಲ.... ಶೀಷೆ ಶೀಷೆ ತುಂಬ ಬಣ್ಣ ಬಣ್ಣದ ಔಷಧಿ–ಒಂದೆರಡು ಸೂಜಿ ಮದ್ದು ಕೂಡಾ. ಧರ್ಮಾಸ್ಪತ್ರೆಗೆ ಹತ್ತಾರು ಸಾರಿ ಅಲೆದಾಟ....ಇಷ್ಟೆ ಆಗಿದ್ದರೆ ನಾರಾಯಣಿ 'ಕೆಟ್ಟವಳು' ಎನ್ನಿಸಿಕೊಳ್ಳಬೇಕಾದ್ದಿರಲಿಲ್ಲ. ಆದರೆ ಆ ಏಳು ವರ್ಷಗಳಲ್ಲಿ ನಾರಾಯಣಿ ಏನೋ ಆಗಿ ಹೋಗಿದ್ದಳು. ಆಗಿನ ಮಾತಿನಮಲ್ಲಿ, ಸ್ನೇಹಮಯಿ, ಈಗ ಮಹಾ ಮುಂಗೋಪಿ. ನಿಷ್ಕಾರಣವಾಗಿ ರೇಗಿ ಸಿಕ್ಕ ಸಿಕ್ಕವರೊಡನೆ ಜಗಳ ಕಾಯುತಿದ್ದಳು.

ಒಮ್ಮೆ ಎದುರು ಬಿಡಾರದಿಂದ ಎರಡು ತುಂಡು ಸೌದೆ ಕದ್ದಳೆಂಬ ಆರೋಪ ಆಕೆಯ ಮೇಲೆ ಹೊರಿಸಲ್ಪಟ್ಟಿತು. ಆಗ ವಠಾರ ಧೂಳಿದ್ದು ಹೋಗುವ ಹಾಗೆ ನಾರಾಯಣಿ ಕಿರಿಚಿಕೊಂಡಿದ್ದಳು.

"ನನ್ನ ಕಳ್ಳಿ ಅಂದೋರ ನಾಲಿಗೆ ಬಿದ್ದು ಹೋಗ! ತೋರ್ಸಿ ನಾನು ಕದ್ದ ಸೌದೇನ! ಕೊಡಿ ರುಜುವಾತು!"

ಆ ಆಹ್ವಾನವನ್ನು ಸ್ವೀಕರಿಸುವುದು ಸುಲಭವಾಗಿರಲಿಲ್ಲ. ಎಲ್ಲಿತ್ತು ಸಾಕ್ಷ್ಯ? ಹಿಡಿ ಬೂದಿಯನ್ನೆತ್ತಿ, ಇದು ಈ ಮನೆಯ ಸೌದೇ ಬೂದಿ ಎನ್ನುವುದು ಸಾಧ್ಯವಿತ್ತೆ? ನಾರಾಯಣಿ ತಲೆಗೂದಲು ಕೆದರಿ ಕಿತ್ತಾಡಿ, ಕಣ್ಣು ಕೆಂಪಗೆ ಮಾಡಿ, ಅಂಗೈಯಿಂದ ತಲೆ ಚಚ್ಚಿಕೊಂಡು, ತಾನು ನಿರಪರಾಧಿಯೆಂದು ತೋರಿಸಿ ಕೊಡಲು ಯತ್ನಿಸಿದ್ದಳು. ಆದರೆ, ಆಕೆ ಅಪರಾಧಿ ಎಂಬ ವಿಷಯದಲ್ಲಿ ಯಾರಿಗೂ ಸಂದೇಹವಿರಲಿಲ್ಲ.

ವಾಸ್ತವವಾಗಿ ನಾರಾಯಣಿ ಕದ್ದೂ ಇದ್ದಳು.

ಅದು ಎರಡು ವರ್ಷಗಳಿಗೆ ಹಿಂದಿನ ಮಾತು. ಆ ದಿನದಿಂದ ಎದುರು ಬಿಡಾರದ, ಎರಡೇ ಅಡಿ ಅಂತರದಲ್ಲಿದ್ದ ಎದುರು ಬಿಡಾರದ ಮೀನಾಕ್ಷಮ್ಮನೂ ಅವಳ ಮನೆಯವರೂ ನಾರಾಯಣಿಯ ಸಂಸಾರ ದೊಡನೆ ಮಾತು ಬಿಟ್ಟಿದ್ದರು. ಮೀನಾಕ್ಷಮ್ಮನಿಗಿದ್ದುದು ಅದೇ ಆಗ ಶಾಲೆಗೆ ಹೋಗತೊಡಗಿದ್ದ ಒಬ್ಬನೇ ಮಗ. ಆತ ನಾರಾಯಣಿಯ ಮಕ್ಕಳೊಡನೆ ಆಟವಾಡದಂತೆ ನೋಡಲು ಮೀನಾಕ್ಷಮ್ಮ ಮಾಡಿವ ಪ್ರಯತ್ನ ಅಷ್ಟಿಷ್ಟಲ್ಲ. ನಾರಾಯಣಿಯ ದೊಡ್ಡ ಹುಡುಗನೂ, ಮೀನಾಕ್ಷಮ್ಮನ ಮಗನೂ ಹೋಗುತ್ತಿದ್ದುದು ಒಂದೇ ಶಾಲೆಗೆ.

ಒಂದು ದಿನ ಶಾಲೆಗೆ ಹೋಗುತ್ತ ಮಾತಿಗೆ ಮಾತು ಬೆಳೆದು ಮೀನಾಕ್ಷಮ್ಮನ ಮಗ ನಾರಾಯಣಿಯ ಹುಡುಗನಿಗೆ ಹೇಳಿದ:

"ನಿಮ್ಮಮ್ಮ ಸೌದೆ ಕಳ್ಳಿ"

"ಇನ್ನೊಮ್ಮೆ ಹೇಳು!"

ಅದೇ ಮಾತು ಇನ್ನೊಮ್ಮೆ.

ಪರಿಣಾಮ, ಬೀದಿಯಲ್ಲಿ ಹುಡುಗರೆಲ್ಲ ಗುಂಪು ಕಟ್ಟಿಕೊಂಡು

ನೋಡಿದ್ದೊಂದು ಜಂಗೀ ಕುಸ್ತಿ. ಕೈಯುಗುರಿನಿಂದ ಒಬ್ಬರು ಇನ್ನೊಬ್ಬರ ಮುಖ ಪರಚಿ ಗಾಯಮಾಡಿದರು. ಅಂಗಿ ಹರಿದರು. ವರದಿ ಮನೆಗೆ ಬಂದಾಗ ವಠಾರದ ಆ ತಾಯಂದಿರೊಳಗೆ ಜಗಳ ವಾಯಿತು.

ಆ ಇಬ್ಬರು ಹುಡುಗರೇನೋ ಅದನ್ನೆಲ್ಲ ಬೇಗನೆ ಮರೆತು ವಠಾರದ ಹೊರಗೆ ಸ್ನೇಹಿತರಾಗಿಯೆ ಇದ್ದುದು ನಿಜ, ಆದರೆ ಹೆಂಗಸರು ಒಬ್ಬರನ್ನೊಬ್ಬರು ಕ್ಷಮಿಸಲಿಲ್ಲ.

ನಾರಾಯಣಿಗಿಂತಲೂ ಹಿಂದೆಯೇ ಆ ವಠಾರದಲ್ಲಿ ವಾಸ ಮಾಡುತ್ತಿದ್ದ ಸಂಸಾರಗಳೂ ಇದ್ದುವು; ಅನಂತರ ಬಂದವರೂ ಇದ್ದರು. ಅವರೆಲ್ಲರಿಗೂ ನಾರಾಯಣಿ ಪರಿಚಿತಳಾಗಿದ್ದಳು. ಸ್ನೇಹ ವನ್ನು ಯಾಚಿಸಿ ತಾವಾಗಿಯೇ ಆಕೆಯ ಬಳಿಗೆ ಹೋಗಬೇಕೆಂದು ಅವ ರಲ್ಲಿ ಯಾರಿಗೂ ಎಂದೂ ಅನಿಸಿರಲಿಲ್ಲ.

ಆದರೆ ಈ ದಿನ ಪ್ರತಿಯೊಂದು ಹೃದಯವನ್ನೂ ದುಃಖದ ಇಕ್ಕುಳ ಹಿಚುಕಿ ನೋಯಿಸುತ್ತಿತ್ತು.

ಬದುಕು–ಅದೇನು ಸುಖವೋ? ಆದರೆ ಸಾವು–ಅದು ಸುಖ ವಾಗಿತ್ತೆ?

ಅಂತಹ ಹೊತ್ತಿನಲ್ಲಿ ಆ ಹೆಂಗಸರಿಗೆ, ನಾರಾಯಣಿಯ ಕಡು ವೈರಿಯಾದ ಮೀನಾಕ್ಷಮ್ಮನ ನೆನಪಾಗದಿರಲಿಲ್ಲ. ಯಾರೂ, ಎಲ್ಲಿ ಮೀನಾಕ್ಷಮ್ಮ?–ಎಂದು ಸ್ವರವೆತ್ತಿ ಕೇಳದೆ ಹೋದರೂ, ಎಲ್ಲರ ದೃಷ್ಟಿಗಳೂ ಆಕೆಯನ್ನು ಹುಡುಕುತ್ತಿದ್ದುವು.

ಮೀನಾಕ್ಷಮ್ಮ ತನ್ನ ಮನೆಯ ತಲೆಬಾಗಿಲ ಬಳಿ ನಿಂತು, ಎದುರುಮನೆಯನ್ನೇ ದಿಟ್ಟಿಸುತ್ತಿದ್ದಳು. ಸೂರ್ಯರಶ್ಮಿಯ ಪ್ರವೇಶ ವಿಲ್ಲದ ಗವಿಮನೆ. ಆದರೂ ಆ ಮಬ್ಬು ಬೆಳಕಿನಲ್ಲಿ, ಹಳೆಯ ಚಾಪೆಯಮೇಲೆ ಹರಿದ ತೆಳುಹಾಸಿಗೆಯನ್ನು ಹಾಸಿ ನಾರಾಯಣಿ ಮಲಗಿದ್ದುದು ಕಾಣಿಸುತ್ತಿತ್ತು. ಕೊನೆಯ, ವರ್ಷದ ಮಗುವೊಂದು ಆಕೆಯ ಪಕ್ಕದಲ್ಲೆ ಕುಳಿತಿತ್ತು. ಆಕೆಯ ಗಂಡ ಅಡುಗೆಮನೆ ಯಲ್ಲಿದ್ದರೇನೊ....ಅಲ್ಲಿ ಹಾಗೆ ಮಲಗಿದ್ದ ಆ ಮೂಳೆಯ ಹಂದರ

ತನ್ನ ಪರಮದ್ವೇಷಿ ಎಂದು ಭಾವಿಸಲು ಮೀನಾಕ್ಷಮ್ಮ ಸಿದ್ಧಳಿರಲಿಲ್ಲ.

ಹೊರಬಾಗಿಲಿನಾಚೆ ಅಂಗಳದಲ್ಲಿ ನಿಂತಿದ್ದ ಹೆಂಗಸರಲ್ಲಿ ಒಬ್ಬಾಕೆ, ಮೀನಾಕ್ಷಮ್ಮನನ್ನು ಅಲ್ಲಿಂದಲೆ ನೋಡಿ ಸನ್ನೆಮಾಡಿ ಕರೆದಳು.... ಮೀನಾಕ್ಷಮ್ಮ ಅಗಲಕಿರಿದಾದ ಆ ಓಣಿಯುದ್ದಕ್ಕೂ ನಡೆದು, ಅಂಗಳ ತಲಪಿದಳು. ಮುಂದುವರಿಯಲಾಗಲಿಲ್ಲ. ಗುಂಪಿನಿಂದ ದೂರವಾಗಿಯೇ ನಿಂತಳು.

"ಬನ್ನಿ ಮೀನಾಕ್ಷಮ್ಮ."

ಅಷ್ಟು ದೂರ ಬಂದಿದ್ದುದೇ ಸಾಲದೆ ?

"ಇಂಥ ಕಷ್ಟ ಯಾರಿಗೂ ಬರಬಾರ್ದು, ಅಲ್ವೆ ಮೀನಾಕ್ಷಮ್ಮ?"

ಸಂದೇಹವಾದರೂ ಏನು ಅದರಲ್ಲಿ ?

ಯಾರೋ ಒಬ್ಬಳು ಕೇಳಿದಳು :

"ಒಳಕ್ಕೆ ಹೋಗಿ ನೋಡಿದಿರಾ ?"

"ಇಲ್ಲ" ಎಂದಳು ಮೀನಾಕ್ಷಮ್ಮ. ಅರೆಕ್ಷಣ ತಡೆದು ಆಕೆ ಎಂದಳು : "ಹೋಗಿ ನೋಡ್ತೀನಿ."

ಆ ಸ್ವರ ನಡುಗುತ್ತಿತ್ತು. ನಾರಾಯಣಿಯನ್ನು ವೈರಿಯಾಗಿ ಪರಿಗಣಿಸಿದ ತಾನು ಪಾಪಿ ಎನ್ನುತ್ತಿತ್ತು. ಒಮ್ಮೆಲೆ ಮೀನಾಕ್ಷಮ್ಮ ಸೆರಗನ್ನು ಕಣ್ಣಿಗೊತ್ತಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು.

ಯಾರೂ ಬಾಯ್ತೆರೆದು ಮಾತನಾಡಲಿಲ್ಲ. ಆದರೆ ಮೊದಲೇ ತೀರ್ಮಾನವಾಗಿತ್ತೇನೋ ಎನ್ನುವ ಹಾಗೆ, ಎಲ್ಲರೂ ನಾರಾಯಣಿಯ ಮನೆಯತ್ತ ಬಂದರು. ಮೀನಾಕ್ಷಮ್ಮ ಅವರನ್ನೆಲ್ಲ ಹಿಂಬಾಲಿಸಿದಳು.

ಅಷ್ಟರಲ್ಲೆ, ಗಂಡಸಿನ ಗೊಳೋ ಎಂಬ ಹೃದಯಭೇದಕವಾದ ಆರ್ತನಾದ ಆ ಮನೆಯೊಳಗಿಂದ ಹೊರಟಿತು.

ಹೆಂಗಸರು ಬೇಗಬೇಗನೆ ಹೆಜ್ಜೆ ಹಾಕಿದರು. ನಾರಾಯಣಿಯ ಗಂಡ ತನ್ನ ಹೆಂಡತಿಯ ಬಳಿಯಲ್ಲೆ ದೇಹ ಮುದುಡಿಕೊಂಡು ಗೋಳಾಡುತಿದ್ದ. ಪುಟ್ಟ ಮಗು ತಾಯಿಯ ಎದೆಗೆ ಆತುಕೊಂಡು, ತನ್ನೆರಡೂ ಕ್ಷೀಣ ಕೈಗಳಿಂದ ಸುಕ್ಕುಗಟ್ಟಿದ್ದ ಸ್ತನವನ್ನು ಹಿಡಿದುಕೊಂಡಿತ್ತು. ತೆರೆದ ಕಣ್ಣುಗಳನ್ನೂ ಚಾಚಿದ ಕೈಗಳನ್ನೂ ಹಾಗೆಯೇ

ಬಿಟ್ಟು ನಾರಾಯಣಿ ಹೊರಟು ಹೋಗಿದ್ದಳು.

ಬೇಸಗೆಯ ಸೂರ್ಯ ಒಂದೆರಡು ಕಡೆ ಹೆಂಚಿನ ಎಡೆಗಳಿಂದ ಇಣಿಕಿ ನೋಡುತಿದ್ದ. ಆ ರಶ್ಮಿಗಳು ಆಕಾಶದಿಂದಿಳಿದು ಭೂಮಿ ತಲಪಿದ ಬೆಳಕಿನ ಹೊಗೆಹಾದಿಗಳ ಹಾಗಿದ್ದುವು.

ಸಾವಿನ ಮನೆ....ವಠಾರದ ಹದಿನಾಲ್ಕು ಮನೆಗಳಲ್ಲೊಂದರಲ್ಲಿ ಸಾವು........

ಹೆಂಗಸರೆಲ್ಲ ಕ್ಷಣಕಾಲ ಆ ಮನೆಯ ಬಾಗಿಲ ಬಳಿ ನಿಂತು, ಹಿಂದೆ ನಾರಾಯಣಿಯೆಂಬ ಹೆಂಗಸೊಬ್ಬಳು ಬದುಕಿದ್ದಳೆಂಬುದಕ್ಕೆ ಸಾಕ್ಷಿಯಾಗಿದ್ದ ಮೃತದೇಹವನ್ನು ನೋಡಿ ಮುಖ ತಿರುಗಿಸಿ ಬದಿಗೆ ಸರಿದರು. ಅಳುವಿನ ಅಕ್ಷಯಪಾತ್ರೆಗಳಾಗಿದ್ದ ಆ ನಿಸ್ತೇಜ ಕಣ್ಣುಗಳಿಂದ ಕಣ್ಣೀರು ಚಿಮ್ಮಿತು.

"ನನ್ನ ಬಿಟ್ಟುಹೋದೆಯಲ್ಲೇ ! ನಾನೇನು ಮಾಡ್ಲೇ ಇನ್ನು? ಊ....ಊ....ಊ...."

ಮಗುವಿನ ಹಾಗೆ ಅಳುತ್ತಿದ್ದ ನಾರಾಯಣಿಯ ಗಂಡ. ಆತ ಅಸಹಾಯನಾಗಿದ್ದ. ಆತನ ಸಂಪಾದನೆಯೊಂದೇ ಆ ಸಂಸಾರಕ್ಕೆ ಆಧಾರವಾಗಿದ್ದರೂ ಕೈಹಿಡಿದವಳ ಮೇಲ್ವಿಚಾರಣೆಯಲ್ಲೇ ಆತ ಬದುಕಿದ್ದವನು. ಈಗ ಆಸರೆ ತಪ್ಪಿದಹಾಗೆ ಆಗಿತ್ತು ಅವನ ಸ್ಥಿತಿ. ಆ ನಾಲ್ವರು ಎಳೆಯ ಮಕ್ಕಳು – ಅವುಗಳಲ್ಲೆರಡು ಹೆಣ್ಣು. ಸಂಪಾದನೆ ಶೂನ್ಯ.

"ಅಯ್ಯೋ! ಹೀಗಾಯ್ತಲ್ಲೇ ನನ್ಗತೀ....ನಾನೇನು ಮಾಡ್ಲೇ?"

ಆತನ ರೋದನ ನಾರಾಯಣಿಯ ಸಾವನ್ನು ಜಾಹೀರು ಮಾಡಿತು. ಗಂಡಸರೆಲ್ಲ ಕೆಲಸಕ್ಕೆ ಹೋಗಿದ್ದ ನಡುಹಗಲು. ಆ ಓಣಿ ಅರೆಕ್ಷಣದಲ್ಲಿ ವಠಾರದ ಹೆಂಗಸರಿಂದ ತುಂಬಿಹೋಯಿತು. ಒಂದೇ ಒಂದಾಗಿದ್ದ ಗಂಡು ಧ್ವನಿಯೊಡನೆ ಹೆಂಗಸರ ಕಲರವ ಬೆರೆತು, ಛಾವಣಿಗಳೆಡೆಯಿಂದ ತೂರಿಕೊಂಡು. ಎದುರುಭಾಗದ ಮುರುಕು ಮಹಡಿಯನ್ನೂ ದಾಟಿ, ಶ್ರೀರಾಮಪುರದ ಅಕ್ಕಪಕ್ಕದ ಬೀದಿಗಳಲ್ಲಿ ಮರಣವಾರ್ತೆಯನ್ನು ಹೊತ್ತು ಹರಿದಾಡಿತು.

ಎಲ್ಲರೂ ಹೆಬ್ಬಾಗಿಲಿನತ್ತ ನೋಡಿದರು. ಅಲ್ಲೆ ಬಲಭಾಗದಲ್ಲೆ ವಠಾರದ ಒಡತಿ ರಂಗಮ್ಮನ ಮನೆ.

"ರಂಗಮ್ನೋರಿಗೆ ಹೇಳೀಮ್ಮಾ ಯಾರಾದ್ರೂ."

ಹೋಗಿ ಹೇಳುವ ಅಗತ್ಯವಿರಲಿಲ್ಲ. ನಿಂತಿದ್ದ ಹೆಂಗಸರು, ಮಕ್ಕಳೆಡೆಯಿಂದ ದಾರಿಬಿಡಿಸಿಕೊಂಡು ಅವರು ಬಂದರು. ಊರು ಗೋಲು ವಠಾರದ ಕೊನೆಯಲ್ಲಿದ್ದ ನಾರಾಯಣಿಯ ಮನೆಯ ಮುಂದೆ ನಿಂತಿತು.

ಪ್ರಯತ್ನಪೂರ್ವಕವಾಗಿ ಬೆನ್ನನ್ನು ನೇರಗೊಳಿಸಿ, ಜೋಲು ಮೋರೆ ಹಾಕಿ ಸುತ್ತಲೂ ನೋಡಿ, ರಂಗಮ್ಮ ನಿಟ್ಟುಸಿರುಬಿಟ್ಟರು.

ಎಲ್ಲರ ಹಾಗೆ ರಂಗಮ್ಮ ಅಳುವುದರಲ್ಲಿ ಅರ್ಥವಿರಲಿಲ್ಲ. ಅರುವತ್ತೈದು ವರ್ಷಗಳ ಅವಧಿಯಲ್ಲಿ ಅವರೆಷ್ಟೋ ಸಾವು ಎಷ್ಟೋ ಹುಟ್ಟು ನೋಡಿದ್ದರು. ಅಲ್ಲದೆ ವಯಸ್ಸಿನಲ್ಲಿ ಅವರು ಅಲ್ಲಿನ ಎಲ್ಲರಿಗಿಂತಲೂ ಹಿರಿಯರು. ವಠಾರದ ಒಡತಿ. ಅವರು ಅಳುವ ಹಾಗಿರಲಿಲ್ಲ.

ಎರಡು ಮೂರು ವರ್ಷಗಳಿಂದ ಆ ವಠಾರಕ್ಕೆ ಯಮರಾಯ ಬಂದಿರಲಿಲ್ಲ. ಈ ವರ್ಷ ಯಾಕೊ—

ಯಾರೋ ಅಂದರು :

"ಬುಧವಾರವೇ ಸತ್ಲು, ನಡುಹಗಲಲ್ಲಿ. ಪುಣ್ಯವಂತೆ."

ಪಾಪಪುಣ್ಯಗಳ ಯೋಚನೆ ರಂಗಮ್ಮನನ್ನು ಕಾಡುತ್ತಿರಲಿಲ್ಲ. ಸಾವು, ಆ ವಠಾರದ ದಿನನಿತ್ಯದ ಜೀವನಕ್ರಮವನ್ನು ಸ್ತಬ್ಧಗೊಳಿಸಿತ್ತು. ಸತ್ತಿದ್ದ ನಾರಾಯಣಿಯನ್ನು ಹೊರಕ್ಕೆ ಸಾಗಿಸುವವರೆಗೂ ಆ ಅವ್ಯವಸ್ಥೆ ಬದಲಾಗುವ ಹಾಗಿರಲಿಲ್ಲ. ಒಬ್ಬ ಮನುಷ್ಯ ಸತ್ತಮೇಲೂ ಮಾಡಬೇಕಾದ ಕ್ರಿಯೆಗಳಿದ್ದುವು.

ಸಾವಿನ ಮನೆಯೊಳಕ್ಕೆ ತಲೆಹಾಕಿ ರಂಗಮ್ಮ ಹೇಳಿದರು :

"ಅಳಬೇಡವಪ್ಪಾ. ಅತ್ತರೆ ಬರ್ತಾಳೇನು ? ಅವಳ ಋಣ ಇವತ್ತಿಗೆ ಮುಗೀತೂಂತ ತಿಳಕೋ."

ರಂಗಮ್ಮನ ಸಹಾನುತಾಪದ ಮಾತು ಕೇಳಿ ನಾರಾಯಣಿಯ ಗಂಡ ಮತ್ತೂ ಗಟ್ಟಿಯಾಗಿ ರೋದಿಸಿದ.

ಮೀನಾಕ್ಷಮ್ಮ ಒಳಹೋದಳು. ಚಲಿಸದೆ ಮಲಗಿದ್ದ ತಾಯಿಯ ಬಳಿ ಅಳುತಲಿದ್ದ ಎಳೆಯ ಕೂಸನ್ನು ಎತ್ತಿ ಆಡಿಸುತ್ತ ಹೊರಬಂದಳು.

"ಎಲ್ಲಿ ಬೇರೆ ಹುಡುಗರು ?"

ಎಂದು ರಂಗಮ್ಮ ಸುತ್ತಲೂ ನೋಡಿ ಕೇಳಿದರು.

"ದೊಡ್ಡೋನು ಸ್ಕೂಲಿಗೆ ಹೋಗಿದಾನೇನೋ ?"

"ಇಲ್ಲ, ಚಿಕ್ಕೋವನ್ನ ಆಡಿಸ್ತಾ ಇಲ್ಲೇ ಇದ್ದಾಂದ್ರೆ."

"ಸಾಯೋ ಘಳಿಗೇಲಿ ಹತ್ತಿರ ಇರ್ಲಿಲ್ಲ, ನಿರ್ಭಾಗ್ಯ ಮುಂಡೇವು."

"ಹೋಗ್ರೇ, ಯಾರಾದರೂ ಕರಕೊಂಬನ್ನಿ. ರುಕ್ಕೂ, ನೀನು ಹೋಗಮ್ಮ."

"ಹುಂ. ಒಬ್ಬರೂ ಇಲ್ವಲ್ಲಾ ಇಲ್ಲಿ!"

ಎಂದರು ರಂಗಮ್ಮ. ಆ ಧ್ವನಿಯಲ್ಲಿ ಬೇಸರವಿತ್ತು. ಅಷ್ಟು ಜನ ಅಲ್ಲಿದ್ದರೂ ಅವರ ದೃಷ್ಟಿಯಲ್ಲಿ 'ಒಬ್ಬರೂ ಅಲ್ಲಿರಲಿಲ್ಲ' – ಒಬ್ಬ ಗಂಡಸೂ ಅಲ್ಲಿರಲಿಲ್ಲ.

"ದಿನಾ ಗುಂಡಣ್ಣನಾದರೂ ಇರ್ತಿದ್ದ. ಎಲ್ಹೋದ್ನೋ ಇವತ್ತು ?"

ಗುಂಡಣ್ಣ ತನ್ನ ತಮ್ಮನ ಸಂಪಾದನೆಯನ್ನೆ ಅವಲಂಬಿಸಿ ಪರೋಪಕಾರಿಯಾಗಿ ಮನೆಯಲ್ಲೆ ನಿಶ್ಚಿಂತೆಯಿಂದ ದಿನ ಕಳೆಯುತಿದ್ದ ಉಂಡಾಡಿ.

"ರಾಜಮ್ಮ, ಎಲ್ಹೋದ್ನೇ ನಿಮ್ಮಗಾ ?"

"ಪಕ್ಕದ್ಮನೇಲಿ ಇಸ್ಪೀಟಿಗೆ ಕೂತಿದಾನೇನೊ ?"

ರಾಜಮ್ಮ ಹೆಬ್ಬಾಗಿಲನ್ನು ದಾಟಿ ಹೊರ ಅಂಗಳಕ್ಕೆ ಹೋಗಿ ಕರೆದಳು.

"ಗುಂಡಾ........ಏ ಗುಂಡೂ !"

ಬೀದಿಯ ಆಚೆಗಿದ್ದ ಮನೆಗಳಿಂದಲೂ ಜನ ವಠಾರದತ್ತ ನೋಡುತ್ತಿದ್ದರು. ಬೀದಿ ಕೊಳಾಯಿಯ ಪಕ್ಕದಲ್ಲೇ ಇದ್ದ ಮನೆಯಾಕೆ ಗೋಡೆಯ ಹಿತ್ತಿಲಿಗೆ ಎದೆಯಾನಿಸಿ ನಿಂತು ಕೇಳಿದಳು.

"ಏನ್ರೀ ರಾಜಮ್ಮ? ಏನು ಗಲಾಟೆ ?"

"ನಾರಾಯಣಿ ಹೊರಟೋದ್ಲು ಕಣ್ರೀ."

"ಓ !"

ದಿನವೂ ಮನೆಯಲ್ಲಿ ಇರುತ್ತಿದ್ದ ಗುಂಡಣ್ಣ ಆ ಹೊತ್ತೇ ಎಲ್ಲಿಗೋ ಎದ್ದಿರ ಬೇಕೆ ?

ಗುಂಡಣ್ಣ ಬರಲಿಲ್ಲ. ಆದರೆ ಅಲ್ಲೇ ಕೆಳಗೆ ಅಂಗಡಿ ಬೀದಿಯಲ್ಲಿದ್ದ ನಾರಾಯಣಿಯ ಮಕ್ಕಳು ಓಡಿ ಬಂದುವು. ಚಿಕ್ಕ ಹುಡುಗಿಗೂ ಹುಡುಗನಿಗೂ ಅರ್ಥವಾಗಲಿಲ್ಲ. ದೊಡ್ಡವನಿಗೆ ಅರ್ಥವಾಯಿತು. ಆದರೆ ಮೂವರೂ ಅತ್ತರು–ಚಿಕ್ಕವರು ಗಟ್ಟಿಯಾಗಿ, ದೊಡ್ಡವನು ಮೆಲ್ಲ ಮೆಲ್ಲನೆ, ಬಿಕ್ಕಿ ಬಿಕ್ಕಿ.

ಮೀನಾಕ್ಷಮ್ಮ ಸಮೀಪದಲ್ಲೇ ಇದ್ದ ಶಾಲೆಗೆ ಹೋಗಿ ತನ್ನ ಮಗನನ್ನು ಕರೆದು ತಂದಳು. ಆತ ಪುಸ್ತಕಗಳನ್ನು ತಾಯಿಯ ವಶ ಕ್ಕೊಪ್ಪಿಸಿ, ತಂದೆಯನ್ನು ಕರೆತರಲೆಂದು ಒಂದೇ ಉಸಿರಿಗೆ ಮಲ್ಲೇಶ್ವರದ ಅಂಗಡಿ ಬೀದಿಗೆ ಓಡಿದ.

ನಾರಾಯಣಿಯ ಮನೆಯ ಎದುರು ಒಂದೇ ಗುಂಪಾಗಿದ್ದ ಹೆಂಗಸರು ದೂರ ಸರಿದು ಬೇರೆಬೇರೆ ಗುಂಪುಗಳಾದರು.

ರಂಗಮ್ಮ ಪಿಳಿಪಿಳಿ ಕಣ್ಣುಬಿಡುತ್ತಾ ಓಣಿಯ ಉದ್ದಕ್ಕೂ ಎರಡು ಸಾರಿ ನಡೆದರು. ಏನನ್ನಾದರೂ ಆಳವಾಗಿ ಯೋಚಿಸು ವಾಗಲೆಲ್ಲ ಹಾಗೆ ಅವರು ನಡೆಯುತ್ತಿದ್ದರು.

ಒಂದು ಬಡ ಸಂಸಾರದಲ್ಲಾದ ಸಾವಿನ ಫಲವಾಗಿ ಹುಟ್ಟಿದ ಯೋಚನೆಗಳು........ಯೋಚಿಸುತ್ತಲಿದ್ದ ರಂಗಮ್ಮ ನಾರಾಯಣಿಯ ಮನೆಯ ಮುಂದೆ ನಿಂತು ಹೇಳಿದರು :

"ಯಾಕಪ್ಪಾ ಇನ್ನೂ ಅಳ್ತಾನೇ ಇದೀಯಾ ? ಏಳು........ ನನ್ನಂಥಾ ಪಾಪಿಯಲ್ಲ ನಾರಾಯಣಿ....ಪುಣ್ಯವಂತೆ.... ಕೇಳ್ಕೊಂಡು ಬಂದಿದ್ಲು ಇಂಥ ಸಾವು ಬರ್ಲೀಂತ....ಏಳು....ಮಕ್ಕಳ್ನ ನಮ್ಮನೇಲಿ ಕೂಡಿಸು."

ಆದರೆ ಆ ನಾರಾಯಣಿಯ ಗಂಡ, ದಿಗ್ಭ್ರಮೆಗೊಂಡವರ ಹಾಗೆ ಗೋಡೆಗೊರಗಿ ಕುಳಿತೇ ಇದ್ದ.

ಪಕ್ಕದ ಮನೆಯಾಕೆ ಬಂದು ಮೊಲೆಹಾಲಿನ ಕೂಸನ್ನೆತ್ತಿ

ಕೊಂಡು ಎಳೆಯ ಇಬ್ಬರು ಮಕ್ಕಳನ್ನೂ ಎಳೆದುಕೊಂಡು ತನ್ನ ಮನೆಗೆ ಹೋದಳು.

ರಂಗಮ್ಮ ಮನೆಯೊಳಕ್ಕೆ ಕಾಲಿಟ್ಟು ಅಡುಗೆಯ ಭಾಗದತ್ತ ನೋಡಿದರು. ಒಲೆ ಹೊಗೆಯಾಡುತ್ತಿರಲಿಲ್ಲ. ಎದುರುಗಡೆಯ ಮೀನಾಕ್ಷಮ್ಮನಿಗೆ ಹೇಳಿದರು :

"ಒಂದಿಷ್ಟು ಕೆಂಡ ಎತ್ಕೊಂಡ್ಬಾ ತಾಯಿ."

ಸಾವಿನ ಮನೆಯ ಮುಂದೆ ಕೆಂಡಗಳು ಹೊಗೆಯ ಹೊದಿಕೆಯೊಡನೆ ಮರುಗಿದುವು.

ಶ್ರೀನಿವಾಸಶೆಟ್ಟರ ಅಂಗಡಿಯಲ್ಲಿ ಲೆಕ್ಕ ಬರೆಯುವ ಗುಮಾಸ್ತೆಯಾದ ಸುಬ್ಬುಕೃಷ್ಣಯ್ಯ, ತನ್ನ ಹೆಂಡತಿ ಮೀನಾಕ್ಷಮ್ಮನ ಸಂದೇಶ ತಲಪಿದೊಡನೆ ಹೊರಟು ಬಂದ. ಹಿಂದಿನ ರಾತ್ರೆಯೇ ಮೀನಾಕ್ಷಮ್ಮ 'ಪಾಪ ಕಾಹಿಲೆ ಜಾಸ್ತಿಯಾಗಿದೆ. ಇವತ್ತು ಬೆಳಗಾಗೋದೇ ಕಷ್ಟ' ಎಂದಿದ್ದಳು. ಬೆಳಗಾಗಿತ್ತು. ಬೆಳಗಾದ ಮೇಲೆಯೇ ಸತ್ತಿದ್ದಳು ನಾರಾಯಣಿ. ಸತ್ತವಳಾಗಲೀ, ಉಳಿದಿರುವ ಆಕೆಯ ಸಂಸಾರವಾಗಲೀ ಸುಬ್ಬುಕೃಷ್ಣಯ್ಯನಿಗೇನೂ ಆತ್ಮೀಯವಾಗಿರಲಿಲ್ಲ. ಆದರೂ ಹೆಂಡತಿ ಕರೆದಳೆಂದು ಒಡನೆಯೇ ಸುಬ್ಬುಕೃಷ್ಣಯ್ಯ ಹೊರಟಿದ್ದ.

ಆತ ವಠಾರ ತಲಪಿದೊಡನೆ ರಂಗಮ್ಮ ಹೇಳಿದರು :

"ಬಂದೆಯೇನಪ್ಪಾ, ಬಾ. ಯಾರೂ ಇಲ್ವಲ್ಲಾಂತಿದ್ದೆ ಬಾ."

ಸುಬ್ಬುಕೃಷ್ಣಯ್ಯ ನೇರವಾಗಿ ತನ್ನ ಮನೆಯೊಳಕ್ಕೆ ಹೋಗಿ ಟೋಪಿಯನ್ನು ಗೂಟದ ಮೇಲೆ ತೂಗಹಾಕಿದ. ಆಗ ಏನಾದರೂ ಕೆಲಸ ಮಾಡಲು ಅಲ್ಲಿದ್ದ ಗಂಡಸು ತನ್ನ ಪತಿಯೊಬ್ಬನೇ ಎಂದು, ಆ ಸನ್ನಿವೇಶದಲ್ಲೂ ಮೀನಾಕ್ಷಮ್ಮನಿಗೆ ಹೆಮ್ಮೆ ಎನಿಸದಿರಲಿಲ್ಲ.

ಆತ ಕೇಳಿದ :

"ಎಷ್ಟೊತ್ತಾಯ್ತು?"

"ಹನ್ನೊಂದಾಗಿತ್ತೂಂತ ಕಾಣುತ್ತೆ."

"ಈಗೇನ್ಮಾಡ್ಬೇಕೂಂತೀಯಮಾ ?"

"ರಂಗಮ್ನೋರನ್ನ ಕೇಳಿ."

ಅಷ್ಟರಲ್ಲಿ ಅಲ್ಲಿಗೇ ನಡೆದು ಬಂದ ರಂಗಮ್ಮ ಮೆಲುಧ್ವನಿಯಲ್ಲಿ ಸಮಾಲೋಚನೆ ನಡೆಸಿದರು.

ವಠಾರಕ್ಕೆ ಗಂಡಸರು ಹಿಂತಿರುಗುತಿದ್ದುದು ಸಂಜೆ ಐದುಗಂಟೆಯ ಬಳಿಕ. ಐದು ಘಂಟೆಯಿಂದ ನಡುರಾತ್ರಿಯ ವರೆಗೆ ಹೇಳಿಕಳುಹಿಸು ವಂಥ ಸಂಬಂಧಿಕರು ಯಾರೂ ಸತ್ತ ಮನೆಯವರಿಗೆ ಇರಲಿಲ್ಲ. ಅಂತೂ ಕತ್ತಲಾಗುವ ಹೊತ್ತಿಗೇ ಶವಸಂಸ್ಕಾರ ಸಾಧ್ಯವಿತ್ತು. ಸಿದ್ಧತೆಯ ಸಣ್ಣ ಪುಟ್ಟ ವಿವರಗಳನ್ನು ಕುರಿತು ಅವರು ಮಾತನಾಡಿ ದರೂ ಮುಖ್ಯ ವಿಷಯದ ಪ್ರಸ್ತಾಪವಾಗಿಯೇ ಇರಲಿಲ್ಲ........ ನಾರಾಯಣಿಯ ಗಂಡನ ಸೊರಗಿದ ಜೀವ ಬಾಗಿಲಿಗೆ ಒರಗಿ ನಿಂತಿತ್ತು. ರಂಗಮ್ಮ ಗಟ್ಟಿಮನಸ್ಸುಮಾಡಿ ಆತನನ್ನು ಉದ್ದೇಶಿಸಿ ಕೇಳಿದರು:

"ಏನಪ್ಪಾ, ದುಡ್ಡುಗಿಡ್ಡು ಏನಾದರೂ ಇಟ್ಟಿದೀಯಾ ?"

ಆತ ಮುಖ ತಿರುಗಿಸಿಕೊಂಡು ಮತ್ತೊಮ್ಮೆ ಗಟ್ಟಿಯಾಗಿ ರೋದಿಸತೊಡಗಿದ.

ಸುಬ್ಬುಕೃಷ್ಣಯ್ಯನೇನೋ ಅಂದ:

"ಏನಾದರೂ ಮಾಡೋಣ. ಏನಾದರೂ ಮಾಡೋಣ"–ಅಂತ.

ಆದರೆ ಏನು ಮಾಡಬೇಕೆಂಬುದು ಮಾತ್ರ ಆತನಿಗೆ ಹೊಳೆಯ ಲಿಲ್ಲ. ತಿಂಗಳ ಕೊನೆ........ಕಷ್ಟಕಾಲ........

"ಬಾಪ್ಪ," ಎಂದು ಸುಬ್ಬುಕೃಷ್ಣಯ್ಯನಿಗೆ ಸನ್ನೆ ಮಾಡುತ್ತ ರಂಗಮ್ಮ ತಮ್ಮ ಮನೆಯತ್ತ ನಡೆದರು. ನಡೆಯುತ್ತ ಅವರು ಇಳಿ ಧ್ವನಿಯಲ್ಲಿ ಗೊಣಗಿದರು:

"ಮೂರು ತಿಂಗಳಿಂದ ಬಾಡಿಗೇನೇ ಕೊಟ್ಟಿಲ್ಲ, ಬಡ್ಡೀಗಂಡ. ಐವತ್ತೊಂದು ರೂಪಾಯಿ !........ಈಗ ಹೆಣ ಎತ್ತಾಕೋ ಕೆಲಸಾನೂ ನಾವೇ ಮಾಡ್ಬೇಕು........ಹುಂ........"

ರಂಗಮ್ಮನವರೊಬ್ಬರೇ ತಮ್ಮ ಕತ್ತಲು ಮನೆಯನ್ನು ಹೊಕ್ಕು, ತಮ್ಮ ಕೊರಳಿನಲ್ಲಿದ್ದ ಬೀಗದಕೈ ತಿರುವಿ, ಹಳೆಯ ಕಬ್ಬಿಣದ ಪೆಟ್ಟಿಗೆಯ ಬಾಗಿಲುತೆರೆದು, ಐದು ರೂಪಾಯಿಯ ಒಂದು ನೋಟನ್ನು ಎತ್ತಿಕೊಂಡರು. ಬಾಗಿಲಲ್ಲೆ ನಿಲ್ಲಿಸಿ ಬಂದಿದ್ದ ಸುಬ್ಬುಕೃಷ್ಣಯ್ಯನಿಗೆ

ಅದನ್ನು ಒಯ್ದು ಕೊಟ್ಟರು. ಕೊಡುತ್ತ ಅವರೆಂದರು :

"ಪಾಪ! ಕಷ್ಟದಲ್ಲಿದಾನೆ. ಏಳೇಳು ಜನ್ಮದ ವೈರಿಗೂ ಬೇಡ ಈ ಶಿಕ್ಷೆ."

ಸುಬ್ಬುಕೃಷ್ಣಯ್ಯ ತಲೆತುರಿಸುತ್ತ ನಿಂತ. ಎಲ್ಲಿಗೆ ಸಾಕು ಆ ಐದು ರೂಪಾಯಿ?

"ಇಷ್ಟಿರ್ಲಿ ನನ್ನ ಲೆಕ್ಕಕ್ಕೆ. ಉಳಿದಿರೋದು ನೀವೇ ಏನಾದರೂ ಸೇರ್ಸ್ಕೊಂಡು ಮಾಡಿ."

ಆ ಏರ್ಪಾಟಿಗೆ ಮಹಾ ಯಶಸ್ಸು ದೊರೆಯದೇ ಹೋದರೂ ಅದು ವಿಫಲವಾಗಲಿಲ್ಲ. ಕೆಲಮನೆಯವರು ಗಂಡಸರು ಬರಲೆಂದರು. ಉಳಿದವರು ಕೆಲವರು, ಗಂಟಿಗೆ ಗಂಟುಹಾಕಿ ಕೂಡಿಟ್ಟಿದ್ದ ಚಿಲ್ಲರೆ ಹಣವನ್ನು ತೆಗೆದುಕೊಟ್ಟರು.

ರಂಗಮ್ಮ ಹೆಬ್ಬಾಗಿಲ ಬಳಿಯಲ್ಲೆ ನಿಂತು ತಮ್ಮ ವಠಾರಕ್ಕೆಲ್ಲ ಕೇಳಿಸುವ ಹಾಗೆ ನುಡಿದರು:

"ಕೊಡಿಯಪ್ಪಾ ಕೊಡಿ. ಕಷ್ಟಕಾಲದಲ್ಲಿ ಮನುಷ್ನಿಗೆ ಮನುಷ್ನೇ ಆಗ್ಬೇಕಲ್ದೆ ಮರ ನೆರವಾಗುತ್ಯೆ?"

ಅಷ್ಟರಲ್ಲೆ ಗುಂಡಣ್ಣ ಬಂದ. 'ಹೆಣ ಹೊರೋಕೆ ಆದೀಯಾ ನೀನು' ಎಂಬ ಬೈಗಳನ್ನು ಎಷ್ಟೋ ಸಾರಿ ತಾಯಿಯ ಕೈಯಲ್ಲಿ ಆತ ಕೇಳಿದ್ದ. ಆದರೆ ಅದು ನಿಜವಾಗಿರಲಿಲ್ಲ. ಸ್ವಂತಕ್ಕೆ ಕಾಸಿನ ಪ್ರಯೋಜನವಾಗದೆ ಹೋದರೂ ಪರೋಪಕಾರ ಮಾಡುವುದರಲ್ಲಿ ಆತನದು ಎತ್ತಿದ ಕೈ. ಈಗ, ಮುಟ್ಟಿದರೆ ಮುರಿದು ಬೀಳುವಂತಹ ಸೈಕಲೊಂದನ್ನು ದೊರಕಿಸಿಕೊಂಡು, ನಗರದ ಬೇರೆ ಬೇರೆ ಭಾಗಗಳಲ್ಲಿ ದುಡಿಯುತಿದ್ದ ವಠಾರದ ನಾಲ್ಕಾರು ಜನ ಗಂಡಸರಿಗೆ ಸಾವಿನ ಸುದ್ದಿ ತಿಳಿಸಲು ಆತ ಧಾವಿಸಿದ.

ನಾರಾಯಣಿಯನ್ನು ಬೀಳ್ಕೊಡದ ಹೊರತು ಆ ವಠಾರದ ಜನರಿಗೆ ಊಟವಿಲ್ಲ. ಪ್ರತಿಯೊಂದು ಮನೆಯಲ್ಲೂ ಅಡುಗೆ ಅರ್ಧ ಮರ್ಧವಾಗಿಯೇ ಉಳಿದಿತ್ತು. ಆದರೆ ಹಸಿದ ಮಕ್ಕಳು—ಯಾಕೆ ದೊಡ್ಡವರೂ ಕೂಡಾ—ಬರಿ ಹೊಟ್ಟೆಯಲ್ಲೇ ಇರುವುದೂ ಸಾಧ್ಯವಿರಲಿಲ್ಲ.

ಒಬ್ಬಾಕೆಯೆಂದಳು :

"ಸಾವಿನ ಮನೇ ಮುಂದುಗಡೆ ನೀರು ಹರೀತಿದೆಯಲ್ಲಾ. ಈಚೆ ಪಕ್ಕದಲ್ಲಿದ್ಕೊಂಡು ಊಟ ಮಾಡ್ಬೌದು ಕಣ್ರೀ........

ಎರಡು ಮೂರು ಒಚ್ಚಲುಗಳ ನೀರು ದುರ್ಗಂಧ ಬೀರುತ್ತಾ ಒಂದು ಸಾಲಿನ ಮನೆಗಳ ಮುಂದಿನಿಂದ ಹರಿಯುತ್ತಿದ್ದುದು ನಿಜ.

ವಠಾರಕ್ಕೆ ಹೊಸತಾಗಿ ಬಂದಿದ್ದ ಎಳೆಯ ಗೃಹಿಣಿ, ಇನ್ನು ಹತ್ತು ದಿನ ಉಪವಾಸವಿರಬೇಕಾಗುವುದೇನೋ ಎಂಬಂತೆ ತನ್ನ ಬಾಗಿಲ ಬಳಿ ಮುಖ ಸಪ್ಪಗೆ ಮಾಡಿಕೊಂಡು ನಿಂತಳು.

ಇನ್ನೊಬ್ಬಳೆಂದಳು :

"ಈ ಮಕ್ಕಳಿಗೇನ್ರೀ ಮಾಡೋದು ?"

ಎಲ್ಲ ಹೆಂಗಸರೂ ರಂಗಮ್ಮನತ್ತ ನೋಡಿದರು, ತೀರ್ಪಿಗಾಗಿ. ಹಾಗೆಂದು ತಿಳಿದ ರಂಗಮ್ಮ ಪ್ರತಿಯೊಂದು ಮಾತನ್ನೂ ತೂಗಿ ತೂಗಿ ಹೇಳಿದರು.

"ಈಗಿನ ಕಾಲ್ದಲ್ಲಿ ಅಷ್ಟೆಲ್ಲಾ ಕಟ್ಟು ನಿಟ್ಟಾಗಿ ಹ್ಯಾಗೆ ಇರೋ ಕಾಗುತ್ತೆ? ಮಕ್ಕಳು ಊಟ ಮಾಡ್ಲಿ. ದೊಡ್ಡೋರಲ್ಲಿ ಗಟ್ಟಿ ಮುಟ್ಟಾಗಿ ರೋರು ನಿರಾಹಾರವಾಗಿದ್ದರಾಯ್ತು."

........ರಂಗಮ್ಮ ಗಟ್ಟಿಮುಟ್ಟಾಗಿರಲಿಲ್ಲ. ಆದರೂ ಅವರು ನಿರಾಹಾರಿಯಾಗಿಯೆ ಉಳಿದರು.

........ಬಿಸಿಲಿನ ತಾಪ ಕಡಿಮೆಯಾದಂತೆ, ಸಂಜೆಯಾದಂತೆ, ವಠಾರಕ್ಕೆ ಗಂಡಸರು ಬರತೊಡಗಿದರು. ಎಲ್ಲೆಲ್ಲಿಯೋ ಅಲೆದು ರಾತ್ರಿ ಮನೆ ಸೇರುವವರಲ್ಲೂ ಕೆಲವರು ಆ ದಿನ ಬೇಗನೆ ಮನೆಗೆ ಬಂದರು.

ಪ್ರಯಾಣಕ್ಕೆ ಮುನ್ನ ಮಿಯಿಸಲೆಂದು ನಾರಾಯಣಿಯನ್ನು ಹೊರಕ್ಕೆ ತಂದುದಾಯಿತು. ರಂಗಮ್ಮ ಎಂದಿಗಿಂತ ಮುಂಚಿತವಾಗಿಯೇ ಕೊಳಾಯಿಯ ಬೀಗ ತೆರೆದರು. ಸಾಮಾನ್ಯವಾಗಿ ಮೂರು ಕೊಡ ನೀರು, ವಠಾರದ ಪ್ರತಿಯೊಂದು ಮನೆಗೂ ಉಚಿತ. ಅನಂತರದ ಪ್ರತಿ ಮೂರು ಕೊಡಕ್ಕೂ ತಿಂಗಳಿಗೆ ಎಂಟಾಣೆ. ಆದರೆ ಈ ದಿನ ಅಂತಹ ಲೆಕ್ಕಾಚಾರವಿರಲಿಲ್ಲ.

ರಂಗಮ್ಮನೇ ಅಂದರು :

"ತಗೋಳೀಪ್ಪಾ, ಎಷ್ಟು ಬೇಕಾದರೂ ತಗೊಂಡು ಹೋಗಿ ನೀರು."

ನಿರ್ಜೀವವಾಗಿದ್ದ ನಾರಾಯಣಿಯ ಮುಖದ ಮೇಲೆ ನೆಮ್ಮದಿ ಇರಲಿಲ್ಲ. ನ್ಯಾಯವಾದ ಮುಕ್ತಾಯವಿಲ್ಲದೆ ನಡುವಿನಲ್ಲೇ ಕಡಿದು ಹೋದ ಹಾಗಿತ್ತು ಆ ದೇಹ. ಬದುಕಿನ ಅಪೂರ್ಣ ಆಸೆಗಳು ಎರಡೂ ಕಣ್ಣುಗಳಿಂದ ಇಳಿದು ಕೆನ್ನೆಗಳ ಮೇಲೆ ಆಳವಾದ ಕಣಿವೆ ತೋಡಿತ್ತು.

ಆದರೂ ಆ ದೇಹಕ್ಕೆ ಅರಸಿನ ಲೇಪಿಸಿದರು. ಮದುವೆಯ ಕಾಲದಲ್ಲಿ ಆಕೆಯುಟ್ಟಿದ್ದ ಧರ್ಮಾವರದ ಸೀರೆಯನ್ನೇ ಉಡಿಸಿದರು; ಊಡಿ ತುಂಬಿಸಿದರು ; ಹಣೆಗೆ ಕುಂಕುಮವಿಟ್ಟರು.

ಆ ದೇಹ ನಾಲ್ವರ ಭುಜಗಳನ್ನು ಆವರಿಸಿದಾಗ ಮತ್ತೊಮ್ಮೆ ರೋದನದ ಅಲೆಗಳು ವಠಾರದ ಇಕ್ಕಟ್ಟಾದ ಗೋಡೆಗಳಿಗೆ ಅಪ್ಪಳಿಸಿದುವು.

ಬಾಗಿಲ ಬಳಿ ನಡೆಗೋಲನ್ನೂರಿ ನಿಂತುಕೊಂಡ ರಂಗಮ್ಮನ ಬಾಯಿಂದ ಅಸ್ಪಷ್ಟವಾಗಿ ಮಾತುಗಳು ಹೊರಬಿದ್ದುವು.

"ಹೋಗ್ತೀಯಾ ನಾರಾಯಣೀ....ಹೋಗ್ತೀಯಾ...."

ನಾರಾಯಣಿ ರಂಗಮ್ಮನ ವಠಾರವನ್ನು ಬಿಟ್ಟು ಹೋದಳು. ಸೂರ್ಯಮರೆಯಾಗಿ ಕತ್ತಲು ಕವಿಯಿತು. ಬೀದಿಯ ವಿದ್ಯುದ್ದೀಪಗಳು ಹತ್ತಿಕೊಂಡುವು.

ರಂಗಮ್ಮ ವಠಾರದ ಹಿತ್ತಿಲ ಗೋಡೆಗೊರಗಿ, ಆಳಕ್ಕೆ ಇಂಗಿದ್ದ ಕಣ್ಣುಗಳಿಂದ ಆಕಾಶದತ್ತ ಶೂನ್ಯನೋಟ ಬೀರುತ್ತಾ ನಿಂತೇ ಇದ್ದರು.

ಬೇರೆ ದಿನವಾಗಿದ್ದರೆ ವಠಾರದ ಯಾರಾದರೂ ರಂಗಮ್ಮನ ಬಳಿಗೆ ಹೋಗಿ, 'ದೀಪ ಹಾಕ್ತೀರಾ?' ಎಂದು ಕೇಳುತಿದ್ದರು.

ಈ ದಿನ ಹಾಗೆ ಕೇಳಲು ಯಾರೂ ಬರಲಿಲ್ಲ.

"ಕತ್ತಲಾಯ್ತು" ಎಂದು ರಂಗಮ್ಮನೇ ತಮ್ಮಷ್ಟಕ್ಕೆ ಅಂದು ಕೊಂಡರು. ಮೆಲ್ಲನೆ ತಮ್ಮ ಮನೆಯತ್ತ ಸಾಗಿ 'ದೀಪಹಾಕಿ'ದರು. ಅಲ್ಲಿದ್ದುದು ಮಂದವಾದ ವಿದ್ಯುದ್ದೀಪ–ಮನೆಗೊಂದರಂತೆ. ಆಗಲೆ

ಗುಂಡಿಯೊತ್ತಿದ್ದ ಮನೆಗಳಲ್ಲೆಲ್ಲಾ ಒಮ್ಮೆಲೆ ಬೆಳಕು ಮೂಡಿತು. ಬೇರೆ ಕಡೆ ಅನಂತರ ದೀಪಗಳು ಉರಿದುವು.

ಆದರೆ ವಠಾರದ ಹದಿನಾಲ್ಕನೆಯ ಮನೆಯಲ್ಲಿ ಯಾರೂ ಗುಂಡಿಯೊತ್ತಲಿಲ್ಲ. ಅಲ್ಲಿ, ನಾರಾಯಣಿ ಮಲಗಿದ್ದ ಕಡೆ ತಲೆಯ ದಿಕ್ಕಿನಲ್ಲಿ, ಹಣತೆಯೊಂದು ಮಾತ್ರ ತೂರಾಡಿತು.

ಮನೆ ಬೆಳಗುವ ಗೃಹಿಣಿ ಅಲ್ಲಿರಲಿಲ್ಲ.

## ೨

ಸಾವು ಸಂಭವಿಸಿದ ಮಾರನೆಯ ದಿನ....

ನಸುಕು ಹರಿಯುತ್ತಿದ್ದಂತೆ ಒಂದೊಂದಾಗಿ ವಠಾರದ ಮನೆಗಳು ಎಚ್ಚರಗೊಂಡವು. ಎಂದಿನಂತೆಯೇ ಅದೂ ಒಂದು ಬೆಳಗು ಮುಂಜಾನೆ. ಹೆಚ್ಚೂ ಇಲ್ಲ, ಕಡಿಮೆಯೂ ಇಲ್ಲ.

ಆಗ ಉರಿಯುತಿದ್ದುದೆಲ್ಲಾ ಸೀಮೆಎಣ್ಣೆಯ ಹೊಗೆ ದೀಪಗಳು. ಪ್ರತಿದಿನ ಅಂದರೆ, ರಾತ್ರಿ ರಂಗಮ್ಮನ ವಠಾರದಲ್ಲಿ ವಿದ್ಯುದ್ದೀಪಗಳು ಉರಿಯುತಿದ್ದುದು ಮೂರು ಘಂಟೆಗಳ ಕಾಲ ಮಾತ್ರ. ರಾತ್ರಿ ಒಂಭತ್ತೂವರೆಯಿಂದ ಹೆತ್ತರೊಳಗಾಗಿ ರಂಗಮ್ಮ ದೀಪ ಆರಿಸಿಬಿಡುತ್ತಿದ್ದರು. ಆ ಬಳಿಕ 'ದೀಪ ಹಾಕು'ವುದು ಮಾರನೆಯ ದಿನ ಸಂಜೆ ಮಾತ್ರವೇ. ವಠಾರಕ್ಕೆ ಹೊಸತಾಗಿ ಬಾಡಿಗೆಗೆ ಬಂದವರು ಗೊಣಗುವುದಿತ್ತು. ಆದರೆ ಅವರೂ ನಾಲ್ಕು ದಿನಗಳಲ್ಲೇ ಎಲ್ಲರ ಹಾಗೆ ಸರಿಹೋಗುತ್ತಿದ್ದರು. ಕತ್ತಲಿರುವಾಗಲೇ ಏಳಬೇಕಾದವರಿಗೆ ಸೀಮೆ ಎಣ್ಣೆಯ ದೀಪಗಳೇ ಗತಿ. ಆ ವಿಷಯದಲ್ಲಿ ರಂಗಮ್ಮನದು ಸರ್ವ ಸಮತಾದೃಷ್ಟಿ. ಸ್ವತಃ ತಾವೇ ನಸುಕಿನಲ್ಲಿ ಎದ್ದಾಗಲೂ ರಂಗಮ್ಮ ವಿದ್ಯುದ್ದೀಪ ಉರಿಸುತ್ತಿರಲಿಲ್ಲ.

ಮೊದಲು ಮಿಣಿಮಿಣಿ ಬೆಳಕಾಗುವುದು ರಾಮಚಂದ್ರಯ್ಯನ ಮನೆಯಲ್ಲಿ. ಆತ ಟಿ. ಆರ್. ಮಿಲ್ಲಿನಲ್ಲಿ ಸ್ಟೋರ್-ಕೀಪರ್. ಆರು ಘಂಟೆಗೆ ಸರಿಯಾಗಿ ಮಲ್ಲೇಶ್ವರದ ಅಂಗಡಿಬೀದಿ ಸೇರಿ ಕರೆದೊಯ್ಯಲು ಬರುವ ಬಸ್ಸನ್ನೇರಬೇಕು. ಇನ್ನೂ ಮದುವೆಯಿಲ್ಲ ಮಹಾರಾಯನಿಗೆ. ಅದು ಮೂವರ ಸಂಸಾರ. ಬಡಕಲು ಬಡಕಲಾಗಿರುವ ತಾಯಿ ಮತ್ತು ಮದುವೆಗೆ ಸಿದ್ಧಳಾಗಿರುವ ತಂಗಿ ಅಹಲ್ಯಾ. ಅಹಲ್ಯೆ ಬೇಗನೆ ಏಳು

ತ್ತಿರಲಿಲ್ಲ. ಆದರೆ ಆಕೆಯ ಅಣ್ಣ ರಾಮಚಂದ್ರಯ್ಯನೆದ್ದು, ತಂಬಿಗೆ ನೀರಿನೊಡನೆ ಕತ್ತಲೆಯ ಓಣಿಯಲ್ಲಿ ನಡೆದು, ಸುಬ್ಬುಕೃಷ್ಣಯ್ಯನ ಮನೆಯ ಪಕ್ಕದಲ್ಲಿದ್ದ ಕಕ್ಕಸಿಗೆ ಹೋಗುತಿದ್ದ. ಅದು ಜೋಡಿ ಕಕ್ಕಸು. ವಠಾರದ ಗಂಡಸರಿಗೊಂದು, ಹೆಂಗಸರಿಗೊಂದು. ಹೆಂಗಸರ ವಿಭಾಗಕ್ಕೆ ಹಳೆಯ ಎರಡು ಡಬ್ಬಗಳನ್ನು ಬಿಡಿಸಿ ಮರದ ಚೌಕಟ್ಟಿಗೆ ಹೊಡೆದು ಬಾಗಿಲು ತಯಾರಿಸಿದ್ದರು. ಗಾಳಿ ಬೀಸಿದಾಗಲೆಲ್ಲಾ ಆ ಬಾಗಿಲು ಬಡಿದು ಸದ್ದು ಮಾಡುತ್ತಾ ವಠಾರಕ್ಕೆ ಕಾವಲುಗಾರನಾಗುತಿತ್ತು.

ರಾಮಚಂದ್ರಯ್ಯನ ಮನೆಯಲ್ಲಿ ತಾಯಿ ಮಕ್ಕಳ ಮಾತು ಕೇಳಿದೊಡನೆಯೇ ಪದ್ಮಾವತಿಗೆ ಎಚ್ಚರ. ಆಕೆ ನಾರಾಯಣಿಯ ಮಕ್ಕಳಿಗೆ ಊಣ ಬಡಿಸಿದ ಮೂರು ಮಕ್ಕಳ ತಾಯಿ. ಪದ್ಮಾವತಿ ಎದ್ದು ಕುಳಿತು, ಕತ್ತಲೆಯಲ್ಲಿ ಕ್ಷಣಕಾಲ ಗಂಡನನ್ನು ನೋಡುತ್ತಲಿದ್ದು, ಬಳಿಕ ಮೈ ಮುಟ್ಟಿ ಎಬ್ಬಿಸುತಿದ್ದಳು. ರಾಜಾಮಿಲ್ಲಿನ ಟೈಂ ಕೀಪರ್ ನಾಗರಾಜರಾಯ 'ಆಂ........ಊಂ........'ಎಂದು ಪ್ರತಿಭಟಿಸುತ್ತಿದ್ದ, ತಬ್ಬಿಕೊಂಡಿದ್ದ ನಿದ್ದೆಯನ್ನು ಬಿಟ್ಟು ಕೊಡುವ ಇಷ್ಟವಿಲ್ಲದೆ.

ಪದ್ಮಾವತಿ ಗಂಡನ ತೋಳನ್ನು ಮುಟ್ಟಿ ಕುಲುಕಿ ಹೇಳುತಿದ್ದಳು :

"ಏಳೀಂದ್ರೆ..... ಬೆಳಗಾಗ್ಹೋಯ್ತು."

ಬೆಳಕು ಆಗಬೇಕಾದರೆ ಆರು ಘಂಟೆಯವರಿಗೂ ಎಲ್ಲರೂ ಕಾದಿರಬೇಕೆಂಬ ನಿಯಮ ಎಲ್ಲಿಯದು ? ಆಗಿನ್ನೂ ಐದೋ ಐದೂ ಕಾಲೋ. ಸಹಸ್ರ ಸಂಸಾರಗಳಿಗೆ ಆಗಲೇ ಬೆಳಗು.

ಅದೇ ಹೊತ್ತಿಗೆ ಏಳುವ ಇನ್ನೊಬ್ಬ ವ್ಯಕ್ತಿ ನಾರಾಯಣ. ಹಿಂದೂಸ್ಥಾನ ವಿಮಾನ ಕಾರಖಾನೆಯಲ್ಲಿ ಲೆಕ್ಕ ಕೂಡಿಸಿ ಕಳೆಯುವ ಗುಮಾಸ್ತೆ. ವಿಮಾನ ಪುರದಲ್ಲಿ 'ನ–ರಾಯನ್' ಎಂದೂ ಬದಲಾಗಿತ್ತು, ಆತನ ಹೆಸರು. ಹೊಸ ಸಂಸಾರ ಹೂಡಿದ್ದ ಈ ಪತಿರಾಯನಿಗೆ ಐದು ಘಂಟೆಗೇ ಎಚ್ಚರವಾದರೂ ಏಳದೆಯೇ, ತನ್ನ ಹಾಸಿಗೆಯ ಮೇಲೆಯೇ ಮುದುಡಿ ಮಲಗಿದ್ದ ಹೆಂಡತಿ ಕಾಮಾಕ್ಷಿಯನ್ನು ಕತ್ತಲಲ್ಲೇ ಎವೆಯಿಕ್ಕದೆ ನೋಡುತ್ತಿದ್ದ. ಅಷ್ಟರಲ್ಲೇ ಅಲಾರಂ ಗಡಿಯಾರದ ಕಿಟಕಿಟಿ

ನಾರಾಯಣ ಕೈ ಚಾಚಿ ಅಲಾರಂ ಗುಂಡಿಯನ್ನೊತ್ತಿ ಆ ಸದ್ದನ್ನಡಗಿ ಸುತ್ತಿದ್ದ. ಅದೇ ಕೈಯಿಂದ ಕಾಮಾಕ್ಷಿಯನ್ನು ಸುತ್ತುವರಿದು ಬರ ಸೆಳೆದು ನಾರಾಯಣ ಆಕೆಯ ಕಿವಿಯೊಳಕ್ಕೆ ಕುಟುರುತಿದ್ದ :

"ಕಾಮೂ........ಕಾಮಿ........ಏ ಕಾಮೂ........"

ಊ......ಎಂದು ರಾಗವೆಳೆಯುತ್ತಿದ್ದಳು ಕಾಮಾಕ್ಷಿ–ಏಳಬೇಡಿ, ಹೋಗಬೇಡಿ, ಎನ್ನುವಂತೆ. ನಾರಾಯಣ ಆಕೆಯ ತಲೆಗೂದಲನ್ನೊಮ್ಮೆ ಮೂಸಿ ನಕ್ಕು ಎದ್ದು ಕುಳಿತು ದೀಪ ಹಚ್ಚುತಿದ್ದ........ ಆ ಬಳಿಕ ಸ್ಟವ್ ಉರಿಸುವುದು, ಅದರ ಮೇಲೆ ಅನ್ನಕ್ಕಾಗಿ ನೀರು....

ವೈದಿಕ ಕಾರ್ಯಕ್ಕೆಂದು ಕಮಲಮ್ಮನ ಗಂಡ ಪರವೂರಿಗೆ ಹೋಗಿದ್ದ. ಹಾಗೆಂದು ಒಂಟಿ ಜೀವವಾದ ಕಮಲಮ್ಮನೇನೂ ಸ್ವಸ್ಥವಾಗಿ ಮಲಗುವ ಹಾಗಿರಲಿಲ್ಲ. ಚಿರದುಃಖಿನಿಯಾದ ಆ ಹೆಂಗಸು ಬೇಗನೆ ಏಳುತಿದ್ದಳು. ರಾತ್ರಿ ರುಬ್ಬಿ ಇಟ್ಟಿದ್ದ ಹಿಟ್ಟನ್ನು ಹುಯ್ದು ಸಣ್ಣಪುಟ್ಟ ಹೇರಳ ದೋಸೆಗಳನ್ನು ಆಕೆ ಸಿದ್ಧಪಡಿಸಬೇಕು. ಇಡ್ಲಿಗಳನ್ನು ಬೇಯಿಸಬೇಕು. ಆರು ಘಂಟೆಗೆ ಐದು ನಿಮಿಷವಿರುವಾಗಲೇ ಎದುರು ಬೀದಿಯ ಹುಡುಗನೊಬ್ಬ ಬಂದು ತಿಂಡಿಯ ಆ ಬುಟ್ಟಿಯನ್ನು ಮಾರಾಟಕ್ಕೆ ಒಯ್ಯುತ್ತಿದ್ದ. ತಲೆ ನೋವಿರಲಿ, ಮೈ ಬಿಸಿ ಇರಲಿ, ಮೈಕೈ ಮುಟ್ಟಿದರೆ ನೋಯುವ ಹಾಗಿರಲಿ, ಕಮಲಮ್ಮ ಐದು ಘಂಟೆಯ ಸುಮಾರಿಗೆ ಎದ್ದೇ ತೀರುತ್ತಿದ್ದಳು. ಎರಡು ಒಲೆಯುರಿಸುತಿದ್ದಳು. ಬೆಂಕಿಯ ನಾಲಿಗೆಗಳು ನಗುತ್ತ ಕುಣಿಯುತ್ತ ಗೋಡೆಗೆ ತಗಲು ಹಾಕಿದ ಚಿಮಿಣಿ ದೀಪವನ್ನು ಅಣಕಿಸುತಿದ್ದುವು.

ರಾಮಚಂದ್ರಯ್ಯನ ಮನೆಗೂ ರಂಗಮ್ಮನದಕ್ಕೂ ನಡುವಿನ ಮನೆಯಲ್ಲಿ ಹಸ್ತ ಸಾಮುದ್ರಿಕ ಜ್ಯೋತಿಷಿ ಪದ್ಮನಾಭನಿದ್ದ. ಮಧ್ಯ ವಯಸ್ಕ ಮಗಳು ಮದುವೆಯಾಗಿ ಗಂಡನ ಮನೆ ಸೇರಿದ್ದಳು. ಮಗ ಅರುವತ್ತು ರೂಪಾಯಿ ಸಂಬಳದ ಕೆಲಸ ದೊರಕಿಸಿಕೊಂಡು ಹೈದರಾಬಾದಿನಲ್ಲಿ ನೆಲೆಸಿದ್ದ. ಇಲ್ಲಿದ್ದುದು ಚಿಕ್ಕಹುಡುಗ ಮತ್ತು ಈಗಾಗಲೇ ತಲೆಗೂದಲು ಬಿಳುಪಾಗಿದ್ದ ಹೆಂಡತಿ. ಪದ್ಮನಾಭನಿಗೂ ಬೇಗನೆ ಏಳುವ ಅಭ್ಯಾಸ. ಹಾಗೆ ಎದ್ದು ಏನಾದರೂ ಶ್ಲೋಕವನ್ನು ಆತ ಗುಣ

ಗುಣಿಸುತಿದ್ದ. ಅದು ಯಾವ ಶ್ಲೋಕವೆಂದು ಎಂದೂ ಯಾರಿಗೂ ತಿಳಿಯುವ ಹಾಗಿರಲಿಲ್ಲ. ಹೆಂಡತಿ ಮತ್ತು ಮಗುವನ್ನು ಬಚ್ಚಲು ಮನೆಯ ಮತ್ತು ನೀರಿನ ಸಂಕಷ್ಟಗಳಿಗೇ ಬಿಟ್ಟುಕೊಟ್ಟು, ಆತ ಮಲ್ಲೇಶ್ವರದ ಈಜು ಕೊಳದಲ್ಲಿ ಸ್ನಾನ ಮಾಡಿಬರಲು ಎದ್ದು ಬಿಡುತಿದ್ದ.

ಸಾಲುಮನೆಗಳು ಕವಲೊಡೆದಿದ್ದ ಕಟ್ಟಡಕ್ಕೆ ಒಂದು ಮಹಡಿಯಿತ್ತು. ರಂಗಮ್ಮನ ಮಹಡಿಯ ಮಹಲು! ಕೆಳಭಾಗದಲ್ಲಿ ನಾಲ್ಕು ಸಂಸಾರಗಳಿದ್ದುವು. ಮೇಲೆ ಮೂರು. ಕೆಳಗೆ ರಂಗಮ್ಮನ ಮನೆಯ ಭಾಗಕ್ಕೇ ಅಂಟಿಕೊಂಡು ಒಬ್ಬ ತಾಯಿ ಮತ್ತು ಇಬ್ಬರು ಮಕ್ಕಳಿದ್ದರು. ಕೋಲಾರದವರು. ದೊಡ್ಡವನು ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತಿದ್ದ. ಅವನ ಜತೆಗೆಂದು ಚಿಕ್ಕವನೂ ಇಲ್ಲಿಗೇ ಬಂದಿದ್ದ. ಇಂಟರ್ ಪರೀಕ್ಷೆ ಕಟ್ಟಲು. ಬೆಂಗಳೂರಲ್ಲಿ ಹುಡುಗರು ಕೆಟ್ಟುಹೋಗಬಹುದೆಂದು ತಾಯಿಯೂ ಜತೆಯಲ್ಲೇ ಬಂದಿದ್ದಳು. ತಕ್ಕಮಟ್ಟಿಗೆ ಅನುಕೂಲಸ್ಥನಾದ ತಂದೆಯೂ ಬರುತಿದ್ದ ತಿಂಗಳಿಗೆರಡು, ಬಾರಿ. ತಾಯಿ ಆ ಮಕ್ಕಳನ್ನು ಬೆಳಗ್ಗೆ ಬೇಗನೆ ಎಬ್ಬಿಸುತಿದ್ದಳು. ವಿದ್ಯುದ್ದೀಪ ಅವರಿಗೂ ಇರಲಿಲ್ಲ. ಆದರೆ ಶುಭ್ರಪ್ರಕಾಶ ಬೀರುತಿದ್ದ ಕಂದೀಲಿತ್ತು.

ಆ ಕಂದೀಲಿನ ಬೆಳಕು ಎದುರು ಭಾಗದಲ್ಲಿದ್ದ ತಮ್ಮ ಮನೆಯ ಬಾಗಿಲಿನ ಬಿರುಕುಗಳೆಡೆಯಿಂದ ಒಳಬಿದ್ದೊಡನೆಯೇ ರಾಜಮ್ಮನಿಗೆ ಎಚ್ಚರವಾಗುತ್ತಿತ್ತು. ರಂಗಮ್ಮನ ಬಳಿಕ ಆಕೆ ಆ ವಠಾರದ ಇನ್ನೊಬ್ಬ ವಿಧವೆ. ದೊಡ್ಡಮಗ ಗುಂಡಣ್ಣ ಉಂಡಾಡಿಯಾದರೆ ಎರಡನೆಯವನಿಗೆ ಒಳ್ಳೆಯ ಡಾಕ್ಟರೊಬ್ಬರ ಬಳಿಯಲ್ಲಿ ಕೆಲಸವಿತ್ತು. ವಾಸ್ತವವಾಗಿ ಅದು ಜವಾನನ ಕೆಲಸ. ಅಷ್ಟೇ ಸಂಬಳ. ಆದರೆ ಜವಾಬ್ದಾರಿ ಕಂಪೌಂಡರನದು. ಆ ಕಾರಣದಿಂದ ರಾಜಮ್ಮ, ತನ್ನ ಮಗನಿಗೆ 'ಕಂಪೋಂಡ್ರು ಕೆಲಸ'ವೆಂದೇ ಹೇಳುತ್ತಿದ್ದಳು. 'ಕಂಪೋಂಡ್ರು' ಮನೆ ಬಿಡುವುದು ಏಳು ಘಂಟೆಗಾದರೂ ರಾಜಮ್ಮನಿಗೆ ಬೆಳಗಿನ ಜಾವ ನಿದ್ದೆ ಬರುತಿರಲಿಲ್ಲ. 'ಅವರು' ಇದ್ದಾಗ ನಸುಕಿನಲ್ಲೆ ಎದ್ದು ಅಭ್ಯಾಸ.

ರಾಜಮ್ಮನ ಮನೆಯ ಬಲಭಾಗಕ್ಕೆ, ಹೊರ ಅಂಗಳಕ್ಕೆ ತಗಲಿಕೊಂಡೇ ಇದ್ದುದು ಪೋಲೀಸ್ ಕಾನ್‌ಸ್ಟೇಬಲ್ ರಂಗಸ್ವಾಮಿಯ

ಮನೆ. ಪೋಲೀಸನೊಬ್ಬ ಮನೆಯ ಎದುರು ಭಾಗದಲ್ಲೇ ಇರುವುದು ಮೇಲೆಂಬುದು ರಂಗಮ್ಮನ ಅಭಿಪ್ರಾಯವಾಗಿತ್ತು. ವಠಾರದ ನಸುಕಿನ ಗದ್ದಲ ಕೇಳುತ್ತಲೆ ರಂಗಸ್ವಾಮಿಯ ಹೆಂಡತಿಗೆ ಎಚ್ಚರವಾಗುತಿತ್ತು. ಆಕೆ ಗೂರಲು ರೋಗಿ. ಎದ್ದು ಕುಳಿತು ಕೆಮ್ಮುತಿದ್ದಳು. ಮೂವರ ಮಕ್ಕಳ ಮೇಲಿನ ಹೊದಿಕೆ ಸರಿಪಡಿಸಿ ಮತ್ತೂ ಕೆಮ್ಮುತಿದ್ದಳು. ರಂಗಸ್ವಾಮಿ ಮಾತ್ರ ಏಕಪ್ರಕಾರವಾಗಿ ಗೊರಕೆ ಹೊಡೆಯುತಿದ್ದ.

ಆ ಮನೆಗೆ ಎದುರಾಗಿ ಮಾಧ್ಯಮಿಕ ಶಾಲೆಯ ಉಪಾಧ್ಯಾಯ ರೊಬ್ಬರಿದ್ದರು–ಲಕ್ಷ್ಮೀನಾರಾಯಣಯ್ಯ. ಆ ಬಡ ಸಂಸಾರದ ಸದಸ್ಯರ ಸಂಖ್ಯೆ ಒಟ್ಟು ಏಳು. ಸಣ್ಣಪುಟ್ಟ ಮಕ್ಕಳು ಐವರು. ಅವರನ್ನು ಹೊತ್ತು ಹೆತ್ತಿದ್ದ ತಾಯಿ. ಮಕ್ಕಳಾಗಲಿಲ್ಲವೆಂಬ ಕಾರಣದಿಂದ ಗಂಡನ ಮನೆಯಿಂದ ಓಡಿಸಲ್ಪಟ್ಟ ಉಪಾಧ್ಯಾಯರ ಯುವತಿ ತಂಗಿ. ವಠಾರದ ಗುಜುಗುಜು ಕೇಳಿದಂತೆ ಉಪಾಧ್ಯಾಯರ ಹೆಂಡತಿ ಎಚ್ಚರ ಗೊಂಡು, ಒಡುಗೆ ಮನೆಯಲ್ಲಿ ಮಲಗಿದ್ದ ನಾದಿನಿಗೆ ಹೇಳುತಿದ್ದಳು.

"ಏ ಸುಮಂಗಳಾ........ಏಳೇ....ಏಳೇ........ಬೆಳಗಾಯ್ತೂಂತ ಕಾಣುತ್ತೆ."

ಹಾಗೆ ಹೇಳಿ ಆಕೆ ಹೊದಿಕೆಯನ್ನು ಮತ್ತಷ್ಟು ಬಲವಾಗಿ ಮುಖದ ಮೇಲೆಳೆದುಕೊಳ್ಳುತ್ತಿದ್ದಳು. ಮಕ್ಕಳ ಕಾಲಿನೆಯ ಆಚೆದಡ ದಲ್ಲಿ ಮಲಗಿದ್ದ ಲಕ್ಷ್ಮೀನಾರಾಯಣಯ್ಯ ಸುಗ್ಗುಲು ಹೊರಳಿ ಗೋಡೆಗೆ ಮೂಗುಮುಟ್ಟಿಸುತ್ತಾ ನಿದ್ದೆಯ ಇನ್ನೊಂದು ಅಧ್ಯಾಯ ವನ್ನು ಆರಂಭಿಸುತಿದ್ದರು.

ಕೆಳಗಿನ ಮನೆಗಳಲ್ಲೆಲ್ಲಾ ಅಡ್ಡಗೋಡೆಯೊಂದು ಎರಡು ಕೊಠಡಿ ಗಳಿವೆಯೇನೋ ಎಂಬ ಭ್ರಮೆಗೆ ಕಾರಣವಾಗಿತ್ತು. ಮಹಡಿಯ ವಿಭಾಗದಲ್ಲಿ ಅಂತಹ ಏರ್ಪಾಟೆರಲಿಲ್ಲ. ಒಂಟಿ ಇಟ್ಟಿಗೆಯಿಟ್ಟು ಒಟ್ಟು ಮೂರು ಕೊಠಡಿಗಳನ್ನು ಮಾಡಿದ್ದರು. ಒಂದೊಂದು ಕೊಠಡಿಯೂ ಒಂದೊಂದು ಮನೆ. ಆದರೆ ಮಹಡಿಯಾಗಿದ್ದುದರಿಂದ ಬಾಡಿಗೆಯ ವಿಷಯದಲ್ಲಿ ಯಾವ ಮನೆಗೂ ಅವು ಕಡಿಮೆಯಾಗಿರಲಿಲ್ಲ.

ಮೊದಲ ಕೊಠಡಿಮನೆಯಲ್ಲಿ ಮೂವರು ವಿದ್ಯಾರ್ಥಿಗಳಿದ್ದರು.

ಪರಸ್ಪರ ತುಂಬಾ ಹೊಂದಿಕೊಂಡಿದ್ದ ಹುಡುಗರು! ರಾತ್ರೆ ರಂಗಮ್ಮ ದೀಪ ಆರಿಸುತ್ತಾರೆಂದು ಅವರೆಂದೂ ನೊಂದುಕೊಂಡವರಲ್ಲ. ಬೆಳಗ್ಗೆ ದೀಪವಿಲ್ಲವೆಂದು ಚಡಪಡಿಸಿದವರೂ ಅಲ್ಲ. ವಠಾರದಿಂದ ಎಷ್ಟೋ ಹಕ್ಕಿಗಳು ಹೊರಹೋದ ಮೇಲೆಯೇ ಅವರಿಗೆ ಬೆಳಕು ಹರಿಯುತ್ತಿತ್ತು.

ಎರಡನೆಯ ಕೊಠಡಿಮನೆಯ ನಿವಾಸಿ ಒಬ್ಬಂಟಿಗನಾದ ಚಂದ್ರಶೇಖರಯ್ಯ. ಒಂದು ವಿಮಾಸಂಸ್ಥೆಯ ಈ ಪ್ರತಿನಿಧಿ, ಉಸಿರಾಟದ ಸದ್ದೂ ಇಲ್ಲದೆ ನಿದ್ದೆಹೋಗುವಷ್ಟು ಸಮರ್ಥ. ತಿಂಗಳಲ್ಲಿ ಹತ್ತು ದಿನ ಆತ ಊರಲ್ಲಿದ್ದರೇ ಹೆಚ್ಚು. ಇದ್ದಾಗ, ತಡವಾಗಿ ಮನೆಗೆ ಬರುವುದು, ತಡವಾಗಿ ಏಳುವುದು.

ಮೂರನೆಯ ಕೊಠಡಿಮನೆಯಲ್ಲಿದ್ದುದು ಸಾವಿತ್ರಮ್ಮನ ಸಂಸಾರ. 'ಅವರ ಯಜಮಾನ'ರು ಹೆಚ್ಚಾಗಿ ಸರ್ಕೀಟಿನ ಮೇಲೆಯೇ ಇರುತ್ತಿದ್ದರು. ಆತ ಪ್ರಕಾಶನ ಸಂಸ್ಥೆಗಳ ಪ್ರತಿನಿಧಿ. ಕನ್ನಡದ ಅಪೂರ್ವ ವಿದ್ವತ್ತನ್ನೆಲ್ಲ ಪುಸ್ತಕಗಳ ರೂಪದಲ್ಲಿ ಕಬ್ಬಿಣದೊಂದು ಪೆಟ್ಟಿಗೆಯಲ್ಲಿ ಹೊತ್ತು ಆತ ಊರೂರು ತಿರುಗುತಿದ್ದರು. ಇಬ್ಬರು ಮಕ್ಕಳು ಆ ದಂಪತಿಗಳಿಗೆ. ಇಂಟರ್ ಪರೀಕ್ಷೆಗೆ ಎರಡು ಸಾರೆ ಕಟ್ಟಿ ಎರಡು ಭಾಗಗಳಲ್ಲಷ್ಟೆ ಉತ್ತೀರ್ಣನಾದವನು ಜಯರಾಮು. ಎರಡು ವಾರಪತ್ರಿಕೆಗಳ ಮಕ್ಕಳ ವಿಭಾಗಕ್ಕೂ ಸದಸ್ಯನಾಗಿದ್ದ ಆತನನ್ನು ಸುತ್ತ ಮುತ್ತಲಿನವರೆಲ್ಲ ಕವಿಯೆಂದು ಕರೆಯುತ್ತಿದ್ದರು. ಆತನ ತಂಗಿ, ತಾಯ್ತಂದೆಯರ ದೃಷ್ಟಿಯಲ್ಲಿ 'ಇನ್ನೂ ಚಿಕ್ಕ ಹುಡುಗಿ.' ಆದರೆ ಅಕ್ಕ ಪಕ್ಕದ ಮನೆ ಹೆಂಗಸರ ಅಭಿಪ್ರಾಯದ ಪ್ರಕಾರ 'ಬೆಳೆದು ನಿಂತವಳು'. ಆದರೆ ಪುಟ್ಟ ರಾಧಾ ಈಗಲೂ ತಾಯಿಯ ಜತೆಯಲ್ಲೇ ಮೈಮುದುಡಿಕೊಂಡು ಮಲಗುತಿದ್ದಳು. ಕತ್ತಲನ್ನು ಕಂಡರೆ ಅವಳಿಗೆ ಭಯ. ಕವಿ ಜಯರಾಮು ಮಾತ್ರ ಬೇಗನೆ ಎದ್ದು ಉಷೆಯನ್ನು ಇದಿರುಗೊಳ್ಳಲೆಂದು ವಠಾರದಿಂದ ಹೊರಬಿದ್ದು ದೂರ-ಬಲುದೂರ, ಸಾಗುತಿದ್ದ.

ವಠಾರದ ಹಿಂಭಾಗದ ಮನೆಯ ಸುಬ್ಬುಕೃಷ್ಣಯ್ಯ ಏಳುವುದು ಸ್ವಲ್ಪ ನಿಧಾನವಾಗಿಯೇ. ಒಂಭತ್ತು ಘಂಟೆಗೆ ಸರಿಯಾಗಿ ಆತ ಶ್ರೀನಿವಾಸ ಶೆಟ್ಟರ ಅಂಗಡಿ ಬಾಗಿಲಲ್ಲಿದ್ದರಾಯಿತು.

ಅದರ ಎದುರು ಭಾಗದಲ್ಲೇ ನಾರಾಯಣಿಯ ಮನೆ........

ಎಂದಿನಂತೆಯೇ ಈ ದಿನವೂ, ಈ ಮುಂಜಾನೆಯೂ........

ಎಚ್ಚರವಾಗಿ ಬಹಳ ಕಾಲ ಕಂಬಳಿ ಹೊದೆದು ಕುಳಿತಿದ್ದ ರಂಗಮ್ಮ, ನಿನ್ನೆ–ಈದಿನ–ನಾಳೆಗಳ ಬಗೆಗೆ ಯೋಚಿಸಿದರು. ಬಳಿಕ ಎದ್ದು ಬಾಗಿಲು ತೆರೆದರು. ಮಬ್ಬು ಬೆಳಕಿನ ಗಾಳಿ ಅವರ ಮುದಿ ಮುಖಕ್ಕೆ ಮುತ್ತಿಟ್ಟಿತು. ಬೀಗದ ಕೈ ಗೊಂಚಲನ್ನೆತ್ತಿಕೊಂಡು ನಡೆ ಗೋಲನ್ನೂರುತ್ತಾ ಅವರು ಹೊರಬಂದರು. ಅವರ ದೃಷ್ಟಿ ಓಣಿಯ ಕೊನೆಗೆ–ನಾರಾಯಣಿಯ ಮನೆಯತ್ತ–ಹರಿಯಿತು. ಅವರು ಮೆಲ್ಲನೆ ಅಲ್ಲಿಗೆ ನಡೆದರು. ಬಾಗಿಲಿಗೆ ಒಳಗಿನಿಂದ ಅಗಣಿ ಹಾಕಿರಲಿಲ್ಲ. ರಂಗಮ್ಮ ಹಿಂದಕ್ಕೆ ತಳ್ಳಿದರು. ನಾರಾಯಣಿ ಮಲಗಿದ್ದಲ್ಲಿ ತಲೆಯ ಭಾಗದಲ್ಲಿರಿಸಿದ್ದ ಹಣತೆ ಎಣ್ಣೆ ಆರಿ ನಂದಿ ಹೋಗಿತ್ತು. ನಾಲ್ವರು ಮಕ್ಕಳನ್ನೂ ಮೂಲೆಯಲ್ಲಿ ಒಂದಾಗಿ ಮಲಗಿಸಿ ಹೊದಿಸಿತ್ತು. ನಾರಾ ಯಣಿಯ ಗಂಡ ಬರಿಚಾಪೆಯ ಮೇಲೆ ಮಕ್ಕಳತ್ತ ಮುಖ ತಿರುಗಿಸಿ ಮಲಗಿದ್ದ. 'ಅಯ್ಯೋ ಪಾಪ!' ಎನಿಸಿತು ರಂಗಮ್ಮನಿಗೆ. ಅವರು ಮತ್ತೆ ಬಾಗಿಲೆಳೆದುಕೊಂಡರು.

ರಂಗಮ್ಮ ಹೊರ ಹಿತ್ತಿಲಿಗೆ ಬಂದು ಕೊಳಾಯಿಗೆ ಹಾಕಿದ್ದ ಬೀಗ ತೆಗೆದರು. ತಮ್ಮ ವಠಾರದ ಎಲ್ಲರನ್ನೂ ಉದ್ದೇಶಿಸಿ ಅವರೆಂದರು:

"ಕೊಳಾಯಿ ಬೀಗ ತೆಗೆದಿದೀನಿ........ಬನ್ರೇ........"

ಒಬ್ಬೊಬ್ಬರಾಗಿ ಕೊಡವೆತ್ತಿಕೊಂಡು ಎಲ್ಲರೂ ಬಂದರು– ಮೀನಾಕ್ಷಮ್ಮ, ಪದ್ಮಾವತಿ, ಕಮಲಮ್ಮ, ಕಾಮಾಕ್ಷಿ, ರಾಜಮ್ಮ, ರಾಧಾ........ಎಲ್ಲರೂ.

ನಾರಾಯಣಿಯಂತೂ ಕಾಹಿಲೆ ಮಲಗಿದ ಮೇಲೆ ನೀರಿಗೆ ಬಂದೇ ಇರಲಿಲ್ಲ. ಆಕೆ ಬರದೇ ಇದ್ದುದರಿಂದ ಏನೋ ಕೊರತೆ ಯಾದಂತೆ ಯಾರಿಗೂ ಅನಿಸಲಿಲ್ಲ.

ಎಂದಿನಂತೆಯೇ ಮತ್ತೊಂದು ದಿನ ತಮ್ಮ ವಠಾರದಲ್ಲಿ ಆರಂಭ ವಾದಂತೆ ರಂಗಮ್ಮನಿಗೆ ತೋರಿತು.

ಅವರು ಸಮಾಧಾನದ ನಿಟ್ಟುಸಿರು ಬಿಟ್ಟರು.

೩

ನಾರಾಯಣಿಯ ಗಂಡ ಎಲ್ಲಿಂದಲೋ ಸಾಲ ಪಡೆದು ಒಂದಿಷ್ಟು ಅಕ್ಕಿ ತಂದು ಗಂಜಿ ಬೇಯಿಸಿದ. ಮಾರಲೆಂದು ಸಿದ್ಧಪಡಿಸುತ್ತಿದ್ದುದರಲ್ಲಿ ಸ್ವಲ್ಪ ತಿಂಡಿ ಉಳಿಸಿಕೊಂಡು ಕಮಲಮ್ಮ ಎಳೆಯ ಮಕ್ಕಳಿಗೆ ಕೊಟ್ಟಳು. ದೊಡ್ಡ ಹುಡುಗ ಶಾಲೆಗೆ ಹೋಗುವುದನ್ನು ನಿಲ್ಲಿಸಿ, ಚಿಕ್ಕವರನ್ನು ನೋಡಿಕೊಂಡ. ಕಾಮಾಕ್ಷಿ ಕೊನೆಯ ಕೂಸಿಗೆ ಹಸುವಿನ ಹಾಲು ಕುಡಿಸಿದಳು.

ಸಾವಿನ ಮನೆಗೆ ಸಂಕೇತವಾಗಿದ್ದ ಹಣತೆ, ಆಗಾಗ್ಗೆ ಎಣ್ಣೆ ಇಲ್ಲದೆ ಆರಿದರೂ, ಒಂದು ಎರಡು ಮೂರು ಎಂದು ಕಳೆದ ದಿನಗಳನ್ನು ಲೆಕ್ಕ ಹಾಕಿತು.

ಅಳು-ನಗು, ಸಾಧನೆ–ಸಂಪಾದನೆ, ಸುಖ–ಸಂಕಟ, ಹೀಗೆ ಬದುಕಿನ ಬಣ್ಣಬಣ್ಣದ ಅಲೆಗಳು ವಠಾರದ ಜೀವನ ಸರೋವರದಲ್ಲಿ ಹುಟ್ಟಿ ಅಳಿಯುತ್ತಲೇ ಇದ್ದುವು.

ಆದರೆ ರಂಗಮ್ಮ ಗೆಲುವಾಗಿರಲಿಲ್ಲ. ಅವರ ಸುಕ್ಕುಗಟ್ಟಿದ್ದ ಮುಖ ಬಾಡಿಕೊಂಡು ಮತ್ತಷ್ಟು ಸಪ್ಪೆಯಾಗಿತ್ತು. ಒಮ್ಮೆ ಸಿಡುಕು, ಮರುಕ್ಷಣವೆ ಸಂತೋಷ,–ಇದು ಅವರ ಸ್ವಭಾವ. ಆದರೆ ಈಗ ದಿನವೆಲ್ಲ ಮುಖ ಗಂಟಿಕ್ಕಿಕೊಂಡೇ ಇರುತ್ತಿತ್ತು........

........ರಾಧಾ, ಮೂರು ಎಂದು ಹೇಳಿ ನಾಲ್ಕು ಕೊಡ ನೀರು ಒಯ್ದಳೆಂದು ಅವರು ಗದರಿದರು. ರಾಧಾಗೆ ಅಳು ಬಂತು.

ಜಯರಾಮು ಕಿಟಕಿಯಿಂದ ಮುಖ ಹೊರ ಹಾಕಿ ಕೆಳಕ್ಕೆ ರಂಗಮ್ಮನತ್ತ ನೋಡುತ್ತಾ ರಾಗವೆಳೆದ:

"ನಾಲ್ಕು ಕೊಡ ನೀರು ಹೊತ್ಕೊಂಡು ಈ ಮಹಡಿ ಮೆಟ್ಟಿಲು

ಹತ್ತೋದು ಮನುಷ್ಯರಿಂದ ಸಾಧ್ಯವೆ ರಂಗಮ್ನೋರೆ? ಅದೂ ರಾಧಾ, ಪುಟ್ಟ ಹುಡುಗಿ."

ರಾಧಾ ಪುಟ್ಟ ಹುಡುಗಿಯಲ್ಲವೆಂದು ವಾದಿಸುತ್ತಿದ್ದ ಇಬ್ಬರು ಮೂವರು ಹೆಂಗಸರು ಕೊಳಾಯಿಯ ಬಳಿ ನಿಂತಿದ್ದರು. ಅವರಿಗೆ ಕೇಳಿಸಲೆಂದೇ ಜಯರಾಮು ಹಾಗೆ ಹೇಳಿದ.

ಆತ ನಿರೀಕ್ಷಿಸಿದ್ದಂತೆಯೇ ಚರ್ಚೆ ನಾಲ್ಕು ಕೊಡಗಳನ್ನು ಮರೆತು ರಾಧಾಳತ್ತ ತಿರುಗಿತು.

ಮದುವೆಯಾಗದೇ ಇದ್ದ ಇಬ್ಬರು ಗಂಡುಮಕ್ಕಳ ತಾಯಿ ರಾಜಮ್ಮ, ಯಾವುದೋ ಸಂಕಟವನ್ನು ಮರೆಸಲು ಹಾದಿಯಾಗಲೆಂದು ಮಾತನಾಡಿದಳು :

"ಚೆನ್ನಾಗಿದೆ....ಪುಟ್ಟ ಹುಡುಗಿ....ಊಹೂಹೂಹು.....ಪಾಪ! ದೃಷ್ಟಿ ತಾಕೀತು."

"ಯಾಕೆ ಸುಮ್ಸುಮ್ನೆ ಜಗಳ ಕಾಯ್ತಾಯೋ?"

ಎಂದು ಜಯರಾಮುವಿನ ತಾಯಿ ವಿನಂತಿ ಮಾಡುವ ಧ್ವನಿಯಲ್ಲಿ ಮಗನಿಗೆ ಅಂದಳು.

ಗುಂಡಣ್ಣ ಹೆಬ್ಬಾಗಿಲ ಬಳಿ ತಲೆ ಹಾಕಿ ಗಡಸು ಸ್ವರದಲ್ಲಿ ಗದರಿದ :

"ಏನಮ್ಮಾ ಅದು ಗಲಾಟೆ?"

ರಂಗಮ್ಮ ಅಲ್ಲಿಂದ ಒಳಕ್ಕೆ ಬಂದರು. ಕಟ್ಟಡದ ಕೆಳಭಾಗದಲ್ಲಿದ್ದ ನಾಲ್ಕು ಮನೆಗಳಲ್ಲೂ ಹಗಲುಹೊತ್ತು ಕೂಡಾ ಸಾಕಷ್ಟು ಬೆಳಕು ಇರುತ್ತಿರಲಿಲ್ಲ. ಆದರೆ ರಂಗಮ್ಮನಿಗೆ, ದೃಷ್ಟಿ ಮಂದವಾಗಿದ್ದರೂ, ಅಭ್ಯಾಸಬಲದಿಂದ ಆ ಮನೆಗಳ ಒಳಗಿದ್ದ ಪ್ರತಿಯೊಂದೊಂದೂ ತೆರೆದ ಬಾಗಿಲುಗಳೆಡೆಯಿಂದ ಕಾಣಿಸುತ್ತಿತ್ತು.

ರಂಗಮ್ಮನ ಗಂಟಲಿನಿಂದ ಆಂ-ಊಂ-ನರಳಾಟದ ಧ್ವನಿ ಹೊರಟಿತು. ಹಲ್ಲು ಕಡಿತದ ಸಪ್ಪಳ ಕೇಳಿಸಿತು. ಎಲ್ಲಿಲ್ಲದ ಬೇಸರದಿಂದ ಹಿಂಡಿಹೋಗಿತ್ತು ಮನಸ್ಸು.

ಓಣಿಯಲ್ಲಿ ಪದ್ಮನಾಭನ ಮನೆಯ ಮುಂದುಗಡೆ ಯಾವುದೋ

ಮಗು 'ಇಸ್ಸಿ' ಮಾಡಿತ್ತು.

ಟಕಟಕನೆ ಸದ್ದು ಮಾಡಿಕೊಂಡು ಹಾಸುಗಲ್ಲುಗಳ ಮೇಲೆ ನಡೆಯುತ್ತಾ ರಂಗಮ್ಮ ಅಲ್ಲಿಗೆ ಬಂದರು.

"ಯಾರ ಮಗೂನೇ ಇದು ?....ವಠಾರದ ಆಚೆಗೆ ಬೀದಿಗೆ ಕಳಿಸೀಂತ ಎಷ್ಟು ಸಾರಿ ಹೇಳ್ದೆ ನಿಮಗೆ...."

ಯಾವ ಮನೆಯಿಂದಲೂ ಉತ್ತರ ಹೊರಡಲಿಲ್ಲ. ರಂಗಮ್ಮನ ಸ್ವರ ಕಿರಿಚಿಕೊಳ್ಳುವ ಮಟ್ಟಕ್ಕೇರಿತು:

"ಕಿವಿ ಕೇಳಿಸೋಲ್ವೇನ್ರೇ ? ಪದ್ಮಾವತೀ, ಪಾರ್ವತೀ, ಯಾರ ಮಗೂನೇ ಇದು ?"

"ನಮ್ಮದಲ್ಲವಪ್ಪ", "ನಮ್ಮದಲ್ಲ" ಎಂದು ಉತ್ತರಗಳು ಬಂದುವು. ತಾಯಂದಿರು ತಮ್ಮ ಎಳೆಯ ಮಕ್ಕಳನ್ನು ಹಿಡಿದು ತಿರುಗಿಸಿ ಪರೀಕ್ಷಿಸ ಬೇಕಾಯಿತು.

"ಇದೊಳ್ಳೇ ತಮಾಷೆ. ಹಾಗಾದರೆ ಬೀದಿ ಮಕ್ಕಳು ಇಲ್ಲಿಗೆ ಬಂದುವೇನು ?"

ಎಂದು ಗಟ್ಟಿಯಾದ ಸ್ವರದಲ್ಲಿ ರಂಗಮ್ಮ ಅಂದರು.

ನಾರಾಯಣಿಯ ದೊಡ್ಡ ಹುಡುಗ ಹೊರ ಬಂದು ವಿಷಾದದ ಧ್ವನಿಯಲ್ಲಿ ಹೇಳಿದ:

"ನಮ್ಮನೇ ಮಗು ಅಜ್ಜಿ. ನಾನು ನೋಡೇ ಇರ್ಲಿಲ್ಲ. ತೆಗೀತೀನಿ."

ತಾಯಿಯಿಲ್ಲದ ತಬ್ಬಲಿ ಮಕ್ಕಳು....ರಂಗಮ್ಮನ ಗಂಟಲು ಒಣಗಿ ಹೋಯಿತು. ಎಂತಹ ಕಷ್ಟ ಆ ಕೂಸುಗಳಿಗೆ !

ಹುಡುಗ 'ಇಸ್ಸಿ'ಯೆತ್ತಲು ಯಾವುದೋ ಪತ್ರಿಕೆಯ ಚೂರು ಗಳನ್ನು ತರುತ್ತಿದ್ದಂತೆ ಕಮಲಮ್ಮನ ಸ್ವರ ಕೇಳಿಸಿತು.

"ತಾಳೋ ಪುಟ್ಟಾ, ನಾನು ತೆಗೀತೀನಿ ತಾಳೋ...."

ರಂಗಮ್ಮ ಹಾಗೆಯೇ ಮುಂದಕ್ಕೆ ನಡೆಯುತ್ತಾ ಹಿತ್ತಿಲ ಬಾಗಿಲ ವರೆಗೆ ಬಂದರು. ಆ ಕೊನೆಯ ಮನೆಯ ಸಂಸಾರಕ್ಕೊದಗಿದ ದುರ್ಗತಿ ಯನ್ನು ನೆನೆಯುತ್ತಾ ಅವರಿಗೆ ಸಂಕಟವೆನಿಸಿತು, ಉಗುಳು ನುಂಗು

ವಂತಾಯಿತು.

ಹಿತ್ತಿಲ ಬಾಗಿಲ ಬಳಿ ಕಸದ ಗುಪ್ಪೆ ಇತ್ತು. ಮೀನಾಕ್ಷಮ್ಮನ ಮನೆಯದೇ ಎಂಬುದು ಖಚಿತವಾಗಿದ್ದರೂ ರಂಗಮ್ಮ ಎಂದಿನಂತೆ ಮಾತನಾಡಿದರು.

"ಯಾರ್ರೀ ಇಲ್ಲಿ ಕಸದ ಗುಪ್ಪೆ ಹಾಕಿರೋರು? ಬಾಗಿಲು ತೆರೆದು ಹೊರಕ್ಕೆ ಎಸಿಯೋಕೆ ಆಗಲ್ವೇನ್ರಿ? ಮುನ್ಸಿಪಾಲ್ಟಿಯೋರು ವಠಾರದ ಒಳಕ್ಕೆ ಬರ್ತಾರೇಂತ ತಿಳ್ಕೊಂಡಿದೀರೇನ್ರಿ?...."

ಮೀನಾಕ್ಷಮ್ಮ ಎಂದಿನಂತೆಯೇ ಸಾವಧಾನವಾಗಿಯೇ ಉತ್ತರ ವಿತ್ತಳು:

"ನಾನು ರಂಗಮ್ನೋರೆ....ಬಂದೆ, ಎತ್ತಿಹಾಕ್ತೀನಿ...."

ರಂಗಮ್ಮ ಗೊಣಗುತ್ತಾ ಹಿಂತಿರುಗಿ ಓಣಿಯುದ್ದಕ್ಕೂ ನಡೆದು ಈ ತುದಿಗೆ ಬಂದು ತಮ್ಮ ಮನೆಯ ಬಾಗಿಲ ಬಳಿ ನಿಂತರು.

ರಾಜಮ್ಮ ರಂಗಮ್ಮನ ಪರವಾಗಿ ಕೊಳಾಯಿಗೆ ಬೀಗ ತಗಲಿಸಿ, ಬೀಗದಕೈಯನ್ನು ತಂದುಕೊಟ್ಟಳು.

"ಆಯ್ತೇನು ನೀರು ಎಲ್ರಿಗೂ?"

"ಆಯ್ತು ರಂಗಮ್ನೋರೆ."

ಇದು ಕೂಡಾ ಪದ್ಧತಿಯ ಮಾತು.

ರಂಗಮ್ಮ ತಮ್ಮ ಮನೆಯೊಳಕ್ಕೆ ಬಂದರು. ಒಲೆ ಹಚ್ಚಬೇಕಿನ್ನು. ತನಗಾಗಿ ನೀರು ಬಿಸಿಮಾಡಿ, ಅಡುಗೆ ಮನೆಯಲ್ಲೇ ಇದ್ದ ಬಚ್ಚಲಲ್ಲಿ ಸ್ನಾನಮಾಡಬೇಕು. ಆ ಬಳಿಕ ದೇವರಪೂಜೆ. ತಮ್ಮ ಒಪ್ಪತ್ತಿನ ಊಟಕ್ಕಾಗಿ ಅನ್ನ ಸಾರು.

ಈದಿನ ಏನೂ ಬೇಡವೆಂದು ತೋರಿತು ರಂಗಮ್ಮನಿಗೆ. ಕಾಯಿ ಸದೆ ಹಾಗೆಯೇ ಇರಿಸಿದ್ದ ಅರ್ಧಪಾವು ಹಾಲನ್ನೆ ನೋಡುತ್ತಾ ಅವರು ಗೋಡೆಗೊರಗಿ ಕುಳಿತರು.

ಯೋಚನೆಗಳು ಅವರನ್ನು ಕಾಡಿದುವು.

ಏನು ಮಾಡಬೇಕು? ಅವರೇನು ಮಾಡಬೇಕು?

ತಿಂಗಳಿಗೆ ಹದಿನೇಳರಂತೆ ಮೂರು ತಿಂಗಳು........ಮೂರು

ಸಾರೆ ಹತ್ತು ಮತ್ತು ಮೂರು ಸಾರೆ ಏಳು........ಮೂವತ್ತು ಮತ್ತು ಇಪ್ಪತ್ತೊಂದು........ಐವತ್ತೊಂದು........

ಅದಂತೂ ದೊರೆಯುವ ಆಸೆ ಇರಲೇ ಇಲ್ಲ. ಒಂದು ತಿಂಗಳ ಬಾಡಿಗೆಯನ್ನೂ ಮುಂಗಡವಾಗಿ ಆ ಸಂಸಾರ ಕೊಟ್ಟಿರಲಿಲ್ಲ. ಹೀಗಾಗಿ ಅಷ್ಟು ಹಣವೂ ಕೈ ಬಿಟ್ಟು ಹೋದ ಹಾಗೆಯೇ........

ಆದರೆ ಅಷ್ಟೇ ಹಣವೆಂದು ಹೇಳುವುದು ಹೇಗೆ? ಮುಂದಿನ ಗತಿ ಏನು?

ಆ ಮಹಾರಾಯ ಮನೆಯನ್ನಾದರೂ ಖಾಲಿ ಮಾಡಿದರೆ ಚೆನ್ನಾಗಿತ್ತು........

ಆದರೆ ಆತ ಖಾಲಿ ಮಾಡುವ ಯಾವ ಚಿಹ್ನೆಯೂ ಇರಲಿಲ್ಲ. ನಿರುದ್ಯೋಗ ಬೇರೆ........ಮಕ್ಕಳನ್ನು ಸಾಕುವುದಕ್ಕಾದರೂ ಎರಡನೇ ಮದುವೆ? ಅಷ್ಟೆಲ್ಲ ಸಾಮರ್ಥ್ಯ ಆ ಗಂಡಸಿಗೆ ಇದ್ದ ಹಾಗೆ ತೋರಲಿಲ್ಲ. ಅಂದ ಬಳಿಕ—?

ಬೇಕಾದಷ್ಟು ಕಾಲ ಬಾಡಿಗೆ ಇಲ್ಲದೆಯೇ ಇಲ್ಲಿ ಇರು-ಎಂದು ಹೇಳಿದ ಹಾಗೆ!

ಅದು ಹೇಗೆ ಸಾಧ್ಯ? ಶ್ರೀರಾಮಪುರದಲ್ಲೇ ಪ್ರಖ್ಯಾತವಾಗಿರುವ ರಂಗಮ್ಮನ ವಠಾರವೇನು ಧರ್ಮಛತ್ರ ಕೆಟ್ಟುಹೋಯ್ತೆ?

ಹಾಗಾದರೆ ಆತನಿಗೆ ಹೇಳಬೇಕು-ಮನೆ ಖಾಲಿ ಮಾಡೆಂದು.

ಹಾಗೆ ಹೇಳುವುದು ಮಾತ್ರ ಸುಲಭವಾಗಿರಲಿಲ್ಲ.

ಏನು ಮಾಡಬೇಕೆಂದು ತೋಚದೆ, ಹಲ್ಲಿನ ಸದ್ದು ಮಾಡುತ್ತ ಆಂ-ಊಂ-ಎಂದು ನರಳುತ್ತ ರಂಗಮ್ಮ ಸಂಕಟಪಟ್ಟರು.

ನಾಲ್ವತ್ತು ವರ್ಷ ವಯಸ್ಸಾಗಿದ್ದಾಗಲೇ ವಿಧವೆಯಾಗಿದ್ದರು ರಂಗಮ್ಮ. ಆ ಪುಣ್ಯಾತ್ಮ ಬಿಟ್ಟು ಹೋದ ಆಸ್ತಿಯೆಂದರೆ ಬಾಲ್ಯಾವಸ್ಥೆಯಲ್ಲಿದ್ದ ಒಂದು ಗಂಡು, ಎರಡು ಹೆಣ್ಣು ಮತ್ತು ಪುಟ್ಟಮನೆ. ಅವರು ತೀರಿಕೊಂಡಾಗ ಮಹಡಿ ಕಟ್ಟುವ ಕೆಲಸ ಅರ್ಧದಲ್ಲೇ ನಿಂತಿತ್ತು. ಅವರೆಗೂ ಪುಕ್ಕಲು ಜೀವಿಯಾಗಿ ಗಂಡನ ನೆರಳಾಗಿದ್ದ ರಂಗಮ್ಮ ಆ ಬಳಿಕ ಧೈರ್ಯ ತಳೆದು ದಿನ ಕಳೆದರು.

ಮನೆಯ ಅರ್ಧವನ್ನು ಅವರು ಬಾಡಿಗೆಗೆ ಕೊಟ್ಟರು. ಮಹಡಿ ಕಟ್ಟುವ ಕೆಲಸ ಪೂರ್ತಿಯಾಯಿತು. ಕ್ರಮೇಣ ಕೆಳಭಾಗದಲ್ಲಿ ನಾಲ್ಕು ಮನೆಗಳಾದುವು. ಮಹಡಿಯ ಮೂರು ಕೊಠಡಿಗಳನ್ನು ಓದುವ ಹುಡುಗರಿಗೆ ಬಾಡಿಗೆಗೆ ಕೊಟ್ಟುದಾಯಿತು.

ಬೆಳೆದು ನಿಂತ ಎರಡು ಹುಡುಗಿಯರನ್ನೂ ಹೆಚ್ಚು ಖರ್ಚಿಲ್ಲ ದೆಯೇ ರಂಗಮ್ಮ ಮದುವೆ ಮಾಡಿಕೊಟ್ಟರು. ಆದರೆ ಮಗನಿಗೆ ಮಾತ್ರ ತುಂಬಾ ಅನುಕೂಲಸ್ಥರಾಗಿದ್ದ ಕಡೆಯೇ ಸಂಬಂಧ ಕುದುರಿ ಸಿದರು. ವರದಕ್ಷಿಣೆಯಾಗಿ ಬಂದುದನ್ನೆಲ್ಲ ಉಪಯೋಗಿಸಿ, ಮನೆಯ ಹಿಂಭಾಗದ ಹಿತ್ತಿಲಲ್ಲಿ ಎರಡು ಸಾಲು ನಾಲ್ಕು–ನಾಲ್ಕು ಮನೆಗಳನ್ನು ಕಟ್ಟಿಸಿದ್ದಾಯಿತು.

ಜನ ಅದನ್ನು ವಠಾರವೆಂದು ಕರೆದರು. ಹಾಗೆ ಕರೆಯಲು ಯಾರು ಮೊದಲು ಮಾಡಿದರೊ! ಅಂತೂ ರಂಗಮ್ಮ ವಿಧವೆಯಾದ ಮೇಲೂ ಬಹಳಕಾಲ ಕೃಷ್ಣಪ್ಪನವರ ಮನೆಯಾಗಿಯೇ ಇದ್ದುದು ಕ್ರಮೇಣ ರಂಗಮ್ಮನ ವಠಾರವಾಗಿ ಮಾರ್ಪಟ್ಟಿತು.

ಅದು ಹಲವು ವರ್ಷಗಳಿಗೆ ಹಿಂದಿನ ಮಾತು. ಈಗ ರಂಗಮ್ಮ ವೃದ್ಧೆ. ಇಬ್ಬರು ಹೆಣ್ಣುಮಕ್ಕಳಿಗೂ ಎಷ್ಟೋ ಮಕ್ಕಳಾಗಿದ್ದುವು. ಮಗನೂ ಸಂಸಾರವಂದಿಗನಾಗಿ ತಂದೆಯಾಗಿದ್ದ. ಆಗಾಗ್ಗೆ ವರ್ಗ ವಾಗುತಿದ್ದ ಆತ ಈಗ ಇದ್ದುದು ಕಡೂರಿನಲ್ಲಿ.

ಯಾರಾದರೂ ಕೇಳಿದರೆ ರಂಗಮ್ಮ ಹೇಳುತಿದ್ದರು :

"ಇಲ್ಲೇ ಕಡೂರಲ್ಲಿ. ಒಪ್ಪೊತ್ತಿನ ಪ್ರಯಾಣ...."

ತಾನು ಹೋದಲ್ಲಿಗೆ ತಾಯಿಯನ್ನೂ ಕರೆದೊಯ್ಯಬೇಕೆಂದು ಮಗ ಎಷ್ಟೋ ಪ್ರಯತ್ನಿಸಿದ್ದ.

"ತಿಂಗಳಿಗೊಂದ್ಸಾರಿ ಬಾಡಿಗೆ ವಸೂಲ್ಮಾಡ್ಕೊಂಡು ಬಂದ ರಾಯ್ತು" ಎಂದಿದ್ದ.

ರಂಗಮ್ಮ ಒಪ್ಪಿರಲಿಲ್ಲ. ತಮ್ಮ ಆ ವಠಾರವನ್ನು ಬಿಟ್ಟು ಒಂದು ದಿನದ ಮಟ್ಟಿಗೂ ದೂರಹೋಗಲು ಅವರು ಸಿದ್ಧರಿರಲಿಲ್ಲ.

ಅವರು ಸೂಚಿಸಿದ್ದೊಂದೇ ಪರಿಹಾರ :

"ಅದಷ್ಟು ಬೇಗ್ನೆ ಈ ಊರ್ಗೇ ವರ್ಗ ಮಾಡಿಸ್ಕೊಂಡ್ಬಿಡಪ್ಪ...."

ವಠಾರದ ಮೇಲ್ವಿಚಾರಣೆಯೇನು ಸುಲಭದ ಕೆಲಸವೆ ? ಹುಡುಗರಿಗೆ ಏನೂ ತಿಳಿಯುದು, ಏನೂ ತಿಳಿಯುದು........

ಒಬ್ಬಂಟಿಗರಾಗಿಯೇ ಇರುವುದು ರಂಗಮ್ಮನಿಗೆ ಅಭ್ಯಾಸವಾಯಿತು. ಒಮ್ಮೊಮ್ಮೆ ಒಬ್ಬೊಬ್ಬ ಮಗಳು ಚಿಳ್ಳೆ ಪಿಳ್ಳೆಗಳೊಡನೆ ಅಲ್ಲಿಗೆ ಬರುವುದಿತ್ತು. ಆಗ ರಂಗಮ್ಮ ಮೊಮ್ಮಕ್ಕಳ ಲಾಲನೆ ಪಾಲನೆ ಮಾಡುತ್ತಾ ಸುಖಿಯಾಗುತಿದ್ದರು. ಆದರೆ ಆಗಲೂ ವಠಾರದ ಮೇಲ್ವಿಚಾರಣೆಯನ್ನು ಅವರು ಮರೆಯುತ್ತಿರಲಿಲ್ಲ.

........ಈಗ ಇಂತಹದೊಂದು ಸನ್ನಿವೇಶ.

ಯಾರಾದರೂ ಹೇಳುವುದು ಸಾಧ್ಯವಿತ್ತು :

"ನಿರ್ಗತಿಕ ಬಡಪಾಯಿ ಆತ........ಹೋಗಲಿ ಬಿಡಿ, ಇದ್ದುಕೊಳ್ಳಲಿ."

ಆದರೆ ರಂಗಮ್ಮನಿಗೆ ತಿಳಿಯದೆ ? ಹಾಗೆ ಒಮ್ಮೆ ಮೊದಲಾಯಿತೆಂದರೆ ಅದಕ್ಕೆ ಕೊನೆಯುಂಟೆ ? ಯಾರು ನಿರ್ಗತಿಕರಲ್ಲ; ಬಡಪಾಯಿಗಳಲ್ಲ ?

ಅದು ಆ ತಿಂಗಳ ಮೂರನೆಯ ವಾರ. ಆಗಲೆ ಮನೆ ಖಾಲಿಯಾದರೆ ಮುಂದಿನ ತಿಂಗಳ ಮೊದಲನೆ ತಾರೀಖಿನಿಂದಲೇ ಯಾರಾದರೂ ಬರುವುದು ಸಾಧ್ಯವಿತ್ತು. ಅದೂ ಹೆಚ್ಚು ಬಾಡಿಗೆಗೆ—ಎರಡು ರೂಪಾಯಿಯಾದರೂ ಹೆಚ್ಚು ಬಾಡಿಗೆಗೆ. ಈಗಲೇ ಖಾಲಿಯಾಗದೇ ಹೋದರೆ ಮತ್ತೂ ಒಂದು ತಿಂಗಳು ನಷ್ಟವೇ.

ಮಗನಿಗೆ ಬೆಂಗಳೂರಿಗೇ ವರ್ಗವಾದ ಮೇಲೆ ಮುಂಭಾಗದ ಮನೆಯ ಕೆಳಭಾಗದ ನಾಲ್ಕು ಸಂಸಾರಗಳನ್ನೂ ಬಿಡಿಸಿ, ದುರಸ್ತಿಪಡಿಸಿ, ತಾವೆಲ್ಲಾ ಅಲ್ಲಿಯೇ ವಾಸವಾಗಬೇಕು; ಈಗ ತಾನಿರುವ ಮನೆಯನ್ನೂ ಬಾಡಿಗೆಗೆ ಕೊಡಬೇಕು ಎಂಬುದು ರಂಗಮ್ಮನ ಅಪೇಕ್ಷೆಯಾಗಿತ್ತು. ಹಿಂಭಾಗದ ನಾಲ್ಕು ನಾಲ್ಕು ಮನೆಗಳ ಒಂದೊಂದು ಸಾಲನ್ನು ತಮ್ಮ ಇಬ್ಬರು ಹೆಣ್ಣುಮಕ್ಕಳಿಗೆ ಬಿಟ್ಟುಹೋಗಬೇಕೆಂಬುದು ಅವರ ಬಯಕೆಯಾಗಿತ್ತು.

ಇಲ್ಲ, ಬಾಡಿಗೆ ಹೋದರೆ ಹೋಗಲಿ ಎಂದು ಅವರು ಉಪೇಕ್ಷೆ ಮಾಡುವುದು ಸಾಧ್ಯವಿರಲಿಲ್ಲ.

'ನಾನು ನಿರ್ದಯಳೂಂತ ಹೇಳೋ ಧೈರ್ಯ ಯಾರಿಗಿದೆ? ಈಗ ಮೂರು ತಿಂಗಳ ಬಾಡಿಗೆ ಬಿಟ್ಟಿರೋವೆ ಸಾಲದೆ? ಶವ ಸಂಸ್ಕಾರಕ್ಕೇಂತ ಐದು ರೂಪಾಯಿ ಬೇರೆ....'

ಯೋಚಿಸುತ್ತಿದ್ದ ರಂಗಮ್ಮನಿಗೆ ನಾರಾಯಣಿಯ ನೆನಪಾಯಿತು. ಮೊದಲ ಸಾರೆ ಬಾಡಿಗೆಗೆ ಮನೆ ಕೇಳಲು ಬಂದ ಆಕೆ, ಚೊಚ್ಚಲ ಮಗುವನ್ನೆತ್ತಿಕೊಂಡು ನಗುನಗುತ್ತ ಮಾತನಾಡಿದ್ದಳು.

ಆಗ ಕೇಳಿದ್ದರು ರಂಗಮ್ಮ :

"ಮಗು—"

"ಗಂಡು" ಎಂದಿದ್ದಳು ನಾರಾಯಣಿ.

"ನನ್ನದೂ ಮೊದಲನೇದು ಗಂಡೇ."

"ಓ!"

ಆದರೆ ನಾಲ್ಕು ಮಕ್ಕಳ ತಾಯಿಯಾಗಿ ಸಾಯುವ ಕಾಲಕ್ಕೆ ಹೇಗಾಗಿ ಹೋಗಿದ್ದಳು ಆ ನಾರಾಯಣಿ !

'ಬ್ರಹ್ಮಲಿಪಿ ಅಳಿಸೋರು ಯಾರು ?'

ಎಂದು ತಮ್ಮಷ್ಟಕ್ಕೆ ರಂಗಮ್ಮ ಅಂದುಕೊಂಡರು.

ಕನಿಕರದ ಅನುತಾಪದ ಒರತೆಗಳನ್ನು ಹತ್ತಿಕ್ಕಿ ರಂಗಮ್ಮ ಕರ್ತವ್ಯದ ಬಗೆಗೆ ಚಿಂತಿಸಿದರು.

ಕರ್ತವ್ಯ ಸ್ಪಷ್ಟವಾಗಿತ್ತು. ಅದು ಸಾರುತ್ತಿತ್ತು :

"ಮನೆ ಖಾಲಿಮಾಡಿಸಬೇಕು; ಬೇಗನೆ ಖಾಲಿಮಾಡಿಸಬೇಕು."

ರಂಗಮ್ಮ ನಿಟ್ಟುಸಿರುಬಿಟ್ಟು ಒಲೆ ಹಚ್ಚಿದರು.

ಕಕ್ಕಸಿಗೆ ಹೋದಾಗ ಅವರಿಗೆ ಕಾಣಿಸಿತು. ನಾರಾಯಣಿಯ ಗಂಡ ಒಲೆಯ ಬುಡದಲ್ಲಿ ಕುಳಿತು ಮಕ್ಕಳಿಗೆ ಗಂಜಿ ಬಡಿಸುತ್ತಿದ್ದ. ಹೊರಗಿನಿಂದ ತೂರಿಬರುತಿದ್ದ ಬಿಸಿಲನ್ನು ಸಹಿಸಲಾರದೆ ಕಣ್ಣು ಕಿರಿದುಗೊಳಿಸುತ್ತಾ ಹಣತೆ ಉರಿಯುತ್ತಿತ್ತು.

'ಈಗಲೇ ಹೇಳೋಣವೇ ?'

ಎಂದು ರಂಗಮ್ಮ ತಮ್ಮನ್ನೇ ಪ್ರಶ್ನಿಸಿದರು.

'ಬೇಡ. ಮಧ್ಯಾಹ್ನ ಹೇಳಿದರಾಯ್ತು. ಇಲ್ಲವೆ ಸಂಜೆ ಹೇಳಿದರೆ ಆಯ್ತು' ಎಂದು ತಮಗೆ ತಾವೇ ಉತ್ತರಿಸಿಕೊಂಡರು.

....ಆದರೆ ಮಧ್ಯಾಹ್ನ ಆತ ಮನೆಯಲ್ಲೇ ಇರಲಿಲ್ಲ. ಸಂಜೆ ಯಾದರೂ ಬರಲಿಲ್ಲ.

ಮಾಡಬೇಕಾದ್ದೇನೆಂಬುದು ಇತ್ಯರ್ಥವಾಗಿದ್ದರೂ ಆ ಕೆಲಸ ವನ್ನಷ್ಟು ಬೇಗನೆ ಮುಗಿಸುವುದಾಗಲಿಲ್ಲವಲ್ಲಾ ಎಂದು ರಂಗಮ್ಮನಿಗೆ ಕಸಿವಿಸಿಯಾಯಿತು. ದುಗುಡ ಹೆಚ್ಚಿತು. ನಿಷ್ಕಾರಣವಾಗಿ ರೇಗುತ್ತಾ, ಏನಾದರೊಂದು ನೆಪ ತೆಗೆದು ಯಾರಿಗಾದರೂ ಛೀಮಾರಿ ಹಾಕುತ್ತಾ, ವಠಾರದ ಉದ್ದಗಲಕ್ಕೂ ಅವರು ಓಡಾಡಿದರು.

ಕತ್ತಲಾಗುತ್ತಾ ಬಂದಾಗ ರಂಗಮ್ಮ, ಚಿಕ್ಕವರನ್ನು ಆಡಿಸುತ್ತ ನಿಂತಿದ್ದ ನಾರಾಯಣಿಯ ದೊಡ್ಡ ಹುಡುಗನನ್ನು ಕರೆದರು.

"ಎಲ್ಹೋಗಿದಾನೊ ನಿಮ್ಮಪ್ಪ ?"

"ಗೊತ್ತಿಲ್ಲ ಅಜ್ಜಿ."

"ಬರ್ತಾನೇನು ರಾತ್ರಿ?"

"ಹೂಂ. ಬರ್ತಾನೆ."

ಆ ಬಳಿಕ ಅಸ್ಪಷ್ಟವಾದ ನಾಲ್ಕು ಮಾತುಗಳನ್ನು ರಂಗಮ್ಮ ಗೊಣಗಿದರು. ಅದೇನೆಂದು ತಿಳಿದುಕೊಳ್ಳುವ ಗೊಡವೆಗೂ ಆತ ಹೋಗಲಿಲ್ಲ.

ಹುಡುಗ ತಾಯಿಯಿಲ್ಲದ ತನ್ನ ಮನೆಯತ್ತ ಹೊರಟ. ಆಗ ರಂಗಮ್ಮ ಮತ್ತೊಮ್ಮೆ ಆತನ ಹೆಸರು ಹಿಡಿದು ಕರೆದರು.

"ನಿಮ್ಮಪ್ಪ ಬಂದ ತಕ್ಷಣ ನನ್ನನ್ನ ನೋಡ್ಬೇಕೊಂತ ಹೇಳು."

"ಹೂನಜ್ಜಿ."

ತನ್ನ ತಂದೆಯನ್ನು ಯಾಕೆ ಕರೆದಿರಬಹುದೆಂದು ಆ ಹುಡುಗ ಯೋಚಿಸಲಿಲ್ಲ. ರಂಗಮ್ಮ ತಮ್ಮ ಮನೆಯಲ್ಲಿ 'ದೀಪ ಹಾಕಿ'ದರು. ಕಮಲಮ್ಮ ಬಂದು ನಾರಾಯಣಿಯ ಮನೆಯಲ್ಲೂ ಗುಂಡಿಯೊತ್ತಿದಳು. ಪಾತ್ರೆಯಲ್ಲಿ ಬೆಳಗ್ಗೆ ಮಾಡಿ ಉಳಿದಿದ್ದ ಗಂಜಿಯಿತ್ತು.

"ನೀವೆಲ್ಲಾ ಊಟಮಾಡಿ ಮಲಕ್ಕೊಂಡ್ಬಿಡೀಪ್ಪಾ ಪುಟ್ಟಾ. ಎಷ್ಟುಹೊತ್ತಿಗೆ ಬರ್ತಾರೋ ಏನೋ ನಿಮ್ಮಪ್ಪ."

"ಹೂಂ."

"ಊಟಕ್ಕಿಡ್ಲೇನು ?"

"ಬೇಡಿ ಅತ್ತೆ. ನಾವೇ ಬಡಿಸ್ಕೋತೀವಿ ಅತ್ತೆ."

ಅತ್ತೆ ಕಮಲಮ್ಮ! ಆಕೆಗೆ ಹೆಣ್ಣು ಮಗುವಿರಲಿಲ್ಲ-ಯಾವ ಮಗುವೂ ಇರಲಿಲ್ಲ. ಲಂಗತೊಡುವ ಪುಟ್ಟ ಮಗಳು ಇದ್ದಿದ್ದರೆ ಆ ಪುಟ್ಟನನ್ನೇ ಕಮಲಮ್ಮ ಖಂಡಿತವಾಗಿಯೂ ಅಳಿಯನಾಗಿ ಮಾಡಿ ಕೊಳ್ಳುತಿದ್ದಳು.

ಕಮಲಮ್ಮ ನಿಟ್ಟುಸಿರುಬಿಟ್ಟು ಗಂಜಿಯ ಪಾತ್ರೆಯತ್ತ ಮತ್ತೊಮ್ಮೆ ನೋಡಿದಳು. ಅಲ್ಲಿ ಹೆಚ್ಚೇನೂ ಇರಲಿಲ್ಲ.

"ಇದರಲ್ಲೇನೂ ಮಿಗಿಸ್ಬೇಡಿ. ನಿಮ್ಮಪ್ಪ ಊಟ ಮಾಡ್ಕೊಂಡೇ ಬರ್ತಾರೆ."

"ಹೂಂ ಅತ್ತೆ."

........ಮಕ್ಕಳು ಊಟಮಾಡಿ ಒಂದನ್ನೊಂದು ತಬ್ಬಿಕೊಂಡು ಹಾಗೆಯೇ ನಿದ್ದೆ ಹೋದುವು.

ಬಲು ಭಾರವಾದ ಹೃದಯವನ್ನು ಹೊತ್ತು ಅತ್ಯಂತ ಹಗುರ ವಾದ ಕಳ್ಳ ಹೆಜ್ಜೆಗಳನ್ನಿಡುತ್ತ ಒಂಭತ್ತು ಘಂಟೆಯ ಸುಮಾರಿಗೆ ನಾರಾಯಣಿಯ ಗಂಡ ಮನೆಗೆ ಬಂದ. ಇನ್ನು ರಂಗಮ್ಮ ಹೆಚ್ಚುದಿನ ತಡೆಯಲಾರರೆಂಬ ಭಯ ಆತನಿಗಿದ್ದೇ ಇತ್ತು. ವಠಾರಕ್ಕೆ ಹಿಂತಿರುಗಿ ದಾಗಲೆಲ್ಲಾ ಅಳುಕು ಹೆಚ್ಚುತಿತ್ತು........ಹಗಲೆಲ್ಲಾ ಉದ್ಯೋಗ ಕ್ಕಾಗಿ ಆತ ಅಲೆಯುತಿದ್ದ. ಆದರೆ ಎಲ್ಲ ಯತ್ನಗಳೂ, ಪರಿಚಯವಿದ್ದ ವರಿಂದೆಲ್ಲಾ ಪುಡಿಕಾಸು ಸಾಲ ಪಡೆಯುವುದರಲ್ಲೇ ಮುಕ್ತಾಯವಾಗು ತಿದ್ದುವು. ಮಕ್ಕಳನ್ನು ಎಲ್ಲಿಯಾದರೂ ಬಿಟ್ಟು ಬರೋಣವೆಂದರೆ ದೂರದ ಸಂಬಂಧಿಕರು ಯಾರೂ ಇರಲಿಲ್ಲ. ಹೇಡಿ ಮನಸ್ಸು ಒಮ್ಮೊಮ್ಮೆ ಎಲ್ಲಿಗಾದರೂ ಓಡಿಹೋಗೆನ್ನುತಿತ್ತು. ಆದರೆ ಮಕ್ಕಳ ನೆನಪಾದಾಗಲೆಲ್ಲಾ ಒತ್ತರಿಸಿ ಬರುತಿತ್ತು ಅಳು.

ನಿದ್ದೆ ಹೋಗುತಿದ್ದ ಮಕ್ಕಳನ್ನು ಕಂಡು ಆತನಿಗೆ ತುಸು ಸಮಾಧಾನವೆನಿಸಿತು. ಗಂಜಿಯ ಪಾತ್ರೆಯನ್ನು ನೋಡಿದ. ಅಲ್ಲೇನೂ ಇರಲಿಲ್ಲ. ಹಸಿವೆಯಾಗಿತ್ತು. ಆತ ಸಂಜೆ ಒಮ್ಮೆ ಬರಿಯ ಕಾಫಿ ಕುಡಿದಿದ್ದ; ಯಾರೋ ಸ್ನೇಹಿತ ಕೊಟ್ಟಿದ್ದ ಸಿಗರೇಟು ಸೇದಿದ್ದ–ಅಷ್ಟೆ. ಈಗ ಮನೆಯಲ್ಲಿ ಒಲೆ ಹಚ್ಚಲು ಮನಸ್ಸಾಗಲಿಲ್ಲ. ಅಲ್ಲದೆ, ಅಕ್ಕಿಯೂ ಆದಷ್ಟು ಹೆಚ್ಚು ದಿನಕ್ಕೆ ಬರಬೇಕಲ್ಲವೆ?........ಆತ ಎರಡು ಲೋಟ ನೀರು ಕುಡಿದ. ದೀಪ ಆರಿಸಿ ಮಲಗಿಕೊಳ್ಳಬೇಕೆಂದು, ಚಾಪೆಯನ್ನೆತ್ತಿ ಮಕ್ಕಳ ಬಳಿಯಲ್ಲಿ ಸುರುಳಿ ಬಿಡಿಸಿದ

ಅಷ್ಟರಲ್ಲಿ ರಂಗಮ್ಮ ಬರುತಿದ್ದ ಸದ್ದಾಯಿತು. ಅವರ ದೃಷ್ಟಿಗೆ ಬೀಳುವುದಕ್ಕೆ ಮುಂಚೆಯೇ ದೀಪ ಆರಿಸಬೇಕೆಂದು ಆತ ಮುಂದಾದ. ಸಾಧ್ಯವಾಗಲಿಲ್ಲ. ರಂಗಮ್ಮ ಆಗಲೇ ಬಾಗಿಲು ಸಮೀಪಿಸಿದ್ದರು. ಅಲ್ಲಿಗೇ ಬಂದಿದ್ದರು ಅವರು.

ನಾರಾಯಣಿಯ ಗಂಡ ವಠಾರದೊಳಕ್ಕೆ ಬಂದುದನ್ನು ರಂಗಮ್ಮ ಗಮನಿಸಿದ್ದರು. ಹುಡುಗ ಹೇಳಿದೊಡನೆ ತಮ್ಮನ್ನು ಕಾಣಲು ಆತ ಬರಬಹುದೆಂದು ಕಾದು ಕುಳಿತರು. ಬರಲಿಲ್ಲ. ಹುಡುಗ ಹೇಳಲು ಮರೆತನೇನೊ ಎಂದುಕೊಂಡರು. ಹೇಳಿದರೂ ಬರದೇ ಇರಬಹುದು–ಎಂಬ ಶಂಕೆ ತಲೆದೋರಿ ಬಲವಾಯಿತು. ಆತ ತಪ್ಪಿಸಿಕೊಳ್ಳಲು ಯತ್ನಿಸುತಿದ್ದಾನೆಂದು ರಂಗಮ್ಮ ಸಿಟ್ಟಾದರು. ತಾವೇ ಹೋಗಿ ನೋಡುವುದು ಮೇಲೆಂದು ಎದ್ದರು.

ಬಾಗಿಲ ಬಳಿ ನಿಂತು, ಮಕ್ಕಳು ಆಗಲೆ ಮಲಗಿದ್ದುವೆಂಬುದನ್ನು ಮನಗಂಡಾಗ, ತಮ್ಮ ಸಂದೇಶ ಆತನಿಗೆ ತಲುಪಿಯೇ ಇಲ್ಲವೆಂಬುದು ಸ್ಪಷ್ಟವಾದಾಗ, ರಂಗಮ್ಮನ ಸಿಟ್ಟು ಅರ್ಧಕ್ಕರ್ಧ ಇಳಿದು ಹೋಯಿತು. ಆ ಕ್ಷಣವೆ ಕನಿಕರದ ಹೊನಲಿನಲ್ಲಿ ಕರ್ತವ್ಯ ತೇಲಿ ಹೋದೀತೆಂದು ಹೆದರಿ ಅವರು ಬಿಗಿಯಾದರು.

ಆದರೂ ಒರಟಾಗಿ ವರ್ತಿಸುವುದು ಅವರಿಂದಾಗಲಿಲ್ಲ. ಗಲಾಟೆ ಇಲ್ಲದೆ ಒಮ್ಮೆ ಮನೆ ಖಾಲಿಯಾದರೆ ಸಾಕಪ್ಪಾ–ಎಂದುಕೊಂಡರು. ಮಾತುಗಳು ನಯವಾಗಿಯೇ ಬಂದುವು.

"ಊಟ ಆಯ್ತೆ ?"

"ಆಯ್ತು ರಂಗಮ್ನೋರೆ."

ಹಾಗೆ ಸುಳ್ಳು ಹೇಳುವುದು ಹಲವರ ದೃಷ್ಟಿಯಲ್ಲಿ ದೊಡ್ಡ ಗುಣ ವಾಗಿತ್ತೆಂದು ಆ ಗಂಡಸು ತಿಳಿದಿದ್ದ.

ಆತನ ಉತ್ತರ ಸತ್ಯವೋ ಸುಳ್ಳೋ ಎಂದು ಪರೀಕ್ಷಿಸುವ ಆಕಾಂಕ್ಷೆಯೇನೂ ರಂಗಮ್ಮನಿಗಿರಲಿಲ್ಲ.

"ಸ್ವಲ್ಪ ಮನೇಕಡೆ ಬಾಪ್ಪಾ."

"ಬಂದೆ, ನಡೀರಿ."

ಆತ ಹಾಗೆಯೇ ಹೊರಡಲು ಸಿದ್ಧವಾದ.

"ದೀಪ ಆರಿಸ್ಬಿಡು"

—ಎಂದು ಹೇಳಿ ರಂಗಮ್ಮ ತಮ್ಮ ಮನೆಯತ್ತ ಹೆಜ್ಜೆ ಇಟ್ಟರು.

ನಾರಾಯಣಿಯ ಗಂಡ ದೀಪ ಆರಿಸಿ ಮೌನವಾಗಿ ಅವರನ್ನು ಹಿಂಬಾಲಿಸಿದ.

........ಗೋಡೆಗೊರಗಿ ನೆಲದ ಮೇಲೆ ಕುಳಿತ ನಾರಾಯಣಿಯ ಗಂಡನನ್ನೆ ರಂಗಮ್ಮ ದಿಟ್ಟಿಸಿದರು.

"ಕೆಲಸ ಸಿಗಲಿಲ್ಲ........"

"ಹುಡುಕ್ತಾ ಇದೀನಿ ರಂಗಮ್ನೋರೆ."

"ಇದೇನೂ ಮೊದಲ್ನೇ ಸಲ ಅಲ್ವಲ್ಲಾ ? ಹಿಂದೆ ಕೆಲಸ ಸಿಕ್ಕಾ ಗ್ಲೆಲ್ಲಾ ಕಳಕೊಂಡ್ಬಿಟ್ಟೆ."

"ಏನು ಮಾಡ್ಲಿ ಹೇಳಿ ? ನನ್ನ ಹಣೇ ಬರಹ."

ರಂಗಮ್ಮ ಮಾತ್ರ ಹಾಗೆಂದು ಒಪ್ಪಲು ಸಿದ್ಧರಿರಲಿಲ್ಲ. ಈ ಗಂಡ ಸಿನ ಯೋಗ್ಯತೆಯೇ ಅಷ್ಟು ಎಂಬುದು ಅವರಿಗೆ ಖಚಿತವಾಗಿತ್ತು. ಅವರ ಗಂಟಲಿನಿಂದ ಅಸ್ಪಷ್ಟವಾದ ಸ್ವರಗಳು ಹೊರಬಿದ್ದುವು.

"ಮೂರು ತಿಂಗಳ ಬಾಡಿಗೆ ನಿಂತು ಹೋಗಿದೆ."

"ಕೆಲಸ ಸಿಕ್ಕಿದ ತಕ್ಷಣ ಕೊಟ್ಬಿಡ್ತೀನಿ ರಂಗಮ್ನೋರೆ."

ಹಾಗೆ ಹೇಳಿದ್ದ ಮಹಾನುಭಾವರನ್ನು ಹಿಂದೆಯೂ ಕಂಡಿದ್ದರು ರಂಗಮ್ಮ. ಆ ಮಾತಿಗೆ ಬೆಲೆ ಎಷ್ಟೆಂಬುದೂ ಅವರಿಗೆ ಗೊತ್ತಿತ್ತು.

"ಹುಡುಗರ ಹಾಗೆ ಆಡ್ತೀಯಪ್ಪಾ ನೀನು."

ಎಂದು ಸ್ವರವನ್ನು ಸ್ವಲ್ಪ ತೀಕ್ಷ್ಣಗೊಳಿಸಿ ರಂಗಮ್ಮ ಹೇಳಿದರು.

ನಾರಾಯಣಿಯ ಗಂಡ ತಲೆತಗ್ಗಿಸಿದ. ಈತನಿನ್ನು ಅಳುವುದಕ್ಕೆ ಆರಂಭಿಸಬಹುದೆಂದು ರಂಗಮ್ಮನಿಗೆ ತೋರಿತು. ಮೌನವಾಗಿಯೇ ಅವರು ಒಂದು ಕ್ಷಣ ಕಳೆದರು. ಸದ್ಯ ಆತ ಅಳಲಿಲ್ಲ. ಬೇರೆ ಬಿಡಾರ ಇನ್ನೆಲ್ಲಿ ಹುಡುಕಬೇಕೆಂಬ ಯೋಚನೆಯಲ್ಲಿ ಆತ ಮುಳುಗಿದ್ದ.

ಗಂಭೀರ ಧ್ವನಿಯಲ್ಲಿ ರಂಗಮ್ಮನೆಂದರು :

"ನನಗೆ ಗೊತ್ತಿದೆಯಪ್ಪಾ. ಈ ಮೂರು ತಿಂಗಳ ಬಾಡಿಗೆ ಐವತ್ತೊಂದು ರೂಪಾಯಿ ಕೊಡೋದು ನಿನ್ನಿಂದಾಗೋದಿಲ್ಲ. ಮುಂದೆಯೂ ಪ್ರತಿ ತಿಂಗಳೂ ಹದಿನೇಳು ರೂಪಾಯಿ ಕೊಡೋದು ನಿನ್ನಿಂದಾಗೋಲ್ಲ."

ಆತನ ಮುಖದ ಮೇಲೆ ಏನು ಪ್ರತಿಕ್ರಿಯೆಯಾಗುವುದೋ ಎಂದು ತಿಳಿಯಲು ರಂಗಮ್ಮ ತಡೆದು ನಿಂತರು. ಆದರೆ ಆತನ ತಲೆ ಗೂದಲಿನ ನೆರಳು ಮುಖದ ಮೇಲೆ ಬಿದ್ದು ಏನೂ ಕಾಣಿಸಲಿಲ್ಲ.

"ನೋಡಪ್ಪಾ ನಾನು ತೀರ್ಮಾನ ಮಾಡ್ಬಿಟ್ಟಿದೀನಿ"

ಈಗಲೂ ಆತ ತಲೆ ಎತ್ತಲಿಲ್ಲ. ಆ ತೀರ್ಮಾನ ಏನೆಂದು ತಿಳಿಯುವ ಕುತೂಹಲವೂ ಅವನಿಗಿದ್ದಂತೆ ತೋರಲಿಲ್ಲ.

"ಬಾಕಿಯಾಗಿರೋ ಐವತ್ತೊಂದು ರೂಪಾಯಿ ಅನುಕೂಲವಾದಾಗ ಕೊಡು. ನಾಳೆಯ ದಿವಸ ಮನೆ ಖಾಲಿ ಮಾಡು."

ಈಗ ಆತ ತಲೆ ಎತ್ತಿದ. ಅಸಹಾಯತೆ ಮಂಜಿನ ಪರದೆಯಾಗಿ ಕಣ್ಣು ಬೊಂಬೆಗಳನ್ನು ಮುಚ್ಚಿಕೊಂಡಿತ್ತು. ಆ ಮನುಷ್ಯನಿಗೆ ತುಟಿಗಳೇ ಇಲ್ಲವೇನೋ ಎಂಬಂತೆ ಮುಖ ಮುದುಡಿತ್ತು. ಆತ ಮೂಕನಾಗಿಯೇ ಇದ್ದ.

ಇದೊಳ್ಳೇ ಪ್ರಾರಬ್ಧ ಎಂದುಕೊಂಡರು ರಂಗಮ್ಮ.

ಆದರೆ ಅಷ್ಟರಲ್ಲೇ ಅಸಹನೀಯವಾಗಿದ್ದ ಮೌನವನ್ನು ಮುರಿದು ಪ್ರಯಾಸದಿಂದ ಗಂಟಲು ಸರಿಪಡಿಸುತ್ತಾ ಆತ ಮಾತನಾಡಿದ :

"ಇನ್ನೊಂದು ತಿಂಗಳಾದರೂ ಪುರಸತ್ತು ಕೊಡಿ ರಂಗಮ್ನೋರೆ."

ಅದೀಗ ನಿಷ್ಠುರವಾಗಿ ಮಾತನಾಡಬೇಕಾದ ಸಂದರ್ಭ.

"ಇಲ್ಲ"

ಎಂದರು ರಂಗಮ್ಮ. ಸ್ವಲ್ಪ ತಡೆದು ಅವರು ಮುಂದುವರಿದರು:

"ಸಾಧ್ಯವೇ ಇಲ್ಲ, ಮನೆ ಖಾಲಿಮಾಡ್ಲೇ ಬೇಕು."

ರೂಪು ತಳೆಯುತಿದ್ದ ಮಾತು ಆತನ ಗಂಟಲಲ್ಲೇ ಇಂಗಿ ಹೋಯಿತು.

ಸ್ವರವೇರಿಸಿ ರಂಗಮ್ಮ ನುಡಿದರು.

"ನೋಡಪ್ಪಾ, ಇನ್ನೂ ಒಂದು ದಿವಸ ಜಾಸ್ತಿ ಅವಕಾಶ ಕೊಡ್ತೀನಿ. ಶನಿವಾರ ಸಾಯಂಕಾಲದ ಹೊತ್ತಿಗೆ ಮನೆ ಖಾಲಿ ಮಾಡೇ ತೀರ್ಬೇಕು. ಭಾನುವಾರ ಮನೆ ನೋಡೋಕೆ ಬರ್ತಾರೆ."

ಯಾರಾದರೂ ಮನೆ ನೋಡಲು ಬರಬಹುದು ಎಂಬ ನಿರೀಕ್ಷೆಯನ್ನು 'ಬರ್ತಾರೆ' ಎಂದು ರಂಗಮ್ಮ ಮಾರ್ಪಡಿಸಿದ್ದರು. ಹಾಗೆ ಹೇಳುವುದು ಅಗತ್ಯವಾಗಿತ್ತು.

ಆ ನಿರಾಶೆಯಲ್ಲೂ ಆತ ಏನೋ ಹೇಳಲೆತ್ನಿಸಿದ:

"ಒಂದು ತಿಂಗಳು—"

"ಇಲ್ಲವಪ್ಪಾ, ಇಲ್ಲ. ನನ್ನ ರೇಗಿಸ್ಬೇಡ. ನಾಲ್ಕು ಜನರ ಕೈಲಿ ಕೆಟ್ಟೋಳು ಅನ್ನಿಸ್ಬೇಡ."

"ಇಲ್ಲ ರಂಗಮ್ನೋರೆ. ಮುಖ್ಯ ನನ್ನ ಹಣೇಲಿ ಹೀಗೆ ಬರೆದಿತ್ತು."

ಆತ ಕಣ್ಣುಗಳನ್ನು ಹಿಂಡಿ ಒಂದೊಂದು ಹನಿ ಕಂಬನಿ ಉದುರಿಸಲು ಯತ್ನಿಸಿದ. ಆದರೆ ಅವು ಬತ್ತಿ ಹೋಗಿದ್ದುವು.

ಹೆಣ್ಣಿಗಿಂತಲೂ ಕಡೆಯಾಗಿ ಆಡುತಿದ್ದ ಆತನನ್ನು ಕಂಡು ರಂಗಮ್ಮನ ಸ್ಥೈರಣೆ ತಪ್ಪಿತು. ಅವನನ್ನು ಚೆನ್ನಾಗಿ ಬಯ್ಯಬೇಕೆನಿಸಿತು. ವಠಾರದಲ್ಲೇ ಮುಂದೆಯೂ ಆತ ಇರುವ ಪ್ರಮೇಯವಿದ್ದರೆ ಹೇಳುತ್ತಲೂ ಇದ್ದರೇನೋ. ಆದರೆ ಈಗ 'ಹಾಳಾಗಿ ಹೋಗಲಿ' ಎಂದು ಅವರು ಸುಮ್ಮನಾದರು.

ನಾರಾಯಣಿಯ ಗಂಡನೆದ್ದು ಚಾಪೆಯ ಮೇಲೆ ನಿದ್ದೆ ಬಾರದೆ ಹೊರಳಾಡುವ ಸುಖಕ್ಕಾಗಿ ಮಕ್ಕಳೆಡೆಗೆ ನಡೆದ.

ಮರುದಿನವೂ ಆತ ಮಕ್ಕಳಿಗೆ ಗಂಜಿ ಬೇಯಿಸಿಕೊಟ್ಟು ಹೊರ ಹೋದ.

ರಂಗಮ್ಮ ವಠಾರಕ್ಕೆಲ್ಲ ತಿಳಿಯುವಂತೆ ದಂಗುರ ಸಾರಿದರು :

"ನಾರಾಯಣಿ ಗಂಡ ಮನೆ ಖಾಲಿ ಮಾಡ್ತಾನೆ."

"ಎಲ್ಲಿಗೆ ಹೋಗ್ತಾರಂತೆ? ಕೆಲಸ ಸಿಕ್ತೇನು?"

"ಅದೇನೋಪ್ಪ. ಅಂತೂ ನಾಳೆ ಸಾಯಂಕಾಲದೊಳಗೆ ಮನೆ ಖಾಲಿ ಮಾಡ್ತಾನೆ."

ನಾರಾಯಣಿ ಬಿಟ್ಟುಹೋಗಿದ್ದ ಮಕ್ಕಳಲ್ಲಿ ಕಿರಿಯದು, ಎದೆ ಹಾಲಿಲ್ಲದೆ ಬಿರುಗಣ್ಣು ಬಿಡುತಿತ್ತು. ಅದನ್ನು ಗಟ್ಟಿಯಾಗಿ ತಬ್ಬಿ ಕೊಂಡೇ ಕಮಲಮ್ಮ ಬಾಡಿದ ಮುಖದಿಂದ ಆ ಸುದ್ದಿ ಕೇಳಿದಳು.

ಕೇಳಿದವರು ನಂಬಲಿ ನಂಬದಿರಲಿ, ರಂಗಮ್ಮ ಹೇಳುವ ವೈಖರಿ ಅಂಥಾದ್ದು. ತಾವಾಗಿಯೇ ಒಂದು ಸಂಸಾರವನ್ನು ವಠಾರದಿಂದ ಹೊರಹಾಕಿದರೆಂದು ಅನ್ನಿಸಿಕೊಳ್ಳುವ ಇಷ್ಟ ಅವರಿಗಿರಲಿಲ್ಲ.

ಕಡಮೆ ಬಾಡಿಗೆಗೆ ಮನೆ ಹುಡುಕಿ ಹುಡುಕಿ ಸಿಗದೇ ಇದ್ದ ಹಸ್ತ ಸಾಮುದ್ರಿಕದ ಪದ್ಮನಾಭನ ಹೆಂಡತಿಯೆಂದಳು :

"ಕಡಿಮೆ ಬಾಡಿಗೆಗೆ ಅವರಿಗೆ ಬೇರೆ ಮನೆ ಸಿಗ್ತೋ ಏನೋ."

ರಂಗಮ್ಮ ಒಣನಗೆ ನಕ್ಕರು. ಮಾತನಾಡಲಿಲ್ಲ. "ಮೂರು ತಿಂಗಳ ಬಾಡಿಗೆ ಬಿಟ್ಟುಕೊಟ್ಟಿದ್ದೀನಿ" ಎಂದು ವಠಾರಕ್ಕೆಲ್ಲ ಸಾರಿ ಹೇಳುವ ಅಪೇಕ್ಷೆ ಅವರಿಗಾಯಿತು. ಆದರೆ ಅದನ್ನು ಅವರು ಅದುಮಿ ಹಿಡಿದರು. ಹಾಗೆ ಇತರರೆದುರು ಜಾಹೀರು ಮಾಡುವುದರಿಂದ ಆಗುವ ಲಾಭಕ್ಕಿಂತ ನಷ್ಟವೇ ಹೆಚ್ಚೆಂಬುದು ಅವರಿಗೆ ಸ್ಪಷ್ಟವಾಗದಿರಲಿಲ್ಲ.

ಆದರೂ ತಿಳಿದವರಿಗೆ ತಿಳಿದೇ ಇತ್ತು.

ಮೀನಾಕ್ಷಮ್ಮನ ಮಗ ತನ್ನ ತಾಯಿಯ ಎದುರಲ್ಲೇ ನಾರಾಯ ಣಿಯ ಮಗನನ್ನು ಕೇಳಿದ :

"ನೀವೆಲ್ಲ ಹೊರಟ್ಹೋಗ್ತೀರೇನೋ ಪುಟ್ಟೂ?"

"ಏನೋ. ಅಪ್ಪ ಹೇಳೇ ಇಲ್ಲ."

"ನಮ್ಮ ಸ್ಕೂಲಿಗೆ ಇನ್ನು ಬರಲ್ವೇನು ಹಾಗಾದ್ರೆ–"

ಶಾಲೆಯ ಪ್ರಸ್ತಾಪದಿಂದ ಪುಟ್ಟನ ಕಣ್ಣುಗಳು ಹನಿಗೂಡಿದುವು.

ಮಗನಿಗೆಂದು ತಿಂಡಿಮಾಡುತಿದ್ದ ಮೀನಾಕ್ಷಮ್ಮ ಹೆಚ್ಚಾಗಿಯೇ ತಯಾರಿಸಿ ನಾರಾಯಣಿಯ ಮಕ್ಕಳಿಗೂ ಕೊಟ್ಟಳು.

ರಾತ್ರೆ ತಂದೆ ಬರುವವರೆಗೂ ಪುಟ್ಟ ನಿದ್ದೆ ಹೋಗಲಿಲ್ಲ. ತಂದೆಯನ್ನು ಕಾಣುತ್ತಲೆ ಆತ ಕೇಳಿದ :

"ಅಪ್ಪ, ನಾವೆಲ್ಲಿಗೆ ಹೋಗ್ತೀವಪ್ಪ ?"

"ಸುಡುಗಾಡಿಗೆ !"

ಸೋತು ಬಂದಿದ್ದ ತಂದೆಯ ಧ್ವನಿ ಕರ್ಕಶವಾಗಿತ್ತು. ಪುಟ್ಟ ಮತ್ತೊಂದು ಪ್ರಶ್ನೆಕೇಳದೆ ಮಾತನಾಡದೆ ಉಳಿದ ಮೂವರ ಜತೆಯಲ್ಲಿ ತಾನೂ ಮಲಗಿ ನಿದ್ದೆಹೋದ.

ಆ ತಂದೆಗೆ ರಾತ್ರೆ ಸರಿಯಾಗಿ ನಿದ್ದೆ ಬರಲೇ ಇಲ್ಲ. ಆ ರಾತ್ರೆ ಕಳೆದು ಬರುವ ದಿನವೇ ಶನಿವಾರ. '........ಶನಿವಾರ ಸಾಯಂಕಾಲದ ಹೊತ್ತಿಗೆ ಮನೆ ಖಾಲಿ ಮಾಡೇ ತೀರ್ಬೇಕು........' ನಾರಾಯಣಿ ಸತ್ತಳೆಂದು ಸಾರುತಿದ್ದ ಹಣತೆ ಆರಿಯೇ ಹೋಗಿತ್ತು. ಅದನ್ನು ಮತ್ತೆ ಬೆಳಗುವ ಗೋಜಿಗೆ ಆತ ಹೋಗಲಿಲ್ಲ. ಆ ಯಾವ ಕಟ್ಟು ಕಟ್ಟಳೆಗೂ ಆಗ ಅರ್ಥವಿದ್ದಂತೆ ಅವನಿಗೆ ತೋರಲಿಲ್ಲ........ಹಾಗೆ ಯೋಚನೆಯಲ್ಲೆ ರಾತ್ರೆ ಕರಗಿತು.

ಕಿರ್‍ರೆಂದು ರಾಮಚಂದ್ರಯ್ಯನ ಮನೆಬಾಗಿಲ ಸದ್ದು. ಅನಂತರ ಅದರೆದುರು ಮನೆ. ಅಷ್ಟರಲ್ಲಿ ನಾರಾಯಣನ ಗಡಿಯಾರದ ಅಲಾರಂ........

ನಾರಾಯಣಿಯ ಗಂಡ ಬೇಗನೆದ್ದ. ದೀಪ ಹಚ್ಚಲಿಲ್ಲ. ಕತ್ತಲಲ್ಲೆ ಪಾತ್ರೆಗಳನ್ನು ತಡವಿ ನೋಡಿ ಮುಖದ ಮೇಲಿಷ್ಟು ನೀರು ಹನಿಸಿದ. ಮಗನನ್ನು ಮೈಮುಟ್ಟಿ ಎಚ್ಚರಿಸಿದ.

"ಲೋ.... ಪುಟ್ಟೂ.... ಪುಟ್ಟೂ.... ಲೋ...."

ಗಡಬಡಿಸಿ ಎದ್ದ ಹುಡುಗ ಹೆದರಿಕೊಂಡೇ ಕೇಳಿದ :

"ಏನಾಯ್ತಪ್ಪಾ, ಅಪ್ಪಾ...."

"ಏನೂ ಇಲ್ಲ ಕಣೋ. ನಾನು ಒಂದಿಷ್ಟು ಹೊರಗೆ ಹೋಗ್ಬಿಟ್ಟು

ಬರ್‍ತೀನಿ.... ಇವತ್ತು ನೀನೇ ಗಂಜಿ ಬೇಯಿಸ್ತೀಯಾ ?"

"ಹೂಂ. ಹೂಂ.... ಎಷ್ಟೊತ್ತಿಗೆ ಬರ್‍ತೀಯಪ್ಪಾ?"

"ಮಧ್ಯಾಹ್ನವೇ ಬಂದ್ಬಿಡ್ತೀನಿ ಕಣೋ.... ಇನ್ನು ಮಲಕ್ಕೋ."

"ಹೂಂ...."

ಯಾರಿಗೂ ತಿಳಿಯದಂತೆ ಹೊರಹೋಗಬೇಕೆಂದು ಆತ ಬಯಸಿದ್ದರೂ ಕಮಲಮ್ಮ ತನ್ನ ಮನೆಯ ಬಾಗಿಲಲ್ಲಿ ನಿಂತಿದ್ದಳು. ತಂದೆ ಮಗನ ಗುಸುಗುಸು ಮಾತನ್ನು ಕೇಳಿದ್ದ ಆಕೆ ಸುಮ್ಮನಿರುವುದು ಸಾಧ್ಯವಿರಲಿಲ್ಲ.

"ಏನು ಬೇಗ್ನೆ ಹೊರಟ್ಬಿಟ್ಟಿದೀರಲ್ಲಾ?"

"ಹೂಂ ಕಣ್ರೀ.... ಬೇರೆ ಬಿಡಾರ ಗೊತ್ಮಾಡ್ಬೇಕು."

ಆತನ ಕಂಠ ಗದ್ಗದಿತವಾಗಿತ್ತು.

"ಆಗಲಿ ಹೋಗ್ಬಿಟ್ಟು ಬನ್ನಿ."

"ಮಕ್ಕಳ್ನ ಒಂದಿಷ್ಟು—"

"ನೋಡ್ಕೋತೀನಿ, ಹೋಗಿ."

ಬೆಳಗಾಯಿತು. ರಂಗಮ್ಮ ನಡೆಗೋಲಿನ ಸದ್ದು ಮಾಡುತ್ತಾ ಒಂದು ಸುತ್ತು ಬಂದು ಹೋದರು.

ಪುಟ್ಟ ಒಲೆ ಹಚ್ಚಲಿಲ್ಲ. ಕಮಲಮ್ಮನೇ ಬೇಯಿಸಿ ಹಾಕಿದಳು. ಕಾಮಾಕ್ಷಿ ಎಳೆಯ ಮಗುವನ್ನೆತ್ತಿಕೊಂಡು ಆಡಿಸಿದಳು.

ಈ ದಿನ ಮನೆ ಖಾಲಿಯಾಗುವುದೋ ಇಲ್ಲವೋ ಎಂಬ ಸಂದೇಹ ರಂಗಮ್ಮನನ್ನು ಬಾಧಿಸುತ್ತಲೇ ಇತ್ತು. ಅವರು ದಿನವೆಲ್ಲಾ ಸಿಡಿದುಕೊಂಡೇ ಮಾತನಾಡಿದರು- ಗಟ್ಟಿಯಾಗಿಯೇ ಗೊಣಗಿದರು.

ನಾಲ್ಕು ಘಂಟೆಗೆ ನಾರಾಯಣಿಯ ಗಂಡ ಬಂದ. ಎರಡು ಗೋಣಿಚೀಲಗಳಲ್ಲಿ ಮನೆಯ ಎಲ್ಲಾ ಸಾಮಾನುಗಳನ್ನು ತುರುಕಿದ. ಆಗಲೆ ಮೂಲೆ ಸೇರಿದ್ದ ಹಣತೆಯನ್ನೂ ಹಿಂದೆ ಬಿಡಲಿಲ್ಲ.

ಅವರನ್ನು ಕರೆದೊಯ್ಯಲು ಕುಂಟುತಿದ್ದ ಬಡಕಲು ಕುದುರೆಯ ಹರಕು ಜಟಕಾ ಗಾಡಿಯನ್ನೂ ತಂದುದಾಯಿತು.

ಮೀನಾಕ್ಷಮ್ಮನ ಮಗ ಕೊನೆಯ ಘಳಿಗೆವರೆಗೂ ಪುಟ್ಟನನ್ನು

ಬಿಡಲಿಲ್ಲ. ಗೆಳೆತನದ ನೆನಪಿಗೆಂದು ಸೀಲಿ ಕೆಂಪು ಬಣ್ಣದ ತನ್ನ ಒಂದು ಪೆನ್ಸಿಲನ್ನು ಆತ ಪುಟ್ಟನಿಗೆ ಕೊಟ್ಟ.

"ಮರೀಬೇಡ ಪುಟ್ಟೂ."

"ಇಲ್ಲ. ಮರೆಯೋಲ್ಲ."

"ಪ್ರತಿ ಭಾನುವಾರವೂ ಆಟ ಆಡೋಕೆ ಬರ್ಬೇಕು."

"ಹೂ. ಬರ್ತೀನಿ."

ಆದರೆ ಹೊಸ ಬಿಡಾರ ಎಲ್ಲಿ ಎಷ್ಟು ದೂರ ಎಂಬುದು ಇಬ್ಬರಿಗೂ ಗೊತ್ತಿರಲಿಲ್ಲ.

ತೆರವಾದ ಮನೆಯ ಒಳಹೊಕ್ಕು ದೀಪದ ಬಲ್ಬನ್ನು ನೋಡಿ ಬಂದು ರಂಗಮ್ಮ ನಾರಾಯಣಿಯ ಗಂಡನನ್ನು ಕೇಳಿದರು :

"ಮನೆ ಎಲ್ಮಾಡಿದೀಯಪ್ಪ?"

"ಚಿಕ್ಕಮಾವಳ್ಳೀಲಿ ರಂಗಮ್ನೋರೆ."

"ಎಷ್ಟು ಬಾಡಿಗೆ ?"

"ಸದ್ಯ ಒಬ್ಬ ಸ್ನೇಹಿತನ ಮನೇಲಿ ಹೋಗಿರ್ತೀನಿ."

"ಓ....ಹಾಗೋ...."

ಸಂಜೆ ಬೇಗನೆ ಆ ಪ್ರದೇಶ ಬಿಡಬೇಕೆಂದು ಆತ ಬಯಸಿದ್ದ. ವಠಾರಕ್ಕೆ ಹಿಂತಿರುಗುವ ಗಂಡಸರಿಗೆಲ್ಲ ಮುಖ ತೋರಿಸುವ ಇಚ್ಛೆ ಆತನಿಗಿರಲಿಲ್ಲ.

ಮನೆಯಲ್ಲೇ ಇದ್ದ ಗುಂಡಣ್ಣ, ಸಾಮಾನಿನ ಚೀಲಗಳನ್ನು ಹೊರ ಅಂಗಳಕ್ಕೆ ತಂದು ಸಾಬಿಯ ಕೈಗೊಪ್ಪಿಸಲು ನೆರವಾದ.

ವಠಾರದ ನಿವಾಸಿಗಳಲ್ಲಿ ಹೆಚ್ಚಿನ ಹೆಂಗಳೆಯರು ಅಂಗಳಕ್ಕೆ ಬಂದು ನಿಂತರು. ಮನೆಯೊಳಗೇ ಇದ್ದ ಕವಿ ಜಯರಾಮು ಮಹಡಿಯ ಮೇಲಿನ ಕಿಟಕಿಯಿಂದ ಕೆಳಗಿಣಿಕಿ ನೋಡಿದ.

ಏಳು ವರ್ಷಗಳ ಹಿಂದೆ ಸೊಗಸಾದೊಂದು ಜಟಕಾ ಗಾಡಿ ಆ ವಠಾರಕ್ಕೆ ಬಂದಿತ್ತು. ಯೌವನ ಸೌಂದರ್ಯ ಆರೋಗ್ಯಗಳ ಪ್ರತಿಮೂರ್ತಿಯಾಗಿ ಚೊಚ್ಚಲ ಮಗು ಪುಟ್ಟನೊಡನೆ ನಾರಾಯಣಿ ಆ ಗಾಡಿಯಿಂದ ಕೆಳಕ್ಕಿಳಿದಿದ್ದಳು. ಆ ಬಳಿಕ ಆಕೆಯ ಗಂಡ, ಪುಟ್ಟನ

ತಂದೆ ಇಷ್ಟು ವರ್ಷಗಳ ಕಾಲವೂ ವಠಾರದ ಪಾಲಿಗೆ 'ನಾರಾಯಣಿಯ ಗಂಡ' ನಾಗಿಯೇ ಉಳಿದಿದ್ದ.

ಕಮಲಮ್ಮ ಸೆರಗಿನಿಂದ ಕಣ್ಣೊತ್ತಿಕೊಳ್ಳುತ್ತಾ ನಾರಾಯಣಿಯ ಹಸುಗೂಸನ್ನು ಪುಟ್ಟನಿಗೆ ಕೊಟ್ಟಳು. ಜೋಲು ಮೋರೆ ಹಾಕಿಕೊಂಡಿದ್ದ ಪುಟ್ಟ ಆ ಮಗುವನ್ನು ಕಂಕುಳಿಗೇರಿಸಿದ.

"ಪೋಲಿ ಅಲೀಬೇಡ ಪುಟ್ಟಾ. ನಿಮ್ಮಪ್ಪನಿಗೆ ಕೆಲಸ ಸಿಕ್ಕಿದ ತಕ್ಷಣ ಸ್ಕೂಲಿಗೆ ಹೋಗು........"

—ಎಂದು ರಂಗಮ್ಮ ಆ ಹುಡುಗನನ್ನು ಉದ್ದೇಶಿಸಿ ಹಿತದ ಮಾತನ್ನಾಡಿದರು.

'ಹೂಂ' ಎಂದ ಪುಟ್ಟ. ಆದರೆ ಆ ಸ್ವರ ಕೇಳಿಸಲಿಲ್ಲ.

ಹಾದಿಹೋಕರೂ ಒಂದು ಕ್ಷಣ ನಿಂತು ಬಿಡಾರ ಬದಲಾಯಿಸುತಿದ್ದ ಸಂಸಾರವನ್ನು ನೋಡಿದರು. ಅಕ್ಕಪಕ್ಕದಿಂದಲೂ ಎದುರುಗಡೆಯಿಂದಲೂ ನಾಲ್ಕಾರು ಹೆಂಗಸರು ಹೊರಬಂದು ನಿಂತರು. ಅಲ್ಲೆ ಬೀದಿಯ ಮೂಲೆಯಲ್ಲಿ ಅಂತಸ್ತಿನ ಮನೆಯಿತ್ತು. ಅಂತಸ್ತಿನ ಮನೆಯವರ ದೊಡ್ಡ ಮಗಳು ಪಾಠ ಪ್ರವಚನಗಳಿಲ್ಲದ ಆ ದಿನ ಕಾಲೇಜಿಗೆ ಹೋಗಿರಲಿಲ್ಲ. 'ಕಥೆ ಪುಸ್ತಕ' ಹಿಡಿದು 'ಬಾಲ್ಕಾನಿ'ಯಲ್ಲಿ ಕುಳಿತಿದ್ದ ಆಕೆ ಎದ್ದುನಿಂತು, ಮೊದಲು ಜಯರಾಮುವನ್ನೂ ಬಳಿಕ ಕೆಳಗಿನ ದೃಶ್ಯವನ್ನೂ ನೋಡಿದಳು.

"ಬರ್ತೀವಿ ರಂಗಮ್ನೋರೆ"

—ಎಂದ ನಾರಾಯಣಿಯ ಗಂಡ.

"ಆಗಲಿ. ಹೋಗ್ಬನ್ನೀಪ್ಪಾ."

"ಆಮೇಲೆ ಬಂದು ನೋಡ್ತೀನಿ........"

"ಆಗಲಿ. ಆಗಲಿ."

ಎರಡು ಸಾರೆ ಬಾರುಕೋಲಿನ ರುಚಿ ತಾಗಿ ಕುಪ್ಪಳಿಸಿದ ಮೇಲೆ ಕುದುರೆ ಗಾಡಿಯನ್ನು ಮುಂದಕ್ಕೆಳೆಯಿತು. ತಮಾಷೆ ನೋಡುತ್ತ ನಿಂತಿದ್ದ ಬೀದಿ ಹುಡುಗರು 'ಹೊಹ್ಹೋ' ಎಂದು ನಕ್ಕರು.

ಜಟಕಾ ಚಲಿಸಿತು. ವಠಾರದವರೆಲ್ಲ ತಮ್ಮ ತಮ್ಮ ಮನೆಗಳಿಗೆ

ಹಿಂತಿರುಗಿದರು. 'ಹೋಗ್ರೋ' ಎಂದು ಗುಂಡಣ್ಣ ಕೈ ಬೀಸಿದೊಡನೆಯೇ ಬೀದಿಯ ಹುಡುಗರು ಚೆದರಿ ಹೋದರು.

ಕಮಲಮ್ಮನೊಬ್ಬಳೇ ಬಹಳ ಹೊತ್ತು ಗಾಡಿ ಹೋದ ದಿಕ್ಕನ್ನೇ ನೋಡುತ್ತ ನಿಂತಳು.

ರಂಗಮ್ಮ ಒಳಗಿನಿಂದ ರಟ್ಟಿಯ ತುಂಡೊಂದನ್ನು ತಂದು ಬೀದಿಗೆ ಕಾಣಿಸುವ ಹಾಗೆ ಹೊರಗೋಡೆಯ ಮೇಲಿದ್ದ ಮೊಳೆಗೆ ತಗಲ ಹಾಕಿದರು. ಆ ರಟ್ಟಿಯ ಮೇಲೆ ಸುಣ್ಣದ ಕಡ್ಡಿಯಲ್ಲಿ ಬರೆದಿತ್ತು :

'ಮನೆ ಬಾಡಿಗೆಗೆ ಇದೆ'

ಕೆಳಭಾಗದ ಮೊದಲ ಮನೆಯ ಪೋಲೀಸನ ಹುಡುಗ ಅಕ್ಷರಕ್ಕೆ ಅಕ್ಷರ ಜೋಡಿಸಿ ಅದನ್ನೋದಿದ. ಕೈ ತಟ್ಟಿ ಕುಣಿಯುತ್ತಾ ಅದನ್ನೇ ಆತ ಕಂಠಪಾಠ ಮಾಡಿದ :

"ಮನೆ ಬಾಡಿಗೆಗೆ ಇದೆ........

........ಮನೆ ಬಾಡಿಗೆಗೆ ಇದೆ."

## ೪

ಬಾಡಿಗೆಗೆ ಇದ್ದ ಮನೆಯನ್ನು ನೋಡಲು ಇಬ್ಬರು ಮೂವರು ಬಂದರು. ವರ್ಷ ವರ್ಷಗಳಿಂದ ನುಡಿದು ನುರಿತಿದ್ದ ಸ್ವರದಲ್ಲಿ ರಂಗಮ್ಮ ಹೇಳಿದರು: "ಕೊಳಾಯಿ ಇದೆ, ಲೈಟಿದೆ, ಬಚ್ಚಲಿದೆ, ಕಕ್ಕಸಿದೆ." ಸಮಾಧಾನದ ಛಾಯೆಯನ್ನು ಆ ಮುಖಗಳ ಮೇಲೆ ಕಾಣದೇ ಇದ್ದಾಗ ರಂಗಮ್ಮ ಕೊನೆಯ ಯತ್ನ ಮಾಡಿದರು: "ಬಾಡಿಗೆ ಇಪ್ಪತ್ತೇ ರೂಪಾಯಿ. ಬೇಕಾದರೆ ನಿಮಗಾಗಿ ಒಂದು ರೂಪಾಯಿ ಕಡಿಮೆ ಮಾಡ್ತೀನಿ."

ಉತ್ತರಗಳು ವಿಧವಿಧವಾಗಿದ್ದುವು:

"ನಾಳೆ ಬಂದು ಹೇಳ್ತೀನಿ."

"ಮನೆಯವರ್ನ ವಿಚಾರಿಸಿ ತಿಳಿಸ್ತೀನಿ."

"ಹತ್ತೊಂಭತ್ತು ರೂಪಾಯಿಯೆ ಆಖೈರು ಹಾಗಾದರೆ ?"

"ಅಂತೂ ನಾನು ಬಂದು ಹೇಳೋವರೆಗೂ ದಯವಿಟ್ಟು ಯಾರಿಗೂ ಕೊಡ್ಬೇಡಿ."

ಆದರೆ ಪರಿಣಾಮ ಒಂದೇ ಆಗಿತ್ತು. ಒಮ್ಮೆ ನೋಡಿ ಹೋದವರು ಮತ್ತೆ ಬರಲಿಲ್ಲ.

ರಂಗಮ್ಮ ತಮ್ಮೊಳಗೇ ಗೊಣಗಿದರು. ನಾರಾಯಣಿಯ ಗಂಡನನ್ನು ಹನ್ನೊಂದು ದಿನ ಕಳೆಯುವುದಕ್ಕೆ ಮುಂಚೆ ಕಳುಹಿಸಬಾರದಿತ್ತೆಂಬ ಅಂಶ ಬೇರೆ ಅವರ ಮನಸ್ಸನ್ನು ಆಗಾಗ್ಗೆ ಕುಟುಕುತ್ತಿತ್ತು. ಬಿಡಾರ ಖಾಲಿಯಾಗಿಯೇ ಉಳಿದಷ್ಟು ದಿನವೂ ಹೆಚ್ಚುತಿತ್ತು ಆ ಯೋಚನೆ.

ಮನೆಯನ್ನು ಹತ್ತೊಂಭತ್ತು ರೂಪಾಯಿ ಬಾಡಿಗೆಗೇ ಕೊಡ

ಬೇಕೆಂಬುದು ಅವರ ನಿರ್ಧಾರವಾಗಿತ್ತು. ಹಾಗೆ ಬಾಡಿಗೆ ಹೆಚ್ಚಿಸು ವುದು ಈ ಕೆಲವು ವರ್ಷಗಳಿಂದ ಅವರು ಅನುಸರಿಸುತ್ತ ಬಂದಿದ್ದ ಪದ್ಧತಿ. ಮೊದಲಿನಲ್ಲಿ ಆ ಮನೆಗಳಿಗೆಲ್ಲ ಅವರಿಗೆ ದೊರೆಯುತ್ತಿದ್ದುದು ಐದೈದು ರೂಪಾಯಿ ಬಾಡಿಗೆ. ಆಗ ವಿದ್ಯುದ್ದೀಪವಿರಲಿಲ್ಲ. ಅದು ಬಂದ ಮೇಲೆ ಬಾಡಿಗೆ ಏಳು ರೂಪಾಯಿಗೆ ಏರಿತು. ಯುದ್ಧದ ಸಮಯದಲ್ಲಿ ಬೇರೆ ಬೇರೆ ಕಾರಣಗಳನ್ನು ಹೇಳಿ ಬಾಡಿಗೆ ಹನ್ನೆರಡೂ ವರೆ ಎಂದು ರಂಗಮ್ಮ ಗೊತ್ತು ಮಾಡಿದರು. ಕೆಲವರು ಅಷ್ಟನ್ನು ತೆರಲಾಗದೆ ಹೊರಟು ಹೋಗಬೇಕಾಯಿತು. ಆಗ ಹೊಸತಾಗಿ ಬಂದವರಿಂದ ಪಡೆದುದು ಹದಿನಾಲ್ಕು ರೂಪಾಯಿ. ಅನಂತರ ಹದಿನೈದು–ಹೀಗೆ ವಠಾರಕ್ಕೆ ಅತ್ಯಂತ ಹಳಬರಾದ ಸುಬ್ಬುಕೃಷ್ಣಯ್ಯನ ಸಂಸಾರ ಈಗಲೂ ಕೊಡುತ್ತಿದ್ದುದು ಹನ್ನೆರಡೂವರೆ ರೂಪಾಯಿ ಬಾಡಿಗೆಯೇ. ಆದರೆ ಹೊಸಬರಾದ ನಾರಾಯಣ–ಕಾಮಾಕ್ಷಿ ಯರ ಮನೆ ಬಾಡಿಗೆ ಪತ್ತೊಂಭತ್ತು. ಹಾಗೆ ತರತಮವೆಣಿಸು ವುದರಲ್ಲಿ ತಪ್ಪಿಲ್ಲವೆಂಬುದೇ ರಂಗಮ್ಮನ ದೃಢ ಅಭಿಪ್ರಾಯ. ಅವರ ದೃಷ್ಟಿಯಲ್ಲಿ ಮನೆಗೆ ತಕ್ಕಂತೆ ಬಾಡಿಗೆಯಲ್ಲ. ಬಾಡಿಗೆ ಅವರವರ ಅನುಕೂಲತೆಗೆ ತಕ್ಕಂತೆ, ಸಂಪಾದನೆಗೆ ಅನುಗುಣವಾಗಿ. ಇಂಥವರು ತಮ್ಮ ವಠಾರಕ್ಕೆ ಬಿಡಾರ ಬರುವರೆಂಬುದು ಖಚಿತವಾದಾಗ ಅವರ ಪೂರ್ವೇತಿಹಾಸವನ್ನೂ ಈಗಿನ ಇರುವಿಕೆಯನ್ನೂ ಕೂಲಂಕಷವಾಗಿ ರಂಗಮ್ಮ ಕೇಳಿ ತಿಳಿದುಕೊಳ್ಳದೆ ಇರುತ್ತಿರಲಿಲ್ಲ.

ರಂಗಮ್ಮನ ವಠಾರದಲ್ಲಿ ಯಾವ ಮನೆಯೂ ಹೆಚ್ಚು ದಿನ ಖಾಲಿಯಾಗಿ ಬಿದ್ದುದೇ ಇಲ್ಲ. ಈ ಸಲ ಮಾತ್ರ ಕೊನೆಯ ಮನೆಗೆ ಯಾರೂ ಬರದೇ ಇದ್ದುದನ್ನು ಕಂಡು ಅವರಿಗೆ ಕಸಿವಿಸಿಯಾಯಿತು.

ನಾರಾಯಣಿಯ ಸಂಸಾರದ ವಿಷಯ ವಠಾರದಲ್ಲಿ ಈಗ ಯಾರೂ ಮಾತನಾಡುತ್ತಿರಲಿಲ್ಲ. ಮೀನಾಕ್ಷಮ್ಮನ ಮಗನೇನೋ ಒಂದು ಭಾನುವಾರ ಪುಟ್ಟಸಿಗಾಗಿ ಕಾದು ನೋಡಿದ.

"ಚಿಕ್ಕ ಮಾವಳ್ಳಿ ದೂರ ಕಣೋ. ಅಲ್ಲಿಂದ ಪುಟ್ಟ ಬರೋದಿಲ್ಲ"

ಎಂದು ಮೀನಾಕ್ಷಮ್ಮ ತಿಳಿಯ ಹೇಳಿದ ಮೇಲೆ, ಆ ಹುಡುಗ

ಪುಟ್ಟನನ್ನು ಮರೆತು ವಠಾರದ ಉಳಿದವರೆಡೆಯಿಂದ ತನ್ನ ಸ್ನೇಹಿತರನ್ನು ಆಯ್ದುಕೊಂಡ.

ತಮ್ಮೊಡನೆ ವಾಸಮಾಡಲು ಹೊಸತಾಗಿ ಬರುವ ಸಂಸಾರ ಯಾವುದೆಂದು ತಿಳಿಯುವ ಕುತೂಹಲ ಮಾತ್ರ ವಠಾರದ ಎಲ್ಲರಿಗೂ ಇತ್ತು.

ಬಹಳ ದಿನ ಯಾರೂ ಬರದೇ ಇದ್ದುದು ರಂಗಮ್ಮನನ್ನು ಕಳವಳಕ್ಕೆ ಗುರಿಮಾಡಿತು.

'ಅದೆಂಥಾ ಕೆಟ್ಟ ಘಳಿಗೇಲಿ ಪ್ರಾಣ ಬಿಟ್ಟಳೋ ಮಹಾರಾಯಿತಿ'

ಎಂದು ಕೂಡಾ ಆಕೆ ತಮ್ಮೊಳಗೇ ವಟಗುಟ್ಟದಿರಲಿಲ್ಲ.

ತಿಂಗಳ ಹದಿಮೂರನೆಯ ತಾರೀಖಿನ ದಿನ ಮನೆ ನೋಡಲು ಮತ್ತೆ ಒಬ್ಬಾತ ಬಂದ.

ವಠಾರದೊಳಕ್ಕೆ ಅಪರಿಚಿತ ಕಾಲಿಟ್ಟುದನ್ನು ಮೊದಲು ನೋಡಿದ ಅವಿವಾಹಿತೆ ಅಹಲ್ಯಾ ರಂಗಮ್ಮನಿಗೆ ವರದಿ ಮಾಡಿದಳು.

"ರಂಗಮ್ನೋರೆ, ಯಾರೋ ಬಂದಿದ್ದಾರೆ."

ಯಾರಾದರೂ ಬರುವುದು ಮನೆ ನೋಡುವುದಕ್ಕೇ ಎಂಬ ವಿಷಯದಲ್ಲಿ ರಂಗಮ್ಮನಿಗೆ ಸಂದೇಹವಿರಲಿಲ್ಲ. ಅವರು ಬೆನ್ನು ಬಾಗಿ ನಡೆದು ಬಂದು, ಸೊಂಟದ ಮೇಲೆ ಕೈ ಇರಿಸಿ ದೇಹವನ್ನೆತ್ತರಿಸಿ, ಬಂದವನನ್ನು ನೋಡಿದರು.

ಎಲ್ಲ ಬಾಗಿಲುಗಳೆಡೆಯಿಂದಲೂ ಇಣಿಕಿ ನೋಡುತ್ತಿದ್ದ ಹೆಂಗಸರತ್ತ, ತನ್ನನ್ನೆ ಹಿಂಬಾಲಿಸಿ ಬಂದ ಆರೇಳು ಸಣ್ಣ ಸಣ್ಣ ಹುಡುಗರತ್ತ, ಆತ ದೃಷ್ಟಿ ಬೀರುತ್ತಾ ಹೇಳಿದ:

"ಯಾವುದೋ ಮನೆ ಖಾಲಿ ಇದೆಯಂತೆ—"

"ಬನ್ನಿ"

ಎಂದು ಸ್ವಾಗತಿಸಿ ರಂಗಮ್ಮ ನಡೆಗೋಲನ್ನೂರಿಕೊಂಡು ಓಣಿಯುದ್ದಕ್ಕೂ ಮುಂದೆ ನಡೆದರು. ಆತ ಹಿಂಬಾಲಿಸಿದ.... ಕಚ್ಚೆ ಪಂಚೆ; ಹಳೆಯದಾಗಿ ಮಾಸಿದ್ದ ರೇಶಿಮೆಯ ಜುಬ್ಬ; ಎಣ್ಣೆ ಹಾಕಿ ಹಿಂದಕ್ಕೆ

ಬಾಚಿದ್ದ ಸ್ವಲ್ಪ ಸೀಳವಾಗಿಯೇ ಇದ್ದ ನಯವಾದ ಕ್ರಾಪು; ತೆಳ್ಳಗೆ-ಎತ್ತರ; ಕೋಲುಮುಖ....ವೀಳ್ಯ ಜಗಿದಿದ್ದ ತುಟಿಗಳು ಕೆಂಪಗಿದ್ದುವು.

ಅಹಲ್ಯಾ, ಕಾಮಾಕ್ಷಿಯ ಮನೆ ಬಾಗಿಲಿಗೆ ಜಿಗಿದು ಹೇಳಿದಳು:

"ನೋಡಿ ಬೇಕಾದರೆ. ಇವರು ಖಂಡಿತ ಒಪ್ಪೋದಿಲ್ಲ."

ಎಲ್ಲವೂ ಹೆಣ್ಣನ್ನ ನೋಡಲು ಗಂಡು ಬಂದ ಹಾಗೆ!

ರಂಗಮ್ಮ, ಬಂದವನೊಡನೆ ಕೊನೆಯ ಮನೆಯ ಒಳಹೊಕ್ಕಿದ್ದನ್ನ ಕಂಡು, ಅಹಲ್ಯಾ ಹೇಳಿದಳು:

"ಈಗ ರಂಗಮ್ಮ ಏನು ಹೇಳ್ತಾರೆ ಗೊತ್ತೇನು?"

"ಗೊತ್ತು, ಗೊತ್ತು."

"ಕೊಳಾಯಿ ಇವೆ, ಲೈಟಿದೆ, ಬಚ್ಚಲಿವೆ, ಕಕ್ಕಸಿವೆ..."

ಹೇಳುತ್ತ ಹೇಳುತ್ತ ಅಹಲ್ಯಾ ನಕ್ಕಳು. ಕಾಮಾಕ್ಷಿಗೂ ನಗು ತಡೆಯಲಾಗಲಿಲ್ಲ. ಇವರ ಸಂಭಾಷಣೆ ಕೇಳಿ ಪಕ್ಕದ ಮನೆಯೊಳಗಿದ್ದ ಕಮಲಮ್ಮನಿಗೂ ನಗು ಬರದಿರಲಿಲ್ಲ

ಸರಿಯಾಗಿಯೇ ಹೇಳಿದ್ದಳು ಅಹಲ್ಯಾ. ರಂಗಮ್ಮ ಎತ್ತಿಕೊಳ್ಳುತ್ತ ಆ ಮಾತನ್ನ ಆಡಿದರು.

ಆದರೆ ಬಂದವನು ಸ್ವಲ್ಪ ವಿಚಿತ್ರವಾಗಿದ್ದ.

"ಕೊಳಾಯಿ ಆಗ್ಲೇ ನೋಡ್ದೆ. ಬರುತ್ಲೆ ಎದುರುಗಡೇನೇ ಇದೆ ಅಲ್ವೆ?"

ಬಂದವನ ಆ ಮಾತಿಗೆ ಏನು ಉತ್ತರ ಕೊಡಬೇಕೆಂಬುದೇ ರಂಗಮ್ಮನಿಗೆ ತೋಚದೆ ಹೋಯಿತು. ಆದರೂ ಅವರು ಸುಧಾರಿಸಿ ಕೊಂಡರು.

"ಹೌದು ಅದೇ. ಪ್ರತಿಮನೆಗೂ ಮೂರು ಮೂರು ಕೊಡ ನೀರು. ಜಾಸ್ತಿ ಬೇಕಾದರೆ ಹೆಚ್ಚಿನ ಮೂರು ಮೂರು ಕೊಡಕ್ಕೆ—"

ಬಂದವನು ನಡುವೆ ಬಾಯಿಹಾಕಿದ:

"ಅಯ್ಯೋ, ಅದು ಪರವಾಗಿಲ್ಲಾಂದ್ರೆ. ಏನೋ ಇಷ್ಟು ಚಿಲ್ಲರೆ ದುಡ್ಡು. ಅಷ್ಟೆತಾನೆ?"

ರಂಗಮ್ಮ ಒಂದು ಕ್ಷಣ ತೆಪ್ಪಗಾಗಿ ಹೂಂಗುಟ್ಟಿದರು.

ಆತ ಭಾವಣೆಯನ್ನು ದಿಟ್ಟಿಸುತ್ತ ವಿದ್ಯುತ್ ಗುಂಡಿಯನ್ನು ಒತ್ತಿ ನೋಡಿದ.

"ಮೇನ್ ಸ್ವಿಚ್ಚು ಆಫ್ ಮಾಡಿದೀರೇನೋ ?"

"ಹೂಂ. ಚಿಕ್ಕಹುಡುಗರು, ಅಪಾಯ ಅಂತ."

"ಸರಿ, ಸರಿ. ನ್ಯಾಯವೇ."

ಆತನ ಮುಖದ ಮೇಲೆ ಯಾವ ಭಾವವಿದೆಯೆಂದು ತಿಳಿಯಲು ರಂಗಮ್ಮ ದಿಟ್ಟಿಸಿ ನೋಡಿದರು. ನಿಶ್ಚಲವಾಗಿತ್ತು ಮುಖಮುದ್ರೆ. 'ಆಸಾಮಿ ಜೋರಾಗಿದಾನೆ' ಎನಿಸಿತು ರಂಗಮ್ಮನಿಗೆ. ಯಾಕೋ ಅವರಿಗೆ ಅಧೈರ್ಯವಾಯಿತು.

ಮನೆಯಿಂದ ಹೊರಕ್ಕೆ ಕಾಲಿಡುತ್ತ ಆತ ಹೇಳಿದ;

"ಚಪ್ಪಲಿ ಹೊರಗೇ ಬಿಟ್ಟುಬಂದೆ. ಪರವಾಗಿಲ್ಲ ತಾನೆ ?"

"ನಮ್ಮ ವಠಾರದಲ್ಲಿ ನಾಯಿ ಇಲ್ಲ."

ಎಂದು ಹೇಳಿ ರಂಗಮ್ಮ ಸುಮ್ಮನಾದರು.

ಆತ, ಓಣಿಯಲ್ಲಿ ತುಂಬಿದ್ದ ಹುಡುಗರ ತಂಡವನ್ನು ಮತ್ತೊಮ್ಮೆ ನೋಡಿ ಕೇಳಿದ :

"ಬಚ್ಚಲುಮನೆ ಎಲ್ಲಿದೆ ?"

ಅಲ್ಲೆ ಪಕ್ಕದಲ್ಲೆ ಹಿತ್ತಿಲ ಗೋಡೆಗೆ ತಗಲಿಕೊಂಡಿದ್ದ ಮುರುಕು ಕೊಠಡಿಯನ್ನು ರಂಗಮ್ಮ ತೋರಿಸಿದರು. ಮಗನ ಮದುವೆಯ ಬಳಿಕ ಸಾಲುಮನೆಗಳನ್ನು ಕಟ್ಟಿಸಿದಾಗ ಮೊದಲೇನೋ ಹಂಡೆಯನ್ನು ಹೂಗಿದೇ ಬಚ್ಚಲುಮನೆ ಕಟ್ಟಿಸಿದ್ದರು. ಆದರೆ ಆಮೇಲೆ ದಿನನಿತ್ಯವೂ ನಡೆಯುತ್ತಿದ್ದ ವಿವಾದಗಳನ್ನು ಬಗೆಹರಿಸಲಾಗದೆ, ಹಂಡೆಯನ್ನು ಅಗೆದು, ತೆಗೆದು ಒಳಕ್ಕೆ ಒಯ್ದಿದ್ದರು.

ಬಚ್ಚಲು ಮನೆಯ ಆ ಸ್ಥಿತಿಗೆ ವಿವರಣೆ ಎಂಬಂತೆ ರಂಗಮ್ಮ ಹೇಳಿದರು :

"ಎಲ್ಲರ ಅನುಕೂಲಕ್ಕಾಗಿ ಬಚ್ಚಲು ಮನೇನ ಹೀಗೇ ಬಿಟ್ಟಿದ್ದೇವೆ. ಯಾರು ಬೇಕಾದರೂ ಉಪಯೋಗಿಸ್ಬಹುದು."

"ಅವರವರ ಮನೇಲಿ ನೀರು ಕಾಯಿಸಿ ಹೊತ್ಕೊಂಡು

ಬರ್ಬೇಕು ಅಲ್ವೆ ?"

"ಹೌದು. ಬೇಕಾದರೆ ಒಳಗೆ ಅಡುಗೆ ಮನೇಲಿ ಸ್ನಾನ ಮಾಡೋಕೂ ಏರ್ಪಾಟಿದೆ. ಎಷ್ಟೋ ಜನ ಹಾಗೇ ಮಾಡ್ತಾರೆ."

"ನಿಜ, ನಿಜ. ಅದೇ ಅನುಕೂಲ."

ಬಚ್ಚಲು ಮನೆಯ ಎದುರಿಗೆ ತಿರುಗಿ ಆತ ಹೇಳಿದ :

"ಇದು ಕಕ್ಕಸೂಂತ ಕಾಣುತ್ತೆ, ಅಲ್ವೆ ?"

"ಹೌದು. ಬೊಂಬಾಯಿ ಕಕ್ಕಸು. ಸಿಮೆಂಟು ಹಾಕಿದೆ."

ಆತನಿಗೆ ಆಶ್ಚರ್ಯವಾದಂತೆಯೂ ತೋರಲಿಲ್ಲ–ನಗಲೂ ಇಲ್ಲ. ಆತ ರಂಗಮ್ಮನನ್ನೆ ನೋಡಿ ಮುಖ್ಯ ಪ್ರಶ್ನೆ ಕೇಳಿದ :

"ಬಾಡಿಗೆ ಎಷ್ಟು ?"

"ನಡೀರಿ ಒಳಗೆ ಹೋಗೋಣ."

ಪುನಃ ರಂಗಮ್ಮನೆ ಮುಂದಾದರು. ಹಗಲಲ್ಲೂ ಕತ್ತಲು ಕವಿದೇ ಇದ್ದ ಮನೆ. ಹೊರಗೆ ಕುಳಿತು ಓಣಿಯ ಬೆಳಕನ್ನೆ ಆತ ದಿಟ್ಟಿಸಿದ. ಹೆಂಗಸರೂ ಹುಡುಗರೂ ಅತ್ತಿತ್ತ ಹಾದು ಹೋಗುತಿದ್ದರು. ತನ್ನನ್ನು ನೋಡುವುದಕ್ಕೋಸ್ಕರವೇ ಅವರು ಹಾಗೆ ಮಾಡುತಿದ್ದರೆಂದು ಬಂದವನಿಗೆ ತಿಳಿಯದೆ ಹೋಗಲಿಲ್ಲ.

ರಂಗಮ್ಮ ಗೋಡೆಗೊರಗಿ ಕುಳಿತು ಹೇಳಿದರು :

"ಬಾಡಿಗೆ ಇಪ್ಪತ್ತು ರೂಪಾಯಿ."

"ಹೆಚ್ಚಾಯ್ತು ಅಲ್ವೆ ?"

ರಂಗಮ್ಮ ಸುಮ್ಮನಿದ್ದರು. ಅವರು ಕೇಳಬೇಕಾಗಿದ್ದ ಬೇರೆ ಕೆಲವು ಪ್ರಶ್ನೆಗಳು ಉಳಿದಿದ್ದುವು.

"ನೀವು ಯಾವ ಜನ ?"

"ಬ್ರಾಹ್ಮಣ–ಯಾಕೆ, ಸಂಶಯ ಬಂತೆ ?"

"ಹಾಗಲ್ಲ. ಬ್ರಾಹ್ಮಣರಲ್ದೆ ಇರೋರು ಯಾರೂ ಮನೆ ವಿಚಾರಿಸ್ಕೊಂಡು ನಮ್ಮ ವಠಾರಕ್ಕೆ ಬರೋದೇ ಇಲ್ಲ. ಬೇರೆ ಜನಕ್ಕೆ ನಾವು ಮನೆ ಕೊಡೋದೇ ಇಲ್ಲ."

ಅದು ಪೂರ್ತಿ ನಿಜವಾಗಿರಲಿಲ್ಲ. ಎಷ್ಟೋವೇಳೆ ಬ್ರಾಹ್ಮಣೇತರ

ಹುಡುಗರಿಗೆ ಮೇಲಿನ ಕೊಠಡಿಯನ್ನು ಅವರು ಕೊಟ್ಟಿದಿತ್ತು. ಆದರೆ ಆ ಹುಡುಗರು ಅಲ್ಲಿ ಅಡುಗೆ ಮಾಡಬಾರದೆಂಬ ಶರತನಿದ್ದುದರಿಂದ ಅದು ಕ್ಷಮ್ಯವೆಂದು ರಂಗಮ್ಮ ತಿಳಿದಿದ್ದರು.

"ನಿಮ್ಮ ಹೆಸರು ?"

"ಶಂಕರನಾರಾಯಣಯ್ಯ ಅಂತ. ನಾವು ಸ್ಮಾರ್ತರು."

"ಅದೇನೂ ಪರವಾಗಿಲ್ಲ. ನಮ್ಮ ವಠಾರದಲ್ಲಿ ಎಲ್ಲಾ ಥರದೋರೂ ಇದ್ದಾರೆ. ಒಟ್ಟಿನಲ್ಲಿ ಬ್ರಾಹ್ಮಣರಾದರಾಯ್ತು."

"ಏನೂ ತೊಂದರೆ ಇಲ್ಲ. ನಾಲ್ಕು ಜನರ ಜತೇಲಿ ಹೊಂದಿಕೊಂಡು ಹೋಗ್ತೇವೆ."

"ಸಂತೋಷ. ನಿಮಗೆ ಮದುವೆಯಾಗಿದೆ ತಾನೆ ?"

ಆ ಪ್ರಶ್ನೆ ಕೇಳಿ ಆತನಿಗೆ ನಗುಬಂತು. ಬಾಯಿ ಕಣ್ಣುಗಳನ್ನು ತೆರೆದು ಆತ ಹಲ್ಲು ಕಿರಿದ.

"ಮದುವೆಯಾಗಿದೇಂತ್ಲೆ ಈ ತಾಪತ್ರಯ. ಇಲ್ದಿದ್ರೆ ಮನೆ ಹುಡುಕ್ಕೊಂಡು ಯಾಕ್ಬರ್ತಿದ್ದೆ ?"

ಆ ರಸಿಕತನದ ಉತ್ತರ ರಂಗಮ್ಮನಿಗೆ ಇಷ್ಟವಾಯಿತು. ಅವರೂ ಬಾಯಗಲಿಸಿ ಇನ್ನೂ ಉಳಿದಿದ್ದ ಕೆಲವು ಹಲ್ಲುಗಳನ್ನು ತೋರಿಸುತ್ತಾ ಸದ್ದಿಲ್ಲದೆ ನಕ್ಕರು. ಮರುಕ್ಷಣವೆ ಮಾಮೂಲಿನ ಉಪಚಾರದ ಮಾತು ಗಳು ಹೊರಬಿದ್ದುವು.

"ಹಾಗೆ ಕೇಳ್ದೇಂತ ತಪ್ಪು ತಿಳ್ಕೋಬೇಡೀಪ್ಪಾ. ಬ್ರಹ್ಮಚಾರಿ ಗಳಿಗೆ ನಾವು ಮನೆ ಕೊಡೋದಿಲ್ಲ."

ಬಂದವನಿಗಂತೂ, ಬ್ರಹ್ಮಚಾರಿಯಾಗಿದ್ದಾಗ ಮನೆ ಸುಲಭವಾಗಿ ಸಿಗದೆ ತಾನು ಪಟ್ಟ ಕಷ್ಟ ನೆನಪಿಗೆ ಬಂತು.

ಬ್ರಹ್ಮಚಾರಿಗಳಿಗೆ ರಂಗಮ್ಮನ ವಠಾರದಲ್ಲಿ ಆಸ್ಪದವಿಲ್ಲವೆಂಬುದೂ ಪೂರ್ತಿ ಸರಿಯಾಗಿರಲಿಲ್ಲ. ವಿಮಾ ಸಂಸ್ಥೆಯ ಚಂದ್ರಶೇಖರಯ್ಯ ಹಿಂದೆ ಮನೆ ಕೇಳಲು ಬಂದಿದ್ದಾಗ, ತನಗೆ ಮದುವೆಯಾಗಿದೆ ಎಂದೇ ಹೇಳಿದ್ದ. ಆದರೆ ವಾಸವಾಗಿರಲು ಬಂದುದು ಒಬ್ಬನೇ. ರಂಗಮ್ಮ ಅವನನ್ನು ತರಾಟೆಗೆ ತೆಗೆದುಕೊಂಡಿದ್ದರು. ಒಮ್ಮೆ 'ಊರು ಮನೇಲಿದಾಳೆ'

ಎಂದಿದ್ದ. ಮತ್ತೊಮ್ಮೆ 'ತವರ್ಮನೇಲಿ.' ರಂಗಮ್ಮ ಮತ್ತೂ ಗಲಾಟೆ ಮಾಡಿದಾಗ ಅವನು ರೇಗಿ ಹೇಳಿದ: 'ನಿಮಗೇನಮ್ಮ ಬಂದಿರೋ ತೊಂದ್ರೆ? ನನ್ನಷ್ಟು ತೆಪ್ಪಗೆ ಈ ವಠಾರದಲ್ಲಿರೋ ಇನ್ನೊಬ್ಬ ಮನುಷ್ಯನ್ನ ತೋರ್ಸಿ. ನಾನಿಲ್ಲಿರೋದು ವಾರಕ್ಕೆರಡು ದಿನ. ಅಷ್ಟಕ್ಕೆ....' ರಂಗಮ್ಮ ಸುಮ್ಮನಾಗಿದ್ದರು. ಆತ ಸಮಯಕ್ಕೆ ಸರಿಯಾಗಿ ಬಾಡಿಗೆ ಕೊಡುತ್ತಿದ್ದ. ವಿದ್ಯಾವಂತ. ಟೀಕ್‌ಟಾಕ್ ಉಡುಪು ಧರಿಸಿ ಆತ ಹೋಗಿ ಬರುತ್ತಿದ್ದಾಗಲೆಲ್ಲಾ ರಂಗಮ್ಮನಿಗೆ ತಮ್ಮ ವಠಾರದ ಬಗೆಗೆ ಹೆಮ್ಮೆ ಎನಿಸುತಿತ್ತು.

ಆದರೆ ಮತ್ತೊಮ್ಮೆ ಅಂಥದೇ ಪ್ರಯೋಗ ನಡೆಸಲು ಅವರು ಸಿದ್ಧರಿರಲಿಲ್ಲ.

ಮುಂದೇನು ಪ್ರಶ್ನೆ ಬರುವುದೋ ಎಂದು ಕಾದು ಕುಳಿತಿದ್ದ ಶಂಕರನಾರಾಯಣಯ್ಯನನ್ನು ನೋಡುತ್ತಾ ರಂಗಮ್ಮ ಕೇಳಿದರು :

"ಎಷ್ಟು ಮಕ್ಕಳು?"

"ಸದ್ಯಕ್ಕೆ ಒಂದೇನೇ. ಹೆಣ್ಣು, ಎರಡು ವರ್ಷದ್ದು."

"ನನಗೂ ಇಬ್ಬರು ಹೆಣ್ಣುಮಕ್ಕಳು–ದೊಡ್ಡವರೂಂತಿಟ್ಕೊಳ್ಳಿ."

"ಹಾಗೇನು ? ಸಂತೋಷ."

"ನಿಮ್ಮ ತಾಯೀನೂ ಇದಾರೊ ?"

"ಯಾರೂ ಇಲ್ಲ. ನಾವು ಮೂರೇ ಜನ."

ರಂಗಮ್ಮನಿಗೆ ಸಮಾಧಾನವೆನಿಸಿತು. ಸಾಮಾನ್ಯವಾಗಿ, ಮನೆ ತುಂಬ ಮಕ್ಕಳಿರಬೇಕು ಎಂದು ಹೇಳುವವರೇ ರಂಗಮ್ಮ. ಆದರೆ ವಠಾರ ತುಂಬ ಮಕ್ಕಳು, ಮಕ್ಕಳ ತಾಯಂದಿರೇ ಇರಬೇಕೆಂಬ ವಿಷಯದಲ್ಲಿ ಅವರಿಗೆ ಭಿನ್ನಾಭಿಪ್ರಾಯವಿತ್ತು.

ತಮ್ಮ ವಠಾರದಲ್ಲಿ ವಾಸವಾಗಲು ಬೇಕಾದ ಅರ್ಹತೆ ಬಹಳ ಮಟ್ಟಿಗೆ ಆ ಮನುಷ್ಯನಿಗೆ ಇದ್ದಂತೆ ರಂಗಮ್ಮನಿಗೆ ತೋರಿತು. ಆದರೂ ಅವರ ಪ್ರಶ್ನಾವಳಿ ಕೊನೆಮುಟ್ಟಿರಲಿಲ್ಲ.

"ನೀವು ಯಾವ ಕೆಲಸ ಮಾಡ್ತೀರಾ?"

ಹಿಂದಿನ ಕಾಲದಲ್ಲಿ ಬ್ರಾಹ್ಮಣನನ್ನು ಯಾರು ಹಾಗೆ ಕೇಳುತ್ತಿದ್ದರು ? ಆದರೆ ಈಗ ಆ ಪ್ರಶ್ನೆಯನ್ನು ಸ್ಪಷ್ಟವಾಗಿಯೆ ಕೇಳುವುದು

ಅಗತ್ಯವಿತ್ತು. ಗಾದೆಯೇ ಇರಲಿಲ್ಲವೆ ? 'ಉದ್ಯೋಗಂ........'

"ನಾನು ಪೇಂಟರ್."

ರಂಗಮ್ಮನಿಗೆ ಅರ್ಥವಾಗಲಿಲ್ಲ.

"ಆಠಾರಾ ಕಚೇರಿಲಿದೀರಾ?"

"ಇಲ್ಲ. ನಾನು ಚಿತ್ರ ಬರೀತೀನಿ. ಬಣ್ಣದ್ದು ಬೋರ್ಡು ಬರೀತೀನಿ."

"ಓ...."

ಸ್ವರವನ್ನು ಸ್ವಲ್ಪ ದೀರ್ಘವಾಗಿಯೆ ರಂಗಮ್ಮ ಎಳೆದರು. ಅವರಿಗೆ ನಿರಾಶೆಯಾಯಿತು. ಆದರೂ, ತನ್ನ ಉದ್ಗಾರದೊಡನೆ ನೆಲೆಸಿದ ಮೌನವನ್ನು ಮುರಿದು ಅವರು ಮಾತು ಮುಂದುವರಿಸಿದರು:

"ಎಷ್ಟು ಬರುತ್ತೆ ಸಂಬಳ ?"

ಯಾರನ್ನೂ 'ಸಂಬಳ ಎಷ್ಟು' ಎಂದು ಕೇಳಕೂಡದೆಂದು ರಂಗಮ್ಮನ ಮಗ ತಾಯಿಗೆ ಬೋಧನೆ ಮಾಡಿದ್ದ. ಹಾಗೆ ಕೇಳುವುದು ಸರಿಯಲ್ಲವೆಂಬುದನ್ನು ಮನಗಾಣಿಸಿಕೊಡಲು ಆತ ಬಹಳ ಪ್ರಯಾಸ ಪಡಬೇಕಾಯಿತು. ಆದರೆ ಬಾಡಿಗೆಗೆ ಮನೆ ಕೇಳಲು ಬರುವವರನ್ನು ಆ ರೀತಿ ಪ್ರಶ್ನಿಸದೆ ಅನ್ಯಗತಿಯೇ ಇರಲಿಲ್ಲ. ಹೀಗಾಗಿ ಪ್ರಶ್ನೆಯ ಜತೆಯಲ್ಲೇ, 'ಹೀಗೆ ಕೇಳ್ದೇಂತ ಏನೂ ತಿಳ್ಕೋಬೇಡೀಪ್ಪಾ' ಎಂದು ಹೇಳುವುದಕ್ಕೂ ಮಗ ಕಲಿಸಿ ಕೊಟ್ಟಿದ್ದ. ಮರೆಯದೆ ಈ ಸಲವೂ ಅದನ್ನು ರಂಗಮ್ಮ ಅಂದರು.

"ಸಂಬಳ ಇಲ್ಲ."

ರಂಗಮ್ಮನಿಗೆ ಆ ಉತ್ತರ ಅರ್ಥವಾಗಲಿಲ್ಲ.

"ಅಂದರೆ ?"

"ಸಂಬಳ ಇಲ್ಲ—ಸಂಪಾದನೆ. ಸ್ವಂತದ ಸಂಪಾದನೆ. ಕೆಲಸ ಮಾಡಿದಷ್ಟೂ ದುಡ್ಡು ಬರುತ್ತೆ."

"ತಿಂಗಳಿಗೆ ಒಂದರುವತ್ತು ರೂಪಾಯಿ ಬರುತ್ತೋ ?"

"ನೂರು ನೂರೈವತ್ತು ರೂಪಾಯಿ ಬರುತ್ತೆ."

ರಂಗಮ್ಮ ಸುಮ್ಮನಾದರು. ಚಿತ್ರ ಬರೆದು ಅಷ್ಟು ಸಂಪಾದಿಸ

ಬಹುದೆಂದು ಅವರಿಗೆ ಗೊತ್ತಿರಲಿಲ್ಲ. ಸಂಪಾದನೆಯಲ್ಲೂ ಸ್ಥಾನ ಮಾನದಲ್ಲೂ ಚಂದ್ರಶೇಖರಯ್ಯನನ್ನಾಗಲೀ ತಮ್ಮ ಮಗನನ್ನಾಗಲೀ ಮೀರಿಸುವವರು ಆ ವಠಾರಕ್ಕೆ ಬರಬಹುದೆಂದು ಅವರು ಭಾವಿಸಿರಲಿಲ್ಲ, ಶಂಕನಾರಾಯಣಯ್ಯನ ಬಗೆಗೆ ಗೌರವವೇನೂ ಅವರಲ್ಲಿ ಉಂಟಾಗಲಿಲ್ಲ ನಿಜ. ಆದರೆ, ಆ ಮನುಷ್ಯನಿಗೆ ಬಾಡಿಗೆ ಕೊಡುವ ಸಾಮರ್ಥ್ಯವಿದೆ ಎಂದು ಅವರು ತಿಳಿದುಕೊಂಡರು.

"ಯಾವತ್ತು ಬರ್ತೀರಾ ?"

"ಬಾಡಿಗೆ ವಿಷಯವೇ ಇತ್ಯರ್ಥವಾಗಿಲ್ವಲ್ಲಾ. ಇನ್ನು ?"

"ಆಗ್ಲೇ ಹೇಳ್ಲಿಲ್ವೆ ? ಇಪ್ಪತ್ತು ರೂಪಾಯಿ."

"ಎಲ್ಲಾದರೂ ಉಂಟೆ ? ಏನಂದಾರು ಯಾರಾದರೂ ?"

ರಂಗಮ್ಮನಿಗೆ ಸ್ವಲ್ಪ ರೇಗಿತು. ಅವರು ಬಿಗಿಯಾಗಿಯೇ ಅಂದರು :

"ನಿಮಗೆ ಇಷ್ಟವಾದರೆ ಬನ್ನಿ. ಕಷ್ಟವಾದರೆ ಬಿಡಿ. ಹತ್ತೊಂಭತ್ತು ರೂಪಾಯಿಗಿಂತ ಕಡಿಮೆ ಸಾಧ್ಯವೇ ಇಲ್ಲ"

"ಕಕ್ಕಸಿಗೆ ಬೇರೆ ಕೊಡ್ಬೇಕೇನೊ ?"

ಆ ಮಾತಿನಲ್ಲಿ ಅಣಕದ ನಸುನಗೆಯಿತ್ತು. ಆದರೆ ರಂಗಮ್ಮನಿಗೆ ಅದು ಅರ್ಥವಾಗಲಿಲ್ಲ.

"ಇಲ್ಲ. ನೀರಿಗೆ ಮಾತ್ರ—"

"ಸರಿ, ಸರಿ. ಅದನ್ನು ಆಗ್ಲೇ ಹೇಳಿದೀರಾ."

"ಇಷ್ಟೆ. ಒಪ್ಪಿಗೆಯಾದರೆ ಬನ್ನಿ. ನಿಮ್ಮ ಮನೆಯವರ್ನ ಕರಕೊಂಡು ಬಂದು ತೋರಿಸಿ, ಬೇಕಾದರೆ."

"ಅದೇನೂ ಪರವಾಗಿಲ್ಲ. ನಾನು ನೋಡಿದರೆ ಸಾಕು."

"ತಿಂಗಳ ಬಾಡಿಗೆ ಮುಂಗಡ ಕೊಡ್ಬೇಕು."

ಶಂಕರನಾರಾಯಣಯ್ಯ ಸ್ವಲ್ಪ ಹೊತ್ತು ಯೋಚಿಸಿ ಹೇಳಿದ :

"ಹದಿನೈದನೇ ತಾರೀಕು ಸಾಯಂಕಾಲ ಬಂದ್ಬಿಡ್ತೀವಿ. ಅರ್ಧ ತಿಂಗಳಿನ ಬಾಡಿಗೆ ಮುಂಗಡ ಕೊಡ್ತೀನಿ."

ಈ ಲೆಕ್ಕಾಚಾರದಲ್ಲೆಲ್ಲಾ ರಂಗಮ್ಮ ಎಂದೂ ಬಿಟ್ಟು ಕೊಟ್ಟವರಲ್ಲ.

ಕಟ್ಟುನಿಟ್ಟಾಗಿಯೇ ಅವರು ಹೇಳಿದರು :

"ಅದೊಂದೂ ಸಾಧ್ಯವಲ್ಲ. ನಾಳೆ, ದಿವಸ ಚೆನ್ನಾಗಿದೆ. ಬಂದು ಹತ್ತೊಂಭತ್ತು ರೂಪಾಯಿ ಮುಂಗಡ ಕೊಟ್ಟು ಕರಾರು ಪತ್ರ ಮಾಡ್ಕೊಂಡು ಹೋಗಿ. ನಾಡಿದ್ದು ಬಿಡಾರ ಬಂದ್ಬಿಡಿ. ಮುಂದಿನ ತಿಂಗಳು ಮೊದಲ್ನೇ ತಾರೀಕಿಗೆ ಅಥವಾ ಐದನೇ ತಾರೀಕಿನೊಳಗೆ ಈ ಅರ್ಧ ತಿಂಗಳ ಬಾಡಿಗೆ ಕೊಡಿ."

ವಠಾರದ ಒಡತಿಯೊಡನೆ ಚರ್ಚೆ ವ್ಯರ್ಥವೆಂದು ಮನಗಂಡ ಶಂಕರನಾರಾಯಣಯ್ಯ ಸಂದರ್ಶನವನ್ನು ಮುಕ್ತಾಯಗೊಳಿಸ ಬಯಸಿದ.

"ಹಾಗೇ ಆಗ್ಲಿ."

ಆತ ಹೊರಡಲು ಎದ್ದು ನಿಂತನೆಂದು ರಂಗಮ್ಮನೂ ಎದ್ದರು. ಆದರೆ, ಈಗಿರುವ ಮನೆಯನ್ನು ಆತ ಬಿಡಲು ಕಾರಣವೇನೆಂದು ತಿಳಿ ಯುವ ಒಂದು ಕೆಲಸ ಉಳಿದಿತ್ತು. ಅದಕ್ಕೆ ಪೀಠಿಕೆಯಾಗಿ ಪುಟ್ಟ ಪ್ರಶ್ನೆಗಳನ್ನು ರಂಗಮ್ಮ ಕೇಳಬೇಕಾಯಿತು.

"ನೀವು ಕೆಲಸ ಮಾಡೋದೆಲ್ಲಿ ?"

"ಗಾಂಧೀ ನಗರದಲ್ಲಿ."

"ಸದ್ಯ ಅಲ್ಲೇ ವಾಸವಾಗಿದೀರೊ ?"

"ಇಲ್ಲ. ಈಗಿರೋದು ಶೇಷಾದ್ರಿಪುರದಲ್ಲಿ."

"ಮತ್ತೆ ! ಅದೇ ಸಮೀಪ ಅಲ್ವೆ ನಿಮ್ಗೆ ?"

"ಬೆಂಗಳೂರಲ್ಲಿ ದೂರವೇನು, ಸಮೀಪವೇನು, ಎಲ್ಲಾ ಒಂದೇ."

ರಂಗಮ್ಮನಿಗೆ ಬೇಕಾಗಿದ್ದುದು, ಆ ಉತ್ತರದಿಂದ ದೊರೆಯ ಲಿಲ್ಲ. ಅವರು ನೇರವಾಗಿಯೇ ಕೇಳಬೇಕಾಯಿತು.

"ಈಗಿರೋ ಮನೇನ ಯಾಕೆ ಬಿಡ್ತಿದೀರಿ ಹಾಗಾದರೆ ?"

ಒಂದು ಅರೆಕ್ಷಣ ಶಂಕರನಾರಾಯಣಯ್ಯನ ದೃಷ್ಟಿ ಶೀತಲವಾ ಯಿತು. ಆದರೂ ಉತ್ತರ ಕೊಡಲು ಆತ ತಡಮಾಡಲಿಲ್ಲ.

"ಈಗಿರೋ ಮನೆ ಅಷ್ಟು ಅನುಕೂಲವಾಗಿಲ್ಲ. ಕಡಿಮೆ ಬಾಡಿ ಗೇದು. ಜವುಗು ಜಾಗ. ಶ್ರೀರಾಮಪುರದ ಹವಾ ಚೆನ್ನಾಗಿದೇಂತ

ಡಾಕ್ಟರು ಬೇರೆ ಹೇಳಿದರು —"

"ಹೌದು, ಹೌದು, ಅದು ನಿಜವೇ. ಆರೋಗ್ಯದ ದೃಷ್ಟಿಯಿಂದ ಇದು ಒಳ್ಳೇ ಜಾಗ. ನಮ್ಮ ವಠಾರದ ವಿಷಯದಲ್ಲಂತೂ ಇಲ್ಲಿ ಯಾರನ್ನು ಬೇಕಾದರೂ ಕೇಳಿ, ಹೇಳ್ತಾರೆ. ಮಳೆ ಇರಲಿ, ಛಳಿ ಇರಲಿ, ಸೆಖೆ ಇರಲಿ, ರಂಗಮ್ಮನ ವಠಾರದಲ್ಲಿ ಎಲ್ಲಾ ಒಂದೇ!"

"ಕೇಳೋದೇನ್ಬಂತು–ಕಣ್ಣಾರೆ ನಾನೇ ಕಂಡ್ಮೇಲೆ?"

ರಂಗಮ್ಮನಿಗೆ ತೃಪ್ತಿಯಾಯಿತು. ಬಾಗಿದ ದೇಹದಿಂದ ತಲೆಯನ್ನಷ್ಟೆ ಮೇಲಕ್ಕೆತ್ತಿ ಆತನನ್ನು ನೋಡುತ್ತಾ ಆಕೆ ಹೇಳಿದರು:

"ಹೋಗ್ಬಿಟ್ಟು ಬರ್‍ತೀರಾ ಹಾಗಾದ್ರೆ? ನಾಳೆ ಬರ್‍ತೀರಾ?"

ಆತ 'ಹೂಂ' ಗುಟ್ಟಿದ. ಹಿಂಬಾಲಿಸಿ ಬಂದ ಎಲ್ಲರ ದೃಷ್ಟಿಗಳನ್ನೂ ಹಿಂದೆ ಬಿಟ್ಟು, ಅಂಗಳಕ್ಕಿಳಿದು, ಕಾಲಿಗೆ ಚಪ್ಪಲಿ ಸಿಕ್ಕಿಸಿಕೊಂಡ. ರಂಗಮ್ಮ ಅಂಗಳದವರೆಗೂ ಬಂದರು.

ಪರೀಕ್ಷೆಯಲ್ಲಿ ಉತ್ತರಕೊಟ್ಟು ಬಸವಳಿದು ಬಂದಿದ್ದ ಶಂಕರ ನಾರಾಯಣಯ್ಯ ಜುಬ್ಬದ ಜೇಬಿನಿಂದ ಕರವಸ್ತ್ರವನ್ನು ಹೊರತೆಗೆದು ಮುಖ ಒರೆಸಿದ.... .....ಆ ಕ್ಷಣ ಏನನ್ನೋ ನಿರೀಕ್ಷಿಸಿ ಆತನ ಕಣ್ಣಿವೆಗಳು ಕುಣಿದುವು.

"ಒಂದು ವಿಷಯ ನಿಮ್ಮನ್ನ ಕೇಳ್ಬೇಕಾಗಿದೆಯಲ್ಲಮ್ಮ."

"ಏನಪ್ಪಾ ಅದು?"

"ಖಾಲಿ ಮನೇಲಿ ವಾಸವಾಗಿದ್ದೋರು ಅದನ್ನ ಬಿಟ್ಟು ಹೋಗಿ ಎಷ್ಟು ಸಮಯವಾಯ್ತು?"

"ಒಂದು ಎರಡು ವಾರ, ಅಷ್ಟೆ. ಯಾಕಪ್ಪಾ?"

"ಅವರು ಮನೆ ಖಾಲಿ ಮಾಡೋಕೆ ಕಾರಣ?"

ರಂಗಮ್ಮನಿಗೆ ಉಗುಳು ಗಂಟಲಲ್ಲಿ ಸಿಲುಕಿಕೊಂಡಿತು. ತಮ್ಮನ್ನು ಮೀರಿಸಿದ ಜಾಣರಿಲ್ಲ ಎಂದು ಭಾವಿಸಿದ್ದುದಕ್ಕೆ ಇದೀಗ ಶಿಕ್ಷೆ ಎಂದುಕೊಂಡರು. ನಿಜ ಹೇಳಿದರೆ ಈತ ಬರದೇ ಹೋಗಬಹುದೆಂದು ಅವರಿಗೆ ಭಯವಾಯಿತು. ಸಾವು ಸಂಭವಿಸಿದ ಮನೆಯಲ್ಲಿ ಸಂಸಾರ ಹೂಡಲು ತಾವಾಗಿಯೇ ಇಷ್ಟ ಪಡುವವರು ಯಾರು?

ರಂಗಮ್ಮ ಉತ್ತರಕೊಡಲು ಅನುಮಾನಿಸುತ್ತಿದ್ದುದನ್ನು ಕಂಡು ಆತನೇ ಮುಂದುವರಿಸಿದ.

"ಹೇಳಿ. ಪರವಾಗಿಲ್ಲ."

"ಬಡವ, ಇಷ್ಟು ಬಾಡಿಗೆ ಕೊಡೋದು ಕಷ್ಟವಾಯ್ತೂಂತ–"

ಆತ ನಕ್ಕುಬಿಟ್ಟ.

"ನೋಡೀಮ್ಮಾ. ನಾನು ಬರದೇ ಹೋಗ್ಬಹುದೂಂತ ನೀವು ಮುಚ್ಚುಮರೆ ಮಾಡ್ತಿದೀರಾ."

"ಹಾಗೇನಿಲ್ಲ........ಅದು........ಈ........"

"ಅಲ್ಲೇ ಕೆಳಗೆ ಹೋಟೆಲಿನವನನ್ನ ಕೇಳ್ದೆ–ಯಾವುದಾದರೂ ಮನೆ ಖಾಲಿಯಿದೆಯೋ ಅಂತ. ರಂಗಮ್ಮನ ವಠಾರದಲ್ಲೊಂದು ಖಾಲಿ ಇರಬೇಕು–ಅಲ್ಲಿ ಯಾರೋ ಮೊನ್ನೆ ಸತ್ತರೂಂತ ಆತ ಅಂದ."

"ಹಾಗಂದ್ನೆ ಅಯ್ಯೊ ಪರಮಾತ್ಮಾ........"

"ಯಾಕೆ? ಯಾರೂ ಸಾಯಲಿಲ್ವೇನು?"

"ಸತ್ತರು. ಅದು ಬೇರೆ ವಿಷಯ. ಆದರೆ ಸತ್ತದ್ದಕ್ಕೇ ಖಾಲಿ ಆಯ್ತೂಂತ ಅನ್ಬೇಕೆ?"

"ಅದರಲ್ಲಿ ಏನೀಗ ತಪ್ಪು? ಹುಟ್ಟೋದು ಎಷ್ಟು ಸ್ವಾಭಾವಿಕವೋ ಸಾಯೋದೂ ಅಷ್ಟೇ ಸ್ವಾಭಾವಿಕ. ಪಟ್ಟಣವಾಸದಲ್ಲಿ ಅದಕ್ಕೆಲ್ಲಾ ಮಹತ್ವ ಕೊಡೋಕಾಗುತ್ಯೆ? ಈಗ ಆತ್ಮಹತ್ಯೇನೇ ಮಾಡ್ಕೊಂಡ್ರೂಂತ ಇಟ್ಕೊಳ್ಳಿ. ಆ ಮನೇನೆ ಬಿಟ್ಬಿಡೋಕೆ ಆಗುತ್ತೇನು?"

"ಅದು ನಿಜ. ನಿಮಗೆ ತಿಳಿವಳಿಕೆ ಇರೋದ್ರಿಂದ ಹಾಗೆ ಹೇಳ್ತೀರಾ. ಆದರೆ ಬೇರೆಯವರು—"

"ಅದೆಲ್ಲಾ ದೊಡ್ಡದಲ್ಲಾಂದ್ರೆ!"

"ಹೆಂಗಸರು ಮಕ್ಕಳು ಸಾವುಗೀವು ಅಂದ್ರೆ ಸ್ವಲ್ಪ ಹೆದರ್ಕೊತಾರೆ."

"ನಮ್ಮ ಚಂಪಾ ವಿಷಯದಲ್ಲಿ ಅಂಥ ಯೋಚನೆ ಮಾಡ್ಬೇಕಾದ್ದೇ ಇಲ್ಲ. ಇಂಥಾದ್ದು ಆಕೆ ಎಷ್ಟೋ ನೋಡಿದ್ದಾಳೆ."

ಸಾವಿನ ಮನೆ ಬೇಡವೆಂದು ಆತ ಹೇಳಲಿಲ್ಲವಲ್ಲಾ ಎಂದು ರಂಗಮ್ಮನ ಕಣ್ಣುಗಳು ಕೃತಜ್ಞತೆಯಿಂದ ತುಂಬಿದುವು.

"ಅಂದಹಾಗೆ, ಆ ಮನೆಗೆ ಒಂದಿಷ್ಟು ಸುಣ್ಣ ಸಾರಿಸಿ ಸ್ವಚ್ಛ ಮಾಡಿಸಿ ಇಟ್ಟಿರಿ!"

"ಆಗಲಿ ಮಾಡಿಸ್ತೀನಿ."

ಬೇರೆ ಮನೆಯಾಗಿದ್ದರೆ ರಂಗಮ್ಮ ಒಪ್ಪುತ್ತಿರಲಿಲ್ಲ.

ಬೀದಿಗೆ ಇಳಿಯುತಿದ್ದ ಆತನ ದೃಷ್ಟಿ, ಗೋಡೆಯ ಮೇಲಿದ್ದ 'ಮನೆ ಬಾಡಿಗೆಗೆ ಇದೆ' ಬೋರ್ಡಿನತ್ತ ಹೋಯಿತು.

"ಇದೇನು ಸುಣ್ಣದ ಕಡ್ಡೀಲಿ ಬರಿಸಿದೀರಲ್ಲಾ. ನಾನು ಬಂದ್ಮೇಲೆ ಮರದ ಹಲಿಗೇಲಿ ಬರ್ಸ್ಕೊಡ್ತೀನಿ, ಸೊಗಸಾಗಿ. ಭದ್ರವಾಗಿ. ಖಾಯಂ ಆಗಿ ಇರುತ್ತೆ. ಒಳಗೆ ಇಟ್ಕೊಂಡ್ರೆ ಯಾವತ್ತು ಬೇಕಾದ್ರೂ ಉಪಯೋಗಿಸ್ಬಹುದು."

ರಂಗಮ್ಮ ನಕ್ಕರು.

"ಆಗಲೀಪ್ಪಾ. ನಿಮ್ಮದೇ ವಠಾರ. ಅದೇನು ಮಾಡ್ತೀರೋ ಮಾಡಿ."

ಆ ಮನುಷ್ಯ ವಠಾರಕ್ಕೆ ಬಿಡಾರ ಬರಲು ಒಪ್ಪಿದನೆಂದು ತಿಳಿದಾಗ ಅಹಲ್ಯೆಗೆ ತುಸು ಆಶ್ಚರ್ಯವೇ ಆಯಿತು.

"ಎಷ್ಟು ಬಾಡಿಗೆಗೆ ಒಪ್ಕೊಂಡ್ರು ರಂಗಮ್ನೋರೆ?"

ರಂಗಮ್ಮನಿಗೆ ಆ ಪ್ರಶ್ನೆ ಇಷ್ಟವಾಗಲಿಲ್ಲ.

"ನಿನಗ್ಯಾತಕ್ಕಮ್ಮ ಅದೆಲ್ಲ? ಒಪ್ಕೊಂಡ, ಹೋದ."

"ಇಪ್ಪತ್ತೂಂತ ತೋರುತ್ತೆ."

"ಹತ್ತೊಂಭತ್ತು. ನೀವು ಮನೆ ಖಾಲಿ ಮಾಡಿದ್ರೆ ಮುಂದೆ ನಿಮ್ಮದಕ್ಕೂ ಹತ್ತೊಂಭತ್ತು ರೂಪಾಯಿ ಬರುತ್ತೆ."

ರಂಗಮ್ಮ ರೇಗಿದರೆಂದು ಅಹಲ್ಯಾ ಸುಮ್ಮನಾದಳು. ಆದರೂ ಮೌನವಾಗಿ ಕುಳಿತಿರಲಾರದೆ ವಠಾರದ ಬಾಗಿಲಿನಿಂದ ಬಾಗಿಲಿಗೆ ಸಂಚರಿಸಿ ಕೊನೆಯ ಮನೆಗೆ ಬಿಡಾರ ಬರಲಿರುವ ವಿಷಯವನ್ನು ಪ್ರಸಾರ ಮಾಡಿದಳು.

"ಬಂದ್ಮೇಲೆ ತಾನೆ?"

—ಎಂದು ಒಬ್ಬಿಬ್ಬರು ಸಂದೇಹದ ರಾಗವೆಳೆದರು.

ಮರುದಿನ ಶಂಕರನಾರಾಯಣಯ್ಯ, ಮುಂಗಡ ಬಾಡಿಗೆ ತೆತ್ತು ಕರಾರು ಪತ್ರ ಮಾಡಿಕೊಳ್ಳಲು ಬರದೆ ಇರಲಿಲ್ಲ. ಈದಿನ ಆತ ಅಪರಿಚಿತನಂತೆ ಅಂಗಳದಲ್ಲೇ ನಿಲ್ಲಲಿಲ್ಲ. ಕತ್ತಲೆಯ ನಡುಮನೆ ಹಾದಿಯಲ್ಲೆ ಬಂದು ರಂಗಮ್ಮನ ಬಾಗಿಲಿನೆದುರು ಓಣಿಯಲ್ಲಿ ನಿಂತು, "ಇದೀರಾ?" ಎಂದು ಕೇಳಿದ.

ಸಂಜೆಯಾದರೂ ಈತ ಬರಲೇ ಇಲ್ಲವಲ್ಲಾ—ಎಂಬ ಯೋಚನೆಯಲ್ಲೇ ಇದ್ದ ರಂಗಮ್ಮ, "ಬನ್ನಿ, ಬನ್ನಿ" ಎಂದರು.

ಹಿಂದಿನ ದಿನದ್ದೇ ವೇಷಭೂಷಣ. ಈ ದಿನವೂ ವೀಳ್ಯ ಜಗಿದು ತುಟಿಗಳು ಕೆಂಪಗಾಗಿದ್ದುವು. ಹಿಂದಿನ ದಿವಸ ಮಾತು ನಿಲಿಸಿದ್ದಲ್ಲಿಂದಲೇ ಮುಂದುವರಿಸಿದ ಹಾಗೆ ಆತ ಹೇಳಿದ :

"ಅದೇನೊ ಕರಾರು ಪತ್ರ ಬರೀಬೇಕು ಅಂದ್ರಲ್ಲಾ."

"ಹೌದು, ಹೌದು. ಬಾಡಿಗೆ ಹಣ ತಂದಿದೀರಾ?"

"ತಗೊಳ್ಳಿ."

ಜುಬ್ಬದ ಪಾರ್ಶ್ವ ಜೇಬಿನಲ್ಲಿ ಮಡಚಿ ಇಟ್ಟಿದ್ದೊಂದು ಲಕೋಟೆಯನ್ನು ಆತ ಹೊರತೆಗೆದ. ಹತ್ತು ರೂಪಾಯಿನದೊಂದು, ಐದು ರೂಪಾಯಿನದ್ದೊಂದು, ಒಂದು ರೂಪಾಯು ನಾಲ್ಕು ನೋಟುಗಳು—ಅದರೊಳಗಿದ್ದುದೇ ಅಷ್ಟು. ಅಷ್ಟನ್ನೂ ಆತ ರಂಗಮ್ಮನ ಎದುರಿಗಿಟ್ಟ.

ಅವರು ಎಲ್ಲವನ್ನೂ ಎತ್ತಿಕೊಂಡು ಒಂದೊಂದನ್ನೂ ಬೆಳಕಿಗೆ ಹಿಡಿದು ಸೂಕ್ಷ್ಮವಾಗಿ ನೋಡಿದರು.

"ದೃಷ್ಟಿ ಸ್ವಲ್ಪ ಮಂದ. ವಯಸ್ಸಾಯ್ತು"

—ಎಂದು ಅವರು ಆ ಸೂಕ್ಷ್ಮ ಪರೀಕ್ಷೆಗೆ ಕಾರಣ ಕೊಟ್ಟರು. ಮಂದವೋ ಚುರುಕೋ, ಎಷ್ಟೋ ವರ್ಷಗಳಿಂದ ನೋಟನ್ನು ಅವರು ಹಿಡಿದು ನೋಡುತ್ತಿದ್ದ ರೀತಿಯೇ ಅಂಥಾದ್ದು. ಸುಬ್ಬುಕೃಷ್ಣಯ್ಯನಿಗೆ ಮನೆ ಕೊಟ್ಟಾಗ ದೊರೆತ ಐದು ರೂಪಾಯಿಯ ನೋಟನ್ನೂ—ಆ ಮೊದಲ ಬಾಡಿಗೆಯನ್ನೂ—ಅಷ್ಟೇ ಸೂಕ್ಷ್ಮವಾಗಿ ತಿರುತಿರುಗಿಸಿ ಅವರು ಪರೀಕ್ಷಿಸಿದ್ದರು. ಆಗಲೂ ಹೇಳಿದ್ದರು 'ದೃಷ್ಟಿ ಸ್ವಲ್ಪ ಮಂದ' ಎಂದು. 'ವಯಸ್ಸಾಯ್ತು' ಎಂದು ಮಾತ್ರ ಅಂದಿರಲಿಲ್ಲ. ದೃಷ್ಟಿ ಎಂದೂ ಅವರಿಗೆ ತೊಂದರೆ ಕೊಟ್ಟಿರಲಿಲ್ಲವೆಂದಲ್ಲ. ಆದರೆ ನೇತ್ರವೈದ್ಯರ ಬಳಿಗೆ ಹೋಗಿ ಕನ್ನಡಕ ಕೊಳ್ಳುವ ಗೋಜಿಗೆ ಅವರು ಹೋಗಿರಲಿಲ್ಲ.

"ಸರಿಯಾಗಿದೆ"

—ಎಂದರು ರಂಗಮ್ಮ. ಮುಂದೆ ತಾವೇ ಮಾತು ಸೇರಿಸಿದರು :

"ನಿಮ್ಮಲ್ಲಿ ಕಾಗದ ಪೆನ್ನು ಏನೂ ಇಲ್ಲಾಂತ ತೋರುತ್ತೆ."

"ಪೆನ್ನಿದೆ."

ಜುಬ್ಬದ ಎದೆ ಭಾಗದಲ್ಲಿ ಪೆನ್ನಿಗಾಗಿಯೇ ಮಾಡಿದ್ದ ಕಿರುಜೇಬಿ

ನಿಂದ ಎರಡು ರೂಪಾಯಿಯ ನಕಲಿ ಪಾರ್ಕರ್ ಪೆನ್ನನ್ನು ಹೊರ ತೆಗೆದು ಶಂಕರನಾರಾಯಣಯ್ಯ ಕೈಯಲ್ಲಿ ಹಿಡಿದುಕೊಂಡ.

ರಂಗಮ್ಮ ಅಸ್ಪಷ್ಟವಾಗಿ ಏನನ್ನೋ ಗೊಣಗಿ, ಕೊರಳಿಗೆ ತೂಗ ಹಾಕಿದ್ದ ಬೀಗದಕೈಯಿಂದ ಕಬ್ಬಿಣದ ಪೆಟ್ಟಿಗೆಯನ್ನು ತೆರೆದು, ಸ್ವಲ್ಪ ಮಾಸಿದ್ದ ಮುಡಚಿದ್ದ ಕಾಗದದ ಹಾಳೆಯೊಂದನ್ನು ಹೊರತೆಗೆದು, ಆತನ ಮುಂದಿಟ್ಟರು. ಒತ್ತಿಕೊಳ್ಳಲೆಂದು ಯಾವುದೋ ಒಂದು ಹಳೆಯ ಪುಸ್ತಕವನ್ನೂ ಕೊಟ್ಟರು.

ಬರೆಯಲು ಸಿದ್ಧನಾದ ಶಂಕರನಾರಾಯಣಯ್ಯ ರಂಗಮ್ಮನ ಮುಖ ನೋಡಿದ.

"ಹೇಳಿ, ಬರಕೋತೀನಿ."

ರಂಗಮ್ಮ ಹೇಳಲು ಸಿದ್ಧವಾದರು. ಎಷ್ಟೋ ಸಾರೆ ಹೇಳಿ ಬರೆಸಿ ಅಭ್ಯಾಸವಾಗಿದ್ದ ಅವರ ಮನಸಿನಲ್ಲಿ ಪರಿಚಯದ ಪದಗಳು ರೂಪುಗೊಂಡುವು.

"ಮಲ್ಲೇಶ್ವರ, ಶ್ರೀರಾಮಪುರ ರಂಗಮ್ಮನ ವಠಾರದ ಮಾಲೀಕರಾದ ರಂಗಮ್ಮನವರಿಗೇ – ಆಮೇಲೆ ನಿಮ್ಮ ಹೆಸರುಹಾಕಿ – ನಾದ ನಾನು ಬರೆದುಕೊಡುವುದೇನೆಂದರೆ .. "

ಶಂಕರನಾರಾಯಣಯ್ಯ ಅಷ್ಟನ್ನೂ ಬರೆದುಕೊಂಡ. ಆತನಿಗೆ ನಗು ಬಂತು. ತುಟಿಗಳು ಬೇರ್ಪಟ್ಟು ಕೋಲುಮುಖ ಅಗಲವಾಯಿತು. ಆದರೆ ಆತನ ತಲೆ ಬಾಗಿದ್ದುದರಿಂದಲೂ ಮುಂದಿನ ಮಾತುಗಳನ್ನು ರಂಗಮ್ಮ ನೆನಪು ಮಾಡಿಕೊಳ್ಳುತ್ತಿದ್ದುದರಿಂದಲೂ ಆಕೆಗೆ ಅದು ಕಾಣಿಸಲಿಲ್ಲ.

"ಅಷ್ಟು ಬರೆದಾಯ್ತಾ ?"

"ಹೂಂ. ಮುಂದಕ್ಕೆ ಹೇಳಿ."

"ಮುಂದೆ ಇಪತ್ತಿನ ತಾರೀಕು–ತಿಂಗಳು–ಇಸವಿ ಬರೀರಿ."

"ಹೂಂ."

"ಈ ದಿವಸ ನಾನು ಮೊಬಲಗು ರೂಪಾಯಿ ಹತ್ತೊಂಭತ್ತನ್ನು ಈ ವಠಾರದ ಮನೆಯ–ನಂಬರು ಹದಿನಾರು ಐವತ್ತು–ಒಂದು ತಿಂಗಳ

ಮುಂಗಡ ಬಾಡಿಗೆಯಾಗಿ ಪೂರ್ತಾ ಪಾವತಿ ಮಾಡಿದ್ದೇನೆ........ಬರೆದಿರೋ? ........,ಮುಂದೆ ಪ್ರತಿತಿಂಗಳೂ ಮೊದಲ್ನೇ ತಾರೀಖಿಗೆ–ಮೊವಲ್ನೇ ತಾರೀಖು ಅಂತ್ಲೇ ಹಾಕಿ, ಅವಧಿಯೇನೋ ಆಮೇಲೂ ಐದು ದಿವಸ ಇರುತ್ತೆ–ತಾರೀಖಿಗೆ ಹತ್ತೊಂಭತ್ತು ರೂಪಾಯಿ ಬಾಡಿಗೆ ತಪ್ಪದೇ ಸಲ್ಲಿಸುವುದಾಗಿ ಈ ಮೂಲಕ ಬರೆದು ಕೊಡುತ್ತೇನೆ.–ಈ ಸಲ ಮೊದಲ್ನೇ ತಾರೀಖಿಗೆ ಮಾತ್ರ ನೀವು ಅರ್ಧ ತಿಂಗಳಿಂದು ಕೊಟ್ಟರಾಯ್ತು........ಅದನ್ನ ಬರೀಬೇಡಿ........ಅದೇನೇನು ಹೇಳಿದ್ನೋ. ಎಲ್ಲಿ ಸ್ವಲ್ಪ ಓದಿ."

ಶಂಕರನಾರಾಯಣಯ್ಯ ಸರಿಯಾಗಿ ಬರೆದು ಕೊಂಡಿದ್ದುದನ್ನು ಓದಿದ. ನಿಧಾನವಾದ ಗಂಭೀರವಾದ ಆತನ ನಟನೆಯ ಧ್ವನಿ ರಂಗಮ್ಮನಿಗೆ ತುಂಬಾ ಮೆಚ್ಚುಗೆಯಾಯಿತು.

"ಸರಿ. ಮುಂದಕ್ಕೆ ಬರೀರಿ."

"ಹೇಳಿ."

"ಮೂರು ಕೊಡಕ್ಕಿಂತ ಹೆಚ್ಚಿನ ಪ್ರತಿಮೂರು ಕೊಡಕ್ಕೂ ಎಂಟಾಣೆ ಸಲ್ಲಿಸುತ್ತೇನೆ."

"ಹೂಂ."

"ಅವಸರ ಮಾಡ್ಬೇಡಿ. ನಿಧಾನವಾಗೇ ಬರೀರಿ........ಬಲ್ಬು ಕೆಟ್ಟುಹೋದರೆ ಹೊಸ ಬಲ್ಬು ನಾನೇ ಹಾಕುತ್ತೇನೆ. ಮನೆಯ ವಿಷಯದಲ್ಲಿ ಸಮಸ್ತ ಜವಾಬ್ದಾರಿಯೂ ನನ್ನದೇ ಎಂದು ಈ ಮೂಲಕ ಒಪ್ಪಿಕೊಳ್ಳುತ್ತೇನೆ........ಬರೆದಿರಾ ?"

"........ಈ ಮೂಲಕ ಒಪ್ಪಿಕೊಳ್ಳುತ್ತೇನೆ. ಬರೆದೆ."

"ಅಷ್ಟೆ. ಇನ್ನೊಮ್ಮೆ ಓದಿ."

ಶಂಕರನಾರಾಯಣಯ್ಯ ನಿಧಾನವಾಗಿ ಬರೆದುದೆಲ್ಲವನ್ನೂ ಓದಿದ.

"ಅದರ ಕೆಳಗೆ ರುಜು ಹಾಕಿ."

ಶಂಕರನಾರಾಯಣಯ್ಯ ಎಂದು ಇಂಗ್ಲಿಷಿನಲ್ಲಿ ಸಹಿಯಾಯಿತು.

"ರುಜು ಹಾಕಿದಿರೋ? ಅದರ ಕೆಳಗೆ ತಾರೀಖೂ ಹಾಕಿ."

"ಹಾಕ್ದೆ."

"ಸಂತೋಷ. ಅಷ್ಟೆ."

ಬಲುಕಷ್ಟದ ಕೆಲಸವನ್ನು ಮಾಡಿ ಮುಗಿಸಿದ ಹಾಗೆ ರಂಗಮ್ಮ ಸಂತೃಪ್ತಿಯ ನಿಟ್ಟುಸಿರು ಬಿಟ್ಟರು.

ಆದರೆ ಶಂಕರನಾರಾಯಣಯ್ಯನಿಗೆ ಅಷ್ಟು ತೃಪ್ತಿಯಾಗಿರಲಿಲ್ಲ !

"ಕರಾರು ಪತ್ರ ಎಂದಿರಿ. ಇದಕ್ಕೆ ನಿಮ್ಮ ಸಹಿಯೂ ಆಗೋದು ಬೇಡ್ವೆ ರಂಗಮ್ನೋರೆ ?"

ರಂಗಮ್ಮನಿಗೆ ಸಹಿ ಹಾಕಲು ಬರುತ್ತಿರಲಿಲ್ಲ. ಅವರ ಪಾಲಿಗಿದ್ದುದು ಎಡಗೈ ಹೆಬ್ಬೆಟ್ಟಿನ ಗುರುತು. ಆದರೆ ಆ ವಿಷಯವನ್ನೇನೂ ಅವರು ಹೇಳಲಿಲ್ಲ.

"ಇಲ್ಲವಪ್ಪಾ ನಮ್ಮಲ್ಲಿ ಕರಾರುಪತ್ರಕ್ಕೆ ಒಬ್ಬರೇ ಸಹಿ ಹಾಕೋದು. ಇದನ್ನ ನೀವು ಬರಕ್ಕೊಡೋದು, ನಾನು ತಗೊಳ್ಳೋದು."

ಶಂಕರನಾರಾಯಣಯ್ಯ ಸಣ್ಣಗೆ ನಕ್ಕ.

"ಹಾಗೆಯೇ ಆಗ್ಲಿ. ಇನ್ನು ಬರ್ಲೇನು ನಾನು ?"

"ಆಗಬಹುದಪ್ಪಾ. ನಾಳೇನೇ ಬರ್ತೀರೊ ?"

"ಹೂಂ. ಸುಣ್ಣ ಹೊಡಿಸಿ ನೆಲಸಾರಿಸಿದೆ ತಾನೆ ?"

ಆ ಕೆಲಸವಾಗಿರಲಿಲ್ಲ. ಮುಂಗಡ ಬಾಡಿಗೆ ಬಂದು ಕರಾರು ಪತ್ರವಾದಮೇಲೆ ಮಾಡಿಸಿದರಾಯಿತೆಂದು ರಂಗಮ್ಮ ಸುಮ್ಮನೆ ಇದ್ದುಬಿಟ್ಟಿದ್ದರು.

"ಅಯ್ಯೋ, ಅದೆಲ್ಲಾ ಎಷ್ಟರ ಕೆಲಸ. ಬೆಳಿಗ್ಗೆ ಮಾಡಿಸ್ತೀನಿ."

ಕರಾರು ಪತ್ರವನ್ನು ಪಡೆದುಕೊಂಡು ರಂಗಮ್ಮ ನಾಜೂಕಾಗಿ ಮಡಚಿ ಕೈಯಲ್ಲೆ ಇರಿಸಿಕೊಂಡರು.

ಶಂಕರನಾರಾಯಣಯ್ಯನಿಗೆ ಒಂದು ತರಹೆಯಾಯಿತು. ಆತ ಹಣವನ್ನೂ ಕೊಟ್ಟಿದ್ದ, ಸಹಿಯನ್ನೂ ಹಾಕಿದ್ದ. ಆದರೆ ಹಣ ತಲಪಿದುದಕ್ಕೆ ವಠಾರದ ಒಡತಿಯಿಂದ ರಶೀತಿ ಬಂದಿರಲಿಲ್ಲ.

"ಹೊರಡ್ತೀರಾ ಹಾಗಾದರೆ ?"

—ಎಂದು ರಂಗಮ್ಮ ಕೇಳಿದರು.

"ಹೂಂ"

–ಎಂದು ಆತ ಎದ್ದು ನಿಂತ. ಪೆಚ್ಚು ಮೋರೆಯ ಲಕ್ಷಣ ಮೊದಲ ಬಾರಿಗೆ ಮೂಡಿ ಮರೆಯಾಯಿತು.

"ಹಣ ತಲಪಿದ್ದಕ್ಕೆ ರಶೀತಿ ಕೊಡ್ತೀರಾ ರಂಗಮ್ನೋರೆ ?"

"ರಶೀತೀನೆ ? ಏನೂ ಪರವಾಗಿಲ್ಲ. ಹೋಗ್ಬಿಟ್ಟು ಬನ್ನಿ."

ಶಂಕರನಾರಾಯಣಯ್ಯ ಮನಸ್ಸಿನೊಳಗೇ ಅನುಮಾನಿಸಿದರೂ ಹೊರಗೆ ಒಣನಗೆ ತೋರುತ್ತಾ ಹೊರಡಲು ಸಿದ್ಧನಾದ.

ಆತನ ಪ್ರಶ್ನೆಯಿಂದ ಸ್ವಲ್ಪ ನೊಂದುಕೊಂಡವರ ಹಾಗೆ ರಂಗಮ್ಮ ಮತ್ತೂ ಹೇಳಿದರು :

"ಇಲ್ಲಿ ಯಾರನ್ನು ಬೇಕಾದರೂ ಕೇಳಿನೋಡಿ. ನಮ್ಮ ವಠಾರ ದಲ್ಲಿ ರಶೀತಿ ಕೊಡೋ ಪದ್ಧತೀನೇ ಇಲ್ಲ."

"ನನಗೆ ಗೊತ್ತಿರ್ಲಿಲ್ಲ. ಅದಕ್ಕೇ ಕೇಳ್ದೆ.........ನಾವು ಈಗಿರೋ ಮನೆ ಮಾಲಿಕರು ರಶೀತಿ ಕೊಡ್ತಾ ಇದ್ರು. ನೀವು ಇಷ್ಟು ಹೇಳಿ ದ್ಮೇಲೆ ಏನೂ ಪರವಾಗಿಲ್ಲ. ಬರ್ತೀನಿ."

"ಆಗಲಪ್ಪಾ."

ಈದಿನ ಆತನೊಬ್ಬನೇ ಅಂಗಳ ದಾಟಿ ಬೀದಿಗಿಳಿದ. ರಂಗಮ್ಮ ಬೀಳ್ಕೊಡಲು ಬರಲಿಲ್ಲ.

ಆತ ಹೋದೊಡನೆಯೇ ಅಹಲ್ಯಾ ರಂಗಮ್ಮನ ಮನೆ ಬಾಗಿ ಲಲ್ಲಿ ನಿಂತಳು.

"ಯಾವತ್ತು ಬರ್ತಾರಂತ್ರೀ?"

"ನಿನಗ್ಯಾಕೇ ಆ ಸಮಾಚಾರ ? ಬರ್ತಾರೆ, ನಾಳೆ ಬಂದ್ಬಿಡ್ತಾರೆ."

ಎಷ್ಟು ಜನ ? ದೊಡ್ಡವರೆಷ್ಟು–ಚಿಕ್ಕವರೆಷ್ಟು? ಕೆಲಸ ಏನು? ಅಹಲ್ಯೆಯ ಪ್ರಶ್ನೆಗಳಿಗೆ ಅಂತ್ಯವಿರಲಿಲ್ಲ.

"ಸಾಕುಸಾಕಾಗಿ ಹೋಗುತ್ತಮ್ಮ ನಿನಗೆ ಉತ್ತರಕೊಟ್ಟು"

ಎಂದು ರಂಗಮ್ಮ ಬೇಸರದಿಂದಲೇ ಅಂದರು. ಆದರೆ ಕೇಳಿದ್ದ ಕ್ಕೆಲ್ಲ ಸಮರ್ಪಕ ಉತ್ತರ ಮಾತ್ರ ಕೊಡದಿರಲಿಲ್ಲ.

"ತಿಂಗಳಿಗೆ ನೂರೈವತ್ತು ರೂಪಾಯಿ ಸಂಪಾದಿಸ್ತಾನೆ."

ಎಂದು ಅಂತಹ ಒಕ್ಕಲನ್ನು ದೊರಕಿಸಿಕೊಂಡ ತಮ್ಮ ಬಗೆಗೇ ಅಭಿಮಾನಪಡುತ್ತಾ ರಂಗಮ್ಮ ಹೇಳಿದರು.

ಅಹಲ್ಯಾ, ಎದುರಲ್ಲೇ ಇದ್ದ ಕಾಮಾಕ್ಷಿ ಮನೆಗೆ ಜಿಗಿದಳು. ಅಲ್ಲಿಂದ ಹೊರಹೋಗಿ "ಓ ರಾಧಾ, ಬಾರೇ" ಎಂದು ಮಹಡಿ ಮೇಲಿನ ಗೆಳತಿಯನ್ನು ಕೆಳಕ್ಕಿಳಿಸಿದಳು. ಆ ಬಳಿಕ ಪ್ರತಿಯೊಂದೊಂದು ಮನೆಗೆ ಸುದ್ದಿ ಪ್ರಸಾರವಾಯಿತು.

ನಾಳೆ ದಿವಸ ಕೊನೇಮನೆಗೆ ಬಿಡಾರ ಬರ್‍ತಾರಂತೆ.

ಅವರು ಚಿತ್ರ ಬರೀತಾರಂತೆ.

ಉಪಾಧ್ಯಾಯರ ಹೆಂಡತಿಯ ಕುತೂಹಲ ಕೆರಳಿತು. ತಮ್ಮ ಸಂಸಾರದ್ದೊಂದು ಭಾವಚಿತ್ರ ತೆಗೆಸಬೇಕೆಂದು ಆಕೆ ಬಹಳ ದಿನಗಳಿಂದ ಬಯಸಿದ್ದಳು. ಆ ಬಯಕೆ ಈಡೇರಿಯೇ ಇರಲಿಲ್ಲ. ಗರ್ಭಿಣಿಯಾಗಿದ್ದಾಗ, 'ಈಗ ಚೆನ್ನಾಗಿರೋಲ್ಲ. ಬಾಣಂತಿಯಾದ್ಮೇಲೆ ತೆಗೆಸೋಣ' ಎನ್ನುತಿದ್ದರು ಗಂಡ ಲಕ್ಷ್ಮೀನಾರಾಯಣಯ್ಯ. ಬಾಣಂತಿಯಾದ ಮೇಲೆ, 'ಮಗು ಚಿಕ್ಕದು ಕಣೇ, ಅಲುಗುತ್ತೆ. ಚಿತ್ರ ಕೆಟ್ಟುಹೋಗುತ್ತೆ' ಎನ್ನುತ್ತಿದ್ದರು. ಮಗು ದೊಡ್ಡದಾಗುವುದರೊಳಗಾಗಿಯೇ 'ಈಗ ಚೆನ್ನಾಗಿರೋಲ್ಲ. ಬಾಣಂತಿಯಾದ್ಮೇಲೆ—'. ಬಾಣಂತಿಯಾದ ಮೇಲೆ ಮತ್ತೆ ಅದೇ ಹಿಂದಿನ ಕಥೆಯೇ. ಕ್ರಮೇಣ ದಿನ ಕಳೆದಂತೆ ಭಾವಚಿತ್ರ ತೆಗೆಸುವ ವಿಷಯದಲ್ಲಿ ಉಪಾಧ್ಯಾಯರ ಆಸಕ್ತಿ ಕಡಿಮೆಯಾಯಿತು. ಯಾವುದರಲ್ಲಿ ತಾನೇ ಆಸಕ್ತಿ ಇತ್ತು ಅವರಿಗೆ? ಮದುವೆಯಾದಾಗ ಒಂದು ಭಾವಚಿತ್ರ ತೆಗೆಸಿತ್ತು–ಕುಳಿತ ಗಂಡನ ಹಿಂದೆ ನಿಂತು ತೆಗೆಸಿಕೊಂಡಿದ್ದ ಚಿತ್ರ. ಅವರ ದುರಾದೃಷ್ಟ. ಕಟ್ಟುಹಾಕಿಸಿದ್ದ ಚಿತ್ರದ ಗಾಜು ಒಡೆದುಹೋಯಿತು; ಚಿತ್ರದ ಹಿಂದಿದ್ದ ರಟ್ಟಿಗೆ ಗೋಡೆಯ ಗೆದ್ದಲು ಹಿಡಿದು, ಚಿತ್ರದ ಕಾಲು ಭಾಗ, ಕಾಲುಗಳ ಭಾಗ ಅದಕ್ಕೆ ಆಹುತಿಯಾಯಿತು. ಮನೆಯೊಳಗೆ ಸಾಕಷ್ಟು ಬೆಳಕೇ ಇಲ್ಲದಿದ್ದುದರಿಂದ, ಅಲ್ಲದೆ ಪರೀಕ್ಷಿಸಿ ನೋಡುವ ನೆಂಟರಿಷ್ಟರೂ ಬರುತ್ತಿರಲಿಲ್ಲವಾದ್ದರಿಂದ ಅದೇ ಚಿತ್ರವನ್ನು ಇನ್ನೂ ಗೋಡೆಯಮೇಲೆ ತೂಗಿಹಾಕಲು ಅಷ್ಟು ಸಂಕೋಚವೆನಿಸಿರಲಿಲ್ಲ. ಆದರೂ ಹೊಸ

ತೊಂದು ಭಾವಚಿತ್ರವಿದ್ದಿದ್ದರೆ....

ಈಗ ಹೊಸ ಬಿಡಾರ ಬರಲಿರುವವರ ವಿಷಯ ಕೇಳುತ್ತಾ, ಲಕ್ಷ್ಮೀನಾರಾಯಣಯ್ಯನ ಹೆಂಡತಿಯ ಆಸೆ ಮತ್ತೆ ಚಿಗುರಿತು.

"ಚಿತ್ರ ಬರಿಯೋದು ಅಂದ್ರೇನೆ ಅಹಲ್ಯಾ ?"

"ಹಾಗಂದ್ರೆ ? ಚಿತ್ರ ಬರಿಯೋದು ಕಣ್ರೀ."

"ಫೋಟೋ ತೆಗಿಯೋದೇ ?"

"ಊಹುಂ. ಕೈಲಿ ಚಿತ್ರ ಬರೆದು ಬಣ್ಣ ಹಾಕೋದು."

"ಅಷ್ಟೇನಾ ?"

ಆ ನಿರಾಸಕ್ತಿಯ ಧ್ವನಿಯ ಕಾರಣ ಅಹಲ್ಯೆಗೆ ತಿಳಿಯಲಿಲ್ಲ.

ಬರಲಿರುವ ಸಂಸಾರದಲ್ಲಿ ತನ್ನ ಓರಗೆಯ ಹುಡುಗಿಯರು ಯಾರೂ ಇಲ್ಲವೆಂದು ರಾಧೆಗೆ ವ್ಯಸನವಾಯಿತು. ರಾಧೆಯನ್ನಲ್ಲದೆ, ಬೇರೆ ಗೆಳತಿಯರ ಯೋಚನೆಯನ್ನೇ ಎಂದೂ ಮಾಡದ ಅಹಲ್ಯಾ ಮಾತ್ರ ಆ ಅಂಶವನ್ನು ಗಮನಿಸಲಿಲ್ಲ. ಆದರೆ ಅಹಲ್ಯೆಯ ತಾಯಿಯೂ ರಾಧೆಯ ತಾಯಿಯೂ ಹೊಸ ಸಂಸಾರದ ಸದಸ್ಯರು ಯಾರು ಯಾರೆಂಬುದನ್ನು ಕೇಳದಿರಲಿಲ್ಲ. ವಿವರ ತಿಳಿದಾಗ ಅವರು ಸಂತೋಷ ಸೂಚಿಸಲೂ ಇಲ್ಲ.

ಬೇರೆ ಮಾತುಗಳೂ ಕೇಳಿಸಿದುವು :

"ಆತನಿಗೆಷ್ಟೊ ವಯಸ್ಸು ?"

"ಮೂವತ್ತೊ ನಾಲ್ವತ್ತೊ ಇರಬೇಕು."

"ಮಗು ಚಿಕ್ಕದಂತೆ."

"ಎಂಥವರೊ ?"

ಈ ಮಾತುಕತೆಗಳೆಲ್ಲ ನಡೆದುದು ಎರಡು ನಿಮಿಷಗಳ ಕಾಲ ಮಾತ್ರ. ದಿನದ ದುಡಿತದಿಂದ ಗಂಡಸರು ಹಿಂತಿರುಗಿದರು. ವಠಾರಕ್ಕೆ ಹೊಸ ಬಿಡಾರ ಬರಲಿದೆಯೆಂದು ಅವರೇನೂ ಆಸಕ್ತಿ ತೋರಿಸಲಿಲ್ಲ. ಹೆಂಗಸರು ಮನೆಗೆಲಸಗಳಲ್ಲಿ ನಿರತರಾದರು. ಪುಟ್ಟಮಕ್ಕಳು ದೀಪ ಹತ್ತಿಕೊಂಡ ಸ್ವಲ್ಪಹೊತ್ತಿನಲ್ಲೆ 'ಹಸಿವು ಹಸಿವು' ಎಂದು ಕೂಗಾಡಿ ನಿದ್ದೆಹೋಗಿದ್ದುವು. ತಮ್ಮನ್ನು ಮಾತನಾಡಿಸಲು ಬಂದ ಹುಡುಗರನ್ನು

‘ದೂರ ಹೋಗಿ’ ಎಂದು ಗದರಿಸಿ ಗಂಡಸರು, ಹೊರಗಿನ ಗಾಳಿಯಾದರೂ ಮೈಗೆ ತಗಲೀತೇನೋ ಎಂಬ ಆಸೆಯಿಂದ, ತಗಲಬಹುದೆಂಬ ಭ್ರಮೆಯಿಂದ ಮನೆಬಾಗಿಲುಗಳಲ್ಲಿ ನಿಂತರು.

ರಂಗಮ್ಮ ಆ ವಠಾರದಲ್ಲಿ ಮನಸ್ಸುಬಿಚ್ಚಿ ಏಕಾಂತದಲ್ಲಿ ಮಾತನಾಡುತ್ತಿದ್ದುದು ಸುಬ್ಬುಕೃಷ್ಣಯ್ಯನೊಡನೆ ಮಾತ್ರ. ಆತ ವಠಾರದ ಮೊದಲ ಒಕ್ಕಲು. ಅಂಗಡಿಯಲ್ಲಿ ಶ್ರೀನಿವಾಸಶೆಟ್ಟರ ನಂಬಿಕೆಗೆ ಅರ್ಹನಾಗಿದ್ದಂತೆ, ವಠಾರದಲ್ಲಿ ರಂಗಮ್ಮನ ವಿಶ್ವಾಸಕ್ಕೆ ಆತ ಪಾತ್ರನಾಗಿದ್ದ. ಇನ್ನೊಬ್ಬರಿಗೆ ವಿಧೇಯನಾಗಿ ನಿಷ್ಠಾವಂತನಾಗಿ ಬಾಳ್ವೆ ನಡೆಸುವುದೇ ಸುಬ್ಬುಕೃಷ್ಣಯ್ಯನ ಬದುಕಿನ ಪರಮಗುರಿಯಾಗಿತ್ತೆಂದರೂ ತಪ್ಪಾಗಲಾರದು. ತನ್ನ ಬಗ್ಗೆ ಸೋಜಿಗ ಸೂಚಿಸಿ ಯಾರಾದರೂ ಒಂದು ಮಾತಾಡಿದರೆ ಸಾಕು, ಅಷ್ಟರಲ್ಲೇ ಆತನಿಗೆ ತೃಪ್ತಿಯಾಗುತ್ತಿತ್ತು.

ಮಹಾ ಕೆಲಸವೊಂದನ್ನು ಸಾಧಿಸಿದ ರಂಗಮ್ಮ ಈ ದಿನ ಸುಬ್ಬುಕೃಷ್ಣಯ್ಯನ ಬರವನ್ನೇ ಇದಿರು ನೋಡುತ್ತಿದ್ದರು. ಪ್ರತಿಸಲವೂ ಪ್ರತಿಯೊಂದು ಬಂದ ಪತ್ರವನ್ನು ಸುಬ್ಬುಕೃಷ್ಣಯ್ಯನಿಗೆ ತೋರಿಸಿ, ಓದಿಸಿ ಕೇಳಿ ‘ಸರಿಯಾಗಿದೆ’ ಎಂದು ಆತನ ಬಾಯಿಂದ ಕೇಳದ ಹೊರತು ಅವರಿಗೆ ಸಮಾಧಾನವಿರುತ್ತಿರಲಿಲ್ಲ.

“ನಾಣೀ, ಏನೇ ....”

—ಎಂದು ಮೀನಾಕ್ಷಮ್ಮನ ಮಗನನ್ನು, ಓಣಿಯಲ್ಲಿ ನಿಂತುಕೊಂಡು ರಂಗಮ್ಮ ಕರೆದರು.”

“ಊಟ ಮಾಡ್ತಾ ಇದಾನೆ ರಂಗಮ್ನೋರೆ”

—ಎಂದು ವಠಾರಕ್ಕೆಲ್ಲ ಕೇಳಿಸುವ ಹಾಗೆ ಮೀನಾಕ್ಷಮ್ಮ ಉತ್ತರ ಕೊಟ್ಟಳು.

“ಇಲ್ಲಿ ಬಾಮ್ಮಾ ಸ್ವಲ್ಪ”

ಮೀನಾಕ್ಷಮ್ಮನನ್ನೇ ರಂಗಮ್ಮ ಕರೆದರು. ಆಕೆ ಹತ್ತಿರ ಬರುತ್ತಲೆ ಅವರೆಂದರು.

“ನಿಮ್ಮ ಯಜಮಾನರು ಮನೆಗೆ ಬಂದಿಲ್ಲ, ಅಕ್ಕ ?”

“ಇನ್ನೂ ಎಂಟೂವರೇನೇ ಇಲ್ಲ.”

"ಹೌದು, ಹೌದು."

ಒಂಭತ್ತು ಘಂಟೆಗೆ ಶೆಟ್ಟರ ಅಂಗಡಿ ಬಾಗಿಲು ಹಾಕುತಿದ್ದರು. ಅನಂತರ ಹೊರಟ ಸುಬ್ಬುಕೃಷ್ಣಯ್ಯ ಮನೆ ಸೇರುತಿದ್ದುದು ಒಂಭತ್ತೂವರೆಯ ಸುಮಾರಿಗೆ. ಗಂಡ ಹೆಂಡಿರ ಊಟವೇ, ದೀಪ ಆರುವುದಕ್ಕೆ ಮುಂಚೆ ಆ ಮನೆಯಲ್ಲಿ ನಡೆಯುತಿದ್ದ ಕೊನೆಯ ಕೆಲಸ. ಊಟವಾದ ತಕ್ಷಣ ಅವರು ಮಲಗಿ ಬಿಡುತಿದ್ದರು....

ಏನು ವಿಶೇಷ—ಎಂದು ಕೇಳಬಹುದಾಗಿತ್ತು ಮೀನಾಕ್ಷಮ್ಮ. ಆದರೆ ವಿಶೇಷವೇನೆಂಬುದು ಗೊತ್ತೇ ಇದ್ದುದರಿಂದ ಆಕೆ ಕೇಳಲಿಲ್ಲ. ತನ್ನ ಯಜಮಾನರ ವಿಷಯವಾಗಿ ರಂಗಮ್ಮ ತೋರುತ್ತಿದ್ದ ವಿಶ್ವಾಸದಿಂದ ಮೀನಾಕ್ಷಮ್ಮನಿಗೆ ಸ್ವಾಭಾವಿಕವಾಗಿಯೇ ಹೆಮ್ಮೆ ಎನಿಸಿತ್ತು.

ಒಳಗಿನಿಂದ ನಾಣಿಯ ಸ್ವರ ಕೇಳಿಸಿತು:

"ಅಮ್ಮಾ ಬಾರೇ...."

"ಹೋಗಮ್ಮ, ನಿನ್ನ ಕುಮಾರ ಕಂಠೀರವ ಕೂಗ್ತಿದ್ದಾನೆ. ನಿಮ್ಮ ಯಜಮಾನರು ಬಂದ್ಕೂಡ್ಲೆ ಸ್ವಲ್ಪ ಕಳಿಸ್ಕೊಡಮ್ಮ."

"ಹೂಂ ಕಣ್ರೀ"

—ಎಂದು ಮೀನಾಕ್ಷಮ್ಮ ಹೊರಟು ಹೋದಳು.

ರಂಗಮ್ಮ ಮಾರನೆ ದಿನ ಬೆಳಿಗ್ಗೆ ಮಾಡಬೇಕಾದ ಕೆಲಸದ ವಿಷಯವನ್ನು ಯೋಚಿಸಿದರು. ಅರ್ಧ ಸೇರಿನಷ್ಟು ಸುಣ್ಣ ಯಾವುದೋ ಕಾಲದ್ದು ಸಿಕ್ಕಿತ್ತು. ಅದನ್ನೇ ಒಂದಿಷ್ಟು ಕಲಕಿ ನೀರು ಮಾಡಿದ ರಾಯಿ ತಂದುಕೊಂಡರು. ಹಿಂದೆ ಮಗ ಮನೆಯಲ್ಲೇ ಇದ್ದಾಗ, ಮನೆಗಳು ತೆರವಾದಾಗಲೆಲ್ಲ ಎಷ್ಟೋ ಸಾರೆ ಆತನೆ ಗೋಡೆಗೆ ಸುಣ್ಣ ಸಾರಿಸುತಿದ್ದ. ಕೆಲಸವನ್ನೀಗ ರಂಗಮ್ಮ ಮಾಡುವಂತಿರಲಿಲ್ಲ. ಬೀದಿಯ ಆಚೆಗಿನ ಎದುರು ಮನೆಗೆ ಮುಸುರೆ ತಿಕ್ಕಲು ಒಬ್ಬಾಕೆ ಬರುತಿದ್ದಳು. ಆಕೆಗೆ ಹೇಳಿ ಕೆಲಸ ಒಪ್ಪಿಸಬೇಕು; ಒಂದು ನಾಲ್ಕಾಣೆ ಕೂಲಿ ಕೊಟ್ಟರಾಯಿತು; ಎಂದು ಅವರು ನಿರ್ಧರಿಸಿದರು.

ಹೇಗೆ ಹೊತ್ತು ಕಳೆಯಬೇಕೆಂದು ತೋಚದೆ ತಮ್ಮ ಬಾಗಿಲೆಳೆದುಕೊಂಡು ರಂಗಮ್ಮ ಹೊರ ಅಂಗಳಕ್ಕೆ ಬಂದರು. ಮಹಡಿಯ

ಮೇಲಿನ ಮೊದಲ ಕೊಠಡಿಯಲ್ಲಿ ಓದುವ ಹುಡುಗರು ಅದೇನೋ ಮಾತನಾಡುತ್ತಾ ನಗುತ್ತಾ ಗದ್ದಲವೆಬ್ಬಿಸುತಿದ್ದರು.

ಪ್ರಯಾಸಪಟ್ಟು ಮಹಡಿಯ ಮೇಲೇರಿದರು ರಂಗಮ್ಮ. ಸದ್ದು ಮಾಡಬಾರದೆಂದು ಅವರೆಷ್ಟು ಪ್ರಯತ್ನಪಟ್ಟರೂ ಉಸಿರಿಗಾಗಿ ಏದಾಟ, ಗಂಟಲಿನಿಂದ ಹೊರಡುತಿದ್ದ ನರಳಿಕೆಯ ಸ್ವರ, ಮಹಡಿ ಏರಿದ ಮೇಲೆ ನಡೆಗೋಲಿನ ಟಿಕ್ ಟಿಕ್, ಮುಂಚಿತವಾಗಿಯೇ ಅವರ ಆಗಮನದ ಸಂದೇಶವನ್ನು ಹುಡುಗರಿಗೆ ಮುಟ್ಟಿಸಿದುವು. ಉಪಾಧ್ಯಾಯರು ತರಗತಿಗೆ ಬಂದೊಡನೆ ಒಮ್ಮೆಲೆ ತಣ್ಣಗಾಗುವಂತೆ ಸದ್ದೆಲ್ಲ ಅಡಗಿ ಹೋಯಿತು.

ಸುಧಾರಿಸಿಕೊಂಡು ಹೊರಗಿನಿಂದಲೇ ರಂಗಮ್ಮ ಹೇಳಿದರು :

"ಪರಮೇಶ್ವರಪ್ಪ, ಅದೇನೋ ಗಲಾಟೆ? ಮನಸ್ನಲ್ಲೇ ಓದ್ಕೋ ಬಾರ್ದೇನೋ........"

ಒಳಗಿನಿಂದ ಉತ್ತರವೇ ಬರಲಿಲ್ಲ.

ಅದರ ಪಕ್ಕದ ಕೊಠಡಿಗೆ ಬೀಗ ಹಾಕಿತ್ತು.

ಮೂರನೆಯ ಕೊಠಡಿ ಮನೆಯ ಬಾಗಿಲಲ್ಲೇ ರಾಧೆಯ ತಾಯಿ ನಿಂತಿದ್ದಳು.

"ಊಟ ಆಯ್ತೇ?"

—ಎಂದು ರಂಗಮ್ಮ ಮುಂದೆ ಹೋಗುತ್ತಾ ಕೇಳಿದರು.

"ಹುಡುಗರು ಕೂತಿದಾರೆ."

ಉಣ್ಣಲು ಕುಳಿತಿದ್ದ ಜಯರಾಮು ತುತ್ತು ಅನ್ನವನ್ನು ಬಾಯಲ್ಲಿರಿಸಿಕೊಂಡೇ ಕೇಳಿದ :

"ಕೊನೇ ಮನೆಗೆ ಯಾರೋ ಬಂದ್ರು, ಅಲ್ವೆ ರಂಗಮ್ನೋರೆ?"

"ಹೂನಪ್ಪಾ ನಾಳೆ ಬರ್ತಾರೆ."

ಜಯರಾಮುವಿನ ತಾಯಿ ಕ್ಷೀಣ ಸ್ವರದಲ್ಲಿ ಹೇಳಿದಳು :

"ಕೆಳಗೆ ಮನೆ ಖಾಲಿಯಾದಾಗ ಕೊಡಿಸ್ತೀನಿಂತ ಹಿಂದೆ ಹೇಳಿದ್ರಿ."

"ಆದರೆ ನೀವು ಕೇಳ್ಲೇ ಇಲ್ಲ."

"ಅವರು ಇರ್ಲಿಲ್ಲಾಂತ—"

"ನಾನೂ ಅದಕ್ಕೇ ಸುಮ್ಮನಾದೆ."

ಆ ಪ್ರಸ್ತಾಪದಿಂದ ರಂಗಮ್ಮನ ಮನಸ್ಸಿನಲ್ಲಿ ಸ್ವಲ್ಪ ಕಸಿವಿಸಿಯಾಯಿತು. ಅವರು ಹಾಗೆ ಹಿಂದೆ ಹೇಳಿದ್ದುದು ನಿಜ. ಆದರೆ ಈ ಮನೆಯವರು ಈಗ ಕೊಡುತಿದ್ದುದು ಹದಿನಾರೇ ರೂಪಾಯಿ. ಕೆಳಗೆ ಬಂದರೆ ಜಾಸ್ತಿಕೊಡಬೇಕು. ಅಲ್ಲದೆ, ಇವರು ಕೆಳಕ್ಕೆ ಬಂದ ಮೇಲೆ ಮಹಡಿಯ ಮೇಲಿನ ಕೊಠಡಿಮನೆಗೆ ಸುಲಭವಾಗಿ ಒಕ್ಕಲು ಸಿಗುವ ಸಂಭವವೂ ಇರಲಿಲ್ಲ. ಇದೆಲ್ಲಾ ಮನಸ್ಸಿನ ಆಳದಲ್ಲಿ ಇದ್ದುದರಿಂದಲೇ ರಂಗಮ್ಮ ಆ ಯೋಚನೆಯನ್ನೇ ಮಾಡಿರಲಿಲ್ಲ.

ಬಾಗಿಲಲ್ಲಿ ನಿಂತಿದ್ದ ಆ ತಾಯಿ ಸುಮ್ಮನಿದ್ದುದನ್ನು ಕಂಡು, ಆ ಸಂದರ್ಭದಲ್ಲೇನಾದರೂ ಒಳ್ಳೆಯ ಮಾತನ್ನಾಡಲು ರಂಗಮ್ಮ ಬಯಸಿದರು.

"ಅದಕ್ಕೇನಂತೆ ಈಗ? ಇನ್ನೊಂದ್ಸಲ ಖಾಲಿಯಾದಾಗ ನಿಮಗೇ ಕೊಡ್ತೀನಿ."

ಒಳಗೆ ಮೂಲೆಯ ಬಚ್ಚಲಲ್ಲಿ ಕೈ ತೊಳೆಯುತಿದ್ದ ಜಯರಾಮು ಹೇಳಿದ :

"ಇನ್ನೊಂದ್ಸಲ ಖಾಲಿಯಾದಾಗ? ಬೇರೆ ಯಾರನ್ನ ಕಳಿಸ್ಬೇಕೂಂತ ಮಾಡಿದೀರಿ ರಂಗಮ್ನೋರೆ!"

ಕೆಟ್ಟ ಹುಡುಗ 'ಕಳಿಸು'ವ ಮಾತನ್ನಾಡಿ ನಾರಾಯಣಿಯ ನೆನಪು ಹುಟ್ಟಿಸಿದ್ದ.

"ಅದೆಂಥ ಮಾತೋ...."

—ಎಂದಳು ತಾಯಿ, ಮಗನನ್ನುದ್ದೇಶಿಸಿ, ಬೇಸರದ ಧ್ವನಿಯಲ್ಲಿ.

"ನೋಡು, ನೋಡು—ಹ್ಯಾಗೆ ಆಡ್ತಾನೇಂತ. ಬರ್ತಾ ಬರ್ತಾ ಯಾಕೋ ಅತಿ ಆಗ್ತೋಯ್ತಮ್ಮ ನಿಮ್ಮಗಂದು"

—ಎಂದು ರಂಗಮ್ಮ ತುಂಬಾ ನೊಂದುಕೊಂಡವರ ಧ್ವನಿಯಲ್ಲಿ ಅಂದರು. ಮತ್ತೆ ಅಲ್ಲಿರಲು ಮನಸ್ಸಾಗದೆ ಹಿಂತಿರುಗಿ ಹೊರಟರು.

"ಬರ್ತೀನಮ್ಮ."

"ಹೂಂ ರಂಗಮ್ನೋರೆ."

"ಕಾಗದ ಬಂದಿತ್ತೇನು ನಿಮ್ಮ ಯಜಮಾನರ್‍ದು ? ಯಾವೂರಲ್ಲಿ ದಾರಿ ಈಗ ?"

"ಹೋದವಾರ ದಾವಣಗೆರೆಯಿಂದ ಬಂದಿತ್ತು."

"ಯಾವತ್ತು ಬರ್ತಾರಂತೆ ?"

"ಈ ತಿಂಗಳ ಕೊನೇಲಿ ಬರ್ತೀನೀಂತ ಬರೆದಿದ್ರು."

ಚಂದ್ರಶೇಖರಯ್ಯನ ಕೊಠಡಿ ದಾಟುತ್ತಾ ರಂಗಮ್ಮ ಕೇಳಿದರು:

"ಏನು ಈತ ಊರಲ್ಲೇ ಇಲ್ವೋ ಹ್ಯಾಗೆ ?"

"ನಿನ್ನೆಯಿಂದ ಬಂದಿಲ್ಲ. ಇಲ್ಲಾಂತ ತೋರುತ್ತೆ."

"ಇನ್ನೊಬ್ಬ ಮನುಷ್ಯ. ಅದ್ಯಾಕೆ ಹೀಗಿದ್ದಾನೋ........"

ಮೆಟ್ಟಿಲು ಇಳಿಯತೊಡಗುತ್ತಾ ರಂಗಮ್ಮ ಹೇಳಿದರು :

"ಹೂಂ. ಬರ್ತೀನಮ್ಮ. ಊಟ ಮುಗಿಸಿ ದೀಪ ಆರಿಸಿ ಮಲಕ್ಕೊಂಬಿಡಿ."

ಆ ಮಾತಿಗೆ ಉತ್ತರ ಬರಲಿಲ್ಲ. ಧಡಾರನೆ ಬಾಗಿಲು ಹಾಕಿದ ಸದ್ದು ಮಾತ್ರ ಕೇಳಿಸಿತು.

ಬಲು ನಿಧಾನವಾಗಿ ರಂಗಮ್ಮ ಇಳಿದರು. ಇಪ್ಪತ್ತೈದು ವರ್ಷಗಳ ಹಿಂದೆ ಅವರ ಗಂಡ ಕೃಷ್ಣಪ್ಪನವರು ಆ ಮಹಡಿ ಕಟ್ಟಿಸುತ್ತಿದ್ದ ಕಾಲ. ಆಗ ಎಷ್ಟೊಂದು ಸುಲಭವಾಗಿ ಅವರು ಹತ್ತಿ ಇಳಿಯುತ್ತಿದ್ದರು! ಆಗಲೆ ಅವರಿಗೆ ನಾಲ್ವತ್ತು ವರ್ಷ ವಯಸ್ಸಾಗಿತ್ತು. ದೊಡ್ಡವರಾಗಿದ್ದ ಮೂವರು ಮಕ್ಕಳ ತಾಯಿ. ಆದರೂ ಅವರು ದೃಢಕಾಯರಾಗಿದ್ದರು. ದಣಿವು ಎಂಬುದನ್ನೇ ಕಂಡರಿಯದ ದೇಹ ಅವರದು.

ಈಗ, ಒಮ್ಮೆ ಮಹಡಿ ಸಂದರ್ಶನ ಮಾಡಿಬರುವುದೆಂದರೆ ತಿರುಪತಿ ಬೆಟ್ಟವನ್ನು ಏರಿ ಇಳಿದಹಾಗೆ ಎಂದು ಅವರಿಗೆ ಭಾಸವಾಗುತಿತ್ತು.

ಅಂಗಳ ತಲಪಿದ ಮೇಲೆ ರಂಗಮ್ಮ ಊರುಗೋಲನ್ನು ಆಧರಿಸಿ ದೇಹವನ್ನು ನೇರಗೊಳಿಸಿ ಕ್ಷಣಕಾಲ ನಿಂತು, ತಂಪಾದ ಗಾಳಿಯನ್ನು ಒಳಕ್ಕೆಳೆದುಕೊಂಡರು ; ಬೀದಿಯ ಮೇಲಕ್ಕೂ ಕೆಳಕ್ಕೂ ಒಮ್ಮೆ ನೋಡಿದರು. ಮಹಡಿಯನ್ನೇರುವುದಕ್ಕೆ ಮುಂಚೆ ಅವರ ಮನಸ್ಸು

ಹಾಯಾಗಿತ್ತು. ಆದರೆ ಮೇಲೆ ನಡೆದ ಸಂಭಾಷಣೆ, ಏರಿ ಇಳಿದ ಆಯಾಸ, ಎರಡೂ ಸೇರಿ ಅವರ ನೆಮ್ಮದಿಗೆ ಭಂಗ ತಂದಿದ್ದುವು.

ಎರಡು ನಿಮಿಷ ಆ ಕತ್ತಲಲ್ಲಿ ಒಬ್ಬರೇ ತಮ್ಮ ವಠಾರವನ್ನು ನೋಡುತ್ತ ತಂಪಾದ ಗಾಳಿಯನ್ನು ಸೇವಿಸಿದ ಮೇಲೆ ಮನಸ್ಸು ಪ್ರಸನ್ನವಾಯಿತು.

ಏನೇನೋ ಬಯಕೆಗಳು ಅವರ ಹೃದಯದಿಂದ ಚಿಮ್ಮಿಬಂದುವು. ತಮ್ಮ ಮಗನನ್ನು ಆಕ್ಷಣವೆ ನೋಡುವ ಹಂಬಲ ಕಿರಿದಾಗಿ ಮೂಡಿ, ಒಮ್ಮೆಲೆ ಬಲವಾಗಿ ಬೆಳೆಯಿತು. ನಿತ್ಯರೋಗಿಯಾದ ಆ ಸೊಸೆ.... ಎಳೆಯ ಮಕ್ಕಳಿಬ್ಬರು....ಗಂಡಂದಿರ ಜತೆಯಲ್ಲಿದ್ದ ಇಬ್ಬರು ಹೆಣ್ಣು ಮಕ್ಕಳ ನೆನಪಾಯಿತು....ಅವರ ಸಂತಾನ. ಲಕ್ಷ್ಮಿಯ ಪುಟ್ಟ ಮಗ ಎಷ್ಟು ಮುದ್ದಾಗಿದ್ದ! ಅಜ್ಜಿಯದೇ ರೂಪು ಎಂದಿದ್ದರು ಎಲ್ಲರೂ. ಅದೇನು ರೂಪವೋ ತನ್ನದು.... ಯುವತಿಯಾಗಿದ್ದಾಗ ಸಾಕಷ್ಟು ರೂಪವತಿಯೆಂದೇ ಹೆಸರುವಾಸಿಯಾಗಿದ್ದಳಲ್ಲವೆ? ಕಳೆದ ಸಾರೆ ಲಕ್ಷ್ಮಿ ಬಂದಾಗ ಆ ಪುಟ್ಟಕೂಸು ಹೇಗೆ ತನಗೇ ಅಂಟಿಕೊಂಡಿತ್ತು! ಒಂದು ಕ್ಷಣವೂ ಬಿಟ್ಟಿರುತ್ತಿರಲಿಲ್ಲ ತನ್ನನ್ನು....ಸಣ್ಣ ಮಗುವಿಗೆ ಕಷ್ಟವಾಗಿದೆ ಎಂದು ಕಳೆದ ತಿಂಗಳು ಲಕ್ಷ್ಮಿ ಕಾಗದ ಬರೆದಿದ್ದಳು. ಈಗ ಹೇಗಿದೆಯೊ?.... ದೊಡ್ಡಮಗಳನ್ನು ನವರಾತ್ರಿಯ ಹೊತ್ತಿಗಾದರೂ ಈಸಲ ಕರೆಸಬೇಕು. ಆಗ ರಜಾ ತೆಗೆದುಕೊಂಡು ಮಗನೂ ಬರಬಹುದು.

ರಂಗಮ್ಮ ವಠಾರದತ್ತ ನೋಡಿದರು. ವಠಾರದಲ್ಲೇ ಅತಿ ದೊಡ್ಡದಾಗಿದ್ದ ಮುಂಭಾಗದ ಎರಡು ಕಿಟಕಿಗಳಿಂದಲೂ ವಿದ್ಯುತ್ ಬೆಳಕು ಮಂದವಾಗಿ ಹೊರಬರುತಿತ್ತು. ಉಳಿದ ಮನೆಗಳಿಗೆಲ್ಲ ಇದ್ದುದು ಪುಟ್ಟ ಗೂಡು ಕಿಟಕಿ.

ಉಪಾಧ್ಯಾಯರ ಕಿಟಕಿಯತ್ತ ರಂಗಮ್ಮ ನಡೆದರು.

ಒಳಗೆ ಲಕ್ಷ್ಮೀನಾರಾಯಣಯ್ಯನ ಹೆಂಡತಿ, ಮಕ್ಕಳನ್ನು ಮಲಗಿಸಿ ಹಸುಗೂಸಿಗೆ ಮೊಲೆ ಹಾಲನ್ನು ಕೊಡುತ್ತಾ ಒರಗಿದ್ದಳು. ಕಿಟಕಿಯ ಬಳಿ ಯಾರೋ ಸರಿದಂತಾಗಲು, ಆಕೆ ಅವಸರವಾಗಿ

ಎದೆಯನ್ನು ಸೆರಗಿನಿಂದ ಹೊದೆದು ಕೊಂಡಳು.

ಹೊರಗಿನಿಂದ ರಂಗಮ್ಮನ ಸ್ವರ ಕೇಳಿಸಿತು.

"ನಾನು ಕಣೇ. ಯಾಕೆ, ಮೇಷ್ಟ್ರಿನ್ನೂ ಬಂದಿಲ್ವಾ?"

"ಬಂದಿದ್ರು ರಂಗಮ್ನೋರೆ. ಅದೇನೋ ಸಭೆ ಇದೇಂತ ವಾಪ್ಸ ಹೋದ್ರು."

"ಎಲ್ಲಿ ನಿನ್ನ ನಾದಿನಿ?"

"ಅಡುಗೆ ಮನೇಲಿದೀನಿ ರಂಗಮ್ನೋರೇ...."

—ಎಂದು ಸುಮಂಗಳಾ ಒಳಗಿನಿಂದಲೇ ಅಂದಳು.

"ಸುಮ್ನೆ ಕೂಗ್ದೆ. ಆಗಲಿ, ಆಗಲಿ, ಕೆಲಸ ಆಗಲಿ"

—ಎಂದು ರಂಗಮ್ಮ ಇನ್ನೊಂದು ಕಿಟಕಿಯತ್ತ ತೆರಳಿದರು.

ಹಾಗೆ ರಂಗಮ್ಮ ರಾತ್ರೆ ಹೊತ್ತು ಇಣಿಕಿ ಹೋಗುವುದೇನೂ ಯಾರಿಗೂ ಹೊಸತಾಗಿರಲಿಲ್ಲ. ಎದುರು ಮನೆಯ ಕಿಟಕಿಯ ಬಳಿ ಯಿಂದಲೂ ರಂಗಮ್ಮ ಮಾತನಾಡುತಿದ್ದುದು ಉಪಾಧ್ಯಾಯರ ಹೆಂಡತಿಗೆ ಕೇಳಿಸುತಿತ್ತು.

"ಇನ್ಸ್ಪೆಕ್ಟ್ರು ಬಂದಿಲ್ವಾ ಇನ್ನೂ?"

"ಇಲ್ಲ ಕಣ್ರೀ."

ಆ ಉತ್ತರ, ಪೋಲೀಸನ ಹೆಂಡತಿ ಸರೋಜಮ್ಮನ ಸ್ವರ.

"ಹುಡುಗ್ರಿಗೆಲ್ಲಾ ಊಟ ಆಯ್ತೇನು?"

"ಮಲಕ್ಕೊಂಡ್ಬಿಟ್ಟವೆ ಆಗ್ಲೇ."

"ಏನು ಮಾಡ್ದೆ ಅಡುಗೆ?"

"ಏನೂ ಇಲ್ಲ ರಂಗಮ್ನೋರೆ....ಮಧ್ಯಾಹ್ನದ್ದೇ ಇತ್ತು ಸ್ವಲ್ಪ...."

"ಆಗಲೀಮ್ಮ. ಬರ್‍ತೀನಿ."

ರಂಗಮ್ಮ ಬೇರೆ ಬಾಗಿಲುಗಳ ಬಳಿ ಬಂದರು. ಬಾಗಿಲು ಮುಚ್ಚಿದ್ದ ಕಡೆ ಕಿಟಕಿಗಳ ಮೂಲಕ ಮಾತನಾಡಿದರು.

"ಮಲಕೊಂಡ್ಬಿಟ್ಯಾ ರಾಜಮ್ಮ?"

"ಹುಡುಗರು ಇನ್ನೂ ಓದ್ತಾನೇ ಇದಾರೋ? ಓದೀಪ್ಪಾ, ಚೆನ್ನಾಗಿ ಓದಿ."

"ಏನು ಮೀನಾಕ್ಷೀ ........ಎಲ್ಲಿ, ನಿಮ್ಮ ಗಂಡ ಬರೋದೂ ಹೋಗೋದೂ ಗೊತ್ತೇ ಆಗಲ್ವೇ...."

"ಏನಮ್ಮಾ, ಯಜಮಾನ್ರಿಂದ ಕಾಗ್ದ ಇದೆಯೋ ?"

"ಹಿಟ್ಟು ರುಬ್ಬಿದ್ದಾಯ್ತೆ ಕಮಲಮ್ಮ ?"

"ಇನ್ನೂ ಸವಾರಿ ಬಂದಿಲ್ವೆ ಪದ್ಮಾವತೀ ?"

"ಮಲಕೊಂಡ್ಬಿಟ್ಲೇನು ಅಹಲ್ಯಾ ? ಎಲ್ಲಿ ಮಗ ? ಅಂಗಡಿ ಬೀದಿಗೆ ಹೋದ್ನೆ?"

ರಂಗಮ್ಮ ಅಲ್ಲಿಂದ ಮುಂದಕ್ಕೆ ಹೋಗಲಿಲ್ಲ. ಒಂದು ಖಾಲಿ ಮನೆ, ಆ ರಾತ್ರೆಯ ಮಟ್ಟಿಗೆ ನಾರಾಯಣಿ ಇದ್ದುದು. ಇನ್ನೊಂದು ಮೀನಾಕ್ಷಮ್ಮನ ಮನೆ. ಸುಬ್ಬುಕೃಷ್ಣಯ್ಯ ಇನ್ನೂ ಬಂದಿರಲಿಲ್ಲ.

ತಮ್ಮ ಮನೆಗೇ ರಂಗಮ್ಮ ವಾಪಸು ಬಂದು ಕೈಕಾಲು ತೊಳೆದು, ಗೋಡೆಗೊರಗಿ ಕುಳಿತು, ದೇವರ ಹೆಸರನ್ನು ಜಪಿಸತೊಡಗಿದರು.... ನಾಲಿಗೆ ಮೌನವಾಗಿ ದೇವರ ಹೆಸರನ್ನು ತೊದಲುತಿದ್ದರೂ ಯೋಚನೆ ವಠಾರದ ಬೇರೆಬೇರೆ ಸಂಸಾರಗಳ ಬಳಿ ಸುಳಿಯುತ್ತಲೇ ಇತ್ತು.... ಅಷ್ಟೊಂದು ಜನರೆಡೆಯಲ್ಲಿ ತಾವು ಏಕಾಕಿನಿ ಎಂಬ ಭಾವನೆ ಅವರಿಗೆ ಬರಲೇ ಇಲ್ಲ.

ಅವರು ಬಾಗಿಲನ್ನು ಅಡ್ಡ ಮಾಡಿದ್ದರು. ಆದರೂ ಯಾರೋ ಒಳಕ್ಕೆ ಹಾದು ಓಣಿಗಿಳಿದು ನಡೆದ ಹಾಗೆ ಭಾಸವಾಯಿತು. ಆ ಚಪ್ಪಲಿಯ ಕ್ರಮ ಬದ್ಧ ನಡಿಗೆಯ ಸಪ್ಪಳ. ಸುಬ್ಬುಕೃಷ್ಣಯ್ಯನೇ ಇರಬೇಕೆಂದು ರಂಗಮ್ಮ ಊಹಿಸಿದರು.

ಊಹೆ ಸರಿಯಾಗಿತ್ತು. ಐದು ನಿಮಿಷಗಳಲ್ಲೇ, ಅಡ್ಡ ಪಂಚೆಯುಟ್ಟು ಎದೆಯಮೇಲೊಂದು ಅಂಗವಸ್ತ್ರ ಹಾಕಿಕೊಂಡು ಸುಬ್ಬುಕೃಷ್ಣಯ್ಯ ಒಳಕ್ಕೆ ಬಂದ.

"ಕರೆದಿರಂತೆ."

"ಹೂನಪ್ಪಾ, ಬಾ...."

"ಯಾರೋ ಬಿಡಾರ ಬರ್ತಾರಂತೆ ನಾಳೆ."

"ಹೌದೌದು. ಅದಕ್ಕೇ ನಿನ್ನ ಕರೆದೆ."

ಸುಬ್ಬುಕೃಷ್ಣಯ್ಯ ಕುಳಿತು ಸಿದ್ಧನಾದ. ರಂಗಮ್ಮ ಹಾಸಿಗೆ ಸುರುಳಿಯ ಕೆಳಗೆ ಮಡಚಿ ಇರಿಸಿದ್ದ ಕರಾರು ಪತ್ರವನ್ನು ಹೊರ ತೆಗೆದು ಆತನ ಕೈಗಿತ್ತರು. ವಿದ್ಯುದ್ದೀಪದ ಬೆಳಕು ಸಾಲದೆ ಹೋದರೂ ಸ್ವಲ್ಪ ಕಷ್ಟಪಟ್ಟು ಆತ ಓದಿ ಹೇಳಿದ. ಕಿವಿಗೊಟ್ಟು ಕೇಳಿದ ಮೇಲೆ ರಂಗಮ್ಮ ಪ್ರಶ್ನಿಸಿದರು :

"ಸರಿಯಾಗಿದೆ ತಾನೆ ?"

"ಓಹೋ ಸರಿಯಾಗಿದೆ."

"ಚೆನ್ನಾಗಿಯೇ ಬರೆದಿದಾನೆ, ಅಲ್ವಾ ?"

"ಚೆನ್ನಾಗಿಯೇ ಇದೆ."

"ಒಳ್ಳೆಯವನಾಂತ್ಲೇ ತೋರುತ್ತಪ್ಪಾ."

ಮೊದಲ ನೋಟಕ್ಕೇ ಹಾಗೆ ತೀರ್ಮಾನಕ್ಕೆ ಬಂದು ಅಂತಹ ಪ್ರಮಾಣ ಪತ್ರವನ್ನು ರಂಗಮ್ಮ ಕೊಟ್ಟುದು ಅದೇನೂ ಹೊಸತಾಗಿರಲಿಲ್ಲ.

ಶಂಕರನಾರಾಯಣಯ್ಯ ತಮಾಷೆಯಾಗಿ ಆಡಿದ ಕೆಲ ಮಾತುಗಳು ನೆನಪಿಗೆ ಬಂದು ರಂಗಮ್ಮ ನಸುನಕ್ಕರು.

"ಮಾತು ಎಷ್ಟು ಚೆನ್ನಾಗಿ ಆಡ್ತಾನೆ ಅಂತೀಯಾ ?"

ಸುಬ್ಬುಕೃಷ್ಣಯ್ಯನಿಗೆ ಆಗಲೇ ಬೇಸರ ಬಂದಿತ್ತು. ಚುರುಚುರೆನ್ನುತಿತ್ತು ಹಸಿದ ಹೊಟ್ಟೆ. ದಣಿದಿದ್ದ ದೇಹ ವಿಶ್ರಾಂತಿಯನ್ನು ಯಾಚಿಸುತಿತ್ತು.

"ನಾಳೆ ಬರ್ತಾರೆ ಅಲ್ವೆ?"

–ಎಂದ ಸುಬ್ಬುಕೃಷ್ಣಯ್ಯ ಮಾತು ಮುಗಿಸಬಯಸುತ್ತಾ.

"ಹೂಂ. ನಾಳೇನೆ."

ಸುಬ್ಬುಕೃಷ್ಣಯ್ಯನ ಕಣ್ಣುಗಳು ಜಡವಾದುವು. ಆತ ಬಾಯಿ ಆಕಳಿಸಿ ಚಿಟಿಕೆ ಹೊಡೆದ.

"ಆಗಲಿ, ಹೋಗಪ್ಪಾ .... ನಿನಗೂ ಆಯಾಸವಾಗಿದೆ. ಇಷ್ಟೇ, ಇಷ್ಟಕ್ಕೇ ಕರೆದೆ."

ಅಷ್ಟುಹೇಳಿ ರಂಗಮ್ಮ, ಅಪೂರ್ಣವಾಗಿದ್ದ ಕೆಲಸವೂ ಮುಗಿ

ದಂತಾಯಿತೆಂದು ಸಂತೃಪ್ತಿಯ ನಿಟ್ಟುಸಿರುಬಿಟ್ಟರು.

ಸುಬ್ಬುಕೃಷ್ಣಯ್ಯ ಆ ಬಾಗಿಲಿನಿಂದ ಹೊರಬಿದ್ದು ತನ್ನ ಬಾಗಿಲಿಗೆ ಹೊರಟ.

ರಂಗಮ್ಮನ ಮಾತುಗಳು ಆತನನ್ನು ಹಿಂಬಾಲಿಸಿ ಬಂದುವು.

"ಹತ್ತು ಘಂಟೆಯೂ ಆಗ್ಹೋಯ್ತೂಂತ ಕಾಣುತ್ತೆ. ಊಟ ಆದ್ಮೇಲೆ ಹೇಳಪ್ಪಾ. ದೀಪ ಆರಿಸ್ತೀನಿ."

ಸುಬ್ಬುಕೃಷ್ಣಯ್ಯ ಉತ್ತರವೀಯಲಿಲ್ಲ. ನೇರವಾಗಿ ತನ್ನ ಮನೆಯೊಳಕ್ಕೆ ಬಂದು ತಟ್ಟೆಯ ಮುಂದೆ ಕುಳಿತ.

ತನ್ನ ಬಾಗಿಲಿಗೆ ಅಗಣಿ ಹಾಕಲೆಂದು ರಂಗಮ್ಮ ಎದ್ದರು.

ಅಷ್ಟರಲ್ಲೆ ಹಿತ್ತಿಲ ಬಾಗಿಲನಾಚೆಯ ಕೊಚ್ಚೆಹಾದಿಯಿಂದ ಆ ಸ್ವರ ಕೇಳಿಸಿತು.

"ಕವಳತ್ತಾಯಿಾ.... ಅಮ್ಮಾ...."

ನಾಭಿಯಲ್ಲೆ ನಡುಕ ಹುಟ್ಟಿಸುವಂತಹ ಕರ್ಕಶವಾದ ವಿಕಾರ ಧ್ವನಿ.

ರಂಗಮ್ಮನಿಗೆ, ಮಧ್ಯಾಹ್ನದ ಒಂದು ತುತ್ತು ಅನ್ನ ಮಿಕ್ಕಿದ್ದುದು ನೆನಪಾಯಿತು. ಅದನ್ನೆತ್ತಿಕೊಂಡು ಓಣಿಯುದ್ದಕ್ಕೂ ಹೋಗಿ ಹಿತ್ತಿಲ ಬಾಗಿಲು ತೆಗೆದು ಭಿಕ್ಷುಕಿಗೆ ಹಾಕಿದರು.

ಅವರು ಒಳಬಂದು ಕೈತೊಳೆದು, ಹಾಸಿಗೆ ಹಾಕುವ ಸ್ವಲ್ಪ ಹೊತ್ತಿನಲ್ಲೆ ಮೀನಾಕ್ಷಮ್ಮನ ಕೀರಲು ಸ್ವರ ಕೇಳಿಸಿತು:

"ದೀಪ ಆರಿಸಿ ರಂಗಮ್ನೋರೇ...."

ರಂಗಮ್ಮ ವಿದ್ಯುತ್ ಹಿಡಿಯನ್ನು ಮೇಲಕ್ಕೆ ತಳ್ಳಿದರು.

ಅದು ಟಿಕ್ ಎಂದು ಸದ್ದುಮಾಡಿತು. ದೀಪ ಆರಿಹೋಯಿತು.

೬

ಒಂಟಿ ಎತ್ತಿನ ಗಾಡಿಯಲ್ಲಿ ಶಂಕರನಾರಾಯಣಯ್ಯನ ಸಂಸಾರ ರಂಗಮ್ಮನ ವಠಾರಕ್ಕೆ ಸಾಗಿಬಂತು. ಹೊರಗೆ ಹುಡುಗರು ನಡೆಸಿದ್ದ ಗದ್ದಲದೊಡನೆ ಸ್ಪರ್ಧಿಸುತಿದ್ದವನಹಾಗೆ, ಗುಂಡಣ್ಣ ಗೊರಕೆ ಹೊಡೆಯುತ್ತಾ ನಿದ್ದೆಹೋಗಿದ್ದ. ರಾಜಮ್ಮ ಮಗನನ್ನು ಎಬ್ಬಿಸಿದರು :

"ಏಳೋ ಗುಂಡಾ, ರಂಗಮ್ಮ ಕೂಗ್ತಿದಾರೆ ನೋಡು."

ಮುಖಕ್ಕಿಷ್ಟು ನೀರು ಹನಿಸಿ ಹೊರಬಂದ ಗುಂಡಣ್ಣನಿಗೆ, ಕತ್ತಲೆಯ ನಡುಹಾದಿಯ ಆಚೆ ಅಂಗಳಕ್ಕಿಳಿಯುತಿದ್ದ ಸಾಮಾನು ಗಳು ಗೋಚರಿಸಿದುವು. ರಂಗಮ್ಮ ಕರೆದುದರ ಉದ್ದೇಶವೂ ಅರ್ಥ ವಾಯಿತು. ಅವರ ಬಳಿಗೆ ಹೋಗದೆ ಗುಂಡಣ್ಣ ನೇರವಾಗಿ ಅಂಗಳಕ್ಕೇ ನಡೆದ.

ರಂಗಮ್ಮನೂ ಅವನನ್ನು ಹಿಂಬಾಲಿಸಿಕೊಂಡು ಬಂದರು.

"ಗಾಡಿ ಬಂತು ಕಣೋ ಗುಂಡಣ್ಣ."

ಯಾವ ಸಂದರ್ಭದಲ್ಲೂ 'ಸಹಾಯ ಮಾಡು' ಎಂದು ಬಾಯಿ ಬಿಟ್ಟು ಗುಂಡಣ್ಣನಿಗೆ ಹೇಳಬೇಕಾದ್ದೇ ಇರಲಿಲ್ಲ.

ಮನೆಯ ಎದುರು ಭಾಗದ ಕಿಟಕಿಗಳಿಂದಲೂ ಮಹಡಿಯ ಮೇಲಿನಿಂದಲೂ ವಠಾರದ ಸದಸ್ಯರ–ಹೆಂಗಸರು ಮಕ್ಕಳ–ಮುಖಗಳು ಕಾಣಿಸಿದುವು. ಹಿಂಭಾಗದಲ್ಲೂ ಮನೆಯೊಡತಿಯರು ಬಾಗಿಲಿನಿಂದ ಹೊರಕ್ಕೆ ಕತ್ತು ಚಾಚಿ ಬೀದಿಯತ್ತ ನೋಡಿದರು. ಕೆಲ ಹುಡುಗರು ಹುಲ್ಲು ಜಗಿಯುತ್ತ ನಿಂತಿದ್ದ ಎತ್ತಿನ ಬಳಿಯಲ್ಲೂ ಕೆಳಕ್ಕೆ ಇಳಿಸಿದ ಸಾಮಾನುಗಳ ಸುತ್ತಲೂ ನಿಂತರು.

ಬೇರೆಯವರು ಮೊದಲು ಇದಿರ್ಗೊಂಡುದಾಯಿತೆಂದು ಸ್ಪಷ್ಟ

ವಾದ ಮೇಲೆ ರಂಗಮ್ಮ ತಲೆಯ ಮೇಲುಗಡೆ ಸೆರಗೆಳೆದು ಅಂಗಳಕ್ಕೆ ಇಳಿದರು.

"ಬಂದಿರಾ ? ಬನ್ನೀಪ್ಪಾ...."

ಉಟ್ಟಿದ್ದುದು ಕಲಾಬತ್ತಿನ ಸೀರೆ–ಹಳೆಯದು. ತೊಟ್ಟಿದ್ದುದು ಚಿತ್ತಾರದ ಅರಿವೆಯ ರವಕೆ–ಅಗಲವಾಗಿಯೇ ಇತ್ತು ಕತ್ತು. ನಡುವಿಗಿಂತ ನಾಲ್ಕೆಳೆ ಕೂದಲಷ್ಟು ಎಡಕ್ಕೆ ಬೈತಲೆ ತೆಗೆದು ಜಡೆಹಾಕಿ ಆಕೆ ಹೆರಳು ಇಳಿಬಿಟ್ಟಿದ್ದಳು. ಎಡ ಕಂಕುಳಲ್ಲಿ ಬಣ್ಣ ಬಣ್ಣದ ಬಟ್ಟೆಯ ಲಂಗ ತೊಡಿಸಿದ್ದ,ಪುಟ್ಟ ಹೆಣ್ಣು ಮಗು. ಮೇಲು ತುಟಿಯನ್ನು ಸ್ವಲ್ಪ ಕೊಂಕಿಸಿ, ತನಗೆ ಸ್ವಾಗತ ಬಯಸಿದವರನ್ನೆಲ್ಲ ನೋಡುತ್ತ ಪಿಳಿ ಪಿಳಿ ಕಣ್ಣು ಬಿಡುತ್ತಿತ್ತು.....ವಠಾರದ ಹೆಂಗಸರೆಲ್ಲ ತಮ್ಮ ಜಾತಿಯ ಆ ಇನ್ನೊಬ್ಬಳನ್ನು ನೋಡಿದರು.

ಆ ಸಾಮಾನುಗಳೋ ? ಬಟ್ಟೆ ಬರೆಯನ್ನೆಲ್ಲ ಸುತ್ತಿ ದೊಡ್ಡದಾಗಿ ಕಟ್ಟಿದ್ದ ಹಾಸಿಗೆ. ಒಂದೆರಡು ಕಡೆ ನಜ್ಜುಗುಜ್ಜಾಗಿದ್ದ ಹಳೆಯದೊಂದು ಟ್ರಂಕು. ಪಾತ್ರೆ ಸರಂಜಾಮುಗಳನ್ನು ತುಂಬಿ ಕೊಂಡಿದ್ದೊಂದು ಗೋಣಿಚೀಲ. ದೇವರ ಪಟ, ಗಾಜು-ಪಿಂಗಾಣಿ ಪಾತ್ರೆಗಳನ್ನು ಹೊತ್ತಿದ್ದ ತೊಟ್ಟಿಲು. ನಾಲ್ಕಾರು ಡಬ್ಬಗಳು ಕಾಲು ಕಿತ್ತು ಜೋಡಿಸುವ ಒಂದು ಮೇಜು, ಮಡಚುವ ಕುರ್ಚಿ. ಸೌದೆಯದೊಂದು ಸಣ್ಣ ಹೊರೆ. ಚಾಪೆಯಲ್ಲಿ ಸುತ್ತಿದ್ದ ಪುಸ್ತಕಗಳೆರಡು.

ರಂಗಮ್ಮನ ಮನಸ್ಸಿನಲ್ಲಿ ನೆನಪಿನ ಉಯ್ಯಾಲೆ ತೂಗುತ್ತಲೇ ಇತ್ತು. ಏಳು ವರ್ಷಗಳ ಹಿಂದೆ ಒಂದು ಜಟಕಾಗಾಡಿಯಲ್ಲಿ ಬಂದಿದ್ದ ಒಂದು ಸಂಸಾರವನ್ನು ಈ ಸಂಸಾರದೊಡನೆ ಹೋಲಿಸದೆ ಇರುವುದು ಸಾಧ್ಯವಿರಲಿಲ್ಲ. ಆ ದಂಪತಿಗಳು....ವಯಸ್ಸಿನಲ್ಲಿ ಇವರಿಗಿಂತ ಸ್ವಲ್ಪ ಕಿರಿಯರಾಗಿದ್ದರು. ಆ ಹೆಂಗಸಿಗೆ ಬೆಡಗು ಬಿನ್ನಾಣವೇನೂ ಇರಲಿಲ್ಲ. ಆಕೆ ಸಂಕೋಚದ ಮುದ್ದೆಯಾಗಿದ್ದಳು. ಕಂಕುಳಲ್ಲಿ ಒಂದು ವರ್ಷ ವಯಸ್ಸಿನ ಗಂಡು ಮಗುವಿತ್ತು. ಸಾಮಾನುಗಳೂ ಇಷ್ಟಿರಲಿಲ್ಲ. ಮುಖದ ಮೇಲಿನ್ನೂ ನಗುತನವೇ ಇದ್ದಂತೆ ತೋರುತಿದ್ದ ಆ ಗಂಡ ಪ್ರತಿಯೊಂದು ಸಣ್ಣ ಪುಟ್ಟ ವಿಷಯಕ್ಕೂ ಹೆಂಡತಿಯನ್ನೇ ವಿಚಾರಿಸು

ತಿದ್ದ. ನಾರಾಯಣಿ ಮತ್ತು ನಾರಾಯಣಿಯ ಗಂಡ........

ಪಠಾರದ ಬೇರೆ ಹೆಂಗಸರೂ ಅಷ್ಟೇ. ತಮ್ಮ ತಮ್ಮ ತಕ್ಕಡಿಯಲ್ಲಿ ಹೊಸ ಸಂಸಾರದ ಒಡತಿಯನ್ನೂ ಒಡೆಯನನ್ನೂ ತೂಗಿ ನೋಡಿದರು.

ಶಂಕರನಾರಾಯಣಯ್ಯನಿಗಿಂತಲೂ ಮುಂಚಿತವಾಗಿಯೇ ಆತನ ಹೆಂಡತಿ, ತನ್ನ ಗಂಡ ಬಾಡಿಗೆಗೆ ಹಿಡಿದಿದ್ದ ಮನೆಯ ಒಳಹೊಕ್ಕು ನೋಡಿದಳು. ಇದನ್ನು ಗಮನಿಸಿದ ಕೆಲ ಹೆಂಗಸರು ಮುಖಚೇಷ್ಟೆ ಮಾಡದಿರಲಿಲ್ಲ. ಹೊಸಬಳು ಅಡುಗೆಮನೆ, ಛಾವಣಿ, ನೆಲ ಗೋಡೆಗಳ ಪರೀಕ್ಷೆ ಮಾಡಿದಳು. ನೆಲವನ್ನು ಸಾರಿಸಿತ್ತು. ಗೋಡೆಗೆ ಅಲ್ಲಿ ಇಲ್ಲಿ ಸುಣ್ಣದನೀರಿನ ಸ್ಪರ್ಶವಾದಂತಿತ್ತು.

ಭಾರದ ಸಾಮಾನುಗಳನ್ನು ಹೊರುವ ಕೆಲಸವನ್ನೆಲ್ಲ ಗುಂಡಣ್ಣನಿಗೇ ಬಿಟ್ಟು ಶಂಕರನಾರಾಯಣಯ್ಯ ಹಗುರವಾದೆರಡು ಡಬ್ಬಗಳನ್ನು ಹೊತ್ತು ಒಳಬಂದ.

"ಸುಣ್ಣ ಸಾರಿಸಿದೆ ತಾನೇ ?"

"ಓಹೋ !"

ಆ ಉದ್ಗಾರದಲ್ಲಿ ಅಣಕವಿತ್ತು.

ಒಂಟಿ ಎತ್ತಿನ ಗಾಡಿ ಹೊರಟುಹೋಯಿತು. ಮನೆಯ ಸಾಮಾನುಗಳೆಲ್ಲಾ ಒಳಕ್ಕೆ ಬಂದುವು. ಸಾಮಾನುಗಳನ್ನು ಹಿಂಬಾಲಿಸಿದ ಹುಡುಗರು ಬಾಗಿಲ ಮುಂದೆ ನೆರೆದರು.

ಸಾಮಾನುಗಳನ್ನಷ್ಟೆ ನೋಡಿ, ಬಂದಿರುವುದು ಬಡಸಂಸಾರವೇ ಎಂದು ತೀರ್ಮಾನಿಸಲು ಪಠಾರದ ಹೆಂಗಸರಿಗೆ ಹೆಚ್ಚುಹೊತ್ತು ಹಿಡಿಯಲಿಲ್ಲ. ಅಪಲ್ರ್ಯಾ ಮತ್ತು ರಾಧಾ, ಕಾಮಾಕ್ಷಿಯ ಮನೆ ಸೇರಿ ಚರ್ಚೆ ನಡೆಸಿದರು. ಚಿತ್ರ ಬರೆಯುವವರ ಮನೆಯೆಂದರೆ ಹಾಗಿರಬಹುದು ಹೀಗಿರಬಹುದು ಎಂದು ಅಪಲ್ರ್ಯಾ ತರ್ಕಿಸಿದ್ದಳು. ಅಂಥದೇನೂ ಈಗ ಕಾಣಲಿಲ್ಲವೆಂದು ಆಕೆಗೆ ನಿರಾಸೆಯಾಗಿತ್ತು.

ಇನ್ನೂ ಏನಾದರೂ ಕೆಲಸವಿದೆಯೋನೋ ಎಂಬಂತೆ ಗುಂಡಣ್ಣ ನಿಂತೇ ಇದ್ದ. ಆವನ ವ್ಯಕ್ತಿತ್ವವನ್ನು ಅಷ್ಟರಲ್ಲೆ ಸೂಕ್ಷ್ಮ ನಿರೀಕ್ಷಣೆ

ಯಿಂದ ಅಳೆದುನೋಡಿದ್ದ ಶಂಕರನಾರಾಯಣಯ್ಯ ಹೇಳಿದ :

"ಪರವಾಗಿಲ್ಲ. ಇನ್ನು ನಾವೇ ಇಟ್ಕೋತೀವಿ, ಹೋಗಿ."

ಗುಂಡಣ್ಣ ಹುಡುಗರೆಡೆಯಲ್ಲಿ ಹಾದಿಬಿಡಿಸಿಕೊಂಡು ಹೊರಟ. 'ಉಪಕಾರವಾಯ್ತು', 'ತೊಂದರೆ ಕೊಟ್ವಿ' ಎಂದೆಲ್ಲ ಗುಂಡಣ್ಣನಿಗೆ ವಂದನಾರ್ಪಣೆ ಮಾಡುವ ಅಗತ್ಯವಿಲ್ಲವೆಂದು ಶಂಕರನಾರಾಯಣಯ್ಯ ಸುಲಭವಾಗಿ ತೀರ್ಮಾನಿಸಿದ್ದ.

ಹುಡುಗರೆಲ್ಲ ಮುತ್ತಿಕೊಂಡುದರಿಂದ, ಗಾಳಿ ಬೆಳಕು ಓಡಲು ಅವಕಾಶ ದೊರೆಯದೆ ಮಗು ಅಳತೊಡಗಿತು.

ಅಷ್ಟರಲ್ಲೆ ರಂಗಮ್ಮ ಅಲ್ಲಿಗೆ ಬಂದು ತಲಪಿ, ಹುಡುಗರ ಮೇಲೆ ಎರಗಿದರು :

"ಹೋಗ್ರೋ....ಇಲ್ಲೇನು ಕೋತಿ ಕುಣೀತಿದ್ಯೆ? ಹೂಂ.... ಬೀದಿಗೆ ಹೋಗಿ ಆಡ್ಕೊಳ್ಳಿ...."

ಹುಡುಗರು ಮನಸಿಲ್ಲದ ಮನಸಿನಿಂದ ಹೊರಹೋದರು.

ಸಂಸಾರದೊಡನೆ ರಂಗಮ್ಮನ ಸ್ನೇಹ ಆರಂಭವಾಯಿತು.

"ಮಗು ಅಳ್ತಿದೆಯಲ್ಲಾ ಹಸಿವಾಗಿದೆಯೋ ಏನೋ...."

"ಅಯ್ಯೋ! ಅವಳಿಗೇನು ಧಾಡಿ? ಅಳ್ತಾ ಇರೋದೇ!"

ಆ ಹೆಂಗಸಿನ ಉತ್ತರ ಕೇಳಿ ರಂಗಮ್ಮ ಸ್ವಲ್ಪ ಬೆಚ್ಚಿಬಿದ್ದರು. ಆದರೂ ಸಾವರಿಸಿಕೊಂಡು ಮಗುವಿನೆದುರು ನಿಂತು, ತಮ್ಮ ಹಲ್ಲಿಲ್ಲದ ಬಾಯಿಯನ್ನು ತೋರಿಸುತ್ತಾ, ಮುಖಚೇಷ್ಟೆ ಮಾಡಿದರು. ಉಸಿರಾಡಲು ಬೇಕಾದ ಗಾಳಿಯೂ ದೊರೆತು, ತಮಾಷೆಯಾಗಿದ್ದೊಂದು ಮುಖವನ್ನೂ ಕಂಡು, ಮಗು ಅಳು ನಿಲ್ಲಿಸಿ ನಕ್ಕಿತು.

"ಘಟ್ ಮುಂಡೆ."

ಎಂದು ರಂಗಮ್ಮ ಬಲುಪ್ರೀತಿಯಿಂದ ಮಗುವಿನ ಗಲ್ಲ ಮುಟ್ಟಿದರು. ಶಂಕರನಾರಾಯಣಯ್ಯ ಮತ್ತು ಆತನ ಹೆಂಡತಿ, ಪರಸ್ಪರರನ್ನು ನೋಡಿ, ತಮಗೆ ಮಾತ್ರ ಏನೋ ಅರ್ಥವಾದವರಂತೆ ಹಸನಕ್ಕರು.

ಶಂಕರನಾರಾಯಣಯ್ಯ ಚಾಪೆಯ ಸುರುಳಿಯನ್ನು ಬಿಚ್ಚಿ, ಪೊಟ್ಟಣಗಳನ್ನು ಮೂಲೆಗೆಸೆದು, ಚಾಪೆಯನ್ನು ಅಲ್ಲೆ ಒಂದು ಬದಿಯಲ್ಲಿ

ಹಾಸಿ ಹೇಳಿದ :

"ಕೂತ್ಕೊಳ್ಳಿ ರಂಗಮ್ನೋರೆ, ನಿಂತೇ ಇದೀರಲ್ಲಾ!"

"ಅಯ್ಯೊ! ಸರಿಹೋಯ್ತು. ಇದೇನು ಉಪಚಾರ? ನೀವಿನ್ನೂ ಸಾಮಾನು ಗಂಟುಗಳನ್ನ ಬಿಚ್ಚೇ ಇಲ್ಲ."

"ಅದೇನು ಮಹಾ? ರಾತ್ರೆಯೆಲ್ಲಾ ಇದೆಯಲ್ಲಾ. ನಿಧಾನ ವಾಗಿ ಮಾಡ್ಕೋತೀವಿ."

ಆ ಮಾತು ಕೇಳುತ್ತಾ ರಂಗಮ್ಮನ ಹುಬ್ಬುಗಳು ಪರಸ್ಪರ ಸಮಿಾಪಿಸಿದುವು. ಈ ದಂಪತಿಗಳ ಸಡಗರದಲ್ಲಿ ರಾತ್ರೆಯೆಲ್ಲಾ ವಿದ್ಯು ದ್ದೀಪ ಉರಿಸಬೇಕಾಗಬಹುದೇನೋ ಎಂದು ಅವರು ಚಿಂತಿಸಿದರು. ಆದರೆ ಆ ವಿಷಯ ಪ್ರಸ್ತಾಪಿಸಿ ಮೊದಲ ದಿನವೇ ವಿರಸಕ್ಕೆ ಎಡೆ ಗೊಡಲು ಅವರು ಸಿದ್ಧರಿರಲಿಲ್ಲ.

ಆ ಶಂಕರನಾರಾಯಣಯ್ಯನೊ ಬೇಕು ಬೇಕೆಂದೇ ಹಾಗೆ ಹೇಳಿದ್ದ. ಎಷ್ಟು ಹೊತ್ತಿಗೆ ಎಂದು ಗೊತ್ತಿಲ್ಲವಾದರೂ ವಠಾರದ ಒಡತಿ ರಾತ್ರೆ ದೀಪಗಳನ್ನೆಲ್ಲಾ ಆರಿಸುವ ಪದ್ಧತಿ ಇದೆಯೆಂದು ಮೊದಲ ಸಾರಿ ಅಲ್ಲಿಗೆ ಬಂದಾಗಲೇ ಆತ ತಿಳಿದುಕೊಂಡಿದ್ದ.

ರಂಗಮ್ಮನ ಮುಖದ ಮೇಲೆ ಮೂಡಿ ಮಾಯವಾದ ಕಳವಳ ಆತನಿಗೆ ಗೋಚರಿಸದೇ ಇರಲಿಲ್ಲ. ಗಂಡನ ತುಂಟುತನ ಹೆಂಡತಿಗೂ ಅರಿವಾಯಿತು.

ಬಂದವರನ್ನು ಸಂತುಷ್ಟಪಡಿಸುವ ಮಾತನ್ನೇ ರಂಗಮ್ಮ ಆಡ ಬಯಸಿದರು.

"ಸಾಮಾನು ಎತ್ತಿಟ್ಟ ತಕ್ಷಣ ಹೇಳೀಪ್ಪಾ. ನಲ್ಲಿ ಬೀಗ ತೆಗೀತೀನಿ. ನೀರು ಹಿಡಿಕೊಂಡೀರಂತೆ."

ಶಂಕರನಾರಾಯಣಯ್ಯನೇನೊ "ಆಗಲಿ" ಎಂದ. ಆದರೆ ಆತನ ಹೆಂಡತಿ ಸುಮ್ಮನಿರಲಿಲ್ಲ

"ಓ! ಸಾಯಂಕಾಲ ಯಾವಾಗ್ಲೂ ನಲ್ಲಿಗೆ ಬೀಗ ಹಾಕ್ತೀರೇನು?"

ಶೇಷಾದ್ರಿಪುರದ ಬಿಡಾರದಲ್ಲಿ ಬಾವಿಯಿಂದಲೆ ನೀರು ಸೇದುತಿದ್ದ ವಳು ಆಕೆ. ಆದರೆ ಹಾಗೆಂದು ಇಲ್ಲಿ ತಿಳಿಸಲಿಲ್ಲ.

"ಹೌದಮ್ಮಾ. ಹಾಗೇ ಬಿಟ್ಟರೆ ಹುಡುಗರು ನಲ್ಲಿ ತಿರುಗಿಸಿ ಬಿಡುತ್ವೆ. ಬೀದೀಲಿ ಹೋಗೋರು-ಬರೋರೂ ನೀರಿಗೆ ಬಂದ್ಬಿಡ್ತಾರೆ."

"ಹೌದೌದು. ಗತಿ ಇಲ್ದೆ ಅಲೆಯೋರ ಕಾಟ ಈಗೀಗ ಜಾಸ್ತಿಯಾಗ್ಬಿಟ್ಟಿದೆ...."

ಎಂದು ಶಂಕರನಾರಾಯಣಯ್ಯ, ಗೋಣಿಯಿಂದ ಸಾಮಾನು ಗಳನ್ನು ಹೊರತೆಗೆಯುತ್ತಾ ಹೇಳಿದ.

"ಮನೇಲೇ ಇರ್ತೀನಪ್ಪ. ಸಾಮಾನು ತೆಗೆದಿಡೋದು ಮುಗಿ ದ್ಮೇಲೆ ಬನ್ನಿ"

—ಎಂದು ಹೇಳಿ ರಂಗಮ್ಮ ಹೊರಟು ಹೋದರು.

"ಕೂತ್ಕೋ ಚಂಪಾ. ಹ್ಯಾಗಿದಾರೆ ಮಾಲೀಕರು ?"

ಹೆಂಡತಿಯೊಡನೆ ಮಾತನಾಡಿದ ಶಂಕರನಾರಾಯಣಯ್ಯನ ಸ್ವರದಲ್ಲಿ ಬದಲಾವಣೆಯಾಗಿತ್ತು. ಇದು ಸ್ವಾಭಾವಿಕವಾಗಿ ನಯ ವಾಗಿತ್ತು.

"ನೀವಂತೂ ಒಳ್ಳೇ ಮನೇನೆ ಹುಡುಕಿದೀರಿ !"

"ಯಾಕೆ ? ಆ ಕೊಂಪೆಗಿಂತ ಈ ವಠಾರ ವಾಸಿಯಲ್ವೇನು ?"

"ಅಲ್ಲ ಅಂದ್ನೆ ? ತಮಾಷೆಯಾಗಿದೆ ಮುದುಕಿ. ಆದರೆ ನೀರು ಕೈಟದ ಅವಸ್ಥೆ ನೋಡಿದರೆ ದಿನಾ ಜಗಳವಾಗುತ್ತೇನೋ ಅಂತ ಭಯವಾಗುತ್ತೆ."

"ಶ್ ! ಮೆಲ್ಲಗೆ ಮಾತ್ನಾಡೇ ! ಎದುರುಮನೆ—ಪಕ್ಕದ್ಮನೆ.... ಗೋಡೆ ಏನು ದಪ್ಪಗಿದೇಂತ ತಿಳಕೊಂಡ್ಯಾ....?"

ಚಂಪಾವತಿ ನಕ್ಕಳು.

"ಒಳ್ಳೇದೇ ಆಯ್ತು. ಸದ್ಯಃ ನಿಮ್ಮ ಸರಸಸಲ್ಲಾಪವಾದರೂ ಕಡಿಮೆ ಆಗುತ್ತೊ ?"

ಬೆವರು ಸುರಿಯುತಿದ್ದ ಮುಖ. ಅದಕ್ಕೆ ತಗಲಿದ ಯಾವುದೋ ಪಾತ್ರೆಯ ಮಸಿ. ಮುಂದಕ್ಕೆ ಇಳಿದ ಕ್ರಾಪು. ಆ ಪರಿಸ್ಥಿತಿಯಲ್ಲೂ ಆತ ಹೆಂಡತಿಯನ್ನು ನೋಡಿ ತುಂಟತನದ ನಗೆ ನಕ್ಕ.

"ಬಾಗಿಲು ಸ್ವಲ್ಪ ಮರೆಮಾಡೇ."

"ಯಾಕೆ ?"

"ಬೇಕು. ಬಾಗಿಲು ಮುಚ್ಚಿಟ್ಟು ಹತ್ತಿರ ಬಾ."

"ಓಹೋ ! ನಿಮ್ಮಿಷ್ಟ ನೆರವೇರ್ಗ ಹಾಗೆಯೇ. ಆ ತೊಟ್ಟಿಲಿಂದ ಒಂದಿಷ್ಟು ಕನ್ನಡಿ ತಗೊಂಡು ನಿಮ್ಮ ಮುಖ ನೋಡ್ಕೊಳ್ಳಿ."

"ನಾಕು ! ಇಲ್ಲಿ ಬಾ ಅಂದ್ರೆ...."

"ಬರೋಲ್ಲ."

"ಬಾರೇ ಇಲ್ಲಿ !"

"ಎದುರು ಮನೆ—ಪಕ್ಕದ್ಮನೆಯವರಿಗೆ ಕೇಳಿಸುತ್ತೆ."

ಶಂಕರನಾರಾಯಣಯ್ಯ ಉತ್ತರ ಕೊಡದೆ, ಮಗುವನ್ನೆತ್ತಿ ಕೊಂಡು ಮೂಲೆಯಲ್ಲಿ ನಿಂತಿದ್ದ ಹೆಂಡತಿಯತ್ತ ನಡೆದ.

ಆ ಕ್ಷಣವೆ ಹೆಂಡತಿ ಗಟ್ಟಿಯಾಗಿ ಕೂಗಿ ಕರೆದಳು :

"ರಂಗಮ್ನೋರೇ !...."

ಮೀನಾಕ್ಷಮ್ಮ, ಪದ್ಮಾವತಿ, ಕಮಲಮ್ಮ, ಅಹಲ್ಯಾ, ಕಾಮಾಕ್ಷಿಯರೆಲ್ಲ ತಮ್ಮ ತಮ್ಮ ಮನೆ ಬಾಗಿಲಿಗೆ ಬಂದರು. ಮಧುರ ವಾಗಿದ್ದರೂ ಗಟ್ಟಿಯಾಗಿದ್ದ ಹೊಸ ಸ್ವರ. ಬಂದ ದಿನವೇ, ಬಂದ ಘಳಿಗೆಯಲ್ಲೇ. ಎಂತಹ ದಿಟ್ಟತನ !

ಶಂಕರನಾರಾಯಣಯ್ಯ "ಥೂ ನಿನ್ನ !" ಎಂದು ಅವಸರವಾಗಿ ಗೋಡೆಬೀರುವತ್ತ ಸರಿದ. ಚಂಪಾ ಕುಲುಕುಲು ನಕ್ಕಳು.

ರಂಗಮ್ಮ ಬಂದೇ ಬಿಟ್ಟರು. ಹೊಸಬಳ ಧೈರ್ಯ ಅವರನ್ನೂ ಚಕಿತಗೊಳಿಸಿತ್ತು.

"ಏನಮ್ಮಾ ? ಕೂಗಿದ್ಯಾ ?"

ಸುತ್ತುಮುತ್ತು ಎಲ್ಲಿಂದಲೂ ಯಾವ ಸಪ್ಪಳವೂ ಇರಲಿಲ್ಲ. ವಠಾರದ ಆ ಭಾಗವೆಲ್ಲಾ ಒಂದೇ ಕಿವಿಯಾಗಿ ಮಾರ್ಪಟ್ಟು ಹೊಸಬಳ ಉತ್ತರಕ್ಕಾಗಿ ಕಾದಿದ್ದಂತೆ ಕಂಡಿತು. ರಂಗಮ್ಮ ಬರುವುದರೊಳಗೇ ನಗು ನಿಲ್ಲಿಸಿದ್ದ ಚಂಪಾ ಗಂಭೀರ ಮುಖಮುದ್ರೆ ತಳೆದಳು. ಅಳುಕು ಸ್ವಲ್ಪವೂ ಆಕೆಯನ್ನು ಬಾಧಿಸಲಿಲ್ಲ.

"ಹೂಂ ಕಣ್ರೀ....ಒರಳುಗುಂಡು ಇದೆಯೇನಂತಾ ?"

ಯಾವ ಸಂಕೋಚವೂ ಇಲ್ಲದೆ ಆ ಮಾತು ಬಂತು. ಆದರೆ ರಂಗಮ್ಮ ಅದನ್ನು ನಿರೀಕ್ಷಿಸಿರಲಿಲ್ಲ.

"ಯಾಕೆ ? ಇಲ್ಲಿಲ್ವೆ ?"

"ನೋಡ್ದೆ. ಎಲ್ಲೂ ಕಾಣಿಸ್ಲಿಲ್ಲ."

—ಎಂದಳು ಚಂಪಾ. ನಾಲ್ಕು ಹೆಜ್ಜೆ ಮುಂದೆ ಹೋಗಿ ಅಡುಗೆ ಮನೆಯೊಳಗೆ ಹುಡುಕಿ ನೋಡುವ ಶಾಸ್ತ್ರವನ್ನೂ ಆಕೆ ಮಾಡಿದಳು.

ರಂಗಮ್ಮನಿಗೆ ಗಾಬರಿಯಾಯಿತು. ನಾರಾಯಣಿಯ ಗಂಡ ಎಲ್ಲಾದರೂ ಗುಂಡುಕಲ್ಲನ್ನು ಒಯ್ದು ಬಿಟ್ಟನೇನೋ, ತನ್ನ ದೃಷ್ಟಿಗೆ ಈವರೆಗೂ ಆ ವಿಷಯ ಗೋಚರವಾಗದೆ ಹೋಯಿತೇನೋ, ಎಂದು ದಿಗಿಲಾಯಿತು. ಅವರ ದೃಷ್ಟಿ, ಈಗ ಮನೆ ತುಂಬ ಹರಡಿದ್ದ ಸಾಮಾನುಗಳತ್ತ ಹರಿಯಿತು. ರಂಗಮ್ಮನ ಸೂಕ್ಷ್ಮ ದೃಷ್ಟಿ........

"ನೋಡಿ ! ಅಲ್ಲಿದೆ !"

ದಂಪತಿಗಳಿಬ್ಬರೂ ರಂಗಮ್ಮ ಬೊಟ್ಟು ಮಾಡಿದತ್ತ ನೋಡಿದರು. ಹಾಸಿಗೆಯ ಕೆಳಗಿತ್ತು ಗುಂಡುಕಲ್ಲು. ಅದರ ತಲೆ ಮಾತ್ರ ಕಾಣಿಸುತಿತ್ತು.

"ಓ ! ಇದೆಯಪ್ಪ ಸದ್ಯಃ ! ಸುಮ್ನೆ ತೊಂದರೆ ಕೊಟ್ಟ ಹಾಗಾಯ್ತಮ್ಮ ನಿಮಗೆ."

"ಅಯ್ಯೋ, ಇದೇನು ಮಹಾ ತೊಂದರೆ ? ನಮ್ಮ ಮನೆಯೊಳಗೇ ನಾವು ಅಲ್ಲಿ ಇಲ್ಲಿ ಓಡಾಡ್ದೆ ಇರೋಕಾಗುತ್ಯೆ ?........ಅಲ್ದೆ ಗುಂಡು ಕಲ್ಲನ್ನ ಯಾರು ತಗೊಂಡು ಹೋಗ್ತಾರೆ ಹೇಳು ?"

"ಹೇಳೋಕಾಗಲ್ಲಮ್ಮ ಈಗಿನ ಕಾಲ್ದಲ್ಲೀ........"

–ರಂಗಮ್ಮನಿಗಿಂತ ತಾನೇ ಹೆಚ್ಚು ಅನುಭವಿ ಎನ್ನುವಂತೆ ಚಂಪಾ ಅಂದಳು. ರಂಗಮ್ಮ, ಒಂದು ಕ್ಷಣ ಸುಮ್ಮನಾಗಿ ಮತ್ತೆ ಹೇಳಿದರು :

"ಅದೂ ನಿಜಾ ಅನ್ನು. ಆದರೆ, ಇಲ್ಲಿ ಯಾರನ್ನು ಬೇಕಾದರೂ ನೀನು ಕೇಳು ನಮ್ಮ ವಠಾರದಲ್ಲಿ ಕಳ್ಳತನ ಆಗೋದೂಂತ್ಲೇ ಇಲ್ಲ.

ಅಪ್ಪಿತಪ್ಪಿ ಹುಡುಗರೇನಾದರೂ ಆಚೆ ಈಚೆಗೆ ಪಾತ್ರೆಗೀತ್ರೆ ಇಡ್ಬೇಕೇ ಹೊರತು—"

ಶಂಕರನಾರಾಯಣಯ್ಯನಿಗೆ ತಾಳ್ಮೆ ತಪ್ಪಿತ್ತು. ಆತ ಮನಸ್ಸಿನಲ್ಲೇ ರೇಗತೊಡಗಿದ್ದ. ಕೇಳಿಸುತಿದ್ದ ಒಣ ಹರಟೆಯನ್ನು ಸಹಿಸಲಾರದೆ ರಂಗಮ್ಮನ ಮಾತನ್ನು ನಡುವಿನಲ್ಲೇ ಆತ ತಡೆದ:

"ಅಯ್ಯೊ! ವಠಾರ ಅಂದ್ಮೇಲೆ ಅದೆಲ್ಲಾ ಇಲ್ದೆ ಇರುತ್ಯೆ?........ ಮನೇಲೆ ಇರೀಮ್ಮ ನೀವು. ಬೇಗ್ನೆ ನೀರಿಗೆ ಬಂದ್ಬಿಡ್ತೀನಿ."

ಗಂಡನ ಅವಸ್ಥೆಯನ್ನು ಕಂಡು ಒಳಗಿಂದೊಳಗೇ ಸಂತೋಷ ಪಡುತಿದ್ದ ಚಂಪಾ, ರಂಗಮ್ಮನನ್ನು ಮತ್ತೂ ಸ್ವಲ್ಪ ಹೊತ್ತು ಅಲ್ಲಿಯೇ ನಿಲ್ಲಿಸಿಕೊಳ್ಳಲು ಬಯಸಿದಳು. ಆಕೆ ಗೃಹಕೃತ್ಯಕ್ಕೆ ಸಂಬಂಧಿಸಿ ಕೇಳಿ ತಿಳಿದುಕೊಳ್ಳಬೇಕಾದ ಎಷ್ಟೋ ವಿಷಯಗಳಿದ್ದುವು.

........"ಇಲ್ಲಿ ವರ್ತನೆ ಹಾಲು ಹಾಕ್ತಾರೆಯೆ?"

........"ಸೌದೆ ಡಿಪೋ ಎಲ್ಲಿದೆ?"

........"ಅಂಗಡಿ ಬೀದಿ ಎಷ್ಟು ದೂರ?"

........"ಅಲ್ಲಿ ತರಕಾರಿ ಸಿಗುತ್ತೇನು?"

ರಂಗಮ್ಮ ತಾಳ್ಮೆಯಿಂದ ಉತ್ತರ ವೀಯುತ್ತಾ ಪ್ರತಿಯೊಂದಕ್ಕೂ ವಠಾರ ಎಷ್ಟೊಂದು ಅನುಕೂಲವಾಗಿದೆ ಎಂಬುದನ್ನು ಮನಗಾಣಿಸಿ ಕೊಡಲು ಪ್ರಯತ್ನಪಟ್ಟರು.

ಹೊರಗೆ, ಈ ಸಂಭಾಷಣೆಗೆ ಕಿವಿಗೊಡುತ್ತ ನಿಂತಿದ್ದವರು, ಹೊಸಬಳ ಧೈರ್ಯಕ್ಕೆ ಬೆರಗಾಗದಿರಲಿಲ್ಲ.

ಆಗಿನ್ನೂ ಆರುಘಂಟೆ. 'ದೀಪಹಾಕ'ಲು ಬಹಳ ಹೊತ್ತಿತ್ತು. ಅಲ್ಲದೆ, ಪಶ್ಚಿಮದ ಸೂರ್ಯನ ಕೃಪೆಯಿಂದ ದೊರೆಯುತಿದ್ದ ಸ್ವಲ್ಪ ಬೆಳಕೂ ಅಲ್ಲಿ ಇಲ್ಲದೆ ಇರಲಿಲ್ಲ. ಆದರೂ ಚಂಪಾ ತನ್ನದೊಂದು ಕೇಳಿಕೆಯನ್ನು ಮುಂದಿಟ್ಟು, ರಂಗಮ್ಮನಿಗೆ 'ಚುರುಕು ಮುಟ್ಟಿಸಿ'ದಳು.

ದೀಪದ ಅವಸ್ಥೆ ಏನೆಂಬುದನ್ನು ಮೊದಲೇ ತಿಳಿದಿದ್ದ ಚಂಪಾ ಗಂಡನಿಗೆ ಹೇಳಿದಳು:

"ದೀಪ ಹಾಕ್ಕೋಬಾರ್ದೆ? ಸಾಮಾನುಗಳೆಲ್ಲಾ ಇವೆಯೋ

ಇಲ್ವೋ, ಏನೂ ಕಾಣಿಸೋದೇ ಇಲ್ಲ."

ಹೆಂಡತಿಯ ಆ ಮಾತಿಗಾಗಿ ಮನಸಿನಲ್ಲೆ ಖುಷಿಯಾದ ಗಂಡ, "ಕರೆಂಟ್ ಇಲ್ಲಾಂತ ತೋರುತ್ತೆ" ಎಂದು ಹೇಳುತ್ತಾ, ರಂಗಮ್ಮನ ಮುಖನೋಡುತ್ತಾ, ವಿದ್ಯುತ್ ಗುಂಡಿಯನ್ನು ಮುಟ್ಟಿದ.

ರಂಗಮ್ಮ, ಆ ಸಂಭಾಷಣೆ ತಮಗೆ ಕೇಳಿಸದವರಂತೆ ಅತ್ತಿತ್ತ ನೋಡಿದರು.

ಚಂಪಾ, ಕೇಳಿಸುವ ಹಾಗೆ ಅಂದಳು:

"ಸ್ವಲ್ಪ ದೀಪ ಹಾಕ್ತೀರಾ?"

ರಂಗಮ್ಮ 'ಹೂಂ' ಅನ್ನಲಿಲ್ಲ; 'ಊಹೂಂ' ಅನ್ನಲಿಲ್ಲ. ಚಕಾರ ವೆತ್ತದೆ ತಮ್ಮ ಮನೆಗೆ ಹೋಗಿ ವಿದ್ಯುತ್ ಹಿಡಿಯನ್ನೆಳೆದರು. ಎಳೆದ ಮೇಲೆ "ದೀಪ ಬಂತೇ?" ಎಂದು ಕೇಳಲೂ ಇಲ್ಲ. ಹುಬ್ಬು ಗಂಟಿಕ್ಕಿ ಮನೆಯಲ್ಲೆ ಕುಳಿತರು.

ಇದನ್ನೆಲ್ಲ ನೋಡುತಿದ್ದ ವಠಾರದ ಹೆಂಗಸರು ಪೆಚ್ಚಾಗಿ ಹೋದರು.

ಕಾಂತಿಹೀನವಾಗಿದ್ದ ಬೆಳಕನ್ನು ನೋಡುತ್ತಾ ಚಂಪಾ ಅಂದಳು:

"ಎಷ್ಟೊಂದು ಶುಭ್ರವಾಗಿದೆ!"

ಗಂಡ ಹೇಳಿದ:

"ಪ್ರಚಂಡೆ ಕಣೇ ನೀನು. ಆ ವಯಸ್ಸಾಸೋರ್ನ ಗೋಳು ಹೊಯ್ಕೊಂಡೆಯಲ್ಲಾ! ನರಕಕ್ಕೆ ಹೋಗ್ತಿ ನೋಡು!"

"ಮೆತ್ತಗೆ ಮಾತ್ನಾಡಿ........"

ಇಷ್ಟೆಲ್ಲವೂ ನಡೆಯುತಿದ್ದಾಗ ಮಗು ಸುತ್ತು ಮುತ್ತಲೆಲ್ಲ ಪಿಳಿ ಪಿಳಿ ನೋಡುತ್ತಲೇ ಇತ್ತು. ಉರಿಯ ತೊಡಗಿದ ದೀಪ ಕ್ಷಣಕಾಲ ಅದರ ಪಾಲಿಗೆ ದೊಡ್ಡ ಆಕರ್ಷಣೆಯಾಯಿತು. ಆದರೆ, ಎಷ್ಟು ಹೊತ್ತಾದರೂ ತನ್ನ ಕಡೆಗೆ ಯಾರೂ ಗಮನವನ್ನೇ ಕೊಡುತ್ತಿಲ್ಲ ವೆಂದು ಬೇಸರಗೊಂಡು ಅಳತೊಡಗಿತು.

ಶಂಕರನಾರಾಯಣಯ್ಯ ರೇಗುತ್ತಾ ಹೇಳಿದ:

"ಅಳಿಸ್ಬೇಡ ಮಗೂನ. ಯಾವ ಡಬ್ಬದಲ್ಲಿಟ್ಟಿದೀಯಾ ಬಿಸ್ಕತ್ತು

ಪೊಟ್ಲಾನ? ತೆಕ್ಕೊಡ್ತಾರ್ಡೀನು?"

ಚಂಪಾ ಪ್ರಯಾಸಪಟ್ಟು ಆ ಡಬ್ಬವನ್ನು ಗುರುತಿಸಿ, ಬಿಸ್ಕತ್ತು ಹೊರತೆಗೆದು, ಮಗಳ ಬಾಯಿಗೆ ತುರುಕಿಸಿದಳು. ಕೈಗೊಂದು ಚೂರು ಕೊಟ್ಟು ಮಗುವನ್ನು ಚಾಪೆಯ ಮೇಲೆ ಆಡಲು ಬಿಟ್ಟಳು. ತಾನು ಸೆರಗನ್ನು ಸೊಂಟಕ್ಕೆ ಬಿಗಿದು ಗಂಡನ ಜತೆಯಲ್ಲಿ ಸಾಮಾನುಗಳನ್ನು ಎತ್ತಿಡ ತೊಡಗಿದಳು.

........

ವಠಾರಕ್ಕೆ ಒಬ್ಬೊಬ್ಬರಾಗಿ ಗಂಡಸರು ಹಿಂತಿರುಗಿ ಬಂದರು. ಕತ್ತಲಾಯಿತು. ಹುಡುಗರೆಲ್ಲ ತಮ್ಮ ತಮ್ಮ ಮನೆಗಳನ್ನು ಸೇರಿದರು. ಹಕ್ಕಿಗಳ ಗೂಡಿನಲ್ಲಿ ಸಂಜೆ ಹೊತ್ತು ಚಿಲಿಪಿಲಿ ಸದ್ದಾಗುವ ಹಾಗೆ, ಮನೆಗಳಿಂದ ವಿವಿಧವಯೋಮಾನದ ಮನುಷ್ಯ ಸ್ವರಗಳು ಹೊರಟುವು.

ಪೋಲೀಸನ ಹೆಂಡತಿ "ಕಿಟ್ಟೀ-ಕಿಟ್ಟೀ" ಎಂದು ಕೂಗುತ್ತಾ ಮುಂಭಾಗದಿಂದ ಓಣಿಗೆ ಬಂದಳು.

"ಮೀನಾಕ್ಷಮ್ಮಾ, ನಮ್ಮ ಕಿಟ್ಟೀ ಇದಾನೇನ್ರಿ ನಿಮ್ಮನೇಲಿ?"

—ಎನ್ನುತ್ತ ಆಕೆ ಓಣಿಯ ಕೊನೆಯನ್ನು ತಲಪಿದಳು.

"ಇಲ್ಲ ಕಣ್ರೀ, ನಮ್ಮೋನು ಆಗ್ಲೇ ಬಂದ"

ಎಂದು ಮೀನಾಕ್ಷಮ್ಮ ಉತ್ತರವಿತ್ತುದಾಯ್ತು. ಆದರೂ ಮೀನಾಕ್ಷಮ್ಮನ ಬಾಗಿಲ ಬಳಿ ಇಬ್ಬರೂ ಸೇರಿದರು. ಪ್ರಶ್ನೋತ್ತರ ಗಳಾದುವು: "ಅಡುಗೆ ಆಯ್ತು?", "ಏನು ಮಾಡಿದ್ರಿ?", "ನೀವೇನು ಮಾಡಿದ್ರಿ?"

ಆದರೂ ಪೋಲೀಸನ ಹೆಂಡತಿಯ ದೃಷ್ಟಿ ಎದುರು ಮನೆ ಕಡೆಗೇ ಇತ್ತು. ಗಂಡ ಹೆಂಡತಿ ಸಾಮಾನುಗಳನ್ನೆತ್ತಿ ಇಡುತಿದ್ದುದನ್ನು ಆಕೆ ನಿರೀಕ್ಷಿಸಿದಳು. ಆ ಉದ್ದೇಶದಿಂದಲೇ ಕಿಟ್ಟಿಯನ್ನು ಹುಡುಕುವ ನೆಪ ಮಾಡಿ ಅಲ್ಲಿಗೆ ಬಂದಿದ್ದಳಾಕೆ.

ಗಂಡಸರೂ ಅಷ್ಟೆ. ಕಕ್ಕಸಿಗೆಂದು ಹೊರಟವರು ಕೊನೆಯ ಮನೆ ಬಂದಾಗ ಒಳಕ್ಕೆ ದೃಷ್ಟಿಬೀರುತಿದ್ದರು. ವಠಾರದಲ್ಲಿನ್ನು ತಮ್ಮ ಜತೆ ಇರಲು ಬಂದ ಹೊಸ ಗಂಡಸು ಯಾರೆಂದು ತಿಳಿಯುವ ಸ್ವಾಭಾವಿಕ

ವಾದ ಕುತೂಹಲವಿತ್ತು ಅವರಿಗೆ. ಹಾಗೆ ಗಂಡಸನ್ನು ನೋಡಿದ ಮೇಲೆ, ಹಾಗೆಯೇ ಆತನ ಕೈಹಿಡಿದಾಕೆಯನ್ನೂ ಅವರು ನೋಡದೆ ಇರುತಿರಲಿಲ್ಲ.

ರಂಗಮ್ಮ ವಿಚಾರಿಸಿಕೊಳ್ಳಲು ಮತ್ತೆ ಬರಲಿಲ್ಲ. ಇದು ತನ್ನ ಹೆಂಡತಿಯ ಪ್ರಭಾವ ಎಂಬುದು ಶಂಕರನಾರಾಯಣಯ್ಯನಿಗೆ ಸ್ಪಷ್ಟ ವಾಗಿತ್ತು.

ಕತ್ತಲಾಗಿ ಒಂದು ಘಳಿಗೆಯಾಗುವುದರೊಳಗೇ ಮನೆಗೊಂದು ಸ್ವರೂಪ ಬಂತು. ಮೇಜು ಕುರ್ಚಿಗಳನ್ನೂ ಶಂಕರನಾರಾಯಣಯ್ಯ ಒಂದು ಮೂಲೆಯಲ್ಲಿ ನಿಲ್ಲಿಸಿದ.

ಮಗು ಚಾಪೆಯಮೇಲೆಯೇ ನಿದ್ದೆ ಮಾಡಿತ್ತು. ತಂದೆ ಆಯಾಸ ಪರಿಹಾರಕ್ಕೆಂದು ಅದರ ಬಳಿಯಲ್ಲಿ ಕುಳಿತುಕೊಂಡ ತನ್ನ ಕೊಳಕು ಕೈಯಿಂದ ಮಗುವನ್ನು ಮುಟ್ಟಲು ಮನಸ್ಸಾಗಲಿಲ್ಲ. ಬಾಗಿ ನೋಡಿ ದಾಗ ಲಂಗದ ಕೆಳಭಾಗವೂ ಚಾಪೆಯೂ ಒದ್ದೆಯಾಗಿದ್ದಂತೆ ಕಂಡಿತು. ಮಗುವಿನ ತಂದೆ, ಮಗುವಿನ ತಾಯಿಯನ್ನು ಗದರಿಸ ಬಯಸಿದ.

"ನೋಡೆ, ನಿನ್ನ ಮಗಳು ಏನ್ಮಾಡಿದಾಳೇಂತ !"

ಚಂಪಾ, ದೂರದಿಂದಲೇ, ಅದೇನೆಂದು ಊಹಿಸಿಕೊಂಡು, ಹೇಳಿದಳು :

"ಅಷ್ಟೇ ತಾನೆ? ತೀರ್ಥ ಪ್ರೋಕ್ಷಣ. ಪಾವನವಾಯ್ತು ಮನೆ."

ತೊಟ್ಟಿಲಿನೊಳಗೆ, ಗೋಡೆಯನ್ನು ಅಲಂಕರಿಸಬೇಕಾದ ಕಟ್ಟು ಹಾಕಿದ ಚಿತ್ರಗಳಿದ್ದುವು. ಅದನ್ನೆಲ್ಲಾ ಹೊರತೆಗೆದು ಗೋಡೆಗೆ ಮೊಳೆ ಬಡಿದು ತಗಲಹಾಕುವ ಕೆಲಸವಿತ್ತು. ಅದನ್ನು ಈಗಲೇ ಮಾಡೋಣವೆ ಬೇಡವೆ ಎಂದು ಅನಿಶ್ಚಯತೆಯಿಂದ ತೊಟ್ಟಿಲನ್ನೇ ಶಂಕರ ನಾರಾಯಣಯ್ಯ ನೋಡಿದ. ಅದನ್ನು ಗಮನಿಸಿ ಚಂಪಾ ಹೇಳಿದಳು:

"ಇವತ್ತಿಗೆ ಇಷ್ಟು ಸಾಕು. ಅದನ್ನೆಲ್ಲಾ ನಾಳೆ ಮಾಡುವಿರಂತೆ."

"ಹೂಂ. ಸೊಂಟ ನೋಯ್ತಿದೆ ಯಾಕೊ...."

"ಎಷ್ಟೊಂದು ಕೆಲಸ ಮಾಡಿದ್ದೀರಿ, ಏನು ಕಥೆ! ನೋಯದೆ

ಇರುತ್ತೆ?"

"ನಿನಗೇನು ಹೇಳು, ಎಲ್ಲಾ ತಮಾಷೆಯೆ...."

ಚಂಪಾ ಒಂದು ಪೊರಕೆಯನ್ನೆತ್ತಿಕೊಂಡಳು.

"ಏಳಿ, ಗುಡಿಸ್ಬಿಡ್ತೀನಿ. ನೀವು ಹೋಗಿ ಕೊಳಾಯಿ ಬೀಗ ತೆಗಿಸಿ."

"ಹೂಂ. ಕೊಡ-ಬಕೀಟು ಎರಡೂ ತಗೊಂಡ್ಬಾ. ನನಗಂತೂ ಸ್ನಾನಮಾಡಿಯೇ ತೀರ್ಬೇಕು."

"ಎಲ್ಮಾಡ್ತೀರಾ ಸ್ನಾನ?"

"ಬಚ್ಚಲು ಮನೆಯೋನೋ ಪಕ್ಕದಲ್ಲೇ ಇದೆ. ಇಷ್ಟು ಹೊತ್ತಿಗೆ ಕ್ಯೂನೂ ಇರಲಾರದು."

ಚಂಪಾ ಹೊರಹೋಗಿ ಬಚ್ಚಲುಮನೆ ನೋಡಿ ಬಂದಳು.

"ಅಲ್ಲಿ ದೀಪ ಇಲ್ಲಾಂದ್ರೆ."

"ಹೋಗಲಿ ಬಿಡು. ಅಡುಗೆ ಮನೇಲಿ ಸ್ನಾನಕ್ಕೆ ಏರ್ಪಾಡಿದೆ. ನೀರು ಹೋಗೋಕೆ ಹಾದಿ ಮಾಡಿದಾರೆ."

ಆತ ಎದ್ದು ರಂಗಮ್ಮನವರಲ್ಲಿಗೆ ಹೋದ. ದೇವರ ಸ್ಮರಣೆ ಮಾಡುತ್ತ ಕುಳಿತಿದ್ದ ಅವರು ತಗ್ಗಿದ ಧ್ವನಿಯಲ್ಲಿ ಕೇಳಿದರು:

"ಎಲ್ಲಾ ಕೆಲಸ ಮುಗಿಯಿತೆ?"

"ಮುಗೀತಾ ಬಂತು ರಂಗಮ್ಮನೋರೆ. ಸ್ವಲ್ಪ ನೀರು ಬೇಕಾಗಿತ್ತು."

ರಂಗಮ್ಮ ಎದ್ದು, ಗೋಡೆಯೊಳಗಿದ್ದ ಗೂಡಿನಿಂದ ಬೀಗದ ಕೈ ತೆಗೆದು ಕೊಟ್ಟರು.

"ನೀರು ತುಂಬಿಸಿ ಆದ್ಮೇಲೆ ಬೀಗ ಹಾಕ್ಬಿಟ್ಟು ಕೈನ ತಂದ್ಕೊಡೀಪ್ಪಾ."

"ಆಗಲಿ ರಂಗಮ್ನೋರೆ."

ರಂಗಮ್ಮ ಪುನಃ ಗೋಡೆಗೊರಗಿ ಕುಳಿತು ದೇವರ ಸ್ಮರಣೆಯಲ್ಲಿ ನಿರತರಾದರು. ಆದರೆ, ರಾತ್ರೆಯುಹೊತ್ತು ಕೊಳಾಯಿಯಿಂದ ವೇಗವಾಗಿ ಸುರಿಯುತ್ತಿದ್ದ ನೀರಿನ ಸುಂಯ್ ಎಂಬ ಸದ್ದು ಅವರಿಗೆ ಕೇಳಿಸದೆ

ಇರಲಿಲ್ಲ.

ಶಂಕರನಾರಾಯಣಯ್ಯ ಮೈತೊಳೆದುಕೊಂಡ. ಚಂಪಾ ಮುಖ ಕ್ಕೆ ಕಾಲು ತೊಳೆದುಕೊಂಡಳು.

ಸಂಜೆ ಮಗುವನ್ನೆತ್ತಿಕೊಂಡಿದ್ದ ಚಂಪಾಳನ್ನು ಕಂಡಾಗ ಹತ್ತಿರಕ್ಕೆ ಕರೆದು ಏನೋ ಮಾಡಬೇಕೆಂದು ಗಂಡನಿಗೆ ತೋರಿತ್ತು. ಈಗ, ಕೆಲಸಮಾಡಿ ಬಳಲಿದ ಮೇಲೆ, ಅವನಿಗೆ ಆ ಅಪೇಕ್ಷೆಯೇ ಇರಲಿಲ್ಲ.

ಅಡ್ಡಪಂಚೆಯುಟ್ಟು ಬೇರೆ ಜುಬ್ಬ ಧರಿಸುತ್ತ ಆತ ಹೇಳಿದ.

"ಇವತ್ತು ಎಷ್ಟಾಗುತ್ತೋ ಅಷ್ಟು ನೀರು ತುಂಬಿಸ್ಕೊಂಡ್ಬಿಡೇ. ನಾಳೆಯಿಂದ ಕೊಡ ಲೆಕ್ಕ ಹೇಡೀತಾರೆ."

"ಸರಿ ! ಸರಿ !"

ಚಂಪಾ, ಬಲಬದಿಯ ಮನೆಗೆ ಹೋಗಿ ಬಾಗಿಲಲ್ಲೆ ನಿಂತಳು.

ನಾಗರಾಜರಾಯ ಅಲ್ಲಿದ್ದ.

"ಯಾರೋ ಬಂದಿದಾರೆ ನೋಡೇ"

—ಎಂದು, ಅಡುಗೆ ಮನೆಯಲ್ಲಿದ್ದ ಹೆಂಡತಿಗೆ ಆತ ಕರೆದು ಹೇಳಿದ.

ಪದ್ಮಾವತಿ ಹೊರಬಂದಳು. ಮುಗುಳು ನಗುತಿದ್ದ ಚಂಪಾ ಳನ್ನು ಕಂಡು ಅರೆಕ್ಷಣ ಆಕೆಗೆ ಕಕ್ಕಾವಿಕ್ಕಿಯಾಯಿತು.

"ಏನಾದರೂ ಬೇಕಾಗಿತ್ತೆ ?"

—ಎಂದು ಆಕೆ ಕೇಳಿದಳು.

"ನೀವು ದಿನಾಗಲೂ ಪಸುವಿನ ಸೆಗಣಿ ಎಲ್ಲಿಂದ ತರ್ತೀರಾ ?"

"ಅದೊಂದು ಇಲ್ಲಿ ಸಿಗೋದು ಸ್ವಲ್ಪ ಕಷ್ಟವೇ. ಸಾಮಾನ್ಯವಾಗಿ ಬೆಳಿಗ್ಗೆ ಹುಡುಗರ್ನ್ನ ಬೀದಿ ಉದ್ದಕ್ಕೂ ಕಳಿಸ್ತೀವಿ. ಎಲ್ಲಿಯಾದರೂ ಸಿಗುತ್ತೆ. ಒಮ್ಮೆ ತಂದರೆ ಐದಾರು ದಿವಸಕ್ಕೆ ಬರುತ್ತೆ."

"ಓ....ಹಾಗೇನು ?.... ಈಗ ಅಡುಗೆ ಮನೆ ಶುದ್ಧಿಮಾಡೋಕೆ ಒಂದು ಚೂರು ಬೇಕಾಗಿತ್ತು. ಸ್ವಲ್ಪ ಕೊಡ್ತೀರಾ ?"

"ಅದಕ್ಕೇನ್ರೀ, ತಾಳಿ ಕೊಡ್ತೀನಿ."

ಪದ್ಮಾವತಿ ಅದನ್ನು ತಂದು ಕೊಟ್ಟಳು. ಹೊಸಬಳೊಡನೆ ತಾನೇ ಮೊದಲು ಮಾತನಾಡಿದವಳು, ಆಕೆಗೆ ನೆರವಾದವಳು, ಎಂದು ಅವಳಿಗೆ ಸಂತೋಷವಾಯಿತು.

ಶಂಕರನಾರಾಯಣಯ್ಯ ಕೇಳಿದ.

"ಒಲೆ ಹಚ್ತೀಯೇನು ?"

"ಯಾಕೆ ? ಬೇಡ್ವೆ ?"

"ಅದೇ ಯೋಚ್ನೆ ಮಾಡ್ತಿದೀನಿ "

"ಹೇಳಿ ಬೇಗ್ನೆ. ದೀಪದ ಗತಿ ಏನಾಗುತ್ತೋ ಆಮೇಲೆ."

"ನೀನು ಬಹಳ ವಿಷಯ ವಿಚಾರಿಸ್ಕೊಂಡೆ. ಆದರೆ ಒಂದನ್ನು ಮಾತ್ರ ಕೇಳಲಿಲ್ಲ ನೋಡು."

"ಅದೇನೋ ?"

"ಇಲ್ಲಿ ಹೋಟ್ಲು ಎಲ್ಲಿದೇಂತ ?"

"ನಾನು ಯಾತಕ್ಕೆ ಕೇಳ್ಲಿ ಅದನ್ನ ?"

"ಅದ್ಸರಿ ಅನ್ನು. ನನಗಂತೂ ಈ ವಠಾರ ಎಲ್ಲಿದೇಂತ ಗೊತ್ತಾಗೋಕ್ಮುಂಚೇನೆ ಹೋಟ್ಲಿನ ಪರಿಚಯ ಆಗಿತ್ತು."

"ಬಿಡಾರ ಬಂದಿದೀವಿ ಅಂತ ಈಗ ಅವರಿಗೆ ಹೇಳ್ಬಿಟ್ಟು ಬರ್ತೀ ಕೇನೋ ?"

"ನೋಡಿದ್ಯಾ—ಎಷ್ಟು ಸರಿಯಾಗಿ ಊಹಿಸ್ಕೊಂಡೆ !"

"ಸಡೀರಿ, ನಾನೂ ಬರ್ತೀನಿ."

"ರಂಗಮ್ಮನಿಗೆ ಗೊತ್ತಾದರೆ ನಾಳೇನೇ ನೋಟೀಸು ಕೊಡ್ತಾರೆ."

"ಅದೆಲ್ಲಾ ನಾಕು. ಏನ್ಮಾಡೋಣಾಂತ ಈಗ ? ಒಲೆ ಹಚ್ಚಲೋ ಬೇಡ್ವೊ ?"

"ಆ ಬಿಂದಿಗೆ ತಾ. ಹೋಟ್ಲಿಗೆ ಹೋಗಿ ಪೂರಿ ಪಲ್ಯಾನೋ ಚಪಾತೀನೋ ಕಟ್ಟಿಸ್ಕೊಂಡು, ಎರಡು ಲೋಟ ಕಾಫಿ ತಗೊಂಡ್ಬರ್ತೀನಿ."

"ನೀವು ಅಲ್ಲಿ ಬೇರೆ ಕುಡಿಯೋಲ್ಲ ತಾನೆ ?"

"ಎಷ್ಟೊಂದು ಹೊಟ್ಟೆ ಉರಿಯೆ ನಿಂಗೆ !"

"ಮುಗೂಗೆ ?"

"ಎಚ್ಚರವಾದರೆ ಇನ್ನೂ ಒಂದು ಜೂರು ಬಿಸ್ಕತ್ತು ಬಾಯಿಗೆ ಹಾಕಿ ಎರಡು ಚಮಚ ಕಾಫಿ ಕುಡಿಸೋದು."

"ಹೂಂ. ನಿಪ್ಪ್ಕೈಲಿ ಬಚಾಯಿಸ್ಕೊಂಡೋರು ಯಾರು ?"

ಚಂಪಾ ಒಪ್ಪಿಗೆಯಿಂದಲೆ ಬಿಂದಿಗೆ ತಂದು ಕೊಟ್ಟಳು.

"ಇನ್ನೊಂದು ಕೊಡ ನೀರು ಹಿಡ್ಕೊಂಡ್ಬಿಡ್ತೀನಿ. ಬೀಗ ಹಾಕ್ಬಿಟ್ಟೇ ಹೋಗಿ."

ಶಂಕರನಾರಾಯಣಯ್ಯ ಚಿಲ್ಲರೆ ದುಡ್ಡನ್ನು ಜೇಬಿಗೆ ಸೇರಿಸಿ, ಬಿಂದಿಗೆಯನ್ನು ಕೈಲೆತ್ತಿಕೊಂಡ. ಹೊರ ಬಂದು, ಕೊಳಾಯಿಗೆ ಬೀಗ ಹಾಕಿ, ಬೀಗದ ಕೈಯನ್ನು ರಂಗಮ್ಮನ ಬಳಿಗೊಯ್ದು.

ರಂಗಮ್ಮ ನಿರ್ವಿಕಾರವಾದ ಸ್ವರದಲ್ಲಿ ಕೇಳಿದರು :

"ನೀರು ಆಯ್ತೆ?"

"ಆಯ್ತು."

ಆತನ ಕೈಲಿದ್ದ ಬಿಂದಿಗೆಯನ್ನುನೋಡುತ್ತಾ ರಂಗಮ್ಮನೆಂದರು:

ಹೊರಗೆ ಹೋದರೆ ವಾಪಸು ಬರುವಾಗ ಹಿತ್ತಿಲುಗೇಟು ಭದ್ರ ವಾಗಿ ಹಾಕ್ಕೊಳ್ಳೀಪ್ಪಾ."

"ಹೂಂ. ಹಾಕ್ಕೋತೀನಿ."

ಶಂಕರನಾರಾಯಣಯ್ಯ ಹೋಟೆಲಿಗೆ ಬಂದಾಗ, ಅಲ್ಲಿ ಬಾಗಿಲು ಮುಚ್ಚುವ ಸಿದ್ಧತೆ ನಡೆದಿತ್ತು. ಬೇರೆ ಯಾವ ತಿಂಡಿಯೂ ದೊರೆಯದೆ ಕೊನೆಯದಾಗಿ ಉಳಿದಿದ್ದ ಚೌಚೌವನ್ನೇ ಒಂದು ಪಾವು ಕಟ್ಟಿಸಿ ಕೊಳ್ಳಬೇಕಾಯಿತು ಕಾಫಿಯೆಂಬ ಹೆಸರಲ್ಲಿ ಒಂದು ದ್ರಾವಕ ವನ್ನೇನೋ ಅಲ್ಲಿ ಕೊಟ್ಟರು. ಹತ್ತಿರದಲ್ಲೇ ಇದ್ದ ಅಂಗಡಿಯಿಂದ ನಾಲ್ಕು ಪಚ್ಚಬಾಳೆ ಹಣ್ಣುಗಳನ್ನೂ ಒಂದು ಪ್ಯಾಕೆಟು ಚಾರ್ ಮಿನಾರ್ ಸಿಗರೇಟನ್ನೂ ಆತ ಕೊಂಡುಕೊಂಡ.

....ವಠಾರದ ಮನೆಯಲ್ಲಿ ಒಂದೊಂದಾಗಿ ದೀಪಗಳು ಆರ ತೊಡಗಿದ್ದುವು. ಪ್ಯಾಂಟು ಷರಟು ಧರಿಸಿದ್ದ ಯುವಕನೊಬ್ಬ ಚರ್ಮದ ಕಡತ—ಚೀಲವನ್ನು ಎಡೆಗೊತ್ತಿಕೊಂಡು ಬೀದಿಯಿಂದ

ಮಹಡಿಯ ಮೆಟ್ಟಲೇರುತಿದ್ದ. ವಠಾರಕ್ಕೆ ಹಿಂತಿರುಗುತಿದ್ದ ಶಂಕರನಾರಾಯಣಯ್ಯ ಗೇಟಿನ ಸದ್ದು ಮಾಡಿದಾಗ ಆ ಯುವಕ ತಡೆದು ನಿಂತು ಕೆಳಗೆ ತಿರುಗಿ ನೋಡಿದ. ಆ ಕತ್ತಲಲ್ಲಿ ಒಳ ಬಂದವರು ಯಾರೆಂಬುದು ಆತನಿಗೆ ಸ್ಪಷ್ಟವಾಗಿ ತಿಳಿಯಲಿಲ್ಲ. ಆತ್ಮ ವಿಶ್ವಾಸದ ಅಧಿಕಾರ ಯುಕ್ತವಾದ ಸ್ವರದಲ್ಲಿ ಆತ ಕೇಳಿದ:

"ಯಾರದು ?"

ಶಂಕರನಾರಾಯಣಯ್ಯನೇನು ಕಡಿಮೆ ಆಸಾಮಿಯೆ ?

"ನಾನು."

"ಸುಬ್ಬುಕೃಷ್ಣಯ್ಯನೆ ?"

"ಅಲ್ಲ, ಶಂಕರನಾರಾಯಣಯ್ಯ–ಹೊಸಬ."

"ಓ........ಸುಬ್ಬುಕೃಷ್ಣಯ್ಯನೇನೋಂತಿದ್ದೆ. ಕತ್ತಲೇಲಿ ಕಾಣಿಸ್ಲಿಲ್ಲ. ಕ್ಷಮಿಸಿ."

"ಏನೂ ಪರವಾಗಿಲ್ಲ."

ಯುವಕ ತನ್ನ ಹೆಸರು ಹೇಳದೆಯೇ ಮೇಲಕ್ಕೆ ಏರಿದ. ನೀನು ಯಾರೋ ನಾಳೆ ನೋಡ್ಕೋತೀನಿ–ಎಂದು ಶಂಕರನಾರಾಯಣಯ್ಯ ಮನಸ್ಸಿನಲ್ಲೆ ಅಂದುಕೊಂಡ.

ಆತನ ದೃಷ್ಟಿ ಗೋಡೆಯತ್ತ ಸರಿಯಿತು. "ಮನೆ ಬಾಡಿಗೆಗೆ ಇದೆ" ಬೋರ್ಡು ಅಲ್ಲಿದ್ದಂತೆ ತೋರಲಿಲ್ಲ. ರಂಗಮ್ಮ ಅದನ್ನು ತೆಗೆದು ಒಳಕ್ಕೆ ಒಯ್ದು ಬಿಟ್ಟಿದ್ದರು.

ಹಿತ್ತಿಲ ಗೇಟನ್ನು ಭದ್ರವಾಗಿಯೇ ಮುಚ್ಚಿ, ವಠಾರಕ್ಕೆ ಹಳಬನೇನೋ ಎಂಬಂತೆ ಕತ್ತಲೆಯಲ್ಲಿ ದೃಢ ಹೆಜ್ಜೆಗಳನ್ನಿಡುತ್ತಾ ಆತ ಕೊನೆಯ ಮನೆ ಸೇರಿದ.

ಮನೆಯೊಳಗಿನಿಂದ ಅಗರಬತ್ತಿಯ ಘಮ ಘಮ ಸುವಾಸನೆ ಬರುತಿತ್ತು. ಅಡುಗೆ ಮನೆಯಲ್ಲಿ ದೇವರಿಗೂ ಜಾಗ ಮಾಡಿ ಕೊಟ್ಟು, ಆ ಪಠದ ಮುಂದೆ ದೀಪವನ್ನೂ ಅಗರಬತ್ತಿಯನ್ನೂ ಹಚ್ಚಿಟ್ಟು, ಚಂಪಾದೇವರಿಗೆ ನಮಸ್ಕಾರ ಮಾಡಿದ್ದಳು.

ಗಂಡ ಒಳ ಬರುತ್ತಲೆ ಆಕೆ ಕೇಳಿದಳು :

"ಏನ್ರಿ, ಇಲ್ಲಿ ತುಳಸೀ ಕಟ್ಟೆ ಇದೆ ತಾನೆ ? ಕಾಣಿಸ್ಲೇ ಇಲ್ಲ."

"ಎಂಥಾ ಮಾತಾಡ್ತೀಯೆ ! ವಠಾರದಲ್ಲಿ ತುಳಸೀಕಟ್ಟೆ ಇಲ್ದಾಂತ ಆದೀತೆ? ಹೊರಗೆ ಹಿತ್ತಿಲಲ್ಲೇ ಇದೆ–ಒಂದು ಮೂಲೇಲಿ"

"ಸರಿ ಹಾಗಾದರೆ"

–ಎನ್ನುತ್ತಾ ಚಂಪಾ ಹಾಸಿಗೆ ಹಾಸ ತೊಡಗಿದಳು.

"ಅದನ್ನ ಆಮೇಲೆ ಮಾಡು–ಕಾಫಿ ಆರಿ ಹೋಗುತ್ತೆ. ಅಲ್ಲಿ ತಿಂಡಿ ಎಲ್ಲಾ ಆಗ್ಹೋಗ್ಬಿಟ್ಟಿತ್ತು. ನಮ್ಮ ಸೌಭಾಗ್ಯಕ್ಕೆ ಸಿಕ್ಕಿದ್ದೇ ಇದು–ಚೌಚೌ."

"ಹೋಗಲಿ ಬಿಡಿ. ಇಷ್ಟು ಸಾಲ್ದೇನು? ಹಣ್ಣು ಬೇರೆ ತಂದಿದೀರಾ."

........ರಾತ್ರೆಯ ಉಪಾಹಾರ ಮುಗಿಯಿತು.

ಎಚ್ಚರವಾಗದೆಯೆ ಇದ್ದ ಮಗುವಿಗೆ ಮೆತ್ತನ್ನ ಹಾಸಿಗೆ ದೊರೆಯಿತು.

ಶಂಕರನಾರಾಯಣಯ್ಯ ಒಂದು ಸಿಗರೇಟು ಸೇದುತ್ತಾ ಹಾಯಾಗಿ ಕುಳಿತ. ಚಂಪಾ ಮಗುವನ್ನೂ ಮಗುವಿನ ತಂದೆಯ ಮುಖವನ್ನೂ ಪ್ರೀತಿಯಿಂದ ನೋಡಿದಳು.

ದೀಪ ಆರಿಹೋಯಿತು.

"ಇಲ್ಲಿ ನಾವು ದೀಪ ಆರಿಸ್ಬೇಕಾದ ತೊಂದರೇನೇ ಇಲ್ಲ."

–ಎಂದು ಶಂಕರನಾರಾಯಣಯ್ಯ ನಕ್ಕ.

ಚಂಪಾವತಿಯೂ ನಕ್ಕಳು.

ಗಂಡ ಹೆಂಡತಿ ಇಬ್ಬರೂ ಹಾಸಿಗೆಯ ಮೇಲೆ ತಮಗೂ ಜಾಗ ಬೇಕೆಂದು ಮಗುವನ್ನು ಮೂಲೆಯಲ್ಲಿ ಮಲಗಿಸಿದರು.

ಹಗಲು ಬಯಸಿದ್ದನ್ನು ಈಗ ಆಕೆಯೇ ಕೊಟ್ಟಳು. ಅದನ್ನಾತ ಹುಸಿಮುನಿಸಿನಿಂದ ವಾಪಸು ಮಾಡಿದ. ಆಕೆ ಮತ್ತೆ ಕೊಡಹೋದಳು.

ಚಿತ್ರ ಬರೆಯುವ ಶಂಕರನಾರಾಯಣಯ್ಯ ಹೇಳಿದ :

"ಮೊದಲ ರಾತ್ರಿ."

## ೭

ಬೆಳಿಗ್ಗೆ ಐದು ಘಂಟೆಯಿಂದಲೇ ಆಗುತ್ತಿದ್ದ ಸದ್ದು ಸಪ್ಪಳ ಕೊನೆಯ ಮನೆಯ ದಂಪತಿಗಳನ್ನೂ ಎಚ್ಚರಗೊಳಿಸಿದುವು.

"ಈ ಮನೇಲಿ ನೀವು ಎಂಟು ಘಂಟೆವರೆಗೆ ನಿದ್ದೆ ಹೋದ ಹಾಗೆಯೇ"

ಎಂದು ಚಂಪಾ ಗಂಡನನ್ನು ಕುರಿತು ಹೇಳಿದಳು.

ಬೆಳಗಿನ ಬೆಚ್ಚಗಿನ ನಿದ್ದೆಗೆ ಅಷ್ಟು ಸುಲಭವಾಗಿ ಎಳ್ಳು ನೀರು ಬಿಡುವ ಹಾಗಿರಲಿಲ್ಲ ಶಂಕರನಾರಾಯಣಯ್ಯ. ಹೆಂಡತಿಯ ಸಮೀಪಕ್ಕೆ ಸರಿಯುತ್ತ ನಿದ್ದೆಯ ಗೊಗ್ಗರಧ್ವನಿಯಲ್ಲಿ ಆತ ಹೇಳಿದ :

"ಒಂದು ನಾಲ್ಕುದಿವಸ. ಅಷ್ಟರಲ್ಲೇ ಅಭ್ಯಾಸವಾಗಿ ಹೋಗ್ತದೆ."

"ನಿಮ್ಮ ಸುಖ ಬಿಟ್ಟುಕೊಟ್ಟೀರಾ ನೀವು? ನಾನು ಮಾತ್ರ ಇಲ್ಲಿ ಇನ್ನು ಆರು ಘಂಟೆಗೇ ಏಳಬೇಕು."

"ರಾತ್ರೆ ಬೇಗ್ನೆ ಮಲಕೊಂಡ್ಬಿಡು."

"ನೀವು ಬಿಟ್ಟರೆ!"

ಆತ 'ಊ' ಎಂದು ಗಂಟಲಿನಿಂದಲೆ ಸ್ವರ ಹೊರಡಿಸುತ್ತಾ, ಆಕೆಯ ಮೃದುವಾದ ತೋಳಿಗೆ ತನ್ನ ಮೂಗನ್ನು ತೀಡಿದ.

ಪುಣ್ಯಾತ್ಮನಿಗೆ ಮತ್ತೆ ನಿದ್ದೆ ಬಂದು ಬಿಟ್ಟಿತು. ಆ ಕತ್ತಲಲ್ಲೂ ಛಾವಣಿಯನ್ನೇ ದಿಟ್ಟಿಸುತ್ತಾ, ವಠಾರದಿಂದ ಒಂದೊಂದಾಗಿ ಹೊರ ಬರುತಿದ್ದ ಬಗೆಬಗೆಯ ಸದ್ದುಗಳಿಗೆ ಕಿವಿಗೊಡುತ್ತಾ, ನಿದ್ದೆಹೋಗಿದ್ದ ಮಗುವನ್ನು ಬಲತೋಳಲ್ಲಿ ಬಳಸಿಕೊಂಡು ಚಂಪಾ ಹೊತ್ತು ಕಳೆದಳು.

........ಹೊರಗಿನಿಂದ ಯಾರದೋ ಸ್ವರ ಕೇಳಿಸಿತು :

"ಘಂಟೆ ಆರಾಯ್ತು. ಕಾಮಾಕ್ಷಿ ಮನೆ ಗಡಿಯಾರ

ನೋಡ್ಕೊಂಡು ಬಂದೆ."

ಆರು ಆಗಿಹೋಯ್ತು ? ಈ ವಠಾರದ ಗವಿಯೊಳಕ್ಕೆ ಬೆಳಕು ಇಳಿಯುವುದೇ ತಡವೇನೊ ?–ಎಂದುಕೊಂಡಳು ಚಂಪಾ. ಮಲಗಿದ್ದು ಸಾಕೆಂದು ಎದ್ದು ಕುಳಿತಳು. ಆಕೆಯ ಕಿವಿಗೆ ಬಿದ್ದ ಗಡಿಯಾರ ಎಂಬ ಪದ ಬೇರೆ ಯೋಚನೆಗಳಿಗೂ ಕಾರಣವಾಯಿತು. ತನ್ನ ಬಾಣಂತಿತನದಲ್ಲಿ ಮಾರಾಟವಾಗಿ ಹೋಗಿತ್ತು ಗಂಡನ ಕೈ ಗಡಿಯಾರ. ಆ ಬಳಿಕ ತಾನೆಷ್ಟು ಪೀಡಿಸಿದರೂ ಆತ ಹೊಸತೊಂದನ್ನು ಕೊಂಡುಕೊಳ್ಳಲಿಲ್ಲ. ಮುಖ್ಯತಃ, ಹಾಗೆ ಕೊಂಡುಕೊಳ್ಳಲು ಹಣವಿರಲಿಲ್ಲ. ಅಲ್ಲಿಂದ ಇಲ್ಲಿಂದ ಆ ಕೆಲಸ ಈ ಕೆಲಸಕ್ಕೆಂದು ಮುಂಗಡ ಪಡೆಯುತಿದ್ದ ಹಣದಿಂದಲೇ ಸಂಸಾರದ ವೆಚ್ಚ ಸಾಗುತಿತ್ತು. ಅದರಲ್ಲಿಯೂ ನಾಲ್ಕು ಪುಡಿಕಾಸು ಎಂದಾದರೂ ಉಳಿದಾಗ, ತನಗಾಗಿ ಒಂದು ಸೀರೆಯನ್ನೋ ರವಕೆ ಕಣವನ್ನೋ ಮಗುವಿನ ಲಂಗಕ್ಕಾಗಿ ಬಟ್ಟೆಯನ್ನೋ ಆತ ತರುತಿದ್ದ.

ಹಾಗೆ ತಂದಾಗ ಚಂಪಾವತಿಯ ಹೃದಯ ತುಂಬಿ ಬರುತ್ತಿತ್ತು. ಆದರೆ ತನ್ನ ಸ್ವಂತಕ್ಕಾಗಿ ಆತ ಏನನ್ನೂ ಕೊಳ್ಳುತ್ತಿಲ್ಲವಲ್ಲಾ ಎಂದು ನೋವೂ ಆಗುತಿತ್ತು.

"ನಂಗೆ ಇದೆಲ್ಲಾ ಬೇಡೀಂದ್ರೆ. ಎಷ್ಟು ಸೀರೆ, ಎಷ್ಟು ರವಕೆ– ಸಾಕು ಇಷ್ಟೊಂದು"

—ಎಂದು ಗಂಡನೊಡನೆ ಆಕೆ ಜಗಳವಾಡಿದ್ದಳು.

"ನಿಂಗೆ ಬೇಡವಾದರೆ ಬೇರೆ ಯಾರಿಗಾದರೂ ಕೊಡ್ಲೇನು ?"

—ಆತ ನಗುತ್ತ ಕೆಣಕಿ ಮಾತನಾಡಿದ್ದ.

"ಸಾಕು ತಮಾಷೆ. ಯಾವತ್ತೂಂದ್ರೆ ನೀವು ಗಡಿಯಾರ ಕೊಂಡ್ಕೊಳ್ಳೋದು ?"

—ಆಕೆ ರೇಗಿ ಕೇಳಿದ್ದಳು.

"ಗಡಿಯಾರದ ಯೋಚ್ನೆ ಯಾತಕ್ಕಮ್ಮ ನಿಂಗೆ ? ನೀನು ಹೇಳೋ ಹೊತ್ತಿಗೆ ಮುಂಚೇನೆ ಮನೆ ಸೇರಿದ್ರೆ ಸಾಲ್ದೆ ?"

ಗಂಡ ಹಾಗೆ ಹೇಳಿದಾಗ ತುಂಬು ನೋಟದಿಂದ ಅವನನ್ನು

ತಾನು ನೋಡಿದ್ದಳು. ಆತನೋ ಘಾಟಿ. ಆ ಪರಿಸ್ಥಿತಿಯ ಪೂರ್ಣಲಾಭ ಪಡೆದಿದ್ದ.

........ಚಂಪಾ, ಬಿಚ್ಚಿದ್ದ ಕೂದಲ ರಾಶಿಯನ್ನು ಬಿಗಿ ಹಿಡಿದು ಗಂಟು ಹಾಕಿದಳು. ಅಗಣಿ ತೆಗೆದು ಕದವನ್ನಿಷ್ಟು ಓರೆ ಮಾಡಿ ಇಣಿಕಿ ನೋಡಿ ಓರೆಯಾದ್ದಕ್ಕೂ ದೃಷ್ಟಿ ಹಾಯಿಸಿದಳು. ಹಾಗೆಯೇ ನಡು ಹಾದಿಯ ಮೂಲಕ ಮುಖ್ಯ ಮನೆಯನ್ನೂ ದಾಟಿ ಹೊರ ಅಂಗಳಕ್ಕೆ ಹೋಗಿ, ವಠಾರದ ಆಚೆಗಿನ ಬೇರೆಯೇ ಒಂದು ಜಗತ್ತಿನಂತೆ ಕಂಡ ಆ ಬೀದಿ–ಮನೆಗಳನ್ನು ನೋಡಿದಳು.

ಆಕೆ ಅಲ್ಲಿ ನಿಂತಿದ್ದಂತೆಯೇ ವಠಾರದ ಹೆಂಗಸರು ಒಬ್ಬೊಬ್ಬರಾಗಿ ಬಂದು ತಮ್ಮ ಕೊಡವನ್ನೋ ಬಕೀಟನ್ನೋ ಕೊಳಾಯಿಯಿಂದ ಮೊದಲ್ಗೊಂಡು ಒಂದರಹಿಂದೊಂದಾಗಿ ಇರಿಸಿದರು. ಕೆಲವರು ತಮ್ಮ ಮನೆ ಗುರುತಿಗಾಗಿ ಬರಿಯ ಬಿಂದಿಗೆಗಳನ್ನೂ ಇಟ್ಟರು.

ರಾತ್ರೆ ತನ್ನೊಡನೆ ಮಾತನಾಡಿದ ಪದ್ಮಾವತಿ ಬಂದಾಗ ಚಂಪಾ ಮುಗುಳು ನಕ್ಕಳು.

"ಇನ್ನು ಸ್ವಲ್ಪ ಹೊತ್ನಲ್ಲೇ ಕೊಳಾಯಿ ಬೀಗ ತೆಗೆದ್ಬಿಡ್ತಾರೆ. ನಿಮ್ಮ ಕೊಡಾನೂ ಇಟ್ಬಿಡಿ"

—ಎಂದು ಪದ್ಮಾವತಿ ಹೊಸಬಳನ್ನು ಉದ್ದೇಶಿಸಿ ಹೇಳಿದಳು.

"ಹೊಸ್ರಿ ಇಡ್ತೀನಿ."

ಎಂದಳು ಚಂಪಾವತಿ. ಅಷ್ಟಕ್ಕೇ ಮಾತು ನಿಲ್ಲಿಸಲಾರದೆ ಅವಳೆಂದಳು :

"ಇಲ್ಲಿ ನೀರಿಗೆ ಕ್ಯೂ ನಿಂತ್ಕೋಬೇಕು ಅಲ್ವೆ?"

ಹಿಂದು ಮುಂದು ನೋಡಿ ಯಾರೂ ಇಲ್ಲವೆಂದು ಮನವರಿಕೆ ಮಾಡಿಕೊಂಡು ಪದ್ಮಾವತಿ ಹೇಳಿದಳು :

"ಇಲ್ಲಿ ಇದೊಂದು ಗೋಳು."

ಹಾಗೆಲ್ಲ ಹೇಳಲು ಆ ಹೆಂಗಸು ಹೆದರಿಕೊಳ್ಳುತಿದ್ದುದನ್ನು ಚಂಪಾ ಗಮನಿಸದಿರಲಿಲ್ಲ.

"ಜಾಸ್ತಿ ಜನ ಇದ್ದಕಡೆ ಹೀಗೆಲ್ಲಾ ಮಾಡ್ಲೇಬೇಕಾಗುತ್ತೆ."

ಎಂದು ಚಂಪಾವತಿಯೇ ನಿಜವಾದ ವಿಷಯವನ್ನು ಹೇಳಿದಳು.

"ಹೂ. ಮೊದ್ಲು ಮೀಟ್ರೇ ಇರ್ಲಿಲ್ವಂತೆ. ಆಗ ಎಷ್ಟು ಬೇಕಾದರೂ ಎಷ್ಟೊತ್ತಿಗೆ ಬೇಕಾದರೂ ನೀರು ಹಿಡಕೋತಿದ್ವು. ಮೀಟರು ಬಂದ್ಮೇಲೆ ಬೀಗ ಹಾಕೋಕೆ ಶುರುಮಾಡಿದ್ರು. ಆಗಲೂ ಇಷ್ಟು ತಾಪತ್ರಯ ಇರ್ಲಿಲ್ಲ. ಇಷ್ಟೇ ಹೊತ್ತು ಅಂತೇನೂ ಇರ್ಲಿಲ್ಲ. ಆಮೇಲೆ ನೀರು ಜಾಸ್ತಿ ಖರ್ಚಾಗುತ್ತೇಂತ ಗಲಾಟೆಸುರುವಾಯ್ತಮ್ಮ. ನಾನು ಮುಂಚೆ ನಾನು ಮುಂಚೆ ಅಂತ ಜಗಳ ಬೇರೆ. ಗೊತ್ತೇ ಇದೆಯಲ್ಲ ನೀರಿನ ಜಗಳ. ಇತ್ತೀಚೆಗೆ ನಾಲ್ಕೈದು ವರ್ಷಗಳಿಂದ ಹೀಗೆ ಕ್ಯೂ ನಿಲ್ಸೋಕೆ ರಂಗಮ್ಮ ಕಲಿಸಿದ್ರು."

"ರಂಗಮ್ನೋರು ಕಲಿಸಿದ್ರೆ?"

ಉತ್ತರ ಕೊಡಲು ಹೊರಟ ಪದ್ಮಾವತಿಯ ಸ್ವರ ತಾನಾಗಿಯೇ ತಗ್ಗಿತು.

"ಹೂಂ. ಅವರೇನೂಂತ ತಿಳಕೊಂಡ್ರಿ? ಒಂದು ದಿನ ಅವರು ಇಲ್ದೆ ಹೋಗ್ಲಿ–ಈ ವಠಾರ ನಡಿಯುತ್ಯೆ ಹೀಗೆ?"

"ಒಳಗೆ ಹೋಗ್ತೀನಪ್ಪ. ಮಗು ಎದ್ದಿದೆಯೋ ಏನೊ...."

ಎಂದು ಚಂಪಾ ಅವಸರವಾಗಿ ತನ್ನ ಗೂಡಿನತ್ತ ಬಂದಳು.

ಮಗು ಎದ್ದಿರಲಿಲ್ಲ. ಹ್ಯಾಗೂ ತಾನು ಕೊನೆಯವಳು; ನೀರಿಗೆ ಪಾತ್ರೆ ಆಮೇಲೆ ಇಟ್ಟರಾಯ್ತು ಎಂದು ಒಲೆಹಚ್ಚಿದಳು. ಬಿಸಿ ನೀರು ಕಾಯಿಸುವುದಕ್ಕಾಗಿಯೇ ಇದ್ದ ಸಣ್ಣ ಹಂಡೆಯಲ್ಲಿ ನೀರು ಕಾಯಿಸಿದಳು. ಸ್ನಾನವನ್ನೂ ಮಾಡಿ ಮುಗಿಸಿ ಕಾಫಿಗೆ ನೀರಿಟ್ಟಳು. ಹಾಲಿನವಳನ್ನು ಗೊತ್ತುಮಾಡುವ ಕೆಲಸವೊಂದಿತ್ತು. ಓಣಿಯೊಳಗೆ ಹಾಲವ್ವ ಬರುವ ಸದ್ದಿಗೆ ಆಕೆ ಕಿವಿಗೊಟ್ಟಳು.

ಹಾಲವ್ವನಿಗೆ ಸಂಬಂಧಿಸಿದ ಸಂಭಾಷಣೆ—ಎಷ್ಟೊಂದು ಕಡೆ ಚಂಪಾ ಕೇಳಿದ್ದಳು ಅದನ್ನು. ಆದರೆ ಎಲ್ಲ ಕಡೆಗಳಲ್ಲೂ ಆ ಮಾತು ಕತೆಯ ರೀತಿಯೊಂದೇ.

ಈ ಓಣಿಗೆ ಬೇರೆ ಬೇರೆಯಾಗಿಯೇ ಇಬ್ಬರು ಬಂದರು. ಎದುರು ಮನೆಗೊಬ್ಬಳು, ಪಕ್ಕದ ಮನೆಗೊಬ್ಬಳು.

ಸ್ವರಗಳು ಕೇಳಿಸಿದುವು.

"....ಅಯ್ಯೊ ನೀರೇ!"

"....ಇನ್ನೂ ಸ್ವಲ್ಪ ಹಾಕು."

"....ಹೂಂ. ಕೊಸರು."

ಚಂಪಾ ಒಂದು ಲೋಟವನ್ನು ಕೈಯಲ್ಲಿ ಹಿಡಿದು ಬಾಗಿಲಿಗೆ ಬಂದು ನಿಂತಳು.

ತನ್ನ ಮನೆಯ ಬಾಗಿಲಲ್ಲಿ ಹಾಲಿನ ಪಾತ್ರೆಯೊಡನೆ ನಿಂತಿದ್ದ ಪದ್ಮಾವತಿ ಕೇಳಿದಳು :

"ಹಾಲು ಹಾಕಿಸ್ಕೋತೀರಾ?"

"ಹೂಂ ಕಣ್ರೀ...."

ಪದ್ಮಾವತಿ ಹೊಸ ಬಿಡಾರದವರ ಪರವಾಗಿ ಮಾತನಾಡಿದಳು :

"ವರ್ತನೆ ಗೊತ್ಮಾಡ್ಕೋತಿಯೇನವ್ವಾ ?"

ಹಾಲವ್ವ ಚಂಪಾವತಿಯನ್ನು ನೋಡುತ್ತ ಕೇಳಿದಳು :

"ಎಷ್ಟು ಬೇಕು ?"

ಉತ್ತರವನ್ನು ಹಾಲವ್ವಳೊಬ್ಬಳೇ ಅಲ್ಲ, ಸುತ್ತಲಿದ್ದ ಹಲವರು ಇದಿರು ನೋಡಿದರು. ಹೊಸ ಮನೆಯವರು ಎಷ್ಟು ಹಾಲು ಕೊಳ್ಳುವ ರೆಂದು ತಿಳಿಯಲು ಅವರೆಲ್ಲರಿಗೂ ಕುತೂಹಲವಿತ್ತು.

ಹಾಲವ್ವಳೊಬ್ಬಳನ್ನೇ ನೋಡುತ್ತಾ ಚಂಪಾ ಅಂದಳು :

"ಒಂದು ಪಾವು."

"ಚಂಜೆಗೂ ಆಕಿಸ್ಕೊಂತೀರಾ ?"

"ಇಲ್ಲ. ಬೆಳಿಗ್ಗೆ ಮಾತ್ರ."

ದಿನಕ್ಕೊಂದೇ ಪಾವು. ಇವರೂ ನಮ್ಮ ಹಾಗೆಯೇ ಎಂದು ಕೊಂಡರು ಚಂಪಾವತಿಯ ಉತ್ತರ ಕೇಳಿದವರೆಲ್ಲ.

"ಅಂಗೇ ಮಾಡಿ."

"ಇವತ್ನಿಂದ್ಲೇ ಹಾಕು."

ಹಾಲವ್ವ ಅನುಮಾನಿಸಿದಳು.

"ಇನ್ನೂ ಹತ್ತು ಮನೆ ಐತ್ರವ್ವ" ಅಂದಳು.

"ಹತ್ತಿರ ಜತೇಲಿ ಹನ್ನೊಂದು, ಹೆಂಗೋ ಸುಧಾರಿಸ್ಕೊಂಡ ರಾಯ್ತು. ಕೊಟ್ಬಿಡವ್ವಾ."

ಎಂದು ಪದ್ಮಾವತಿಯೂ ಶಿಫಾರಸು ಮಾಡಿದಳು.

ಹಾಲವ್ವ ಒಂದು ಪಾವು ಅಳೆದಳು.

"ಹೆಂಗೆ ?"

ಎಂದಳು ಚಂಪಾ ದರ ವಿಚಾರಿಸುತ್ತಾ.

ಹಾಲವ್ವ ಬುಟ್ಟಿಯನ್ನು ತಲೆಯಮೇಲಿರಿಸಿ ಎದ್ದು ನಿಂತು ಅಂದಳು :

"ಇವರೆಲ್ಲಾ ಎಂಗ್ಕೊಡ್ತಾರೊ ಅಂಗೆ. ಅವರ್ಗೊಂದು ನಿಮ್ಗೊಂದಾ? ರೂಪಾಯಿಗೆ ಎಲ್ಡು ಸೇರು. ನೀರಾಲೂಂತ ಜಗಳ ಮಾತ್ರ ಕಾಯ್ಬಾರ್ದು. ಈಗ್ಲೇ ಏಳಿದೀನಿ."

ನಿರುತ್ತರಳಾಗಿದ್ದ ಪದ್ಮಾವತಿ ಹಾಲವ್ವನ ಮಾತನ್ನು ಅಲ್ಲಗಳೆಯ ಲಿಲ್ಲ. ಚಂಪಾ ಒಳಹೋಗಿ ಹಾಲನ್ನು ಬಿಸಿಗಿಟ್ಟಳು.

"ಏಳೀಂದ್ರೆ. ಕಾಫಿ ಆರ್ಹೋಗುತ್ತೆ."

ಎಂದು ಗಂಡನನ್ನು ಎರಡು ಮೂರು ಸಾರೆ ಕರೆದು ಎಬ್ಬಿಸಿದಳು.

ಕಾಫಿ ಕುಡಿದು ಶಂಕರನಾರಾಯಣಯ್ಯ ಅಳುತ್ತಲೇ ಎದ್ದ. ಮಗುವನ್ನು ಸಂತೈಸಲು ಯತ್ನಿಸಿದ. ಒಂದು ಸಿಗರೇಟು ಹಚ್ಚಿಕೊಂಡು ಉಂಗುರ ಉಂಗುರವಾಗಿ ಹೊಗೆಯುಗುಳುತ್ತಾ ಅದನ್ನು ಮಗುವಿಗೆ ತೋರಿಸುತ್ತಾ ಆಟವಾಡಿಸಿದ.

ಆದರೆ ಆ ಮಗಳು ಅಳು ನಿಲ್ಲಿಸಿದ್ದು, ತಾಯಿ ಎತ್ತಿಕೊಂಡಾಗಲೆ.

"ನಿನ್ನ ಮಗಳೇನೇ. ಯಾವ ಸಂಶಯವೂ ಇಲ್ಲ."

"ಹೇಳಿದ್ದನ್ನೇ ಎಷ್ಟು ಸಾರೆ ಹೇಳ್ತೀರಾ?"

ಚಂಪಾ ಗಂಡನನ್ನು ಟೀಕಿಸಿದಳು.

"ಹೋಗಿ ಏನಾದರೂ ತರಕಾರಿ ತಗೊಂಡ್ಬನ್ನಿ"

ಎಂದು ಗಂಡನಿಗೆ ಕೆಲಸ ಕೊಟ್ಟಳು.

ಅಷ್ಟರಲ್ಲೆ ಊರುಗೋಲಿನ ಟಕ್‌ಟಕ್ ಸದ್ದಾಯಿತು. ಗಂಟಲಿ ನಿಂದ ಹೊರಡುತಿದ್ದ ನರಳುವ ಸ್ವರ ಕೇಳಿಸಿತು. ಶಂಕರನಾರಾಯಣಯ್ಯ

ಹೆಂಡತಿಯ ಮುಖ ನೋಡಿದ. ಹೆಂಡತಿ ಗಂಡನ ಮುಖ ನೋಡಿದಳು.

ಮರುಕ್ಷಣವೆ ರಂಗಮ್ಮ ಬಾಗಿಲಲ್ಲಿ ಪ್ರತ್ಯಕ್ಷವಾದರು :

"ಚೆನ್ನಾಗಿದೀರೇನಪ್ಪ. ಎಲ್ಲಾ ಅನುಕೂಲವಾಗಿದ್ಯೆ?"

ಶಂಕರನಾರಾಯಣಯ್ಯನಿಗೆ ಕೈಲಿದ್ದ ಸಿಗರೇಟನ್ನು ಏನು ಮಾಡಬೇಕೋ ತಿಳಿಯಲಿಲ್ಲ. ತನಗೆ ವಯಸ್ಸು ಮೂವತ್ತೈದು ಆಗಿದ್ದರೂ ರಂಗಮ್ಮನಂತಹ ವಯಸ್ಕರೆದುರಲ್ಲಿ ತಾನು ಹುಡುಗನೇ ಎಂದು ಆತನಿಗೆ ಭಾಸವಾಗುತಿತ್ತು. ಆದರೂ ಆತ ಸಿಗರೇಟನ್ನು ಆರಿಸ ಲಿಲ್ಲ. ಸ್ವಲ್ಪ ಮರೆಮಾಡಿ, ಕುಳಿತಲ್ಲಿಂದಲೇ ಹೇಳಿದ.

"ಓಹೋ. ಎಲ್ಲಾ ಸರಿಯಾಗಿಯೇ ಇದೆ. ಒಳಗ್ಬನ್ನಿ ರಂಗಮ್ನೋರೆ."

"ಇಲ್ಲವಪ್ಪಾ. ಬೆಟ್ಟದಷ್ಟು ಬಿದ್ದಿದೆ ಕೆಲಸ....ಏನ್ಮಾಡ್ತಿದಾಳೆ ಮಗಳು ?"

"ನೋಡಿ, ಒಂದುಸಲ ಪಿಟೀಲು ಬಾರಿಸಿಯಾಯ್ತು"

—ಎಂದು ಚಂಪಾ ಉತ್ತರವಿತ್ತಳು.

"ಹೂಂ. ನೀರು ಎಲ್ಲರೂ ಹಿಡಕೊಂಡದ್ದಾಯ್ತು....ಯಾರೋ ಒಬ್ಬಿಬ್ಬರು ಮಾತ್ರ ಇದಾರೇಂತ ತೋರುತ್ತೆ. ನೀವು ಬಂದ್ಬಿಡೀಂತ ಹೇಳ್ಹೋಕೆ ಬಂದೆ."

"ಬಂದೆ ರಂಗಮ್ನೋರೆ."

ರಂಗಮ್ಮ ಹಿಂತಿರುಗಿದೊಡನೆ ಶಂಕರನಾರಾಯಣಯ್ಯ ಕೇಳಿದ :

"ನಾನು ಹೋಗಿ ಮೂರು ಕೊಡ ತಂದ್ಬಿಡ್ಲೇನೆ ?"

"ನಿಮ್ಮ ದಮ್ಮಯ್ಯ, ಅಷ್ಟು ಮಾಡ್ಬೇಡಿ ಸದ್ಯ. ನೀರು ನೀವು ಹೊತ್ತದ್ದು ಇವರೆಲ್ಲಾ ನೋಡ್ಬಿಟ್ರೆ ಆಗ್ಹೋಯ್ತು."

"ಹಾಗಂತೀಯಾ ?"

"ಹೂಂ. ಹಾಗಂತೀನಿ........ಸಿಗರೇಟು ಸೇದ್ಕೊಂಡು ಇಲ್ಲೇ ಇರಿ. ಮಗೂನ ನೋಡ್ಕೊಳ್ಳಿ ಸ್ವಲ್ಪ. ಬಂದ್ಬಿಟ್ಟೆ."

"ಆಗಲಿ ಅಮ್ಮಣ್ಣಿ."

....ಚಂಪಾ ನೀರು ತುಂಬಿಸಿಯಾದ ಮೇಲೆ, ಶಂಕರನಾರಾಯ

ಣಯ್ಯ ಅಂಗಡಿಬೀದಿಗೆ ಹೋಗಿ ತರಕಾರಿ ತಂದ. ಆತ ಹಿಂತಿರುಗುವಷ್ಟರಲ್ಲಿ, ವಠಾರದ ಗಂಡಸರಲ್ಲಿ ಹೆಚ್ಚಿನವರೆಲ್ಲ ಹೊರ ಹೋಗಿದ್ದರು. ಗುಂಡಣ್ಣನೊಬ್ಬ ಗೇಟಿನ ಬಳಿ ನಿಂತು ಮುಗುಳ್ನಕ್ಕ. ಶಂಕರನಾರಾಯಣಯ್ಯ, ರಾತ್ರೆ ತನ್ನನ್ನು ಮಾತನಾಡಿಸಿದವನ ನೆನಪಾಗಿ, ಮಹಡಿಯತ್ತ ನೋಡಿದ. ಮೂಲೆಯ ಕಿಟಕಿಯಿಂದ ಕುಡಿಮೀಸೆ ಇದೇ ಈಗ ಚಿಗುರೊಡೆಯುತಿದ್ದ ಮುಖವೊಂದು ಆತನನ್ನು ನೋಡುತಿತ್ತು. ಹಾಗೆ ನೋಡುತ್ತಿದ್ದವನು ಜಯರಾಮು. ಈ ಹುಡುಗ ರಾತ್ರೆ 'ಯಾರು?' ಎಂದು ತನ್ನನ್ನು ಕೇಳಿರಲಾರ—ಎನ್ನಿಸಿತು ಶಂಕರನಾರಾಯಣಯ್ಯನಿಗೆ. ಆತ ಸಮಸ್ಯೆಯ ಪರಿಹಾರಕ್ಕಾಗಿ ಗುಂಡಣ್ಣನ ನೆರವು ಕೇಳಿದ.

"ನಿಮ್ಮ ಹೆಸರು ಗೊತ್ತಾಗ್ಲಿಲ್ಲ."

"ಗುಂಡಣ್ಣ ಅಂತ."

ಹೊಸಬರು ತಾವಾಗಿಯೇ ಆ ರೀತಿ ತನ್ನ ಪರಿಚಯ ಮಾಡಿಕೊಂಡರೆಂದು ಗುಂಡಣ್ಣನಿಗೆ ಹೆಮ್ಮೆ ಎನಿಸಿತು.

"ನನ್ನ ಹೆಸರು ಶಂಕರನಾರಾಯಣಯ್ಯ."

"ಗೊತ್ತು. ರಂಗಮ್ನೋರು ಮೊನ್ನೆಯೇ ಹೇಳಿದ್ರು."

"ಹಾಗೇನು? ಮಹಡಿ ಮೇಲೆ ಯಾರಿರ್ತಾರೆ ಗುಂಡಣ್ಣ?"

"ಸ್ಕೂಲು ಹುಡುಗರು"

—ಎಂದು ತಾತ್ಸಾರದಿಂದ ಹೇಳಿ ಗುಂಡಣ್ಣ ಮುಂದುವರಿಸಿದ:

"ಆ ಕೊನೇಲಿ ಬುಕ್ ಏಜಂಟು—ಪುಸ್ತಕ ಮಾರ್ತಾರೆ. ಅಲ್ಲಿ ನಿಂತಿದಾನಲ್ಲಾ ಅವನೇ—ಅವರ ಮಗ ಜಯರಾಮು."

ತನ್ನ ಪ್ರಸ್ತಾಪ ಬಂತೆಂದು ಜಯರಾಮು ಮುಖ ತಿರುಗಿಸಿದ. ಆದರೆ ಗುಂಡಣ್ಣನ ಉತ್ತರದಿಂದ ಶಂಕರನಾರಾಯಣಯ್ಯನ ಸಮಸ್ಯೆ ಬಗೆಹರಿಯಲಿಲ್ಲ.

"ಬೇರೆ ಯಾರೂ ಇಲ್ವೇನು?"

"ಇದಾರೆ–ಚಂದ್ರಶೇಖರಯ್ಯ ಅಂತ ಒಬ್ರು–ಇನ್‌ಶೂರೆನ್ಸು...."

ಗುಂಡಣ್ಣನ ಮಾತು ಪೂರೈಸುವುದಕ್ಕೆ ಮುಂಚೆಯೇ ಶಂಕರ

ನಾರಾಯಣಯ್ಯ, ಮನೆಯತ್ತ ಬೇಗ ಬೇಗನೆ ಕಾಲು ಹಾಕಿದ. ಆ ಯುವಕನೇ. ಸಂದೇಹವಿರಲಿಲ್ಲ. ಪರಿಚಯ ಮಾಡಿಕೊಳ್ಳುವ ಯೋಚನೆ! ವಿಮಾ ಸಂಸ್ಥೆಯ ಪ್ರತಿನಿಧಿಯೊಡನೆ ಪರಿಚಯವೆ? ವಠಾರದಲ್ಲಿ ತಾನು ದೂರವಿಡಬೇಕಾದ ವ್ಯಕ್ತಿ ಈ ಚಂದ್ರಶೇಖರಯ್ಯ ಎಂದು ಆತ ಆಗಲೆ ತೀರ್ಮಾನಿಸಿದ.

ಹೊತ್ತು ಏರುತಿತ್ತು. ಹೆಂಗಸರು ಮಕ್ಕಳಿಂದಷ್ಟೆ ತುಂಬಿದ ವಠಾರ. ಇದು ಹೊಸ ಜಾಗವಲ್ಲ, ಬಹಳ ದಿನಗಳಿಂದಲೂ ತಾನು ನೋಡುತ್ತಲೇ ಇದ್ದ ದೃಶ್ಯ, ಎಂದು ಆತನಿಗೆ ಭಾಸವಾಯಿತು.

ಬಾಗಿಲಿನೊಳಕ್ಕೆ ಕಾಲಿಡುತ್ತಲೇ ಆತ ಹೇಳಿದ:

"ಏ ಚಂಪಾ. ಇಷ್ಟು ಹೊತ್ತಿಗೆ ವಠಾರದಲ್ಲಿ ಗಂಡಸರು ಯಾರೂ ಇರಲ್ವಲ್ಲೇ! ಇನ್ನು ನಾನೂ ಬೆಳಿಗ್ಗೆ ಎದ್ದ ಕ್ಷಣ ಹೊರಟ್ಬಿಡ್ಬೇಕು."

"ಯಾಕೊ?"

"ಮತ್ತೆ! ನಾನು ವಠಾರದಲ್ಲೇ ಇದ್ದರೆ ಸುಮ್ನಿರ್ತಾರ್ಯೆ ಇವರೆಲ್ಲ?"

"ಏನ್ಮಾಡ್ತಾರೆ?"

"ಈ ಚಂಪಾ ಗಂಡನನ್ನ ಮನೇಲೆ ಇಟ್ಕೊಂಬಿಡ್ತಾಳೆ ಅಂತಾರೆ."

"ಸಾಕು ನಿಮ್ಮತಮಾಷೆ. ಬಾಗಿಲು ಅಡ್ಡ ಮಾಡಿ ಸ್ವಲ್ಪ ತರಕಾರಿ ಹೆಚ್ಚಿ. ಅದೇನು ತಂದಿದೀರೊ?"

"ನೋಡಿದ್ಯಾ? ಚಾಕರೀನೂ ಮಾಡಿಸ್ಕೋತಾಳೆ–ಅಂತ ಅವರು ಹೇಳಿದ್ರೂ ತಪ್ಪೇನು?"

ಶಂಕರನಾರಾಯಣಯ್ಯ ಹನ್ನೊಂದು ಘಂಟೆಯ ಹೊತ್ತಿಗೆ ಸ್ನಾನ ಊಟ ಎರಡೂ ಮುಗಿಸಿ ಗಾಂಧಿನಗರಕ್ಕೆ ಹೊರಟ. ಕೋಹಿನೂರು ಹಂಚಿಕೆಗಾರರಿಗೋಸ್ಕರ, ಆರು ತಿಂಗಳ ಅನಂತರ ಬಿಡುಗಡೆಯಾಗಲಿದ್ದ ಒಂದು ಹಿಂದೀ ಚಲಚ್ಚಿತ್ರಕ್ಕೆ ಜಾಹೀರಾತು ಚಿತ್ರ ಬರೆಯುವ ಕೆಲಸ ಆರಂಭವಾಗಿತ್ತು. ಮನುಷ್ಯರನ್ನು ಇದ್ದುದಕ್ಕಿಂತಲೂ ನಾಲ್ಕು ಪಾಲು ಗಾತ್ರದಲ್ಲಿ ತೋರಿಸುವ ಚಿತ್ರಗಳು. ಬಟ್ಟೆಯ ಮೇಲೆ ಅಳತೆ ಕೋಲಿನ ಆಧಾರದಿಂದ ಪ್ರತಿರೂಪವನ್ನು ಒಡಮೂಡಿಸಿ, ದೊಡ್ಡದೊಡ್ಡ ಬ್ರಷ್ ಹಿಡಿದು ಬಣ್ಣ ಬಳೆಯುವ ಕೆಲಸ.

ಚಪ್ಪಲಿ ಮೆಟ್ಟಿಕೊಂಡು ಶಂಕರನಾರಾಯಣಯ್ಯ ಅಂಗಳಕ್ಕಿಳಿದ. ಚಂಪಾ ಕೂಸನ್ನೆತ್ತಿಕೊಂಡು ಗೇಟಿನವರೆಗೂ ಆತನನ್ನು ಹಿಂಬಾಲಿಸಿ ಬಂದಳು.

ಗೇಟಿನ ಹೊರಗೆ ಒಂದು ಕ್ಷಣ ನಿಂತು ಶಂಕರನಾರಾಯಣಯ್ಯ ಕೇಳಿದ :

"ಏನಾದರೂ ತರ್ಬೇಕೇನು ?"

—"ದುಡ್ಡು ಕೈಗೆ ಬರೋ ಲಕ್ಷಣ ಇದೆಯೊ ?"

"ಅದ್ಯಾಕೆ ನಿಂಗೆ? ಏನಾದರೂ ಬೇಕೆ ಹೇಳು."

"ನಂಗೇನೂ ಬೇಡೀಪ್ಪಾ."

"ಸರಿ ಮತ್ತೆ!"

ಬಲು ಸುಲಭವಾಗಿ ರೇಗುವ ಗುಣವಿತ್ತು ಶಂಕರನಾರಾಯಣಯ್ಯ ನಿಗೆ. ಆತ ರೇಗಿದೊಡನೆ ಚಂಪಾಗೆ ಸಂತೋಷವಾಗುತ್ತಿತ್ತು.

"ಹೋಗಲಿ. ಹಾದೀಲಿ ಎಲ್ಲಾದರೂ ಸಿಕ್ಕಿದರೆ ಒಂದು ಕುಚ್ಚು ಹೂ ತನ್ನಿ."

"ಅಬ್ಬ!"

ವಠಾರದ ಮುಂಭಾಗದ ಕಿಟಕಿಗಳಿಂದಲೂ ಬೀದಿಯಾಚೆಗಿನ ಎದುರು ಮನೆಗಳಿಂದಲೂ–ಬೀದಿಯಲ್ಲಿ ನಡೆದು ಹೋಗುತಿದ್ದ ಕೆಲವರೂ ಕೂಡಾ ರಂಗಮ್ಮನ ವಠಾರದೆದುರು ಸಲ್ಲಾಪ ನಡೆಸುತ್ತಿದ್ದ ದಂಪತಿ ಗಳನ್ನು ನೋಡುತಿದ್ದರು. ಆ ದೃಷ್ಟಿಗಳ ಬಿಸಿ ತಾಕುತ್ತಲೇ ಶಂಕರ ನಾರಾಯಣಯ್ಯ ಹೇಳಿದ :

"ಹೀಗೆ ನಾವು ನಿಂತು ಮಾತನಾಡೋದು ಸರಿಯಲ್ಲ ಕಣೇ."

"ಯಾಕೊ ?"

"ನಾವು ಗಂಡ ಹೆಂಡತಿ ಅಲ್ಲಾಂತ ತಿಳಕೊಂಡ್ಬಿಟ್ಟಾರು ಯಾರಾದರೂ !"

"ಓಹೋ !"

"ಗಂಡ–ಹೆಂಡತಿ ಎಲ್ಲಿಯಾದರೂ ಇಷ್ಟು ಅನ್ಯೋನ್ಯವಾಗಿ ಇರ್ತಾರೇನೆ ?"

“ಹೋಗೀಪ್ಪಾ. ಸಾಕು ನಿಮ್ಮ ಚೇಷ್ಟೆ.”

ಆತ ಬೀದಿಗಿಳಿಯುತಿದ್ದಂತೆ ಚಂಪಾ ಮೇಲು ಧ್ವನಿಯಲ್ಲಿ ಎಚ್ಚರಿಕೆಯ ಮಾತನ್ನಾಡಿದಳು :

“ಸಾಯಂಕಾಲ ಜಾಗ್ರತೆ ಬಂದ್ಬಿಡಿ....”

ಹೆಂಡತಿಯೊಡನೆ ಮಾತನಾಡುತಿದ್ದ ಶಂಕರನಾರಾಯಣಯ್ಯ ಮಹಡಿಯತ್ತ ತಿರುಗಿ ನೋಡಿಯೇ ಇರಲಿಲ್ಲ. ಚಂದ್ರಶೇಖರಯ್ಯ ಎಲ್ಲಾದರೂ ತನ್ನನ್ನು ನೋಡಿ ‘ನಮಸ್ಕಾರ’ವೆನ್ನಬಹುದೆಂದು ಆತ ಹೆದರಿದ್ದ.

ಚಂಪಾ ಒಳಹೋಗುತಿದ್ದಂತೆ ರಂಗಮ್ಮ ಕೇಳಿದರು :

“ದಿನಾ ಇಷ್ಟುಹೊತ್ತಿಗೆ ನಿಮ್ಮ ಯಜಮಾನರು ಕೆಲಸಕ್ಕೆ ಹೋಗ್ತಾರೋ ?”

“ಹೂಂಕಣ್ರೀ.”

“ವಾಪಸು ಬರೋದು ?”

“ಸಾಯಂಕಾಲ.”

ಈ ಹೊಸ ಸಂಸಾರದ ರೀತಿ ನೀತಿಗಳ ವಿಷಯವಾಗಿ ವಠಾರದಲ್ಲಿ ಆ ದಿನವೆಲ್ಲಾ ಗುಜುಗುಜು ಟೀಕೆ ಟಿಪ್ಪಣಿಗಳಾದುವು.

೮

ಕಾಗದ ಬರೆದಿದ್ದಂತೆ ಜಯರಾಮುವಿನ ತಂದೆ ಆ ತಿಂಗಳ ಕೊನೆಯಲ್ಲಿ ಬಂದರು. ಪುಸ್ತಕ ತುಂಬಿದ್ದ ದೊಡ್ಡ ಪೆಟ್ಟಿಗೆಯೂ ಅವರ ಜತೆಯಲ್ಲೇ ಇತ್ತು. ಪ್ರಕಾಶಕರಲ್ಲಿ ಅದನ್ನೊಯ್ದು ಲೆಕ್ಕ ನೋಡುವುದರೊಳಗಾಗಿ, ಯಾವ ಪುಸ್ತಕಗಳಿವೆ ಎಂದೆಲ್ಲ ನೋಡಿಬಿಡಬೇಕೆಂದು ಜಯರಾಮುಗೆ ಅಪೇಕ್ಷೆಯಾಯಿತು. ರಾಧೆಯಂತೂ ಕಾದಂಬರಿಗಳ ಹುಚ್ಚಿ. ಅಣ್ಣ ತಂಗಿ ಇಬ್ಬರೂ ಸೇರಿ ಪೆಟ್ಟಿಗೆಯನ್ನು ಪರೀಕ್ಷಿಸಲು ಅಪ್ಪನ ಸಮ್ಮತಿ ಕೇಳಿದರು. ಮನೆಯಲ್ಲೆ ಇದ್ದರೂ ಇಲ್ಲದವರಂತೆ ವರ್ತಿಸುತಿದ್ದ ತಂದೆಗೆ, ಮಕ್ಕಳು ಹಾಗೆಲ್ಲ ಸಮ್ಮತಿ ಕೇಳುವುದು ಅಗತ್ಯವೆಂದೇ ತೋರಲಿಲ್ಲ. ಆದರೂ ಆ ಮಕ್ಕಳು ಚಿಕ್ಕವರಿದ್ದಾಗ, ಪುಸ್ತಕವೆಳೆದುಕೊಂಡು ಕಿತ್ತಾಡದಂತೆ ಎಚ್ಚರವಹಿಸಿ ರೂಢಿಯಾಗಿದ್ದ ತಂದೆ, ಈಗಲೂ ಅದೇ ಸ್ವರದಲ್ಲಿ ಅಂದರು :

"ಪುಸ್ತಕಗಳ್ನ ಹುಷಾರಾಗಿ ಹಿಡೀರೀಪ್ಪಾ. ತುಂಬಾ ಕೊಳೆಯಾದರೆ ನನ್ನ ತಲೆಗೇ ಕಟ್ತಾನೆ ಆ ಮಹಾರಾಯ. ಈಗಾಗ್ಲೇ ಕೊಂಡುಕೊಳ್ಳೋರು ಮುಟ್ಟೀಮುಟ್ಟಿ ಎಷ್ಟೋ ಪುಸ್ತಕ ಜಜಿಬಿಜಿಯಾಗಿದೆ."

ತಾವು ಎಚ್ಚರದಿಂದ ಇರದೇ ಇದ್ದರೆ ಸಂಪಾದನೆಗೆ ಕತ್ತರಿ ಬೀಳುವ ಪ್ರಮೇಯ. ಜಯರಾಮುಗೆ ಅದೆಲ್ಲ ಈಗ ಅರ್ಥವಾಗುತಿತ್ತು. ಹಿಂದಿನಿಂದಲೂ ಆತ ಪುಸ್ತಕಗಳನ್ನು ಕೂಡಿಡುತಿದ್ದ. ಹಿಂದೆ ಹೊಸ ಹೊಸ ಪುಸ್ತಕ ಹೊತ್ತು ಮಾರಾಟಕ್ಕೆಂದು ತಂದೆ ಹೊರಟಾಗ, ಭಾರಿ ಬೆಲೆಯ ಕೆಲವನ್ನು ಬಿಟ್ಟು ಉಳಿದ ಪುಸ್ತಕಗಳನ್ನೆಲ್ಲಾ ಒಂದೊಂದು ಪ್ರತಿ ಜಯರಾಮು ಎತ್ತಿ ಇಡುತಿದ್ದ. ಆಗ, ಇದರಿಂದೆಲ್ಲ ತಮಗೇ

ನಷ್ಟವಾಗುವುದೆಂದು ಆತನಿಗೆ ಗೊತ್ತಿರಲಿಲ್ಲ. ಕ್ರಮೇಣ "ಜನ ಪುಸ್ತಕ ಕೊಳ್ಳೋದೇ ಕಡಿಮೆಯಾಗ್ಬಿಟ್ಟಿದೆ" ಎಂಬ ಮಾತು ಅಪ್ಪನ ಬಾಯಿಂದ ಬರುತಿತ್ತು. ಬೇಸರದ ಆ ಧ್ವನಿ ಕೇಳಿದಾಗ ಜಯರಾಮುಗೆ ತಾನು ಆ ಪುಸ್ತಕಗಳನ್ನು ಮುಟ್ಟುವುದೇ ತಪ್ಪು ಎನಿಸುತಿತ್ತು. ಒಮ್ಮೊಮ್ಮೆ, ತನಗೆ ಪ್ರೀತಿಪಾತ್ರವೆನಿಸಿದ ಯಾವುದಾದರೂ ಪುಸ್ತಕವನ್ನು ಕಂಡು ಆತ "ಅಪ್ಪಾ, ಇದೊಂದನ್ನ ಇಟ್ಕೊಳ್ಲೇ ಅಪ್ಪ?" ಎಂದರೆ, ತಂದೆ, "ಆ ಪ್ರತಿ ಬೇಡವೋ, ಕೊಳೆಯಾಗಿರೋದು ತಗೊಳೋ" ಎನ್ನುತಿದ್ದರು. ಆ ಬಳಿಕ ಕೊಳೆಯಾದ ಪುಸ್ತಕಗಳನ್ನಷ್ಟೆ ಬಯಸುವುದು ಜಯರಾಮುಗೆ ಅಭ್ಯಾಸವಾಯಿತು.

ಅಣ್ಣ—ತಂಗಿ ಆ ದೊಡ್ಡ ಪೆಟ್ಟಿಗೆಯನ್ನು ತೆರೆದು ನೋಡಿದರು. ತಂದೆ ಹೋಗುತ್ತ ಒಯ್ದಿದ್ದ ಪುಸ್ತಕಗಳಲ್ಲಿ ಹೆಚ್ಚಿನವು ಹಾಗೆಯೇ ಇದ್ದುವು. ಪರ ಊರಿನ ಪ್ರಕಾಶಕರಿಂದ ಪಡೆದಿದ್ದ ಕೆಲವನ್ನು ಮಾತ್ರ ಈ ಮೊದಲು ಅಣ್ಣ—ತಂಗಿ ಕಂಡಿರಲಿಲ್ಲ.

"ಓ! ಇದು ಚೆನ್ನಾಗಿದೇಂತ ತೋರುತ್ತೆ. ಅಲ್ವೆ ಅಣ್ಣ?"

–ಎಂದಳು ರಾಧಾ ಗಾತ್ರದೊಂದು ಕಾದಂಬರಿಯನ್ನೆತ್ತಿಕೊಂಡು.

ತಂಗಿಯ ಪ್ರಶ್ನೆಗೆ ಅಣ್ಣ ಉತ್ತರ ಕೊಡಲಿಲ್ಲ. ಪುಸ್ತಕಗಳನ್ನು ನೋಡುತ್ತ ಆತನ ಹೃದಯ ಕುಗ್ಗಿ ಹೋಯಿತು. ಕಣ್ಣುಗಳಿಗೆ ಮಂಜು ಕವಿಯಿತು. ಈ ಸಲದ ಪ್ರವಾಸದಲ್ಲಿ ಹೆಚ್ಚು ಮಾರಾಟ ವಾಗಿಯೇ ಇಲ್ಲವೆಂಬುದು ಸ್ಪಷ್ಟವಾಗಿತ್ತು. ಆತ ತಂದೆಗೆ ಬೆನ್ನು ಮಾಡಿ ಪುಸ್ತಕಗಳೆದುರು ಸುಮ್ಮನೆ ಕುಳಿತ. ರಾಧೆಯೇ ಆರೇಳು ಪುಸ್ತಕ ಆರಿಸಿದಳು.

"ಅಣ್ಣ ಇಷ್ಟೂ ಇಟ್ಕೊಂಬಿಡೋಣ್ವೇನೊ?"

—ಎಂದು ರಾಧಾ ಕೇಳಿದಳು.

ಜಯರಾಮು ಆಕೆ ತೋರಿಸಿದ ಪುಸ್ತಕಗಳನ್ನು ನೋಡಿದ. ಅವೆಲ್ಲವೂ ಮೈಸೂರಿನ ಪ್ರಕಟಣೆಗಳಾಗಿದ್ದುವು. ತನ್ನದಲ್ಲವೆಂಬಂತೆ ಕಂಡ ಸ್ವರದಲ್ಲಿ ಆತ ಹೇಳಿದ:

"ಇದೆಲ್ಲಾ ಅಪ್ಪ ಇನ್ನೊಂದ್ಸಲ ಹೋಗೋವರೆಗೂ ಇಲ್ಲೇ

ಇರತ್ತೆ. ಓದಿ ನೋಡಿದರಾಯ್ತು."

"ಯಾಕೆ ಇದನ್ನೆಲ್ಲಾ ನಮ್ಮನೇಲಿ ಇಟ್ಕೊಳ್ಳೋದು ಬೇಡ್ವಾ?"

"ಥೂ! ಇದೆಲ್ಲಾ ಕಚಡಾ ಪುಸ್ತಕ. ಯಾಕೆ ಮನೇಲಿ ಇಟ್ಕೊಳ್ಳೋದು?"

—ಎಂದು ಜಯರಾಮು, ನಿಜ ಸಂಗತಿ ಏನೆಂಬುದನ್ನು ವಿವರಿಸಲಾಗದೆಯೇ, ರೇಗಿ ಹೇಳಿದ.

ಮಕ್ಕಳ ಸಂಭಾಷಣೆಯನ್ನು ಕೇಳುತಿದ್ದ ತಂದೆಗೆ ಮಗನ ವರ್ತನೆ ವಿಚಿತ್ರವೆನಿಸಿತು.

"ಏನೊ ಅದು?"

—ಎಂದು ಅವರು, ಮಗನ ಧ್ವನಿ ತನಗೆ ಇಷ್ಟವಾಗಲಿಲ್ಲವೆಂಬುದನ್ನು ಸೂಚಿಸಿದರು.

"ಏನೂ ಇಲ್ಲ"

—ಎಂದು ಜಯರಾಮು ದುಗುಡದ ಧ್ವನಿಯಲ್ಲಿ ಉತ್ತರವಿತ್ತು ಹೊರಕ್ಕೆ ಹೊರಟ.

"ಎಲ್ಲಿಗೆ ಹೋಗ್ತಿದೀಯೋ?"

—ತಾಯಿ ಕೂಗಿ ಕೇಳಿದರು.

ಜಯರಾಮು ತಿರುಗಿ ನೋಡಲಿಲ್ಲ. ದಡದಡನೆ ಮೆಟ್ಟಿಲಿಳಿಯುತ್ತ ಗಟ್ಟಿಯಾಗಿ ಹೇಳಿದ:

"ಇಲ್ಲೇ ವಾಚನಾಲಯಕ್ಕೆ ಹೋಗ್ಬರ್ತೀನಮ್ಮ."

"ಅದೇನು ವಾಚನಾಲಯವೊ! ಮೂರು ಹೊತ್ತೂ ಅಲ್ಲಿಗೆ ಹೋಗ್ತೀನೀಂತ ಸಾಯ್ತಿರ್ತಾನೆ"

—ಎಂದು ತಾಯಿ, ತಂದೆಗೆ ದೂರು ಕೊಟ್ಟಳು.

"ಹೋಗಲಿ ಬಿಡು, ಮಾರ್ಚ್‌ಗಂತೂ ಕಟ್ಟೋಕಾಗಲ್ಲ. ಇನ್ನು ಸೆಪ್ಟೆಂಬರ್‌ಗೆ ತಾನೆ? ಟೈಮಿದೆ."

"ವಾಚನಾಲಯಕ್ಕೆ ಎಲ್ಲಾ ಪೇಪರೂ ಬರುತ್ತಂತಪ್ಪ. ಆದರೆ ಹೆಣ್ಣು ಹುಡುಗೀರು ಅಲ್ಲಿಗೆ ಹೋಗ್ಕೂಡ್ದಂತೆ."

—ಎಂದು ರಾಧಾ ತಂದೆಗೆ ಊರಿನ ಸಮಾಚಾರ ಒದಗಿಸಿದಳು.

"ಹುಡುಗೀರು ವಾಚನಾಲಯಕ್ಕೆ ಹೋಗೋದೊಂದಿದೆ ಇನ್ನು ಬಾಕಿ........"

—ಎಂದು ರಾಧೆಯ ತಾಯಿ, ಬೇರೆ ಯಾವುದೋ ಬೇಸರವನ್ನು ಆ ಮಾತಿನಲ್ಲಿ ಪ್ರಕಟಗೊಳಿಸಿದಳು.

"ಮನೆ ಸಾಮಾನು ಎಲ್ಲಾ ಇದ್ಯೇನು ?"

—ಎಂದು ತಂದೆ ವಿಚಾರಿಸಿದರು.

"ಹೂಂ"

—ಎಂದು ತಾಯಿ ಉತ್ತರ ಕೊಡುತ್ತಲೆ, ರಾಧಾ ಒಂದು ಹೊಸ ಕಾದಂಬರಿಯನ್ನೆತ್ತಿಕೊಂಡಳು. ತಾಯ್ತಂದೆಯರ ಆ ಸಂವಾದದಲ್ಲಿ ಆಕೆಗೆ ಆಸಕ್ತಿ ಇರಲಿಲ್ಲ. ನೆಲದಲ್ಲಿದ್ದ ಹಾಸಿಗೆಯ ಸುರುಳಿಯ ಮೇಲೆ ಗೋಡೆಗೊರಗಿ ಕುಳಿತು, ಕಾದಂಬರಿಯನ್ನು ಬರೆದವರ ಹೆಸರನ್ನೊಮ್ಮೆ ಗಮನಿಸಿ, ಮುನ್ನುಡಿಯ ಪುಟಗಳನ್ನು ಓದದೆಯೇ ಹಾರಿಸಿ, ಮೊದಲ ಅಧ್ಯಾಯದಿಂದಲೇ ಆಕೆ ಆರಂಭಿಸಿದಳು. ಸ್ವಲ್ಪ ಹೊತ್ತಿನಲ್ಲೆ ಆಕೆ ಕಾದಂಬರಿಯಲ್ಲೇ ತಲ್ಲೀನಳಾದಳು.

ಮಗಳು ಓದುತಿದ್ದಂತೆ ತಾಯಿತಂದೆಯರ ಸಂಭಾಷಣೆ ನಡೆಯಿತು.

"ನಾರಾಯಣಿ ತೀರ್ಕೊಂಡ್ಲು."

"ಯಾರು–ನಾರಾಯಣಿ ?"

"ಆ ಕೊನೇ ಮನೆ, ಗೊತ್ತಿಲ್ವೇ ?–ಸೌದೆ ಕದ್ದಳೂಂತ—"

"ಹೂಂ. ಹೂಂ....ಅಯ್ಯೋ ಪಾಪ....ಏನಾಗಿತ್ತು ?"

"ಅದೇನೋ ಸುಡುಗಾಡು ಜ್ವರದ ಕಾಹಿಲೆ.....ನಾಲ್ಕರಲ್ಲಿ ಮೂರು ಚಿಕ್ಕ ಮಕ್ಕಳು. ಕೊನೇದಕ್ಕಂತೂ ಒಂದು ವರ್ಷ ಕೂಡಾ ಇಲ್ಲ........"

"ತ್ಸ್....ತ್ಸ್....ಹೂ....ಏನ್ಮಾಡೋಕಾಗುತ್ತೆ ? ಯಾರ ಕೈಲಿದೆ ಹೇಳು ಇದೆಲ್ಲ ?"

ಆತ ನಿಟ್ಟುಸಿರು ಬಿಟ್ಟುದರಿಂದ ಸಂಭಾಷಣೆ ಸ್ವಲ್ಪ ಹೊತ್ತು ನಿಂತಿತು. ಸ್ವಲ್ಪ ತಡೆದು ಆಕೆ ಹೇಳಿದಳು.

"ಕೆಳಗೆ ಯಾವುದಾದರೂ ಮನೆ ಖಾಲಿಯಾದರೆ ಕೊಡ್ತೀನೀಂತ ರಂಗಮ್ಮ ಹೇಳಿರ್ಲಿಲ್ವೆ ?"

"ಹೂ, ಹೌದು."

"ಅದೇ–ನಾರಾಯಣಿ ಇದ್ದ ಮನೆ ಖಾಲಿಯಾಯ್ತು."

"ಹಾಗೇನು ? ಆದರೆ ಅದಕ್ಕೆ ಬಾಡಿಗೆ ಜಾಸ್ತಿನೇನೊ ?"

"ಹೌದು. ಅಲ್ದೆ ಅದನ್ನ ಆಗ್ಲೇ ಬೇರೆಯವರಿಗೆ ಕೊಟ್ಬಿಟ್ರು ಅನ್ಸೆ. ಆದರೆ ರಂಗಮ್ನೋರು ನಮ್ಮನ್ನ ಕೇಳ್ಲೂ ಕೂಡಾ ಇಲ್ಲ."

"ರಂಗಮ್ಮನಿಗೆ ಗೊತ್ತಿಲ್ವೆ ನಮ್ಮ ಪರಿಸ್ಥಿತಿ ? ಅದಕ್ಕೇ ಕೇಳ್ಲಿಲ್ಲ."

"ನಾನೂ ಸುಮ್ನಿದ್ದೆ. ಆ ವಿಷಯ ಪ್ರಸ್ತಾಪಿಸ್ಲಿಲ್ಲ. ಜಾಸ್ತಿ ಬಾಡಿಗೆ ಕೊಡೋದೊಂದಾಯ್ತು. ಸಾವಿನ ಮನೆ ಬೇರೆ. ಇದೇ ಬಾಡಿಗೆಗೆ ಬನ್ನಿ ಅಂದ್ರೂ–"

"ಅಯ್ಯೋ ಅದೆಲ್ಲಾ ನೋಡೋಕಾಗುತ್ತೇನೆ ಈಗಿನ ಕಾಲ್ದಲ್ಲಿ ?"

ತಾಯಿ ಸುಮ್ಮನಾದಳು. ಮಾತನಾಡಬೇಕಾದ ವಿಷಯಗಳೆಷ್ಟೋ ಇದ್ದುವು. ಆದರೆ ಮಗಳೆದುರಲ್ಲಿ ಅವುಗಳನ್ನು ಪ್ರಸ್ತಾಪಿಸುವ ಹಾಗಿರಲಿಲ್ಲ. ಆ ಕೊಠಡಿ ಮನೆಯಲ್ಲಿ ಏಕಾಂತವಾದರೂ ಎಲ್ಲಿಂದ ಬಂತು ? ಹೀಗಾಗಿ, ಯಾವುದನ್ನು ಹೇಳಬಾರದು–ಹೇಳಬಹುದು ಎಂದು ಯೋಚಿಸಿ ಯೋಚಿಸಿ ಆಕೆ ಮಾತನಾಡುವಂತಾಯಿತು.

"ಎಷ್ಟು ದಿವಸ ಇರ್ತೀರಾ ಈ ಸಲ ?"

"ಇರ್ತೀನಿ ಇನ್ನೂ ಮೂರು ನಾಲ್ಕು ದಿವಸ."

"ಅಷ್ಟು ಬೇಗ್ನೆ ಹೊರಟ್ಬೇಕೆ ?"

ಅಷ್ಟೈಶ್ವರ್ಯದ ಸುಖವನ್ನು ಸುಟ್ಟಿತು ; ಗಂಡನ ಸಾಮೀಪ್ಯವಾದರೂ ತನ್ನ ಪಾಲಿಗಿರಬಾರದೇ ?–ಎಂದು ವಯಸ್ಸಾದ ಆ ಜೀವ ಚಡಪಡಿಸಿತು.

"ಈ ಸಲ ಮಲೆನಾಡು ಕಡೆ ಹೋಗೋಣಾಂತಿದೀನಿ. ಈಗ ಬೇಸಿಗೆ. ಸ್ವಲ್ಪ ತಡವಾದರೂ ಮಳೆ ಬಂದ್ಬಿಡುತ್ತೆ. ಹೋದರೆ ಈಗ್ಲೇ ಹೋಗ್ಬೇಕು."

"ಹೂಂ."

ಆತ ತಲೆ ತಗ್ಗಿಸಿ ಏನೋ ಯೋಚಿಸುತ್ತಾ ತಮ್ಮ ಅಂಗಾಂಗಗಳನ್ನು ನೋಡಿದರು. ಮಗಳತ್ತ ಬಾಡಿದ ಮುಖದಿಂದ ದೃಷ್ಟಿ

ಬೀರಿದರು.

ಮಗಳನ್ನು ಕೆಳಗೆ ಕಳುಹೋಣವೆಂದು ತೋರಿತು ಆಕೆಗೆ. ಆದರೆ, ಅದಕ್ಕಾಗಿ ಏನಾದರೊಂದು ಕಾರಣವನ್ನು ಸೃಷ್ಟಿಸಿ ಹೇಳಲು ಆ ತಾಯಿ ಸಮರ್ಥಳಾಗಲಿಲ್ಲ.

"ಇನ್ನೇನು ಸಮಾಚಾರ ವಠಾರದ್ದು ?"

"ವಠಾರದ್ದೇನು ಸಮಾಚಾರ ? ಇದೆ ಹಾಗೆಯೇ."

ವಿಷಯದ ಒರತೆ ಬತ್ತಿ ಹೋದಂತೆ ತೋರಿತು.

ರಾಧೆಯ ತಾಯಿ ತನ್ನ ಗಂಡನನ್ನು ಕಣ್ಣು ತುಂಬಾ ನೋಡಿದಳು. ಮತ್ತೆ ತಲೆ ಬಾಗಿಸಿ ನೆಲ ಕೆರೆಯುತ್ತಾ ಕುಳಿತಳು. ಆತ್ಮಗತವಾಗಿಯೇ ಏನನ್ನೊ ಆಕೆ ಗಟ್ಟಿಯಾಗಿ ಅನ್ನ ತೊಡಗಿದಳು. ಮಾತುಗಳು ಕಡಿದು ಕಡಿದು ಬಂದುವು. ಅಸ್ಪಷ್ಟವಾಗಿದ್ದರೂ ಆತನ ಕಿವಿಗಳೊಳಕ್ಕೆ ಆ ಮಾತುಗಳು ಉರಿಯುವ ನೋವನ್ನುಂಟು ಮಾಡುತ್ತಾ ಇಳಿದುವು.

"ಹ್ಯಾಗಾಗಿದೀರಿ ಒಮ್ಮೆ ನೋಡ್ಬಾರ್ದೆ ? ಹೊತ್ತು ಹೊತ್ತಿಗೆ ಊಟ ಇಲ್ಲ. ಸಿಕ್ಕಿದ್ದನ್ನ ತಿನ್ನೋದು........ಎಣ್ಣೆ ಸ್ನಾನ ಇಲ್ಲ........ ನಾವೇನು ಮನುಷ್ಯ ಜನ್ಮವೋ-ಅಲ್ಲಾ-"

"ಏನ್ಮಾಡ್ಲೆ ನಾನು ?"

ಹೆಂಗಸು ನಿಟ್ಟುಸಿರು ಬಿಟ್ಟಳು.

ಅಷ್ಟರಲ್ಲೆ ಕೆಳಗಿನಿಂದ ಅಹಲ್ಯೆಯ ಸ್ವರ ಕೇಳಿಸಿತು :

"ರಾಧಾ, ಏ ರಾಧಾ, ಸ್ವಲ್ಪ ಬಾರೇ ಇಲ್ಲಿ."

ಕೇಳಿಸಿದರೂ ಓದುತ್ತಲಿದ್ದ ರಾಧಾ ಉತ್ತರ ಕೊಡದೆ ಸುಮ್ಮನಿದ್ದಳು.

"ರಾಧಾ, ಬಾರೇ-"

ತಾಯಿಯೆಂದಳು ಮಗಳಿಗೆ :

"ಕರೆಯೋದು ಕೇಳಿಸಲ್ವೇನೆ-ಹೋಗು."

"ಊ........ನಾನು ಹೋಗಲ್ಲ........ಓದ್ಬೇಕು."

"ರಾತ್ರೆ ಓದಿದರಾಯ್ತು."

"ಊ........ದೀಪ ಇರೊಲ್ಲ ರಾತ್ರಿ."

"ನಾಳೆ ಓದ್ಕೊಂಡೀಯಂತೆ."

ರಾಧಾ ಮತ್ತೊಮ್ಮೆ 'ಊ'ಎಂದು ರಾಗ ಎಳೆಯುತಿದ್ದಂತೆಯೇ ಅಹಲ್ಯಾ ಸ್ವಲ್ಪ ಗಟ್ಟಿಯಾಗಿಯೇ ಕರೆದಳು.

ರಾಧಾ, ಪುಸ್ತಕವನ್ನು ತನ್ನ ಹಿಂದುಗಡೆ ಮರೆಮಾಡುತ್ತ ಎದ್ದುನಿಂತು, ಮುಖವನ್ನಷ್ಟೆ ಕಿಟಕಿಯಿಂದ ಹೊರಹಾಕಿ, "ಯಾಕೇ ?" ಎಂದಳು.

ಕೆಳಗೆ ನಿಂತಿದ್ದ ಅಹಲ್ಯೆ ತನ್ನ ಬಳೆಯನ್ನು ಮುಟ್ಟಿ ತೋರಿಸಿದಳು. ರಾಧೆಗೆ ಒಮ್ಮೆಲಿ ನೆನಪಾಯಿತು. ಮಲ್ಲೇಶ್ವರದ ಅಂಗಡಿ ಬೀದಿಯಿಂದ ಬಳೆ ಕೊಳ್ಳಬೇಕೆಂದಿದ್ದ ಅಹಲ್ಯೆಯ ಜತೆಯಲ್ಲಿ ತಾನೂ ಬರುವೆನೆಂದು ಹಿಂದಿನ ದಿನ ರಾಧೆ ಮಾತು ಕೊಟ್ಟಿದ್ದಳು. ಈಗ, 'ತಾಯಿ ಬಿಡೋದಿಲ್ಲ' ಎಂದು ನೆಪಹೇಳಿ ತಪ್ಪಿಸಿಕೊಳ್ಳುವ ಮನನಾಯಿತು. ಮಲ್ಲೇಶ್ವರದ ವರೆಗೆ ಹೋಗುವುದೆಂದರೆ ತಾಯಿ ಬೇಡವೆನ್ನ ಬಹುದೆಂಬ ಯೋಚನೆಯೂ ಹೊಳೆಯಿತು. 'ತಾಳು, ಅಮ್ಮನ್ನ ಕೇಳ್ತೀನಿ' ಎನ್ನುವಂತೆ ರಾಧಾ ಕೈ ಸನ್ನೆ ಮಾಡಿದಳು.

"ಏನೇ ಅದು ?"

—ಎಂದಳು ರಾಧೆಯ ತಾಯಿ

"ಅಹಲ್ಯೆ ಬಳೆ ಕೊಂಡ್ಕೋಬೇಕಂತೆ. ಮಲ್ಲೇಶ್ವರಕ್ಕೆ ಹೋಗೋಕೆ ನನ್ನನ್ನೂ ಕರೀತಿದಾಳೆ."

"ಅಷ್ಟೇನೆ ? ಹೋಗ್ಬಾ."

ರಾಧೆ ನಿರುಪಾಯಳಾಗಿ, ಓದುತಿದ್ದ ಪುಟಕ್ಕೊಂದು ಕಾಗದದ ಚೂರಿನ ಗುರುತಿಟ್ಟು, ಪುಸ್ತಕವನ್ನೂ ಮಡಚಿಟ್ಟಳು.

"ಕುಂಕುಮ ಇಟ್ಕೋ"

—ಎಂದು ತಾಯಿ ಹೇಳುತಿದ್ದಂತೆಯೇ, ಆ ಕೆಲಸಕ್ಕಾಗಿಯೇ ರಾಧಾ, ಕನ್ನಡಿಯ ಮುಂದೆ ನಿಂತಳು.

ಆಕೆಯ ತಂದೆ ಕುಳಿತಲ್ಲಿಂದೆದ್ದು, ಗೊಡೆಗೆ ತೂಗುಹಾಕಿದ್ದ ತನ್ನ ಕೋಟಿನ ಜೇಬಿನಿಂದ ಆರಾಣೆ ಎಣಿಸಿ ತೆಗೆದು ಮಗಳ ಕೈಗಿಟ್ಟರು.

"ನೀನೂ ಬಳಿ ಕೊಂಡ್ಕೋಳಮ್ಮಾ . ಈ ಸಲವೂ ಏನೂ ತರೋಕಾಗ್ಲಿಲ್ಲ."

ಮತ್ತೂ ಅವರು ಆರು ಕಾಸನ್ನು ಕೊಟ್ಟರು.

"ಹಾಗೇ ಬರ್ತಾ ನಶ್ಯ ತಗೊಂಡ್ಬಾ."

"ನಾನು ನಶ್ಯ ಕೊಂಡ್ಕೊಂಡ್ರೆ ಅಹಲ್ಯಾ ನಗ್ತಾಳೆ."

"ಸಾಕು. ಹೋಗೇ ಬಡಿವಾರ."

ಎಂದು ತಾಯಿ ಗದರಿಸಿದಳು.

"ನಶ್ಯ ಗಂಡಸಿಗಲ್ಲ, ಅಪ್ಪನಿಗೆ ಅಂತ ಹೇಳು !"

ಎಂದು ಹೇಳಿ ತಂದೆ, ತಮ್ಮ ನಗೆ ಮಾತಿಗಾಗಿ ತಾವೇ ಬಹಳ ಸಂತೋಷಪಟ್ಟರು.

ರಾಧಾ, ನಾಚಿಕೆಯಿಂದ ಮುಖ ಕೆಂಪುಮಾಡಿಕೊಂಡು ಹೊರಟು ಹೋದಳು.

ಮಗಳ ಮುಂದೆ ಅನಿರೀಕ್ಷಿತವಾಗಿ 'ಗಂಡ' ಎಂಬ ಮಾತು ಬಂದಿತ್ತು. ತಮಾಷೆಗಾಗಿ ಹಾಗೆ ಹೇಳಿದ್ದರೂ ಬಳಿಕ ಅದರ ಯೋಚನೆಯೇನೂ ಅಷ್ಟು ತಮಾಷೆಯದಾಗಿರಲಿಲ್ಲ.

"ಬೆಳೆದಿದಾಳೆ, ವಯಸ್ಸಾಗಿದೆ. ಆದರೂ ಇನ್ನೂ ಮಗು ಇದ್ದ ಹಾಗೇ ಇದಾಳೇಂದ್ರೆ."

ಗಂಡ ಒಮ್ಮೆಲೆ ಮುಖ ಸಪ್ಪಗೆ ಮಾಡಿ ಕುಳಿತುದನ್ನು ಕಂಡು ಆಕೆಯೇ ಮುಂದುವರಿಸಿದಳು :

"ಅಹಲ್ಯಾಗೆ ಗಂಡು ಹುಡುಕ್ತಾ ಇದಾರೆ."

"ರಾಧಾಗೆ ಹುಡುಕ್ತಾ ಇಲ್ಲಾಂತ ತಾನೆ ನೀನು ಹೇಳೋದು?"

ಬೇಸರ ಧ್ವನಿಯಲ್ಲಿ ಹೊರಟಿತು ಆ ಪ್ರಶ್ನೆ.

"ರೇಗ್ಬೇಡಿ. ಅಹಲ್ಯಾ ರಾಧಾ ಇಬ್ಬರಿಗೂ ಒಂದೇ ವಯಸ್ಸೂ ಅಂತ ಹಾಗೆ ಹೇಳ್ದೆ. ಈ ಮಳೆಗಾಲಕ್ಕೆ ಹದಿನೆಂಟು ಹಿಡಿಯುತ್ತೆ."

"ಹೂಂ...."

"ಅರಸೀಕೆರೆ ಹತ್ರ ಯಾವುದೋ ಹಳ್ಳೀ ಕಡೆ ವರ ಇದೆ ಅಂತ ಏನೋ ಅಂದಿದ್ರು ಹೋದ್ಸಾರೆ."

“ಹೌದು, ಹೋಗಿದ್ದೆ. ಆಗ್ಲಿಲ್ಲ.”

ಏನಾಯ್ತು? ಎಂದು ಮೌನವಾಗಿಯೆ, ನೋಡುವ ನೋಟದಲ್ಲೆ ತಾಯಿ ಕೇಳಿದಳು.

“ನಮ್ಮಂಥ ನೂರು ಜನ ಬಡವರ್ನ ಕೊಂಡ್ಕೊಳ್ಳೋ ಹಾಗೆ ಮಾತಾಡ್ದ.”

ಆಕೆ ನಿಟ್ಟುಸಿರು ಬಿಟ್ಟಳು.

“ಪುಸ್ತಕದ ಪೆಟ್ಟಿಗೇನೆಲ್ಲ ಅರಸೀಕೆರೇಲೆ ಬಿಟ್ಟುಹೋಗಿದ್ದೆ— ಕುಚೇಲನ ಹಾಗೆ ಕಾಣ್ಬಾರದೂಂತ.”

“ಹೋಗಲಿ ಬಿಡಿ. ಬಡ ಹುಡುಗರು ಯಾರೂ ಇಲ್ವೆ?”

“ಬಡವರಾದ ಮಾತ್ರಕ್ಕೆ ವರದಕ್ಷಿಣೆ ಬಿಟ್ಕೊಡ್ತಾರೇಂತ ತಿಳಿದೆ ಏನು ?”

“ಹಾಗಲ್ಲ—”

“ತೀರ ನಿರ್ಗತಿಕನಿಗೆ ಕೊಟ್ಟು ಕೂಡಾ ಏನೇ ಪುರುಷಾರ್ಥ? ಸಾಲವೋ ಏನೋ ಮಾಡಿ ನಾವು ಕೊಡೋ ಐನೂರು ರೂಪಾಯಿ ಕರಗೋತನಕ ಸುಖವಾಗಿರ್ತಾನೆ. ಆಮೇಲೆ ನಿನ್ಮಗಳ ಗತಿ ?”

“ಏನೋಪ್ಪಾ. ನಂಗೊಂದೂ ತಿಳೀದು. ನಮಗಿರೋದು ಒಂದೇ ಹೆಣ್ಣುಮಗು ಅಲ್ವೆ? ಕೆಳಗಿಳಿದ್ರೆ ತಲೆ ಎತ್ಕೊಂಡು ನಡೆಯೋಕಾಗಲ್ಲ. ಏನೇನೋ ಅಂತಾರೆ.”

“ಯಾರು, ವಠಾರದೋರೆ ?”

“ವಠಾರದೋರು ಹೊರಗಿನೋರು—ಎಲ್ಲಾ.”

“ಅಸ್ಲಿ ಬಿಡು. ಇದೇನು ಹತ್ತೊಂಭತ್ನೇ ಶತಮಾನವೇ? ಈಗೆಲ್ಲಾ ಅದಿಲ್ಲ.”

“ನೀವೇನೋ ಹಾಗೆ ಅಂದ್ಬಿಡ್ತೀರಾ....ಆದರೆ....ನಾನು”

ಅಳು ಬಂದುಬಿಟ್ಟಿತು ಆಕೆಗೆ.

“ಅಳಬೇಡ್ವೆ. ದೇವರು ಬಿಟ್ಟು ಹಾಕೊಲ್ಲ. ಏನಾದರೂ ಹಾದಿ ತೋರಿಸೇ ತೋರಿಸ್ತಾನೆ.”

ಅಷ್ಟು ಹೊತ್ತಿಗೆ ಪಕ್ಕದ ಮನೆಯವನು ಇರುತ್ತಿರಲಿಲ್ಲ.

ಕೊನೆಯ ಕೊಠಡಿಯ ವಿದ್ಯಾರ್ಥಿಗಳೂ ಇರುತ್ತಿರಲಿಲ್ಲ. ಅದನ್ನು ತಿಳಿದಿದ್ದ ಆಕೆ ಸ್ವಲ್ಪ ಗಟ್ಟಿಯಾಗಿಯೇ ಅತ್ತಳು.

ಅವರು ಬಾಗಿಲ ಬಳಿಗೆ ಹೋಗಿ ಅದನ್ನು ಮುಚ್ಚಿದರು. ಹೆಂಡತಿಯ ಬಳಿಗೆ ಬಂದು, ಆಕೆಗೆ ತಗಲಿಕೊಂಡೇ ಕುಳಿತರು. ಆಕೆಯ ಬಲಗೈಯನ್ನೆತ್ತಿಕೊಂಡು ಬೆರಳುಗಳನ್ನು ಮುಟ್ಟಿ ನೋಡಿದರು. ಇಪ್ಪತ್ತು ವರ್ಷಗಳಿಗೆ ಹಿಂದೆ ತುಂಬಾ ಸುಂದರಿಯಾಗಿದ್ದ ಆ ಜೀವದ ಕಣ್ಣುಗಳೀಗ ಆಳಕ್ಕೆ ಇಳಿದಿದ್ದುವು. ಕಪೋಲಗಳು ಬತ್ತಿದ್ದುವು. ತಲೆ ಗೂದಲು ಬಿಳಿಯ ವರ್ಣಕ್ಕೆ ಬೇಗ ಬೇಗನೆ ತಿರುಗುತಿತ್ತು. ಹಿಂದಿನದೇ ನಿರ್ಮಲಾಂತಃಕರಣದಿಂದ, ಹಿಂದಿನದೇ ಆತ್ಮೀಯತೆಯಿಂದ ಹೆಂಡತಿಯ ಮುಂಗುರುಳನ್ನು ನೇವರಿಸಿ, ಮೃದುವಾಗಿ ಅವರು ಅಂದರು :

"ಅಳಬೇಡ ಚಿನ್ನ...."

ಮಕ್ಕಳಿಗೆ ತಿಳಿಯದಂತೆ, ತಾನೊಬ್ಬಳೇ ಇದ್ದಾಗ, ಇಲ್ಲವೆ ರಾತ್ರೆ ಮಕ್ಕಳು ನಿದ್ದೆ ಹೋದ ಮೇಲೆ, ಆಕೆ ಆಗಾಗ್ಗೆ ಅಳುವುದಿತ್ತು. ಈಗ ಗಂಡನೆದುರು ತನ್ನ ದುಃಖದ ಸಾಕ್ಷ್ಯವನ್ನಷ್ಟೆ ಕೊಟ್ಟು ಆಕೆ ಕಣ್ಣೊರೆಸಿಕೊಂಡಳು. ತನ್ನ ತಲೆಯನ್ನು ಗಂಡನ ಭುಜದ ಮೇಲೆ ಒರಗಿಸಿ, ಎಲ್ಲ ಸಂಕಟವನ್ನೂ ಮರೆಯಲು ಆಕೆ ಯತ್ನಿಸಿದಳು.

ತಮ್ಮನ್ನು ನಂಬಿ ಕೈ ಹಿಡಿದ ಜೀವ ಪರಿತಪಿಸುವುದನ್ನು ಕಂಡು ಹೃದಯವನ್ನು ಗರಗಸದಿಂದ ಕುಯ್ಯುತಿದ್ದ ಹಾಗಾಯಿತು ಅವರಿಗೆ.

"ಚಿನ್ನ, ನಿನಗೆ ನಾನು ಸುಖ ಕೊಡಲೇ ಇಲ್ಲ."

ಭುಜದ ಮೇಲಿದ್ದ ತಲೆಯಲುಗಿತು. ತುಟಿಗಳೆಡೆಯಿಂದ ಮಾತು ಹೊರಡಲಿಲ್ಲ.

ಯಾವುದೋ ಯೋಚನೆಯ ನಡುವೆ ಅವರೆಂದರು :

"ಸದ್ಯ ಇಬ್ಬರೇ ಮಕ್ಕಳು........"

ಮಾತು ಹೊರಗೆ ನಿಂತರೂ ಮನಸಿನೊಳಗೇ ಯೋಚನೆ ಮುಂದು ವರಿಯಿತು : ಇಬ್ಬರೇ ಮಕ್ಕಳು........ರಾಧಾ ಹುಟ್ಟಿದ ಅನಂತರ ಮತ್ತೊಮ್ಮೆ ತಾಯಿಯಾಗಲಿದ್ದ ಆಕೆಗೆ ಗರ್ಭಸ್ರಾವವಾಯಿತು. ಆರೈಕೆ ಸರಿಯಾಗಿ ಆಗದೆ ಗರ್ಭಕೋಶದ ಕಾಹಿಲೆಗಳಿಗೆ ಗುರಿಯಾದಳು.

ದೀರ್ಘಕಾಲ ಕಳೆದ ಮೇಲೆ ಚೇತರಿಸಿಕೊಂಡಳು, ನಿಜ........ಆದರೆ ಮತ್ತೆ ತಾಯಿಯಾಗಲಿಲ್ಲ. ಹಾಗಾದುದೇ ದೇವರ ಕೃಪೆಯೇನೋ ಎಂದು ಅವರಿಗೆ ಒಮ್ಮೊಮ್ಮೆ ತೋರುತಿತ್ತು. ಅದಲ್ಲದೆ, ಹೆಚ್ಚು ಮಕ್ಕಳೇನಾದರೂ ಆಗಿರುತಿದ್ದರೆ ಅವುಗಳ ಗತಿ? ಈಗ ಇರುವವರು ಇಬ್ಬರೇ........ಮಗಳಿಗೊಂದು ಮದುವೆಯಾಗಿ ಮಗನಿಗೊಂದು ಕೆಲಸ ದೊರೆತರೆ, ತಮ್ಮ ಸಂಸಾರದ ದೊಡ್ಡ ಸಮಸ್ಯೆಗಳು ಬಗೆ ಹರಿದ ಹಾಗೆಯೇ.

ಹೀಗೆಂದು ಅವರು ಯೋಚಿಸುತಿದ್ದರು. ಆಕೆ ಮಾತ್ರ ಕನಸಿನ ನಿದ್ದೆಯಲ್ಲಿದ್ದಂತೆ ಕಣ್ಣು ಮುಚ್ಚಿಕೊಂಡೇ ಇದ್ದಳು.

ತಮ್ಮ ಯೋಚನೆಗಳಿಗೊಂದು ಸುಂದರ ರೂಪವನ್ನು ಕೊಡಲೆತ್ನಿಸುತ್ತಾ ಅವರೆಂದರು :

"ಇನ್ನೊ ಸ್ವಲ್ಪ ದಿವಸ ಈ ಕಷ್ಟ. ಯಾವಾಗಲೂ ಹೀಗೇ ಇರೊಲ್ಲ ಚಿನ್ನ."

'ಹೌದು' ಎಂದೋ, 'ಇದು ಹುಚ್ಚು ಮಾತು' ಎಂದೋ ಏನೋ ಅನ್ನುವಂತೆ ಭುಜದ ಮೇಲಿದ್ದ ಆಕೆಯ ತಲೆ ಅಲುಗಿತು.

ಕೊನೆಯ ಕೊಠಡಿಯ ಬೀಗ ತೆಗೆದ ಸಪ್ಪಳವಾಯಿತು. ಮಾತಿನ ಸದ್ದು. ಆಕೆ ಒಮ್ಮೆಲೆ ಎಚ್ಚೆತ್ತು, ತಲೆ ಎತ್ತಿ, ಗಂಡನಿಂದ ದೂರ ಕುಳಿತಳು. ಕಳ್ಳತನದಲ್ಲೇನನ್ನೋ ಮಾಡುತಿದ್ದವರ ಹಾಗಾಯಿತು ಆಕೆಯ ಸ್ಥಿತಿ.

"ಸ್ಕೂಲು ಹುಡುಗರು ಬಂದರೂಂತ ಕಾಣುತ್ತೆ"

–ಎಂದಳು ಆಕೆ. ಶಾಂತವಾಗಿತ್ತು ಅವಳ ಮುಖ ಮುದ್ರೆ.

ಆ ಮಾತನ್ನು ಗಣನೆಗೇ ತೆಗೆದುಕೊಳ್ಳದೆ ತಮ್ಮ ಯೋಚನೆಯನ್ನೇ ಮುಂದುವರಿಸುತ್ತಾ ಅವರೆಂದರು.

"ಎಷ್ಟೊಂದು ಸೊರಗಿದೀಯಾ ನೀನು ?"

"ನನಗೇನೂ ಆಗಿಲ್ಲ. ನಾನು ಚೆನ್ನಾಗಿದೀನಿ."

ಗಂಡ ಆಡಿದ ಅಮೃತದಂತಹ ಮಾತಿಗಾಗಿ ದೃಷ್ಟಿಯಲ್ಲೇ ಕೃತಜ್ಞತೆಯನ್ನು ಸೂಚಿಸುತ್ತಾ ಆಕೆ ನಕ್ಕಳು.

"ಹಾಗಾದರೆ ನನಗೆ ದೃಷ್ಟಿ ದೋಷ ಅನ್ನು!"

ಆ ನಗೆ ಮಾತು ಆಕೆಯ ಹೃದಯವನ್ನು ಬೆಳಗಿತು. ಕಣ್ಣುಗಳು ಮಿನುಗಿದುವು.

"ಒಲೆ ಹಚ್ಚಿ ಒಂದಿಷ್ಟು ಕಾಫಿ ಮಾಡ್ಲಾ?"

"ಹೂಂ. ಮಾಡು."

ಅವರು, ಜಯರಾಮುವಿನ ಚಾಪೆ ಬಿಡಿಸಿ ಮಲಗಿಕೊಂಡು ಛಾವಣಿಯನ್ನೆ ನೋಡಿದರು. ಹೆಂಡತಿ ಒಲೆ ಹಚ್ಚುತಿದ್ದಂತೆ ಅವರೆಂದರು :

"ಮಳೆ ಬಂದರೆ ಹೋದ ವರ್ಷದ ಹಾಗೆ ಈ ವರ್ಷವೂ ಸೋರುತ್ತೆ ಅಲ್ವೆ? ನೋಡು. ಆ ಮೂಲೆ ಹೆಂಚುಗಳೆಲ್ಲಾ ಒಡೆದು ಹೋಗಿವೆ."

"ದುರಸ್ತಿ ಮಾಡಿಸ್ಬೇಕೂಂತ ಹೇಳ್ತಾ ಇದ್ರು ರಂಗಮ್ಮ."

"ಗುಂಡಣ್ಣನ ಕೈಲಿ ತಾನೆ ಮಾಡ್ಸೋದು ?"

ಆಕೆಗೆ ನಗು ಬಂತು. ಕಳೆದ ವರ್ಷ ಒಡೆದುಹೋಗಿದ್ದ ಹೆಂಚುಗಳನ್ನು ಸರಿಪಡಿಸಬೇಕೆಂದು ರಂಗಮ್ಮ ಒಂದೆರಡು ಬಾರಿ ಗುಂಡಣ್ಣನನ್ನು ಮೇಲಕ್ಕೆ ಕಳುಹಿದ್ದಳು. ಗುಂಡಣ್ಣನೋ 'ನಾನೊಲ್ಲೆ' ಎಂದು ಯಾವತ್ತೂ ಹೇಳಿದವನಲ್ಲ. ವಠಾರದ ಎಲ್ಲ ಹುಡುಗರೆದುರು, ರಂಗಮ್ಮನಿಂದ ನಿರ್ದೇಶಿತನಾಗಿ ಆತ ಛಾವಣಿಯನ್ನೇರಿದ. ಒಡೆದ ಹೆಂಚುಗಳ ಬದಲು ಹೊಸ ಹೆಂಚುಗಳನ್ನಿರಿಸಿದ. ಆದರೆ ಆತ ಏರಿ ಇಳಿಯುವ ಗದ್ದಲದಲ್ಲಿ ಬೇರೆ ಹೆಂಚುಗಳು ಬಿರುಕುಬಿಟ್ಟುವು !

"ಆ ಗುಂಡಣ್ಣ ಇನ್ನೂ ಇಲ್ಲೇ ಇದಾನೇನು ?"

ಎಂದು ಅವರು ಕೇಳಿದರು.

"ಇನ್ನೆ ಎಲ್ಹೋಗ್ತಾನೆ?"

"ಶುದ್ಧ ಬೆಪ್ಪ. ಮದುವೇ ಇಲ್ಲ ಪ್ರಾಣಿಗೆ."

ತಮ್ಮ ಮಕ್ಕಳ ವಿಷಯದಲ್ಲಿ ಅವರಿಗೆ ತುಂಬಾ ಅಭಿಮಾನವಿತ್ತು. ಜಯರಾಮು ಇಂಟರ್ ಪರೀಕ್ಷೆಯಲ್ಲಿ ಒಂದೇ ಸಲ ಉತ್ತೀರ್ಣನಾಗದೆ ತೊಂದರೆ ಕೊಟ್ಟಿದ್ದ ನಿಜ. ಆದರೆ ಅದು ಬೇರೆ ವಿಷಯ. ಪ್ರಾಪಂಚಿಕ ಜ್ಞಾನಕ್ಕೆ ಸಂಬಂಧಿಸಿ ತನ್ನ ಓರಗೆಯವರನ್ನೆಲ್ಲ ಆತ ಸುಲಭವಾಗಿ

ಮೀರಿಸುತ್ತಿದ್ದನೆಂಬುದು ತಂದೆಗೆ ಗೊತ್ತಿತ್ತು.

ಅವರು ಮಗನನ್ನು ಕುರಿತು ಯೋಚಿಸಿದರು. ಆತ ದೊಡ್ಡ ವಿದ್ವಾಂಸನಾಗಬೇಕೆಂಬುದು ಅವರ ಆಸೆಯಾಗಿತ್ತು. ಮುಂದೆ ವಿಶ್ವ ವಿದ್ಯಾನಿಲಯದಲ್ಲಿ ಆತ ಹಿರಿಯ ಪ್ರಾಧ್ಯಾಪಕನಾಗಿ ತಮಗೆ ಗೌರವ ತರಬೇಕೆಂಬ ಬಯಕೆ ಅವರಿಗಿತ್ತು. ಆದರೆ ಈಗ ಆ ಕನಸು ಕಾರ್ಯವಾಗುವ ಚಿಹ್ನೆಯೇ ಇರಲಿಲ್ಲ.

ಮಗನ ವಿಷಯ ಹೆಂಡತಿಯೊಡನೆ ಮಾತನಾಡಲು ಅವರು ಇಚ್ಛಿಸಿದರು.

"ಹ್ಯಾಗಿದಾನೆ ಜಯರಾಮು ?"

"ಇತ್ತೀಚೆಗೆ ಯಾಕೋ ಒಂದು ತರವಾಗಿದಾನೆ. ಮುಖದ ಮೇಲೆ ಕಳೇನೇ ಇಲ್ಲ."

"ಅವನಿಗೆ ಸ್ನೇಹಿತರು ಇದಾರೇನು ಯಾರಾದರೂ ?"

"ಯಾರೂ ಕಾಣೆನಪ್ಪಾ. ಮನೆಗೆ ಬರೋದೂ ತಡಮಾಡಲ್ಲ. ಸಾಮಾನ್ಯವಾಗಿ ಒಬ್ನೇ ಇರ್ತಾನೆ........"

"ಬೆಳೆಯೋ ಹುಡುಗ....ನಾವು ಅನುಭವಿಸ್ತಿರೋ ಪಾಡು ಅರ್ಥವಾಗಿದೇಂತ ತೋರುತ್ತೆ .. ...."

ಅವರು ತಪ್ಪಾಗಿ ಊಹಿಸಿರಲಿಲ್ಲ.

ಮಗನ ಬಳಿಕ ಮಗಳ ಸರದಿ.... 'ಚಿಕ್ಕವಳು' ಎಂದು ಎಷ್ಟೇ ಸಮಾಧಾನ ಹೇಳಿಕೊಂಡರೂ ಈಗಲೇ ಹುಡುಗಿ ಬೆಳೆದು ಬಿಟ್ಟಿದ್ದಾಳೆ. ಅವರಮ್ಮನದೇ ರೂಪು. ಯಾವುದರಲ್ಲಿ ಕಡಿಮೆ ಆಕೆ ? ಐಶ್ವರ್ಯದಲ್ಲಿ ತಾನೆ ? ಅದು ದೊಡ್ಡದಲ್ಲ. ತಾವು ಶ್ರೀಮಂತರೆಂದು ಹೇಳಿಕೊಂಡದ್ದೇ ಇಲ್ಲ ಯಾವತ್ತೂ........

ಪಕ್ಕದ ಕೊಠಡಿ ಮನೆಯಲ್ಲಿ ಒಬ್ಬಂಟಿಗನಾಗಿ ವಾಸಿಸುತ್ತಿರುವ ಆ ಯುವಕ. ತಾವು ಒಂದೆರಡು ಸಾರಿ ಮಾತನಾಡಿಸಿದ್ದರು. ಸಂಭಾವಿತನಾಗಿಯೇ ತೋರಿದ.

"ಪಕ್ಕದ ಮನೆಯಾತ—"

"ಏನು ?"

ಅವರು ಒಂದನ್ನು ಯೋಚಿಸಿದರು. ಆಕೆಯೂ ಒಂದನ್ನು ಯೋಚಿಸಿದಳು. ಇಬ್ಬರು ಯೋಚಿಸಿದುದೂ ಒಂದೇ ಆಗಿತ್ತು.

"ಚೆನ್ನಾಗಿದಾನಾ?"

"ಇದಾನೆ. ಒಳ್ಳೆಯವನು ಪಾಪ. ಯಾವ ತಂಟೆಯೂ ಇಲ್ಲ."

ಅವರು ಮುಂದೆ ಮಾತಾಡಲಿಲ್ಲ. ದೃಷ್ಟಿ ಛಾವಣಿಯನ್ನೇ ನೋಡುತ್ತಿದ್ದರೂ ಯೋಚನೆಗಳು ಒಂದನ್ನೊಂದು ಹಿಂಬಾಲಿಸಿ ದೂರ ದೂರ ಸಾಗಿದುವು.

ಆಕೆ ಹೇಳಿದಳು :

"ಏಳಿ, ಕಾಫಿ ಸೋಸಿದ್ದಾಯ್ತು."

೬

ಜಯರಾಮು ವಾಚನಾಲಯಕ್ಕೆಂದೇ ಹೊರಟಿದ್ದ ನಿಜ. ಆದರೆ ಹತ್ತು ಹೆಜ್ಜೆ ಹೋದ ಮೇಲೆ ಆತ ಮನಸ್ಸು ಬದಲಾಯಿಸಿದ. ಕೇಳಿದ್ದ ಒಂದು ಪ್ರಶ್ನೆಗೆ ಸಂಪಾದಕರಿಂದ ಉತ್ತರ, ಬರೆದಿದ್ದ ಒಂದು ಓಲೆಗೆ ಮಕ್ಕಳ ಬಳಗದ ಅಣ್ಣನಿಂದ ಮಾರೋಲೆ,—ಇಷ್ಟನ್ನು ಆತ ಆ ವಾರದ ಪತ್ರಿಕೆಯಲ್ಲಿ ನಿರೀಕ್ಷಿಸಿದ್ದ. ಇಷ್ಟಲ್ಲದೆ ಎರಡು ಪತ್ರಿಕೆಗಳಿಗೆ ಎರಡು ಸಣ್ಣ ಕತೆಗಳನ್ನೂ ಆತ ಕಳುಹಿಸಿ ಬಹಳ ದಿನಗಳಾಗಿದ್ದುವು. ಜತೆಯಲ್ಲಿ ಅಂಚೆ ಚೀಟಿ ಇಟ್ಟಿದ್ದರೂ ಉತ್ತರ ಬಂದಿರಲಿಲ್ಲ. ಸ್ವೀಕೃತವಾಗಿರ ಬಹುದು; ಯಾವುದಾದರೊಂದು ವಾರ, ಪತ್ರಿಕೆ ತೆರೆದೊಡನೆ ತನ್ನ ಕತೆಯೂ ಹೆಸರೂ ಕಣ್ಣಿಗೆ ಬೀಳಬಹುದು—ಎಂದು ಜಯರಾಮು ಆಸೆ ಕಟ್ಟಿಕೊಂಡಿದ್ದ. ಅದು, ಆ ಎರಡು ಪತ್ರಿಕೆಗಳೂ ಹೊರ ಬೀಳುವ ದಿನ. ಬೇರೆ ವಾರವಾಗಿದ್ದರೆ ಜಯರಾಮು ಇಷ್ಟು ಹೊತ್ತಿಗೆ ಅಂಗಡಿ ಬೀದಿಯಲ್ಲಾಗಲೀ ವಾಚನಾಲಯದಲ್ಲಾಗಲೀ ಇರುತಿದ್ದ. ಆದರೆ ಈದಿನ ವಾರಪತ್ರಿಕೆಗಳನ್ನು ತೆರೆದು ನೋಡುವುದರಲ್ಲೂ ಆತನಿಗೆ ಆಸಕ್ತಿ ಇರಲಿಲ್ಲ.

ಜನರಿರುವ ಬೀದಿ ಬಿಟ್ಟು ಜಯರಾಮು ಕಾಲು ಹಾದಿ ಹಿಡಿದ. ಯಾರೂ ಜನರಿಲ್ಲದ ಜಾಗಕ್ಕೆ ದೂರ ಒಬ್ಬನೇ ಹೋಗಬೇಕೆಂದು ಅವನಿಗೆ ಬಯಕೆಯಾಯಿತು. ಯಾವುದೋ ಶಕ್ತಿ ನಗುನಗುತ್ತ ಒರಟು ಕೈಗಳಿಂದ ತನ್ನ ಕತ್ತನ್ನು ಹಿಸುಕಿ ಉಸಿರು ಕಟ್ಟಿಸುತಿದ್ದಂತೆ ಆತನಿಗೆ ಭಾಸವಾಗುತಿತ್ತು. ಹೃದಯ ಭಾರವಾಗಿ ಮೈ ಕಾವೇರಿದಂತೆ ತೋರಿತು.

....ರೈಲುಸೇತುವೆಯನ್ನು ತಲುಪಿದ ಜಯರಾಮು, ಮಣ್ಣು

ದಿಬ್ಬಗಳನ್ನು ಹಾದು ಕೆಳಕ್ಕಿಳಿದ. ಕೆಳಗಡೆ ಸ್ವಲ್ಪ ಹಿಂದಿದ್ದ ಪಾಳು ಜಾಮು, ಮಾಸಿದ ಅಂಗಿ. ಎಷ್ಟೋ ಬಾಚಣಿಗೆಗಳ ಸ್ಪರ್ಶವಿಲ್ಲದೇ ಇದ್ದರೂ ಓರಣವಾಗಿದ್ದ ಕ್ರಾಪು....ಕಂಬಿಗೆ ಅಡ್ಡವಾಗಿ ಹಾಕಿದ ಹಲಿಗೆಗಳು ಅಸಂಖ್ಯವಾಗಿದ್ದುವು, ಅನಂತವಾಗಿದ್ದುವು. ಕಲ್ಲು ತಾಕಿ ಒಮ್ಮೊಮ್ಮೆ ನೋವಾದರೂ ಹಲಿಗೆಯಿಂದ ಹಲಿಗೆಗೆ ಹೆಜ್ಜೆ ಇಡುತ್ತ ಯಶವಂತಪುರದತ್ತ ಜಯರಾಮು ನಡೆದ

ನಿರ್ಜನವಾಗಿದ್ದ ಮಲ್ಲೇಶ್ವರದ ರೈಲು ನಿಲ್ದಾಣ ಹಿಂದೆ ಬಿತ್ತು. ಆ ಬಳಿಕ ರೈಲು ಗೇಟು, ಕಾವಲು ಮನೆ, ಒಂಟಿ ಮರ. ಬರಲಿದ್ದ ಕಡು ಬೇಸಗೆಗೆ ಆಗಲೆ ಹೆದರಿ ನೆಲದ ಮೈ ಸುಕ್ಕುಗಟ್ಟಿತ್ತು. ಸಂಜೆಯಾಗುತ್ತ ಬಂದಿದ್ದರೂ ವೃದ್ಧ ಸೂರ್ಯ ಉಗ್ರನಾಗಿಯೇ ಇದ್ದ. ಜಯರಾಮು ಅಲ್ಲಿ ಎಡಕ್ಕೆ ಇಳಿದು ಕೆರೆಯನ್ನು ಬಳಸಿಕೊಂಡು ಎದುರಿಗಿದ್ದ ದಿಬ್ಬವನ್ನೇರಿದ. ಎತ್ತರದಲ್ಲಿ ಬಂಡೆಕಲ್ಲುಗಳಿದ್ದುವು. ಜಯರಾಮು ತನ್ನ ಪರಿಚಯದ ಕಲ್ಲಿಗೆ ಒರಗಿ ಕುಳಿತ.

ವಾರಕ್ಕೊಮ್ಮೆಯೋ ಎರಡು ವಾರಗಳಿಗೊಮ್ಮೆಯೋ ಜಯರಾಮು ಅಲ್ಲಿಗೆ ಬರುವುದಿತ್ತು. ಅದು, ಮನಸ್ಸು ತುಂಬಾ ಉಲ್ಲಾಸವಾಗಿದ್ದಾಗ, ಇಲ್ಲವೆ ಬಹಳವಾಗಿ ಪ್ರಕ್ಷುಬ್ಧಗೊಂಡಿದ್ದಾಗ. ಮನಸ್ಸು ಸಂತೋಷದಿಂದ ಚಿಲಿಪಿಲಿಗುಡುತ್ತಿದ್ದ ದಿನ, ಬಾಡಿದ್ದರೂ ಸರಿಯೆ ಚಿಗುರಿದ್ದರೂ ಸರಿಯೆ ನಿಸರ್ಗ ಸುಂದರವಾಗಿ ಕಂಡು, ಆತನನ್ನು ತನ್ಮಯಗೊಳಿಸುತ್ತಿತ್ತು. ಮನುಷ್ಯನನ್ನು ಮಣ್ಣಿಗೆ ಬಿಗಿದಿರುವ ಅಗೋಚರ ತಂತುವಿನ ವಿಷಯ ಆತ ವಿಸ್ಮಯಗೊಳ್ಳುತ್ತಿದ್ದ. ಕರಿಯ ಬಂಡೆಗಳು ಆತನಿಗೆ ಪ್ರಿಯವಾಗಿ ತೋರುತ್ತಿದ್ದುವು. ಬೆರಳುಗಳಿಂದ ಅವುಗಳನ್ನು ಮುಟ್ಟಿ ನೋಡುತ್ತಿದ್ದ. ಮನಸ್ಸು ಬೇಸರವಾಗಿದ್ದಾಗ ಸುತ್ತುಮುತ್ತಲಿನ ಬರಿಯ ಶೂನ್ಯವೂ ಒಂದು ಬಗೆಯ ನೆಮ್ಮದಿಯನ್ನು ಆತನಿಗೆ ದೊರಕಿಸುತ್ತಿತ್ತು.

ವಿಸ್ತಾರವಾದ ಬಂಡೆಗಲ್ಲು. ಕೆಳಗೆ ಒಂದೆಡೆ ಸಿಡಿಮದ್ದು ಹಾಕಿ ಒಂದಷ್ಟು ಭಾಗವನ್ನು ಒಡೆದು ಒಯ್ದಿದ್ದರು. ಆದರೂ ಎಷ್ಟೊಂದು ಅಚಲವಾಗಿ ಗಂಭೀರವಾಗಿ ಅದು ನಿಂತಿತ್ತು! ಏನಾದ

ರೊಂದು ಘಟನೆಯಿಂದ ಹೃದಯಕ್ಕೆ ಆಘಾತವಾದಾಗ, 'ಮನಸ್ಸಿಗೆ ನೋವಾದಾಗ, ಜಯರಾಮನು "ಈ ಬಂಡೆಕಲ್ಲಿನ ಬಲ ನನಗಿರಬಾರದೆ!" ಎಂದುಕೊಳ್ಳುತಿದ್ದ

ಪ್ರೌಢಶಾಲೆಯಲ್ಲಿದ್ದಾಗ ದೊಡ್ಡ ಹುಡುಗರು ಅವನಿಗೆ ಕೀಟಲೆ ಕೊಟ್ಟು ಗೇಲಿ ಮಾಡುತಿದ್ದರು :

"ಏ ಹುಡುಗಿ!"

ಆಗ ಜಯರಾಮು ನೋಡಲು ಸುಂದರನಾಗಿದ್ದ. ಮುಟ್ಟಿದರೆ ಮುದುಡಿಕೊಂಡು ತನ್ನಷ್ಟಕ್ಕೆ ಸುಮ್ಮನಿರುತಿದ್ದ. ತಾನು ದುರ್ಬಲನೆಂಬುದರ ಅರಿವಾದಾಗಲೆಲ್ಲಾ ಅವನಿಗೆ ಅಳು ಬರುತಿತ್ತು.

ಆದರೆ ವಿಶ್ವವಿದ್ಯಾನಿಲಯದ ಮೆಟ್ಟಿಲೇರುವ ಹೊತ್ತಿಗೆ ಅವನಲ್ಲಿ ಮಾರ್ಪಾಟಾಗಿತ್ತು. ಮುಖದಮೇಲೆ ಹೇರಳವಾಗಿ ಮೂಡಿದ ತಾರುಣ್ಯ ಪಿಟಿಕೆಗಳು ಅವನ ಸೌಂದರ್ಯದಿಂದ ಹುಡುಗಿತನವನ್ನು ಕಸಿದುಕೊಂಡುವು. ಕಾಲೇಜಿಗೆ ಬರಲು ಬರಿಗಾಲಿನಲ್ಲಿ ಮೈಲು ಮೈಲಿಗಳ ದೂರ ನಡಿಗೆ, ಬರಿಗೈ, ಬರಿಜೇಬು ಇತರ ಹಲವಾರು ವಿದ್ಯಾರ್ಥಿಗಳ ವಿಲಾಸಮಯ ಜೀವನದೊಡನೆ ತನ್ನದರ ಹೋಲಿಕೆ ಇವೆಲ್ಲಾ ತನ್ನ ಕುಟುಂಬದ ಇರುವಿಕೆಯ ನಿಜಸ್ವರೂಪವನ್ನು ಆತನಿಗೆ ಮಾಡಿಕೊಟ್ಟವು.

ಆ ಬಳಿಕ ಆತನ ದೃಷ್ಟಿ ಸುತ್ತುಮುತ್ತಲೂ ನೋಡಿ, ತನ್ನ ಕುಟುಂಬದ ರೂಪುರೇಖೆಗಳೇ ಇರುವ ಇತರ ನೂರು ಕುಟುಂಬಗಳನ್ನು ಗುರುತಿಸಿತು. ತನಗಿಂತ ಕಡುಬಡವರಾದ ಸಹಸ್ರ ಜನರನ್ನೂ ಕಂಡಿತು. ಸಂಖ್ಯೆಯಲ್ಲಿ ಅಲ್ಪರಾದ ಸುಖಜೀವಿ ಭಾಗ್ಯವಂತರನ್ನೂ ಆತ ನೋಡಿದ ಸಾಮರಸ್ಯವಿಲ್ಲದ ಜೀವನ....ದಿನನಿತ್ಯದ ಅನುಭವಗಳೊ! ಪ್ರತಿಯೊಂದೂ ಸೂಜಿ ಚುಚ್ಚಿದಹಾಗೆ ನೆನಪನ್ನು ಅಚ್ಚೊತ್ತಿ ಹೋಗುತಿತ್ತು.

ತನ್ನ ಪ್ರೀತಿಯ ತಾಯಿ ಇತರ ಹಲವರ ಹಾಗೆ ಯಾಕೆ ಮೈತುಂಬಿಕೊಂಡಿಲ್ಲ? ಆಕೆಯ ಮುಖವನ್ನು ಯಾವಾಗಲೂ ದುಃಖದ ಮೋಡ ಯಾಕೆ ಕವಿದೇ ಇರುತ್ತದೆ? ಇದು ಈಗೀಗ ಜಯರಾಮುಗೆ ಅರ್ಥವಾಗುತ್ತಿತ್ತು.

ತಂಗಿ ರಾಧೆಯನ್ನು ಆತ ತುಂಬಾ ಪ್ರೀತಿಸುತಿದ್ದ. ಮಕ್ಕಳು ಅನ್ಯೋನ್ಯವಾಗಿರುವುದನ್ನು ಕಂಡು ತಾಯಿಗೂ ಸಂತೋಷವಾಗಿತ್ತು. ಆದರೆ ಆ ತಂಗಿ ಅವನ ಜತೆಯಲ್ಲೇ ಸದಾಕಾಲವೂ ಇರುವುದು ಸಾಧ್ಯ ವಿರಲಿಲ್ಲ. ರಾಧಾ ಇನ್ನೊಬ್ಬರ ಮನೆಗೆ ಹೋಗಬೇಕಾದ ಕಾಲ ಸಮೀಪಿಸುತಿತ್ತು. ಅವಳಿಗಾಗಿ ಆವರೆಗೂ ಯಾವ ಮನೆಯೂ ಬಾಗಿಲು ತೆರೆದಿರಲಿಲ್ಲವಾದರೂ ನೋಡುತಿದ್ದ ಎಲ್ಲರ ದೃಷ್ಟಿಯಲ್ಲಿ ಮದುವೆಯ ದಿನ ಸಮೀಪಿಸುತ್ತಲೇ ಇತ್ತೆಂಬುದು ಸ್ಪಷ್ಟವಾಗಿತ್ತು.

ಈಸಲ ಪ್ರವಾಸದಿಂದ ಹಿಂದಿರುಗಿ ಬಂದ ತಂದೆ........ಒಂದು ಸಂಸಾರವನ್ನು ಸಾಕಲು ಅವರು ಎಷ್ಟೊಂದು ಕಷ್ಟಪಡಬೇಕು! ತಂದೆ ಮತ್ತು ತಾಯಿ.........

ಜಯರಾಮು ಮನೆಯಿಂದ ಈ ಸಂಜೆ ಹೊರಟು ಬಂದುಬಿಟ್ಟಿದ್ದ. ಹೆತ್ತವರು ತಮ್ಮ ಮಕ್ಕಳೆದುರು ಮಾತನಾಡಲಾಗದ ಎಷ್ಟೋ ವಿಷಯ ಗಳಿದ್ದುವು. ದಂಪತಿಗಳು ಎಂದ ಮೇಲೆ ಅವರಿಗೆ ಏಕಾಂತ ಬೇಡವೆ? ರಾತ್ರಿಯಂತೂ ಆ ಕೊಠಡಿ-ಮನೆಯೊಳಗೆ ಸಂಸಾರವೆಲ್ಲ ನಿದ್ದೆ ಹೋದಾಗ ಗೋಪ್ಯವೆಂಬುದಿಲ್ಲ, ಹಗಲಾದರೂ ಮಾತನಾಡಲು ಅವರಿಗೆ ಅವಕಾಶವಿಲ್ಲದಿದ್ದರೆ?

"ರಾಧೆಗೇನೂ ತಿಳಿಯೋದೇ ಇಲ್ಲ. ಆಕೆ ಇನ್ನೂ ಮಗು"

—ಎಂದುಕೊಂಡ ಜಯರಾಮು. ತಾನು ಆಕೆಯನ್ನೂ ಕರೆದು ಕೊಂಡು ಹೊರಟು ಬರಬೇಕಾಗಿತ್ತು, ಒಬ್ಬನೇ ಬಂದು ತಪ್ಪು ಮಾಡಿದೆ –ಎಂದು ಪರಿತಪಿಸಿದ.

ಜಯರಾಮುಗೆ ಓದಿನಲ್ಲಿ ಆಸಕ್ತಿ ಇರಲಿಲ್ಲ. ಆತ ಪರೀಕ್ಷೆಯಲ್ಲಿ ಉತ್ತೀರ್ಣನಾಗದೆ ಇರಲು ಅದೇ ಬಹಳ ಮಟ್ಟಿಗೆ ಕಾರಣವಾಗಿತ್ತು.

ಒಂದು ದಿನ ಇಂಗ್ಲೀಷ್ ಪ್ರಾಧ್ಯಾಪಕರು ಕೇಳಿದ್ದರು :

"ಏನಪ್ಪಾ ಓದೋಕೆ ಮನಸಿಲ್ವೆ?"

ಆ ಮಾತು ಕೇಳಿ ಜಯರಾಮುವಿನ ಮುಖ ಕೆಂಪಗಾಗಿತ್ತು. ಉತ್ತರ ಹೊರಟಿರಲಿಲ್ಲ.

ಈಗಿನ ಕಾಲದ ಹುಡುಗರೆಲ್ಲಾ ಖಂಡಿತವಾಗಿಯೂ ಕೆಟ್ಟು

ಹೋದರೆಂದು ನಂಬಿದ್ದ ಸ್ವಲ್ಪ ವಯಸ್ಸಾಗಿದ್ದ ಆ ಪ್ರಾಧ್ಯಾಪಕರು ನೊಂದ ಧ್ವನಿಯಲ್ಲಿ ಹೇಳಿದ್ದರು :

"ಅನುಕೂಲವಿದ್ದರೆ ಎಷ್ಟು ವರ್ಷ ಬೇಕಾದರೂ ಇಲ್ಲೇ ಇರು. ಸಂತೋಷವೇ. ಆದರೆ, ನಿನ್ನ ನೋಡಿದರೆ, ಅನುಕೂಲವಿದ್ದವನ ಹಾಗೆ ಕಾಣಿಸೋದಿಲ್ಲ. ಕಲಿಯೋಕೆ ಇಷ್ಟವಿಲ್ಲದೆ ಹೋದರೆ ಸುಮ್ಸುಮ್ನೆ ಹೆತ್ತವರ ಹೊಟ್ಟೆ ಉರಿಸಬಾರದಪ್ಪಾ."

ಜಯರಾಮುಗೆ ಅಳು ಬಂದಿತ್ತು. ಆದರೆ ಅದು ನಿರ್ಜನ ಪ್ರದೇಶ ವಾಗಿರಲಿಲ್ಲವಾದ್ದರಿಂದ ಬಿಗಿದುಕೊಂಡ ಕುತ್ತಿಗೆಯ ನರಗಳು ಮತ್ತೆ ಸಡಿಲಿದುವು. ಆ ದಿನವೂ ಜಯರಾಮು ಈ ಬೆಟ್ಟವನ್ನೇರಿ ಬಂದು, ಕತ್ತಲು ಆ ಭೂಮಿಯ ಮೇಲೆಲ್ಲಾ ಕರಿಯ ತೆರೆ ಎಳೆಯುವವರೆಗೂ ಅಲ್ಲಿ ಕುಳಿತಿದ್ದ. ಯಾರೂ ಇಲ್ಲದೆ ಇದ್ದಾಗ ಕಣ್ಣೀರು ಧಾರಾಕಾರವಾಗಿ ಹರಿದಿತ್ತು.

ಪ್ರಾಧ್ಯಾಪಕರು ನಿಜವಾದ್ದನ್ನೇ ಹೇಳಿದ್ದರು. ಪಾಠಗಳಲ್ಲಿ ಆತನಿಗೆ ಆಸಕ್ತಿ ಇರಲಿಲ್ಲ. ವಿಶ್ವವಿದ್ಯಾನಿಲಯದ ನಾಲ್ಕು ಗೋಡೆಗಳೊಳ ಗಿದ್ದರೆ ಮಾತ್ರ ವಿದ್ಯಾವಂತನಾಗುವುದು ಸಾಧ್ಯವೆಂಬುದನ್ನು ಅವನು ಒಪ್ಪುತ್ತಿರಲಿಲ್ಲ. ವಿದೇಶೀಯರು ಬಳುವಳಿಯಾಗಿ ಕೊಟ್ಟು ಹೋಗಿದ್ದ ಈ ವಿದ್ಯಾಪದ್ಧತಿಯನ್ನು ಖಂಡಿಸುವ ಹಲವಾರು ಭಾಷಣಗಳನ್ನು ಆತ ಕೇಳಿದ್ದ. ಆ ವಾದಸರಣಿ ಆತನಿಗೆ ಮೆಚ್ಚುಗೆಯಾಗಿತ್ತು. ಅವನಿಗೆ ಇದ್ದ ಆಕರ್ಷಣೆ ಸಾಹಿತ್ಯವೊಂದೇ. ಪುಸ್ತಕಗಳ ಲೋಕದಲ್ಲಿ ಸುಖಿ ಯಾಗಿ ಇಲ್ಲವೆ ದುಃಖಿಯಾಗಿ ವಿಹರಿಸುತ್ತ ಆತ ಕಷ್ಟಕೋಟಲೆಗಳ ವಾಸ್ತವಲೋಕವನ್ನು ಮರೆಯುತಿದ್ದ.

ತಾನು ಈ ಸಲ ಪರೀಕ್ಷೆ ಕಟ್ಟದಿರುವುದೇ ಮೇಲು, ಈ ಓದು ಇಷ್ಟವಿಲ್ಲವೆಂದು ತಂದೆ ಬಂದೊಡನೆ ಹೇಳಬೇಕು ಎಂದೆಲ್ಲಾ ಯೋಚಿಸುತ್ತಾ ಆ ಸಂಜೆ ಜಯರಾಮು ಮನೆಗೆ ಮರಳಿದ್ದ.

"ಯಾಕೊ ಇಷ್ಟು ತಡ ?"

ಎಂದು ಜಯರಾಮುವಿನ ತಾಯಿ ಕೇಳಿದ್ದಳು. ಮಗ ಉತ್ತರ ಕೊಡಲಿಲ್ಲವೆಂದು ಆಕೆ ಸಿಟ್ಟಾದಳು.

"ಮಾತು ಕೂಡಾ ಆಡ್ಬಾರ್ದೇನೊ ?"

ಎಂದು ತಾಯಿ ರೇಗಿ ಹೇಳಿ, ತಾನು ಒಡೆದು ಮಗಳ ಕೈಲಿ ಓದಿಸಿ ದೇವರ ಪಟದ ಹಿಂದಿರಿಸಿದ್ದ ಕಾಗದವನ್ನು ಮಗನಿಗೆ ಕೊಟ್ಟಳು.

"ನೋಡು, ನಿಮ್ಮಪ್ಪ ಕಾಗದ ಬರೆದಿದ್ದಾರೆ. ಪರೀಕ್ಷೆ ದುಡ್ಡು ಕಟ್ಬೋಕೇಂತ ಮನಿಯಾರ್ಡರೂ ಕಳಿಸಿದ್ದಾರೆ"

ತಂದೆಯ ಕಾಗದ ಓದಿ ಮಗನ ಮನಸ್ಸು ಕುಗ್ಗಿಹೋಯಿತು. ಆತನ ವಿದ್ಯಾಭ್ಯಾಸಕ್ಕೂ ಆ ಪರೀಕ್ಷೆಗೂ ಅವರು ಅಷ್ಟೊಂದು ಮಹತ್ವ ಕೊಟ್ಟಿದ್ದರು. "ಇನ್ನು ಮುಂದಕ್ಕೆ ಓದಿಸುವ ಸಾಮರ್ಥ್ಯ ನನಗಿಲ್ಲ. ಆದರೆ ನನ್ನ ಮಗ ಇಂಟರ್ ಪರೀಕ್ಷೆಯಾದರೂ ಪಾಸಾಗಬೇಕು. ನೀನು ಬೇಗನೆ ಸಂಪಾದಿಸುವಂತಾಗಬೇಕು. ನಮ್ಮ ಸಂಸಾರದ ಪರಿಸ್ಥಿತಿ ನಿನಗೆ ಗೊತ್ತೇ ಇದೆ...."

ಆ ರಾತ್ರೆ ಜಯರಾಮುಗೆ ಅನ್ನ ಸೇರಲಿಲ್ಲ. ಮಲಗಿ ಸ್ವಲ್ಪ ಹೊತ್ತಾದ ಮೇಲೆ ತಾಯಿ ಕೇಳಿದ್ದಳು:

"ನಿದ್ದೆ ಬಂತೆ ಜಯರಾಮೂ?"

ಆ ಪ್ರಶ್ನೆ ಕೇಳಿಸಿದ್ದರೂ ಉತ್ತರ ಕೊಡಲಿಲ್ಲ ಜಯರಾಮು. ಅತ್ತಿತ್ತ ಮಿಸುಕದೆ ಆತ ಮಲಗಿದ. ಯೋಚನೆಯಿಂದ ಆ ಮಿದುಳು ಭಣಗುಟ್ಟಿತು.... ತಂದೆಯ ಬಯಕೆಯನ್ನು ಪೂರೈಸುವುದಕ್ಕಾದರೂ ತಾನು ಓದಬೇಕು, ಉತ್ತೀರ್ಣನಾಗಬೇಕು, ಎಷ್ಟೆಂದರೂ ಇನ್ನು ಕೆಲವು ತಿಂಗಳ ಮಾತು ಎಂದುಕೊಂಡ.

ಆದರೆ ಆ ತೀರ್ಮಾನವನ್ನು ಕಾರ್ಯಗತಗೊಳಿಸುವುದು ಸುಲಭವಾಗಲಿಲ್ಲ. ಮತ್ತೆ ಮತ್ತೆ ಜಯರಾಮು ಪರೀಕ್ಷೆಗೆ ಕುಳಿತುಕೊಳ್ಳಬೇಕಾಯಿತು. ತಂದೆ ಅವಾಚ್ಯ ಮಾತುಗಳಿಂದ ಗದರಿಸಿರಲಿಲ್ಲವಾದರೂ ಅವರಿಗೆ ತುಂಬಾ ದುಃಖವಾಗಿತ್ತೆಂಬುದನ್ನು ಜಯರಾಮು ತಿಳಿದಿದ್ದ.

ಒಮ್ಮೆ ಆತನ ತಂದೆ ಕೇಳಿದ್ದರು:

"ಷಾರ್ಟ್ ಹ್ಯಾಂಡ್ ಟೈಪ್‌ರೈಟಿಂಗ್ ಕಲೀತಿಯೇನೊ?"

ಜಯರಾಮು ಉತ್ತರ ಕೊಟ್ಟಿರಲಿಲ್ಲ. ಆದರೆ ಆ ಕಲಿಯುವಿಕೆಯಿಂದ ಮುಖ್ಯ ಪರೀಕ್ಷೆಗೆ ಭಂಗಬರಬಹುದೆಂದು ಅಳುಕಿ ಅವರೇ

ಹೇಳಿದ್ದರು :

"ಈಗ ಬೇಡ, ಈ ಪರೀಕ್ಷೆಯೊಂದು ಆಗಲಿ ಸದ್ಯ "

ಈ ಸಂಜೆ ತಾಯಿ ತಂದೆಯರಿಂದ, ತಂಗಿಯಿಂದ ದೂರ ಬಂದು ಕುಳಿತು ಜಯರಾಮು ಅಂತರ್ಮುಖಿಯಾಗಿ ಬಹಳ ಹೊತ್ತು ಯೋಚಿಸಿದ.

ತಂದೆ ಬಡಕಲಾಗಿದ್ದರು. ಪ್ರವಾಸ ವ್ಯಾಪಾರದಿಂದ ಅವರ ಆರೋಗ್ಯ ಕೆಟ್ಟಿತ್ತು. ಇಳಿಮುಖವಾಗಿತ್ತು ಸಂಪಾದನೆ. ತನ್ನ ತಂಗಿಯ ಮದುವೆ....

ಮತ್ತೂ ಹಿಂದಕ್ಕೆ ಬಂಡೆಕಲ್ಲಿಗೊರಗಿ ಕಾಲುಗಳನ್ನು ಸಡಿಲವಾಗಿ ಚಾಚಿ ಜಯರಾಮು ನಿಟ್ಟುಸಿರುಬಿಟ್ಟ.

ಹೇಗಿರುತ್ತಾರೆ ಮನುಷ್ಯರು! ಉದಾಹರಣೆಗೆ ರಂಗಮ್ಮ ಅವರಲ್ಲಿ, ಜಯರಾಮು ಒಳ್ಳೆಯವನೆಂದು ಭಾವಿಸಿದ್ದ. ಎಷ್ಟೋ ಗುಣಗಳಿದ್ದುವು, ಕೆಟ್ಟ ಗುಣಗಳೂ ಇದ್ದುವು. ಅವರು ಕಷ್ಟಪಟ್ಟು ಮಕ್ಕಳನ್ನು ಬೆಳೆಸಿ ದೊಡ್ಡವರಾಗಿ ಮಾಡಿದ ಸಾಹಸದ ಕತೆ ಕೇಳಿದಾಗ ಜಯರಾಮು ಬೆರಗಾಗಿದ್ದ. ಆದರೆ ರಂಗಮ್ಮ ವಯಸ್ಸಾದಂತೆ ಹೆಚ್ಚು ಹೆಚ್ಚು ಜಿಪುಣರಾಗುತ್ತ ಬಂದಿದ್ದರು. ಹಣ ಎಂದರೆ ಎಷ್ಟೊಂದು ಪ್ರೀತಿ ಅವರಿಗೆ! ಆ ಸೀರು ಲೈಟುಗಳ ಲೆಕ್ಕಾಚಾರ.

ಒಂದು ದಿನ ವಠಾರದ ಎಲ್ಲರ ಮುಂದೆ ಜಯರಾಮು ಅವರನ್ನು ಕೇಳಿದ್ದ :

"ಕಕ್ಕಸು ನೋಡಿದ್ರಾ ರಂಗಮ್ನೋರೆ ?"

"ಏನಾಗಿದೆಯಪ್ಪಾ........?"

"ಥೂ ಥೂ ........ಹೊಲಸೂಂದರೆ ಹೊಲಸು........"

"ಕಕ್ಕಸು ತೊಳೆಯೋಳು ಬರ್ಲಿಲ್ವೇನೊ ?"

"ಬಂದಿದ್ಲು. ನೀವು ಕೊಡೋದು ನಾಲ್ಕೇ ಆಣೆ. ನಾಲ್ಕಾಣೆಗೆ ಎಷ್ಟು ತೊಳೀಬೇಕೋ ಅಷ್ಟು ತೊಳೀತಾಳೆ."

ರಂಗಮ್ಮ ಸಿಟ್ಟಾಗಿ ಕೇಳಿದರು.

"ಇನ್ನೇನು ? ಒಂದು ರೂಪಾಯಿ ಕೊಡ್ಲೇ ನಾನು ?"

"ನೀವ್ಯಾಕೆ ಕೊಡ್ಬೇಕು? ಇಷ್ಟು ಸಂಸಾರ ಇಲ್ವೆ ಇಲ್ಲಿ? ಒಬ್ಬೊಬ್ಬರೂ ಬಾಡಿಗೆ ಜತೇಲಿ ಎರಡೆರಡಾಣೆ ಕೊಡ್ಲಿ. ಆಗ ಒಂದು ರೂಪಾಯಿ ಕಕ್ಕಸು ತೊಳೆಯೋಳಿಗೆ ಕೊಡೋಕೆ ಆಗಲ್ವೊ?"

ಅಲ್ಲಿದ್ದ ಹೆಂಗಸರೆಲ್ಲ ಜಯರಾಮುವನ್ನು ಅರೆಕ್ಷಣ ದುರುಗುಟ್ಟಿ ನೋಡಿದರು. ಆದರೆ ಅವನ ಕಣ್ಣುಗಳಲ್ಲಿ ತುಂಟತನ ಮಿನುಗುತಿದ್ದುದು ಕೆಲವರಿಗೆ ಕಾಣಿಸದಿರಲಿಲ್ಲ. ಆದರೆ ಆ ವ್ಯಂಗ್ಯ ಅರ್ಥವಾಗದೆ ರಂಗಮ್ಮ, ಎರಡೆರಡಾಣೆಯಂತೆ ಒಂದು ರೂಪಾಯಿ ಹನ್ನೆರಡಾಣೆ ಜಮೆಯಾಗುವುದನ್ನೂ ಮುನಿಸಿಪಾಲಿಟಿಯವಳಿಗೆ ಎಂಟಾಣೆ ಕೊಟ್ಟರೂ ಒಂದೂ ಕಾಲು ರೂಪಾಯಿ ಮಿಗುವುದನ್ನೂ ಮನಸ್ಸಿನಲ್ಲೆ ಲೆಕ್ಕ ಹಾಕಿದರು. ಅದೊಂದನ್ನೂ ಹೊರಗೆ ತೋರಗೊಡದೆ ಅವರು ಗೊಣಗಿದರು:

"ಸರಿ. ಇನ್ನು ಅದೊಂದು. ಇವರೆಲ್ಲಾ ಬಾಡಿಗೆ ಒಮ್ಮೆ ಸರಿಯಾಗಿ ಕೊಟ್ಟರೆ ಸಾಕಾಗಿದೆ."

ಮೇಲಿಂದ ಕಿಟಕಿ ಮೂಲಕ ಇಣಿಕಿ ನೋಡಿ ಜಯರಾಮು ತಾಯಿ ಕೇಳಿದ್ದಳು:

"ಏನೋ ಅದು ಗಲಾಟೆ?"

ಜಯರಾಮು ಮೇಲಕ್ಕೆ ಬಂದು, ಕೆಳಗೆ ಆದ ಸಂಭಾಷಣೆಯನ್ನು ತಾಯಿಗೂ ಹೇಳಿ ಬಿದ್ದುಬಿದ್ದು ನಕ್ಕ. ಆಕೆಗೂ ನಗು ಬರದಿರಲಿಲ್ಲ. ಆದರೂ ಎಂದಿನಂತೆ ಆಕೆ ಹೇಳಿದಳು:

"ವಯಸ್ಸಾದೋರ ಜತೇಲಿ ಹಾಗೆಲ್ಲಾ ಆಡ್ಬಾರದಪ್ಪಾ."

ಆದರೆ ಅಂತಹ ತುಂಟ ಮಾತುಗಳಿಂದ ಸಂತೋಷವಾಗಿರುತಿದ್ದ ಜಯರಾಮು, ಮತ್ತೊಂದು ದಿನ ರಂಗಮ್ಮ ಒಬ್ಬರೇ ಇದ್ದಾಗ ಕೇಳಿದ್ದ:

"ನಾನು ಆವತ್ತು ಹೇಳಿದ ವಿಷಯ ಏನ್ಮಾಡಿದಿರಿ ರಂಗಮ್ನೋರೆ?"

"ಯಾವ ವಿಷಯ್ವೋ?"

"ಅದೇ—ಕಕ್ಕಸಿಂದು."

ಹಾಗೆ ಹೇಳಿದಾಗ ಗಾಂಭೀರ್ಯ ಮರೆಯಾಗಿ ನಗು ಬಂದು ಬಿಟ್ಟಿತ್ತು ಜಯರಾಮುಗೆ. ಅದನ್ನು ಗಮನಿಸಿ ರಂಗಮ್ಮ ಅರೆಮುನಿಸಿ

ನಿಂದ ರೇಗುತ್ತ ಹೇಳಿದ್ದರು.

"ನಗ್ತೀಯೇನೊ? ಕೈಲಾಗದ ಮುದುಕಿ ಒಬ್ಬಳಿದಾಳೇಂತ ನಿನಗೆಲ್ಲಾ ತಮಾಷೆಯಾಗ್ಬಿಟ್ಟಿದೆ ಅಲ್ವೆ? ತಾಳು ನಿನ್ನಪ್ಪ ಬರ್ಲಿ, ಹೇಳ್ತೀನಿ."

ಜಯರಾಮು ನಕ್ಕು, ರಂಗಮ್ಮನನ್ನು ಕೇಳಿದ:

"ಗೋಧಿಗೀಧಿ ಏನಾದರೂ ಇದ್ದರೆ ಕೊಡಿ. ಹಿಟ್ಟು ಮಾಡಿಸಿ ಕೊಂಡು ಬರ್ತೀನಿ."

ಆ ಕ್ಷಣ ರಂಗಮ್ಮನಿಗೆ ಬೇರೆ ಎಲ್ಲವೂ ಮರೆತುಹೋಯಿತು ಸ್ವಯಂಸೇವಕನಾಗಿ ಬಂದ ಜಯರಾಮು ಅವರ ಪ್ರೀತಿಪಾತ್ರನಾದ.

ನಾರಾಯಣಿ ಸತ್ತಾಗ ಅಂತ್ಯಸಂಸ್ಕಾರಕ್ಕೆಂದು ರಂಗಮ್ಮ ಐದು ರೂಪಾಯಿ ತೆಗೆದುಕೊಟ್ಟ ಸನ್ನಿವೇಶ, ಹಾಗೆಯೇ ಅಕ್ಕಪಕ್ಕದ ವರು ಕಾಹಿಲೆ ಬಿದ್ದಾಗ ಅವರು ನಡೆಸುತಿದ್ದ ಆರೈಕೆ — ಅದೊಂದು ಚಿತ್ರವಾದರೆ, ನಾರಾಯಣಿಯ ಗಂಡ ಮಕ್ಕಳೊಡನೆ ಮನೆ ಬಿಟ್ಟು ಹೊರಟುಹೋಗುವಂತೆ ಅವರು ಮಾಡಿದ್ದು; ಖಾಲಿ ಮನೆಯನ್ನು ನೋಡಲು ಯಾರಾದರೂ ಬಂದಾಗ ಅವರು ಒಪ್ಪುವಂತೆ ಮಾಡಲು ಆಕೆ ತೋರಿಸುತಿದ್ದ ವಾಕ್ಚಾತುರ್ಯ – ಇದು ಇನ್ನೊಂದು ಚಿತ್ರ ವಾಗಿತ್ತು.

ಹೀಗೆ ಪ್ರತಿಯೊಂದು ಮನುಷ್ಯನಲ್ಲೂ ಜಯರಾಮು ಸೂಕ್ಷ್ಮ ವಾಗಿ ನಿರೀಕ್ಷಿಸಿ ತಿಳಿದುಕೊಳ್ಳುತಿದ್ದ. ಪ್ರತಿಯೊಬ್ಬನೂ ಒಳಿತು–ಕೆಡಕುಗಳ ಸಮ್ಮಿಶ್ರಣ. ಕೆಲವರಲ್ಲಿ ಒಳಿತು ಹೆಚ್ಚು, ಕೆಲವರಲ್ಲಿ ಕೆಡುಕು. ಪ್ರತಿಯೊಬ್ಬರನ್ನೂ ಹಾಗೆ ತೂಗಿನೋಡಿದ ಮೇಲೆ ಮತ್ತೊಂದು ಪ್ರಶ್ನೆ ಏಳುತಿತ್ತು. 'ಈ ಮನುಷ್ಯ ಹೀಗೇಕೆ?' ಶಂಕೆ ಸಂದೇಹಗಳು ಮೂಡಿದಾಗಲೆಲ್ಲಾ ಜಯರಾಮು, ಪುಸ್ತಕಗಳಲ್ಲಿ ವಿವರಣೆ ಹುಡುಕುತಿದ್ದ. ಆದರೆ ಪ್ರತಿಸಲವೂ ಸಮರ್ಪಕ ಉತ್ತರ ಅಲ್ಲಿ ಸಿಗುತ್ತಿರಲಿಲ್ಲ.

ಮನಸಿನ ಆ ಭಾವನೆಗಳಿಗೆ ಮಾತಿನ ರೂಪು ಕೊಟ್ಟು ಆತ ಕವಿತೆ ಗಳನ್ನು ಬರೆದ. ತಂಗಿ ರಾಧಾಗೆ ಅವು ಅರ್ಥವಾಗಲಿಲ್ಲ. ಆದರೆ ಆಕೆಯ

ದೃಷ್ಟಿಯಲ್ಲಿ ಅಣ್ಣ ನಿಸ್ಸಂದೇಹವಾಗಿಯೂ ದೊಡ್ಡ ಕವಿಯಾಗಿದ್ದ. ಆಕೆ ಕೇಳಿದ್ದಳು:

"ಅಣ್ಣ, ಇದನ್ನೆಲ್ಲಾ ಅಚ್ಚುಹಾಕಿಸಿ ಒಂದು ಪುಸ್ತಕ ಮಾಡ ಬಹುದು ಅಲ್ವಾ?"

"ಹುಚ್ಚಿ! ಅವಕ್ಕೆಲ್ಲಾ ದುಡ್ಬೇಕು."

ಆ ವಿಷಯ ರಾಧೆಗೆ ಅರ್ಥವಾಗಿರಲಿಲ್ಲ. ಆದರೆ 'ದುಡ್ಡು' ಎಂಬ ಪದ ಅವಳ ಬಾಯಿ ಮುಚ್ಚಿಸಿತು. ತಮ್ಮ ಮನೆಯಲ್ಲಿ ದುಡ್ಡು ಇಲ್ಲ ವೆಂಬುದಷ್ಟು ಆಕೆಗೆ ಗೊತ್ತಿತ್ತು.

ತಂದೆಯೂ ಒಮ್ಮೆ ಆ ಕವಿತೆಗಳನ್ನು ನೋಡಿದರು. ಆಗ ಜಯರಾಮು ಅವರ ಮುಖವನ್ನೇ ಪರೀಕ್ಷಿಸಿದ. ಅವರು ಪುಟ ತಿರುವಿ ಹಾಕಿ, ಬಡಕನ್ನಡಕವನ್ನು ತೆಗೆದಿಟ್ಟು, ಮಗನನ್ನೇ ದಿಟ್ಟಿಸಿ ಹೇಳಿದರು:

"ಹುಂ. ಪಾಠ ಓದೋದು ಬಿಟ್ಬಿಟ್ಟು, ತಲೆ ಕೆಡಿಸ್ಕೊಂಡು ಎಲ್ಲಾದರೂ ಕೂತೆ ಅಂದ್ರೆ...."

ಜಯರಾಮುಗೆ ಮುಖಕ್ಕೆ ಹೊಡೆದ ಹಾಗಾಯಿತು. ಆತ ಮೂಕನಾಗಿ ಹೋದ. ಹಳೆ ಪುಸ್ತಕಗಳನ್ನೋದಿ ಸಾಹಿತ್ಯದ ಅಭಿರುಚಿಯಿದ್ದ ತಂದೆಯಿಂದ ಪ್ರೋತ್ಸಾಹದ ಮಾತು ಬರುವುದೆಂದು ಆತ ನಿರೀಕ್ಷಿಸಿದ್ದು ಸುಳ್ಳಾಯಿತು. ತನ್ನ ಕಾವ್ಯಸೃಷ್ಟಿ ಅಂದಿಗೇ ಕೊನೆಯಾಯಿತೆಂದುಕೊಂಡ.

ಅದಾದ ಮೇಲೆ ಒಮ್ಮೆ ವಠಾರದಲ್ಲಿ ಸೌದೆ ಪ್ರಕರಣ ನಡೆಯಿತು. ಇನ್ನೊಬ್ಬರ ಮನೆಯಿಂದ ಹಾರವನ್ನಲ್ಲ ಸೀರೆಯನ್ನಲ್ಲ ಎರಡು ತುಂಡು ಸೌದೆಯನ್ನು ಹೆಂಗಸೊಬ್ಬಳು ಕದ್ದಳು. ಒಮ್ಮೆ ಒಳ್ಳೆಯವಳೆನ್ನಿಸಿ ಕೊಂಡಿದ್ದ ನಾರಾಯಣಿ ಆಗ ಕಳ್ಳಿಯಾದಳು. ಎಂತೆಂತಹ ಹೀನ ಸ್ಥಿತಿಗೆ ಜನರನ್ನು ಬಡತನ ತಳ್ಳುತಿತ್ತು!

ಜಯರಾಮುವಿನ ಮೇಲೆ ಆ ಘಟನೆ ವಿಚಿತ್ರ ಪರಿಣಾಮವನ್ನು ಉಂಟುಮಾಡಿತು. ನಾರಾಯಣಿಯನ್ನು ಲೇವಡಿ ಮಾಡಿದ ಹೆಂಗಸ ರೊಡನೆ ಆತ ಜಗಳವಾಡಿದ. ಕಳವು ಮಾಡಿದ ಹೆಂಗಸಿನ ನೆರವಿಗೆ ಬಂದ ಹುಡುಗನನ್ನು ಇತರರೆಲ್ಲ ನಗೆಗೀಡುಮಾಡಿದರು. ನೆಮ್ಮದಿ

ಕೆಡಸಿಕೊಂಡ ಜಯರಾಮು ನಾಲ್ಕು ದಿನ ತಳ್ಳಿದ.

ಐದನೆಯ ದಿನ ಆತ ಕತೆ ಬರೆಯಲೇ ಬೇಕಾಯಿತು. 'ಒಂದು ತುಂಡು ಸೌದೆ' ಬರೆದು ಮುಗಿಸಿದ ಮೇಲೆ ಅವನಿಗೆ ಹೃದಯ ಹಗುರವೆನಿಸಿತು.

ತಂಗಿ ರಾಧೆಯೇ ಎಂದಿನಂತೆ ಅದನ್ನು ಮೊದಲು ಓದಿ ಕುಣಿದಾಡಿದಳು. :

"ಅಯ್ಯೋ! ಎಷ್ಟು ಚೆನ್ನಾಗಿದೆ! ಅವರ ಮನೇ ಮುಂದೆ ನಿತ್ಕೊಂಡು ಓದ್ಬೇಕು ಇದನ್ನ."

ಮಕ್ಕಳ ಸಂತೋಷ ತಾಯಿಯ ಎದೆಯಲ್ಲೂ ಅಸ್ಪಷ್ಟವಾಗಿ ಪ್ರತಿಧ್ವನಿಸದಿರಲಿಲ್ಲ. ಆದರೂ ಆಕೆಯೆಂದಳು :

"ಹಾಗೇನೂ ಮಾಡ್ಬೇಡೀಪ್ಪ ಸದ್ಯ"

ತಂಗಿ ರಾಧೆಗೆ ಅಣ್ಣನ ಸಾಮರ್ಥ್ಯದ ಬಗೆಗೆ ಯಾವ ಅಪ ನಂಬಿಕೆಯೂ ಇರಲಿಲ್ಲ.

"ಅಣ್ಣ, ಇದನ್ನ ಪತ್ರಿಕೆಗೆ ಕಳಿಸ್ಬಾರ್ದ ಅಣ್ಣ?"

ಕಳುಹಿಸಿ ನೋಡಬೇಕೆಂದು ಆತನಿಗೂ ಆಸೆಯಿತ್ತು. ಆದರೆ ಧೈರ್ಯವಿರಲಿಲ್ಲ. ತನಗೆ ಮೆಚ್ಚುಗೆಯಾಗಿದ್ದ ಆ ಕತೆಯನ್ನು ದೊಡ್ಡ ಪತ್ರಿಕೆಯ ಸಂಪಾದಕರು ಅಸ್ವೀಕೃತವೆಂದು ತಿರಸ್ಕರಿಸಬಹುದೆಂಬ ಭಯವಿತ್ತು.

ಪತ್ರಿಕೆಯಲ್ಲಿ ಆ ಕತೆ ಪ್ರಕಟವಾಗಿ ತನ್ನ ಹೆಸರೂ ಅಚ್ಚಾಗಿ ತನ್ನನ್ನು ಬರೆಹಗಾರನೆಂದು ನಾಲ್ಕು ಜನ ಕರೆಯುವ ಕಲ್ಪನೆಯ ಚಿತ್ರ....ಅದು ಸೊಗಸಾಗಿತ್ತು....ಆ ಆಸೆಯನ್ನು ಅದುಮಿ ಹಿಡಿಯು ವುದು ಸಾಧ್ಯವಿರಲಿಲ್ಲ. ಕೊನೆಗೆ ಅಗಲ ಕಿರಿದಾದ ಒಂದು ಓಣಿ ಯಲ್ಲಿದ್ದ ಪುಟ್ಟ ಆಕೃತಿಯ ಪತ್ರಿಕೆಯಾದ 'ಕಥಾಪ್ರಿಯ'ನಿಗೆ ಜಯ ರಾಮು ತನ್ನ ಕತೆಯನ್ನು ಕಳುಹಿಸಿ ಕೊಟ್ಟ. ಸ್ವತಃ ತಾನೇ ಆ ಸಂಪಾ ದಕರನ್ನು ಕಾಣುವ ಸಾಹಸ ಮಾಡಲಿಲ್ಲ. ಆ ಅಮೂಲ್ಯ ಕೃತಿಯನ್ನು ರಚಿಸಿದವನು ಇನ್ನೂ ಬಾಲಕನೆಂದು ತಿಳಿದರೆ ಅವರು ಅದನ್ನು ಪ್ರಕಟಿಸದೇ ಹೋಗಬಹುದೆಂಬ ಅಳುಕು....

ಮುಂದಿನ ತಿಂಗಳ 'ಕಥಾಪ್ರಿಯ'ನಿಗಾಗಿ ಕಾದು ಕುಳಿತದ್ದಾಯಿತು. ಆದರಲ್ಲಿ ಅಚ್ಚಾಗಿರಲಿಲ್ಲ. ಜಯರಾಮು ಆ ಸಂಪಾದಕರಿಗೆ ಕಾಗದ ಬರೆದು ತನ್ನ ಹಸ್ತಪ್ರತಿಯ ನೆನಪು ಮಾಡಿಕೊಟ್ಟ. ಪ್ರತ್ಯುತ್ತರವೇನೂ ಬರಲಿಲ್ಲ. "ನಿಮಗೆ ಬೇಡವಾದರೆ ತಿಳಿಸಿ, ಬೇರೆ ಪತ್ರಿಕೆಯವರು ಕೇಳಿದ್ದಾರೆ" ಎಂದು ಇನ್ನೊಂದು ಕಾಗದ ಬರೆದ. ಬೇಡವೆಂದು ಅವರು ತಿಳಿಸಲಿಲ್ಲ.

ಅನಂತರ ಬಂದ 'ಕಥಾಪ್ರಿಯ' ಸಂಚಿಕೆಯಲ್ಲಿ 'ಒಂದು ತುಂಡು ಸೌದೆ' ಅಚ್ಚಾಗಿತ್ತು. ಬರೆದವರು: ಎಂ. ಎಸ್. ಜಯರಾಮು. ಅಣ್ಣ ತಂಗಿಯರ ಆನಂದಕ್ಕೆ ಪಾರವೇ ಇರಲಿಲ್ಲ. ತಾಯಿಗೂ ಅದು ಹೊಸ ವಿಷಯವಾಗಿತ್ತು. ಆ ಪತ್ರಿಕೆಗಳಲ್ಲಿ ಹೆಸರಾಂತ ಬರೆಹಗಾರರ ಕತೆಗಳಿರಲಿಲ್ಲ. ಎಲ್ಲರೂ ಹೊಸಬರೇ. ತನಗೆ ನೀಡಿದ ಪ್ರೋತ್ಸಾಹಕ್ಕಾಗಿ ಅಭಿವಂದಿಸಿ ಆತ ಆ ಸಂಪಾದಕರಿಗೆ ಇನ್ನೊಂದು ಕಾಗದ ಬರೆದ. ಉತ್ತರ ಆಗಲೂ ಬರಲಿಲ್ಲ. ಆ ಕತೆಗಾಗಿ ತನಗೆ ಐದುರೂಪಾಯಿ ಸಂಭಾವನೆ ಬಂದ ಹಾಗೆ ಕನಸೂ ಬಿತ್ತು. ಆದರೆ ಕನಸಿನ ಲೋಕಕ್ಕೂ ವಾಸ್ತವ ಪರಿಸ್ಥಿತಿಗೂ ಹೋಲಿಕೆ ಇರಲಿಲ್ಲ. ಸಂಭಾವನೆಯ ಹಣ ಹೋಗಲಿ, ಪತ್ರಿಕೆಯ ಒಂದು ಪ್ರತಿಯೂ ಆತನಿಗೆ ಬರಲಿಲ್ಲ. ಆ ಪತ್ರಿಕೆಯನ್ನು ಹೆಚ್ಚು ಜನ ಓದಿದಂತೆಯೂ ತೋರಲಿಲ್ಲ. ಮಲ್ಲೇಶ್ವರದ ಅಂಗಡಿ ಬೀದಿಯಲ್ಲಿ ಮಾತ್ರ ಒಂದು ಅಂಗಡಿಯಲ್ಲಿ ತಿಂಗಳ ಮೊದಲಲ್ಲಿ ಆರು ಪ್ರತಿಗಳಿದ್ದುವು. ಒಂದನ್ನು ತಾನು ಕೊಂಡುಕೊಂಡಿದ್ದ. ಮತ್ತೆ ಎರಡು ವಾರ ಬಿಟ್ಟು ಅತ್ತ ಹೋದಾಗ, ಉಳಿದ ಐದೂ ಪ್ರತಿಗಳೂ ಅಲ್ಲಿಯೇ ಇದ್ದುದು ಕಂಡು ಬಂತು.

ಮತ್ತೊಮ್ಮೆ ಪ್ರವಾಸದಿಂದ ಹಿಂತಿರುಗಿದ ತಂದೆಯ ಕಣ್ಣಿಗೆ ಆ 'ಕಥಾಪ್ರಿಯ' ಸಂಚಿಕೆ ಬೀಳದಿರಲಿಲ್ಲ. ಮಗನ ಕಥೆಯನ್ನೋದಿ ಅವರು ಏನನ್ನೂ ಹೇಳಲಿಲ್ಲ. ಆದರೆ ಮತ್ತೊಮ್ಮೆ ಪ್ರವಾಸ ಹೊರಡುವ ಹೊತ್ತಿಗೆ ಅವರು ಅಂದಿದ್ದರು.

"ಪಾಠಗೀಠ ಸರಿಯಾಗಿ ಓದ್ತಾ ಇದೀಯೋನೊ ಜಯರಾಮು?"

"ಹೂನಪ್ಪಾ."

ಕತೆ ಬರೆದುದಕ್ಕೆ ತಂದೆಯ ಕೈಲಿ ಬೈಗಳ ಪ್ರತಿಫಲ ಸಿಗದಿದ್ದುದೇ ಆತನಿಗೆ ದೊರೆತ ಉತ್ತೇಜನವಾಯಿತು. ಪತ್ರಿಕೆಗಳನ್ನು ಈಗ ಹೆಚ್ಚು ಸೂಕ್ಷ್ಮವಾಗಿ ಪರಿಶೀಲಿಸಿ ಮಕ್ಕಳ ಪುಟ ಪ್ರಶ್ನೋತ್ತರ ವಿಭಾಗಗಳಲ್ಲಿ ಪ್ರಸಿದ್ಧಿಗೆ ಬಂದ.... ಸಾಹಿತ್ಯಕ್ಷೇತ್ರದಲ್ಲಿ ಪ್ರಖ್ಯಾತನಾಗುವುದು ಸುಲಭಸಾಧ್ಯವಲ್ಲವೆಂಬುದು ಆತನಿಗೆ ಮನವರಿಕೆಯಾಗಿತ್ತು. ಬರೆಯುವವನಿಗೆ ನಿಸ್ಸಂಶಯವಾಗಿಯೂ ಪ್ರತಿಭೆ ಇರಬೇಕಾದುದು ಅಗತ್ಯ. ಆದರೆ ಅಷ್ಟಿದ್ದರೆ ಸಾಲದು, ಆತ ಶ್ರಮ ಪಡಬೇಕು. ದೀರ್ಘಕಾಲದ ಪರಿಶ್ರಮ, ಎಡೆಬಿಡದ ಸಾಧನೆ, ಅಗಾಧವಾದ ತಾಳ್ಮೆ —ಇವು ಅವಶ್ಯ. ಜಯರಾಮುಗೆ ಇದು ತಿಳಿದಿತ್ತು.

ತನಗೆ ಇಷ್ಟವಿಲ್ಲದೆ ಹೋದರೂ ಜಯರಾಮು, ಕಷ್ಟಪಟ್ಟು ಓದಿದ್ದ ; ಪರೀಕ್ಷೆಗೆ ಕುಳಿತಿದ್ದ; ಆದರೆ ಉತ್ತೀರ್ಣನಾಗಿರಲಿಲ್ಲ. ಅದಾದ ಮೇಲೆ 'ಮರಳಿ ಯತ್ನವ ಮಾಡು.'

ಮುಂದಿನ ಸೆಪ್ಟೆಂಬರ್‌ನಲ್ಲಿ ಉಳಿದೊಂದು ಭಾಗದಲ್ಲೂ ತೇರ್ಗಡೆಯಾಗಬಹುದೆಂಬ ನಂಬಿಕೆ ಆತನಿಗಿತ್ತು. ಅದಾದ ಮೇಲೆ ತಾನು ಉದ್ಯೋಗ ದೊರಕಿಸಿಕೊಂಡು ತಂದೆಗೆ ನೆರವಾಗಬೇಕು.

...... ಕತ್ತಲಾಗುತ್ತ ಬಂದಿತ್ತು. ಬಂಡೆಕಲ್ಲಿಗೆ ಒರಗಿದ್ದ ಜಯರಾಮು ನೇರವಾಗಿ ಕುಳಿತ. ಕುಳಿರು ಗಾಳಿ ಆತನ ಮೈಕೈಗಳ ಮೇಲೆ ಸುತ್ತಾಡಿತು. ದೂರದಲ್ಲಿ ಬೀದಿಯ ಮನೆಗಳ ವಿದ್ಯುದ್ದೀಪಗಳು ಹತ್ತಿಕೊಂಡುವು. ಚಿಕ್ಕ ರೈಲುಗಾಡಿಯೊಂದು ಯಶವಂತಪುರದಿಂದ ಮಲ್ಲೇಶ್ವರಕ್ಕೆ ಬುಸುಗುಟ್ಟಿಕೊಂಡು ಹೋಯಿತು.

ವಿಸ್ತಾರವಾಗಿ ಎಂಟು ಮೈಲಿಗಳ ಉದ್ದಗಲಕ್ಕೆ ಹರಡಿಕೊಂಡಿದ್ದ ಬೆಂಗಳೂರು. ಅಲ್ಲಿ ವಾಸಿಸುವ ಲಕ್ಷಾವಧಿ ಜನ. ಆ ಜನರಲ್ಲಿ ತಾನೊಬ್ಬ. ಸಂಜೆಯಾದೊಡನೆ ನಗರದ ಸಹಸ್ರ ಸಹಸ್ರ ಮನೆಗಳಲ್ಲಿ ದೀಪಗಳುರಿಯುತಿದ್ದುವು. ರಾತ್ರೆ ಒಂದರ ಅನಂತರ ಒಂದಾಗಿ ನಿದ್ದೆ ಬಂತೆಂದು ಕಣ್ಣುಮುಚ್ಚಿಕೊಳ್ಳುತಿದ್ದವು. ಇರುಳು ಕಳೆದು ಸೂರ್ಯೋದಯ. ಮತ್ತೆ ದಿನದ ದುಡಿಮೆ. ಎಲ್ಲವೂ ಹೊಟ್ಟೆಗಾಗಿ,

ಗೇನು ಬಟ್ಟೆಗಾಗಿ.

ತಾನು ಸಾಹಿತ್ಯ ಸೃಷ್ಟಿಸಬೇಕು. ಆದರೆ ಸಾಹಿತ್ಯ ಸೃಷ್ಟಿಯೊಂದನ್ನೇ ಮಾಡುತ್ತಲಿದ್ದರೆ, ಹೊಟ್ಟೆ ತುಂಬದು. ಅದಕ್ಕಾಗಿ ತಾನು ದುಡಿಯಬೇಕು. ದುಡಿತದ ಮಾರುಕಟ್ಟೆಯಲ್ಲಿ ತನ್ನ ಬೆಲೆಯನ್ನು ಹೆಚ್ಚಿಸಿಕೊಳ್ಳುವುದಕ್ಕೋಸ್ಕರ, ಪರೀಕ್ಷೆಯಲ್ಲಿ ತಾನು ಉತ್ತೀರ್ಣನಾಗಬೇಕು.

ಕಾಲುಹಾದಿಯೂ ಕಾಣದಷ್ಟು ಕತ್ತಲಾಗಿತ್ತು. ಒಮ್ಮೆ ಸೂರ್ಯ ಮರೆಯಾದನೆಂದರೆ ಕತ್ತಲು ಧಾವಿಸಿ ಬರುವುದು ಎಷ್ಟು ಬೇಗನೆ !

ಜಯರಾಮು ಮನೆಯ ಕಡೆ ಹೊರಟ.

ರೈಲುಹಾದಿ, ಒಂಟಿ ಮರ, ಕಾವಲು ಮನೆ, ನಿಲ್ದಾಣ....

ಎಡಬದಿಯಲ್ಲಿದ್ದ ಎತ್ತರದೊಂದು ದೊಡ್ಡ ಮನೆಯಿಂದ ರೇಡಿಯೋ ಹಾಡುತಿತ್ತು.

"ದುನಿಯಾ ರಂಗ್‌ರಂಗೀಲಿ ಬಾಬಾ, ದುನಿಯಾ ರಂಗ್‌ರಂಗೀಲಿ"

ಅದು ಯಾರ ಕಂಠವೋ ಜಯರಾಮುಗೆ ತಿಳಿಯದು. ಆತನ ಮನೆಯಲ್ಲೇನೂ ರೇಡಿಯೋ ಇರಲಿಲ್ಲ. ಆತ ಚಲಚ್ಚಿತ್ರಗಳ ಹುಚ್ಚನೂ ಅಲ್ಲ. ಮುಖ್ಯತಃ ಅಂತಹ ಹುಚ್ಚಿಗೆಲ್ಲ ಅಗತ್ಯವಾಗಿ ಬೇಕಾಗುವ ಹಣ ಅವನಲ್ಲಿರಲಿಲ್ಲ.

ಒಂದು ಸಂಸಾರಕ್ಕೆ ಒಳ್ಳೆಯ ಪುಸ್ತಕ ಭಂಡಾರದಷ್ಟೇ ಒಂದು ರೇಡಿಯೋ ಕೂಡಾ ಅಗತ್ಯವೆಂಬುದು ಜಯರಾಮುವಿನ ಅಭಿಪ್ರಾಯವಾಗಿತ್ತು.

ಹಾಡು ಎಂದರೆ ಪ್ರಾಣಬಿಡುವ ರಾಧಾ ಎಷ್ಟೋ ಸಾರೆ ಹೇಳಿದ್ದಳು :

"ಅಣ್ಣಾ, ಒಂದು ರೇಡಿಯೋ ಇದ್ದರೆ ಚೆನ್ನಾಗಿರುತ್ತೆ, ಅಲ್ವಾ?"

ಆ ಕೊಠಡಿಮನೆಗೆ ಅದೊಂದು ಐಶ್ವರ್ಯ ಬೇರೆ – ರಂಗಮ್ಮನ ವಠಾರಕ್ಕೆ ರೇಡಿಯೋ !

ವಠಾರದತ್ತ ನಡೆಯುತ್ತ ಜಯರಾಮು ಯೋಚಿಸಿದ :

"ಸಾಕಷ್ಟು ಸಂಪಾದನೆ ಇರುವವನೇ ತನ್ನ ತಂಗಿಗೆ ಗಂಡನಾಗಿ ದೊರೆತರೆ? ಒಂದು ರೇಡಿಯೋ ಕೊಂಡುಕೊಳ್ಳುವ ಸಾಮರ್ಥ್ಯವಿರುವ ಪುಟ್ಟಸಂಸಾರಕ್ಕೇ ಆಕೆ ಗೃಹಿಣಿಯಾದರೆ?"

ಜಯರಾಮು ಮನೆ ಸೇರಿದಾಗ ಅವನ ತಂದೆ ಊಟಕ್ಕೆ ಕುಳಿತುಕೊಂಡಿದ್ದರು. ಮಗನನ್ನು ನೋಡಿ ಅವರೆಂದರು :

"ಅದೆಷ್ಟೊತ್ತೋ ಮನೆಗ್ಬರೋದು ? ಹೂಂ ........ ಕೈಕಾಲು ತೊಳಕೊಂಡು ಬಾ."

ತಾಯಿ, ಮಗನಿಗೂ ಬಟ್ಟಲಿಟ್ಟಳು.

## ೧೦

ಕಡು ಬೇಸಿಗೆಯ ಆ ಸಂಜೆ ಅಹಲ್ಯಾ ಗೋಡೆಗೊರಗಿಸಿ ಕನ್ನಡಿ ಯನ್ನಿಟ್ಟು, ಅದರೆದುರು ತಾನು ಕುಳಿತು, ಹೆರಳು ಹಾಕಿಕೊಳ್ಳುತ್ತಾ ಹಾಡುತ್ತಿದ್ದಳು :

"ಹೂವ ತರುವರ ಮನೆಗೆ ಹುಲ್ಲ ತರುವಾ
ಅವಲಕುಮೀ ರಮಣ........"

ಮೆಲ್ಲನೆ ತುಂಬಿ ಬರುತ್ತಿದ್ದ ಎದೆ, ಅಗಲವಾದ ಮುಖ, ಮಾಟವಾದ ಹುಬ್ಬುಗಳು, ಒಂದು ಕ್ಷಣವೂ ನಿಶ್ಚಲವಾಗಿ ನಿಲ್ಲದ ಕಣ್ಣುಗಳೆರಡು....

"ಹೂವತರುವರ ಮನೆಗೆ ಹುಲ್ಲ ತರುವಾ........"

ಸೊಗಸಾಗಿತ್ತು ಕಂಠ. ಮಗುವಿನ ಕೆಂಪು ಮುಖದ ಮೇಲೆ ಬಿಳಿಯ ಪೌಡರಿನ ತೆರೆಯೆಳೆದು, ಗುಳಿ ಬೀಳುತ್ತಿದ್ದ ಕೆನ್ನೆಗೆ 'ಉಮ್ಮ' ಕೊಟ್ಟು, ತನ್ನ ಪುಟ್ಟಕಾಲುಗಳ ಮೇಲೆಯೇ ಮಗಳು ನಿಲ್ಲುವಂತೆ ನೆರವಾಗುತ್ತಿದ್ದ ಚಂಪಾವತಿಗೆ ಅಹಲ್ಯೆಯ ಹಾಡು ಕೇಳಿಸಿತು.

ಮಧುರಧ್ವನಿ ಓಣಿಯಲ್ಲಿ ಸಾಗಿ ಬಂದು ಕೊನೆಯ ಮನೆ ಯೊಳಕ್ಕೂ ಹಣಕಿ ನೋಡಿತ್ತು. ಚಂಪಾ ಮಗುವನ್ನೆತ್ತಿಕೊಂಡು ಬಾಗಿಲ ಬಳಿ ನಿಂತು, ಎದುರುಗಡೆ ಬಲಕ್ಕೆ ದೃಷ್ಟಿ ಹಾಯಿಸಿದಳು.

ಕನ್ನಡಿ ನೋಡಿ ಮುಗಿದು ಜಡೆಯನ್ನು ಎದೆಯ ಮೇಲಕ್ಕೆ ಎಳೆದುಕೊಳ್ಳುತ್ತಾ ಅಹಲ್ಯಾ ತಲೆ ಎತ್ತಿದಳು. ಆಗ ಬಲಗಣ್ಣ ನೋಟಕ್ಕೆ ಚಂಪಾವತಿಯ ಸೀರೆಯ ಸೆರಗು ಕಾಣಿಸಿತು. ರಾಗ ಅರ್ಧ ದಲ್ಲೇ ತುಂಡಾಯಿತು. ಹಾಡು ನಿಂತು ಹೋಯಿತು.

ಹೊರ ಬಂದು ಚಂಪಾ ಕೇಳಿದಳು :

"ಯಾಕಮ್ಮ ಹಾಡೋದು ನಿಲ್ಲಿಸ್ಬಿಟ್ರಿ ?"

"ಎಲ್ಲಿ–ನಾನೆಲ್ಲಿ ಹಾಡ್ತಿದ್ದೆ ?"

"ಸಾಕ್ರೀ ಸಾಕ್ರೀ....ಪರವಾಗಿಲ್ಲ ನೀವು...."

ಅಡುಗೆಯ ಮನೆಯಲ್ಲಿದ್ದ ಅಹಲ್ಯೆಯ ತಾಯಿ ಬಾಗಿಲಿಗೆ ಬಂದು ಹೇಳಿದಳು :

"ಅದ್ಯಾಕಮ್ಮ, ಮಗೂನ ಅವರು ಇವರು ಅಂತೀರಾ ?"

ದೂರು ಕೊಡುವವರಂತೆ ಅಹಲ್ಯೆ ತಾನೂ ಅಂದಳು :

"ನೋಡಮ್ಮ, ಎರಡು ಮೂರು ಸಲ ನಾನೇ ಹೇಳ್ದೆ ಅವರಿಗೆ."

"ಅದು ನನ್ನದೊಂದು ಅಭ್ಯಾಸ ಕಣ್ರೀ."

ಎಂದಳು ಚಂಪಾವತಿ ಕೊರಳು ಕೊಂಕಿಸುತ್ತಾ. ಮಾತಿನ ನಡುವೆ ಮೌನ ಸುಳಿಯಬಾರದೆಂದು ಆಕೆ ಮುಂದುವರಿಸಿದಳು :

"ನಿಮ್ಮ ಮಗಳ ಕಂಠ ಚೆನ್ನಾಗಿದೆ ಕಣ್ರೀ."

ಅಹಲ್ಯೆಯ ತಾಯಿಗೆ ಹೆಮ್ಮೆ ಎನಿಸಿದರೂ ಅದನ್ನು ಆಕೆ ತೋರಿಸಿಕೊಳ್ಳಲಿಲ್ಲ.

"ಏನು ಚೆನ್ನಾಗಿದೆಯೋಮ್ಮ. ಯಾವುದೋ ಒಂದೆರಡು ದೇವರ ನಾಮ ಕಲಿತ್ಕೊಂಡಿದ್ದಾಳೆ. ಇಲ್ಲಿ ಹೇಳ್ಕೊಡೋರೂ ಯಾರೂ ಇಲ್ಲ."

ಹಾಡು ಹೇಳಿಕೊಡುವುದು ಚಂಪಾವತಿಗೆ ಹೊಸ ವಿಷಯವಾಗಿರಲಿಲ್ಲ. ಆದರೆ ವಠಾರಕ್ಕೆ ಬಿಡಾರ ಬಂದು ಒಂದೂವರೆ ತಿಂಗಳಾಗಿದ್ದರೂ ಹಾಡುವ ಇಚ್ಛೆ ಆ ವರೆಗೂ ಆಗದೆ ಇದ್ದುದರಿಂದ, ಆಕೆಯ ಕಂಠದ ಪರಿಚಯವಿರಲಿಲ್ಲ ಬೇರೆಯವರಿಗೆ. ಕೊನೆಯ ಮನೆಯ ಜೋಡಿ ಸ್ವಲ್ಪ ವಿಚಿತ್ರವಾಗಿ ಇತರರಿಗೆ ತೋರಿಬಂದುದರಿಂದ, ವಠಾರದೊಳಗಿದ್ದರೂ ಅದೊಂದು ಬಿಡಾರ ಬೇರೆಯೋ ಎನ್ನುವಹಾಗೆ ಆಗಿತ್ತು.

ಮನಸಿನಲ್ಲೆ ಮುಂದಿನ ಹೆಜ್ಜೆಯನ್ನು ಲೆಕ್ಕಹಾಕಿ ಚಂಪಾ ಹೇಳಿದಳು :

"ನಿಮ್ಮ ಮಗಳು ಎಲ್ಲಿಗೋ ಹೊರಟ ಹಾಗಿದೆ."

ಅಹಲ್ಯೆ ಎದ್ದು ಕನ್ನಡಿಯನ್ನು ಎತ್ತಿಡುತ್ತಾ ಅಂದಳು :

"ಇಲ್ಲವಪ್ಪ. ನಾನೆಲ್ಲಿಗೂ ಹೋಗಲ್ಲ."

"ಅವಳಣ್ಣ ಬರೋ ಹೊತ್ತಾಯ್ತು."

—ಎಂದು ಹೇಳಿ ಅಹಲ್ಯೆಯ ತಾಯಿ ಮತ್ತೆ ಅಡುಗೆ ಮನೆಯೊಳಕ್ಕೆ ಹೋದಳು.

"ಅಹಲ್ಯಾ, ನಮ್ಮನೆಗೆ ಬರ್ತೀರಾ ಸ್ವಲ್ಪ ?"

ಚಂಪಾವತಿಯ ಆಹ್ವಾನವನ್ನು ಕೇಳಿ ಅಹಲ್ಯೆಗೆ ಆಶ್ಚರ್ಯವಾಗದೆ ಇರಲಿಲ್ಲ. ಆದರೆ ಯಾವುದೋ ಅಸ್ಪಷ್ಟ ಕಾರಣಕ್ಕಾಗಿ ಆ ಹೊಸಬಳ ಬಗೆಗೆ ಗೌರವಭಾವನನ್ನು ತಳೆದಿದ್ದ ಅಹಲ್ಯೆಗೆ ಆ ಕರೆಯಿಂದ ಸಂತೋಷವೂ ಆಯಿತು. ಆಕೆಯೆಂದಳು:

"ಒಂದ್ನಿಮಿಷ....ಬಂದ್ಬಿಟ್ಟೆ...."

ಹತ್ತು ನಿಮಿಷ ತಡೆದು ಬಂದ ಅಹಲ್ಯಾ, ಚಂಪಾವತಿಗೆ ಸುಂದರಿಯಾಗಿಯೂ ಕಂಡಳು. ಸ್ವಚ್ಛವಾಗಿ ತೊಳೆದಿದ್ದ ಮುಖ ಪ್ರಸನ್ನವಾಗಿತ್ತು. ಅಗಲ ಕಿರಿದಾಗಿದ್ದ ತುಟಿಗಳು ಒಂದಕ್ಕೊಂದು ಅಂಟಿ ಕುಳಿತಿದ್ದುವು....ಪುಟ್ಟಬಾಯಿ........

'ಇದೆಲ್ಲಾ ಗಂಡ ಬರುವವರೆಗೆ. ಆಮೇಲೆ!....'

....ಎಂದು ಚಂಪಾ ಮನಸಿನೊಳಗೇ ಅಂದುಕೊಂಡು ನಕ್ಕಳು.

"ಯಾಕ್ರೀ ಬಾ ಅಂದಿದ್ದು ?"

ಚಂಪಾ ಚಾಪೆ ಹಾಸಿ ಹೇಳಿದಳು:

"ಕೂತ್ಕೊಳ್ಳಿ, ಹೇಳ್ತೀನಿ."

ಅಹಲ್ಯಾ ಕುಳಿತುಕೊಳ್ಳುತ್ತಾ ಅಂದಳು:

"ನಾನು ನಿಮಗಿಂತ ಚಿಕ್ಕೋಳು ಕಣ್ರೀ. ನೀವು ನನ್ನ ಹೋಗು, ಬಾ ಅಂತ ಅನ್ಬೇಕು."

"ಒಂದು ಶರತದ ಮೇಲೆ."

"ಏನು ?"

"ನೀವೊಂದು ಹಾಡು ಹಾಡ್ಬೇಕು."

ಅಹಲ್ಯೆಯ ಮುಖ ಕೆಂಪೇರಿತು.

"ಹೋಗ್ರಿ, ನಿಮಗೊಂದು ತಮಾಷೆ. ನಾನು ಹೊರಟ್ಹೋಗ್ತೀನಿ."

"ಮಹಾ ಕೆಟ್ಟವಳಮ್ಮ ನೀನು. ಅದು ಹ್ಯಾಗೆ ಹೋಗ್ತೀಯೋ ನೋಡ್ತೀನಿ"

—ಎಂದು ಚಂಪಾವತಿ ಬಾಗಿಲಿಗೆ ಅಡ್ಡವಾಗಿ ನಿಂತಳು. ಸಲಿಗೆಯ ಏಕವಚನ ಅಹಲ್ಯೆಯ ಸಂಕೋಚವನ್ನೆಲ್ಲ ದೂರ ಮಾಡಿತು. ಆಕೆಯನ್ನು ಆಗಲೆ ಎರಡು ಸಲ ತೋರಿಸಲು ಕರೆದು ಕೊಂಡು ಹೋಗಿದ್ದರು. ಆ ಎರಡು ಸಾರೆಯೂ ಆಕೆ ಹಾಡಿದ್ದಳು. ಆದರೆ ನೋಡಿದವರಿಗೋ ಅವರ ಹಿರಿಯರಿಗೋ ಆಕೆ ಒಪ್ಪಿಗೆ ಯಾಗಿರಲಿಲ್ಲ. ಯಾರಾದರೂ "ಹಾಡು" ಎಂದಾಗಲೆಲ್ಲಾ ಆಕೆಗೆ, ತಾನು ತಲೆ ತಗ್ಗಿಸಿಕೊಂಡು ಎರಡು ಕಡೆ ಹಾಡಿದ್ದ ನೆನಪಾಗುತಿತ್ತು.

"ಎಲ್ಲಿ, ಹೇಳಮ್ಮಾ."

ಅಹಲ್ಯಾ ಕಣ್ಣಿವೆಗಳನ್ನು ಕುಣಿಸುತ್ತಾ ಅಂದಳು:

"ನೀವೂ ಒಂದು ಹಾಡೋ ಹಾಗಿದ್ರೆ, ನಾನು ಹಾಡ್ತೀನಿ."

"ನಾನು! ನಂಗೆ ಬರೋಲ್ವಮ್ಮ."

"ಬೂಶಿ ಬಿಡ್ತಿದೀರಾ, ಘಾಟಿ ಕಣ್ರೀ ನೀವು."

ಹುಡುಗಿಯ ಬಾಲಭಾಷೆ ತಮಾಷೆಯಾಗಿ ತೋರಿತು, ಮುಗುಳ್ನತ್ತಿಕೊಂಡಿದ್ದ ಚಂಪಾವತಿಗೆ.

"ನಿಜವಾಗ಼್ೂ ನಂಗೆ ಹಾಡೋಕೆ ಬರಲ್ಲ ಅಹಲ್ಯಾ."

"ಸುಳ್ಳು! ಸುಳ್ಳು!"

ಒಂದು ಕ್ಷಣ ಸುಮ್ಮನಿದ್ದು ಮುಗುಳ್ನಕ್ಕು ಚಂಪಾ ಹೇಳಿದಳು:

"ಆಗಲಮ್ಮ. ಒಪ್ದೆ. ನೀನು ನಗಬಾರ್ದು ನೋಡು."

ಚಿತ್ರಕಾರನ ಹೆಂಡತಿಗೆ ಹಾಡು ಖಂಡಿತವಾಗಿಯೂ ಬರುತ್ತಿರ ಬೇಕೆಂದು ತಾನು ಮಾಡಿದ ಊಹೆ ಸರಿಯೆ—ತಪ್ಪೆ ಎಂದು ತಿಳಿಯುವ ಹೊತ್ತು ಬಂತೆಂದು ಅಹಲ್ಯೆಗೆ ಸಂತೋಷವಾಯಿತು. ಚಂಪಾವತಿಯ ಹಾಡನ್ನು ಕೇಳುವ ತವಕದಲ್ಲೆ ಇದ್ದ ಆಕೆಯೆಂದಳು:

"ಯಾವುದು ಹೇಳ್ಲೀ ?"

"ಯಾವುದಾದರೂ."

ಅಹಲ್ಯಾ, ದೇವರ ನಾಮದ ಬದಲು ತಾನು ಪ್ರೀತಿಸಿದ

ಬೇರೊಂದು ಹಾಡನ್ನೆತ್ತಿಕೊಂಡಳು :

"ಒಳಗೆ ಬಾ ಯಾತ್ರಿಕನೆ ಶಿಲೆಯಲ್ಲವೀ ಗುಡಿಯು
ಕಲೆಯ ಬಲೆಯು......."

ಆ ಚರಣ ಮುಗಿದಾಗಲೊಮ್ಮೆ ಅಹಲ್ಯಾ ಚಂಪಾವತಿಯನ್ನು ದಿಟ್ಟಿಸಿ ನೋಡಿದಳು. ಬಳಿಕ ಗೋಡೆಯ ಒಂದು ಮೂಲೆಯತ್ತ ಕನಸು ಕಾಣುತಿದ್ದವರ ಹಾಗೆ ನೋಡುತ್ತ ಆಕೆ ಹಾಡಿದಳು.

ಕೇಳುತಿದ್ದವರ ಹೃದಯದ ತಂತಿಗಳನ್ನು ಮೀಟುತಿದ್ದ ಮಧುರ ಸ್ವರ. ಭಾವಪೂರ್ಣವಾದ ಅರ್ಥಪೂರ್ಣವಾದ ಮಾತುಗಳು. ಚಂಪಾ ತನ್ಮಯಳಾಗಿ ಕೇಳಿದಳು–ನಿಂತಿದ್ದವಳು, ಅಹಲ್ಯೆಗೆದುರು ಗೋಡೆಗೆ ಒರಗಿ ಕುಳಿತು ಕೇಳಿದಳು. ಆಕೆಯ ಮಗುವೂ ತಾಯಿಯ ಎದೆಯ ಮೇಲೆ ತಲೆಯಿಟ್ಟು ಬೆಟ್ಟು ಚೀಪುತ್ತಾ ಅಹಲ್ಯೆಯನ್ನೇ ನೋಡುತ್ತಾ ಸುಮ್ಮನಿತ್ತು.

ಅಹಲ್ಯೆಯ ತಾಯಿಯೊಮ್ಮೆ ತನ್ನ ಬಾಗಿಲ ಬಳಿ ನಿಂತು ಹೋದಳು ಮೀನಾಕ್ಷಮ್ಮ ಹೊರಗೆ ಬಂದು ಒಂದು ನಿಮಿಷ ಅಹಲ್ಯೆಯ ಹಾಡಿಗೆ ಕಿವಿಗೊಟ್ಟಳು.

ಹಾಡು ಮುಗಿದೊಡನೆ, ಕೆಂಪೇರಿದ್ದ ಮುಖದಿಂದ ಅಹಲ್ಯಾ ಚಂಪಾವತಿಯನ್ನ ನೋಡಿದಳು

"ಸೊಗಸಾಗಿತ್ತು ಅಹಲ್ಯಾ. ಎಷ್ಟು ಚೆನ್ನಾಗಿ ಹಾಡ್ತೀಯಾ ನೀನು! ನನಗೆ ಗೊತ್ತೇ ಇರ್ಲಿಲ್ಲ."

ಅಹಲ್ಯೆಯ ಹೃದಯ ಹಿಗ್ಗಿತು. ಚಂಪಾವತಿಗೆ ಆ ಹಾಡಿನ ಸಾಲುಗಳು ಅರ್ಥವಾಗಿದ್ದುವು. ಅಹಲ್ಯೆಗೆ ಅದೆಲ್ಲಾ ತಿಳಿದಿವೆಯೋ ಇಲ್ಲವೋ ಎಂದು ಚಂಪಾ ಶಂಕಿಸಿದಳು. ಅಹಲ್ಯೆಯನ್ನುದ್ದೇಶಿಸಿ ಆಕೆ ಯೆಂದಳು :

"ರಾಗ ಭಾವಗಳು ಬೆರೆತಾಗ ಹಾಡು ಯಾವಾಗ್ಲೂ ಚೆನ್ನಾಗಿ ಇರುತ್ತೆ ಅಲ್ವಾ?"

ಚಂಪಾವತಿ ಹೇಳಿದುದು ಪೂರ್ತಿಯಾಗಿ ಅರ್ಥವಾಗದೆ ಹೋದರೂ ಅಹಲ್ಯಾ 'ಹೂಂ'ಗುಟ್ಟಿದಳು. ಆದರೆ ಕಿವಿಗೆ ಇಂಪಾಗಿದ

ಹೊಗಳಿಕೆಯ ಬಲೆಯಲ್ಲಿ, ಚಂಪಾ ಹಾಡಲು ಒಪ್ಪಿದ್ದುದನ್ನು ಅಹಲ್ಯಾ ಮರೆಯಲಿಲ್ಲ.

"ಇನ್ನು ನಿಮ್ಮದು."

"ಹಾಡ್ಲೇ ಬೇಕೇನು ?"

"ಹೂಂ ಮತ್ತೆ."

ಚಂಪಾವತಿ ಮಗುವನ್ನು ಪಕ್ಕದಲ್ಲಿ ತನ್ನ ತೊಡೆಗೆ ಒರಗಿಸಿ ಕುಳ್ಳಿರಿಸಿ ಮುಗುಳ್ನಕ್ಕಳು. ಹುಬ್ಬುಗಳು ಚಲಿಸಿದುವು. ಕಣ್ಣುಗಳು ಮಾತನಾಡಿದುವು. ತುಟಿಗಳು ತೆರೆದುಕೊಂಡುವು.

"ತಲ್ಲಣಿಸದಿರು ಕಂಡ್ಯಾ ತಾಳು ಮನವೇ...."

ಅಹಲ್ಯಾ ಹೊತ್ತಿಸಿದ ಕಿರುಹಣತೆಯಿಂದ ಸೊಡರು ಅಂಟಿಸಿ ಕೊಂಡು ದೊಡ್ಡ ಹಣತೆಯೊಂದು ಶೋಭಾಯಮಾನವಾಗಿ ಉರಿಯ ತೊಡಗಿತು. ಎಷ್ಟೋ ದಿನಗಳಿಂದ ಪೂರೈಸದೇ ಇದ್ದ ಬಯಕೆ ಯನ್ನು ಈಡೇರಿಸುವವಳ ಹಾಗೆ ಚಂಪಾ ಹಾಡಿದಳು. ಶಂಕರ ನಾರಾಯಣಯ್ಯನೆದುರು ಏಕಾಂತದಲ್ಲಿ ಹಾಡಿದಾಗಲೆಲ್ಲಾ ಆತನ ಮುಗುಳುನಗು ಆಕೆಯ ಹೃದಯವನ್ನು ಅರಳಿಸುತ್ತಾ ಉತ್ತೇಜನ ವೀಯುತ್ತಿತ್ತು. ಈ ದಿನ ಆತ ಎದುರಿಗಿರಲಿಲ್ಲ. ಅಹಲ್ಯಾ ಕುಳಿ ತಿದ್ದಳು. ಆದರೂ ಮುಗುಳುನಗುತಿದ್ದ ತನ್ನ ಪ್ರೀತಿಪಾತ್ರ ಮುಖ ವನ್ನೇ ತನ್ನೆದುರು ಕಲ್ಪಿಸಿಕೊಳ್ಳುತ್ತಾ ಚಂಪಾ ಮೈಮರೆತು ಹಾಡಿ ದಳು. ಹಾಡುತಿದ್ದಾಗ, ಯಾವುದೋ ನೆರಳು ಓಣಿಯಲ್ಲಿ ಚಲಿಸಿದ ಹಾಗೆ, ಬಾಗಿಲ ಬಳಿ ಯಾವುದೋ ನೆರಳು ಬಿದ್ದಹಾಗೆ, ಅಸ್ಪಷ್ಟವಾಗಿ ಆಕೆಗೆ ಭಾಸವಾಗುತ್ತಿತ್ತು. ಆದರೆ ಅದೊಂದರ ಗೊಡವೆಯೂ ಇಲ್ಲದೆ ಚಂಪಾ ಹಾಡಿದಳು. ಹಾಡು ಮುಗಿದು ಆಕೆ ಅಹಲ್ಯೆಯತ್ತ ನೋಡಿ ದಳು. ಅಹಲ್ಯೆಯ ದೃಷ್ಟಿಯನ್ನೆ ಹಿಂಬಾಲಿಸಿ, ಬಾಗಿಲಿನತ್ತ ಮುಖ ತಿರುವಿದಳು. ಆಗ ಚಂಪಾವತಿಗೆ ಗಲಿಬಿಲಿಯಾಯಿತು.

"ಅಯ್ಯೊ ಇದೇನು !"

ಅಲ್ಲಿ ಕಾಮಾಕ್ಷಿ, ಕಮಲಮ್ಮ, ಪದ್ಮಾವತಿ, ಉಪಾಧ್ಯಾಯರ ಹೆಂಡತಿ, ಆಕೆಯ ನಾದಿನಿ ಸುಮಂಗಳಾ, ಪೋಲೀಸರಾಯನ ಧರ್ಮ

ಪತ್ನಿ ನಿಂತಿದ್ದರು. ಮೀನಾಕ್ಷಮ್ಮ ತನ್ನ ಮನೆ ಬಾಗಿಲಲ್ಲಿ, ಅಹಲ್ಯೆಯ ತಾಯಿಯೊಡನೆಯೂ ಪದ್ಮನಾಭಯ್ಯನ ಹೆಂಡತಿಯೊಡನೆಯೂ ನಿಂತಿದ್ದಳು. ರಂಗಮ್ಮನವರ ಪಕ್ಕದ ಮನೆಯಲ್ಲಿದ್ದ ಓದುವ ಹುಡುಗರ ತಾಯಿ ಬಂದಿರಲಿಲ್ಲ. ಮಹಡಿ ಮೇಲಿನವರೂ ಬಂದಿರಲಿಲ್ಲ.

"ರಾಧಾ ಬಂದೇ ಇಲ್ಲ! ರಾಧಾನ್ನ ಕರಕೊಂಬರ್ತೀನ್ರೀ!"

–ಎನ್ನುತ್ತ ಅಹಲ್ಯಾ ಗಡಬಡಿಸಿ ಎದ್ದು ಹೊರಕ್ಕೆ ಹಾರಿದಳು.

ಆವರೆಗೂ ರಂಗಮ್ಮನ ವಠಾರದಲ್ಲಿ ಸ್ವಲ್ಪಮಟ್ಟಿಗೆ ಚೆನ್ನಾಗಿ ದೇವರನಾಮ ಹಾಡುತಿದ್ದವಳು ಕಮಲಮ್ಮ ಒಬ್ಬಳೇ. ತನ್ನನ್ನು ಸುಲಭವಾಗಿ ಹಾಡುಗಾರಿಕೆಯಲ್ಲಿ ಮೀರಿಸುವಂತಿದ್ದ ಚಂಪಾವತಿಯನ್ನು ಕಂಡು ಆಕೆಗೆ ಒಂದು ತರಹೆಯಾಯಿತು. ಆದರೂ ಮನಸಿನ ಭಾವನೆಗಳನ್ನು ಹೊರಗೆ ತೋರಿಸದೆಯೇ ಆಕೆ ಎಂದಳು :

"ಇನ್ನೊಂದು ಹಾಡು ಹೇಳ್ರೀ....ಇಷ್ಟು ದಿನ ಮುಚ್ಚಿಟ್ಕೊಂಡಿದ್ರಲ್ರೀ!........"

ನಡೆಗೋಲಿನ ಟಕ್ ಟಕ್ ಸದ್ದು, ರಂಗಮ್ಮ ಬಂದರೆಂದು ಮುನ್ಸೂಚನೆ ಕೊಟ್ಟಿತು. ರಂಗಮ್ಮ ಬಂದರು. ಆಕೆಯನ್ನು ಹಿಂಬಾಲಿಸಿ ರಾಜಮ್ಮ. ಅಹಲ್ಯೆ–ರಾಧೆಯರು ಗುಂಪನ್ನು ತೂರಿಕೊಂಡು ಬಂದರು. ನಾರಾಯಣಿ ಸತ್ತಿದ್ದಾಗ ಹಾಗೆ ಹೆಂಗಸರು ಆ ಕೊನೆಯ ಮನೆಯ ಮುಂದೆ ಗುಂಪು ಕೂಡಿದ್ದಿತ್ತು. ಆ ಬಳಿಕ ಈಗ.

ಸ್ವಲ್ಪ ಹೊಸರೀತಿಯದಾಗಿದ್ದ ಶಂಕರನಾರಾಯಣಯ್ಯನ ಸಂಸಾರವನ್ನು ಕಂಡು, 'ವಠಾರ ಅಂದ್ಮೇಲೆ ಎಲ್ಲಾ ತರಹ ಜನರೂ ಇದ್ದೇ ಇರ್ತಾರೆ' ಎಂದು ಸಮಾಧಾನ ಪಟ್ಟಿದ್ದ ರಂಗಮ್ಮ, ಹಾಡು ಕೇಳಿ ಚಕಿತರಾಗಿದ್ದರು. ರಂಗಮ್ಮನಿಗೆ ತಿಳಿಯದೆಯೇ ಅವರ ವಠಾರದೊಳಗಿಂದ ಕೇಳಿಸಿದ ಹಾಡು!

ಅದು ಯಾರ ಕಂಠ ಎಂದು ತಿಳಿದಿದ್ದರೂ 'ಯಾರದು?' ಎಂದು ಕೇಳುವ ಅಧಿಕಾರವನ್ನು ಉಪಯೋಗಿಸುತ್ತಾ ರಂಗಮ್ಮ ಕೇಳಿದರು :

"ಯಾರೇ ಅದು ಹಾಡಿದ್ದು?"

"ಹೊಸ ಬಿಡಾರದವರು ಕಣ್ರೀ"

–ಎಂದು ಎರಡು ಮೂರು ಸ್ವರಗಳು ಹೇಳಿದುವು.

"ಯಾರು, ಚಂಪಾವತೀನೆ ?"

–ಎಂದು ರಂಗಮ್ಮ, ತಮ್ಮ ಸ್ವರವನ್ನು ಆದಷ್ಟು ಇಂಪಾಗಿಡಲು ಯತ್ನಿಸುತ್ತಾ ಅಂದರು. ಅದಕ್ಕೇನೂ ಪ್ರತ್ಯುತ್ತರ ಬೇಕಾಗಿರಲಿಲ್ಲ. ಕಮಲಮ್ಮನ ಹೊರತಾಗಿ ಬಾಗಿಲಲ್ಲಿ ನಿಂತಿದ್ದ ಇತರ ಹೆಂಗಸರೆಲ್ಲ ಒಳಗೆ ಬಂದು ಚಾಪೆಯ ಮೇಲೂ ನೆಲದ ಮೇಲೂ ಕುಳಿತರು.

"ಒಳಗ್ಬನ್ನಿ ರಂಗಮ್ನೋರೆ"

–ಎಂದು ಕಾಮಾಕ್ಷಿ ಕರೆದಳು.

ರಂಗಮ್ಮ ಬಾಗಿಲಲ್ಲೆ ನಿಂತರು. ಚಿತ್ರ ಬರೆಯುವವನ ಹೆಂಡತಿ ಏನಿದ್ದರೂ ಈಗಿನ ಕಾಲದವಳು, ಇವಳದೆಲ್ಲಾ ಸಿನೇಮಾ ಸಂಗೀತ ಇರಬಹುದು, ಎಂದು ಭಾವಿಸಿದ್ದರು ರಂಗಮ್ಮ. ತಮ್ಮ ಅನುಮಾನ ಸರಿ ಎಂಬುದು ಸ್ಪಷ್ಟವಾಗಲೆಂದು ಅವರು ಗೋಡೆಯನ್ನು ಆಧರಿಸಿ ನಿಂತು ಹಾಡು ಕೇಳಲು ಸಿದ್ಧವಾದರು.

ಚಂಪಾವತಿ ಸುಮ್ಮನಿದ್ದಳು. ತನ್ನ ಹಂಚಿಕೆ ಇಷ್ಟು ಸುಲಭ ವಾಗಿ ಜಯಪ್ರದವಾದುದನ್ನು ಕಂಡು ಆಕೆಗೆ ಹೆಚ್ಚಿನ ಸಂತೋಷವೇ ಆಯಿತು.

ಹೊರಗೆ ನಿಂತಿದ್ದ ಕಮಲಮ್ಮನೆ ಮತ್ತೊಮ್ಮೆ ಹೇಳಿದಳು :

"ಹೇಳೇಮ್ಮಾ ಇನ್ನೊಂದು ಹಾಡು."

ಹಾಗೆ ಒತ್ತಾಯ ಮಾಡಿದ ಸ್ವರ ಇಂಪಾಗಿರಲಿಲ್ಲ.

ಚಂಪಾ ಮುಗುಳು ನಕ್ಕು ಆರಂಭಿಸಿದಳು :

"ಕಾಲ ಹರಣ ಮೇಲರಾ ಹರೇ ಸೀತಾರಾಮ........"

ನಿಜವಾಗಿಯೂ ! ಎಷ್ಟೋ ಜನರಿಗಿದು ಅನಿರೀಕ್ಷಿತವಾಗಿತ್ತು. ಈ ಸುಪ್ರಸಿದ್ಧ ಕೀರ್ತನೆ ಚಂಪಾವತಿಯ ಬಾಯಿಯಿಂದ ಹೊರಡ ಬಹುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ನಿಂತಿದ್ದ ರಂಗಮ್ಮ ಅಲ್ಲಿಯೆ ಕುಳಿತರು. ರಾಜಮ್ಮ ಎದುರು ಮನೆಯ ಗೋಡೆಗೆ ಒರಗಿಕೊಂಡಳು.

ಹಾಡು ಮುಗಿದಾಗ ಒಂದುಕ್ಷಣ ಯಾರೂ ಮಾತನಾಡಲಿಲ್ಲ. ಕೇಳುವವರು ಮೂಕರಾಗುವಾಗ ಆ ಮೌನದ ಅರ್ಥವೇನೆಂಬುದು

ಚಂಪಾವತಿಗೆ ಗೊತ್ತಿತ್ತು. ಸದ್ಯ ಆಕೆಯ ಮಗು ಅತ್ತಿರಲಿಲ್ಲ. ಹಾಡು ಮುಗಿಸಿದ ತಾಯಿಯ ಮುಖವನ್ನೆ ನೋಡಿ ಆ ಪೋರಿ ನಕ್ಕಳು.

ಈ ಸಭೆ ಸೇರಲು ತಾನೇ ಕಾರಣಳೆಂಬ ಹೆಮ್ಮೆಯಿಂದಿದ್ದ ಅಹಲ್ಯಾ ಹೇಳಿದಳು :

"ಒಂದು ಕನ್ನಡ ಹಾಡು ಹೇಳ್ರೀ !"

ಬೇರೆಯೂ ಯಾರೋ ಸ್ವರ ಕೂಡಿಸಿದರು:

"ದೇವರ ನಾಮ ಹೇಳ್ರೀ."

ವಠಾರದ ಒಡತಿಯನ್ನು ಮೆಚ್ಚಿಸಿದುದಾಯಿತೆಂದು ತಿಳಿದ ಚಂಪಾ, ಮತ್ತಷ್ಟು ಸಮಾಧಾನದಿಂದ ಹಾಡಿದಳು :

"ಸುಲಭಪೂಜೆಯ ಮಾಡಿ ಬಲವಿಲ್ಲದವರು
ನಳಿನ ನಾಭನ ಪಾದ ನಳಿನ ಸೇವಕರು....... "

ಕೇಳಿದವರನ್ನು ಮುಗ್ಧಗೊಳಿಸುವ ಸಮ್ಮೋಹನ ಶಕ್ತಿ ಚಂಪಾವತಿಗೆ ಇತ್ತೆಂಬುದರಲ್ಲಿ ಸಂದೇಹವಿರಲಿಲ್ಲ.

ಈ ಹಾಡು ಮುಗಿದಾಗ ರಂಗಮ್ಮ ತಲೆದೂಗುತ್ತಾ ಎದ್ದರು.

"ಇದು ದೇವರ ವರ ಚಂಪಾವತಿ, ನೀನು ಭಾಗ್ಯವಂತೆ"

—ಎಂದು ಹೇಳಿ ಅವರು ತಮ್ಮ ಬಾಗಿಲಿನತ್ತ ನಡೆದರು. ರಾಜಮ್ಮನೂ ಆಕೆಯನ್ನು ಹಿಂಬಾಲಿಸಿದಳು.

ಆದರೆ ಉಳಿದವರು ಹೊರಡಲು ಸಿದ್ಧರಿರಲಿಲ್ಲ. ಗಂಡಸರು ಯಾರೋ ಒಬ್ಬಿಬ್ಬರು ವಠಾರಕ್ಕೆ ಹಿಂತಿರುಗಿದ ಹಾಗಾಯಿತು. ಆದರೆ ಹೆಂಗಸರು ಯಾರೂ ಅದನ್ನು ಗಮನಿಸಲಿಲ್ಲ.

ಮೌನವನ್ನು ಮುರಿದು ಅವರೆಲ್ಲ ಮಾತನಾಡಿದರು.

"ಎಷ್ಟು ಚೆನ್ನಾಗಿ ಹಾಡ್ತೀರಾ ಚಂಪಾವತೀ...."

"ಇನ್ನೊಂದು ಹಾಡು ಹೇಳ್ರೀ...."

"ಹೇಳ್ರಿ ಇನ್ನೊಂದು."

ಚಂಪಾವತಿ ಹೊಗಳಿಕೆಗೆ ಬಲಿಯಾಗಲಿಲ್ಲ. ಬಲು ಎಚ್ಚರಿಕೆಯಿಂದ ಆಕೆಯೆಂದಳು :

"ಇನ್ನು ನೀವು ಹಾಡ್ಬೇಕು ಯಾರದ್ರೂ"

ಯಾರೋ ಅಂದರು :

"ಅಹಲ್ಯಾ, ನೀನು ಹಾಡೇ."

"ಕಮಲಮ್ಮ, ನೀವು ಹಾಡ್ರೀ."

ಅಹಲ್ಯಾ ಲಜ್ಜಾವತಿಯಾಗಿ ಸುಮ್ಮನೆ ಕುಳಿತರೆ, ಕಮಲಮ್ಮ ಪ್ರಯತ್ನಪೂರ್ವಕವಾಗಿ ಮುಗುಳುನಗಲೆತ್ನಿಸುತ್ತಾ ಹೇಳಿದಳು :

"ಇವರೆದುರಲ್ಲಿ ನಮ್ಮದೆಲ್ಲಾ ಏನಮ್ಮ ?"

ಕಮಲಮ್ಮ ಹಾಗೆ ಹೇಳಿದರೂ, ಹಾಡೆಂದು ತನ್ನನ್ನು ಕೇಳಿದರಲ್ಲಾ ಎಂದು ಆಕೆಗೆ ಸಂತೋಷವೇ ಆಗಿತ್ತು.

ಆ ಧ್ವನಿಯ ಸ್ವರೂಪ ಚಂಪಾವತಿಗೆ ಅಪರಿಚಿತವಾಗಿರಲಿಲ್ಲ. ಕಮಲಮ್ಮ ಪಠಾರದ ಗಾನವಿಶಾರದೆ ಎಂಬುದು ಸ್ಪಷ್ಟವಾಗಿತ್ತು. ಮಾನವಸಹಜವಾದ ಕುತೂಹಲ, ಅಸೂಯೆ ಚಂಪಾವತಿಯಲ್ಲೂ ಮೂಡಿದುವು. ನೋಡಿಯೇಬಿಡೋಣವೆಂದು ಆಕೆ ಕಮಲಮ್ಮನನ್ನು ಒತ್ತಾಯಿಸಿದಳು.

"ಹೇಳಿ ಕಮಲಮ್ನೋರೆ."

ಆ ಕೇಳಿಕೆಯನ್ನು ಇತರರು ಪುಷ್ಟೀಕರಿಸಿದರು.

ಸೋಲನ್ನೊಪ್ಪಿಕೊಳ್ಳುವ ಅಪೇಕ್ಷೆ ಇಲ್ಲದೆ ಕಮಲಮ್ಮ ಹಾಡಿದಳು :

"ಬಾರೇ ನೀ ವರಲಕ್ಷ್ಮಿ ದೇವಿಯೇ<br>
ಶ್ರೀಹರಿ ಸತಿಯೆ ನೀ ಪ್ರೇಮದಿ<br>
ಬಾರೇ ನೀ ವರಲಕ್ಷ್ಮಿ ದೇವಿಯೆ....<br>
ಜನಿಸಿ ಕ್ಷೀರಾಸಾಗರಾದೊಳು ಹರಿಯು<br>
ನೋಡಿ ಮೋಹಿಸಿದೆ ನೀ<br>
ಪರಮಮಂಗಳೆ ಲಕ್ಷ್ಮಿದೇವಿ ನೀ<br>
ಬಾರೇ........"

ತಾನು ಚೆನ್ನಾಗಿಯೇ ಹಾಡಿದೆನೆಂದು ಕಮಲಮ್ಮ ಅಂದುಕೊಂಡಳು. ಆದರೆ ಹೊಸಬಳೆದುರು ಹಳಬಳಿಗೆ ಸೋಲಾಗಿತ್ತು. ಬೇರೆಯವರೇನೋ ಸುಮ್ಮನಿದ್ದರು. ಆದರೆ, ತನ್ನ ಸ್ನೇಹಿತೆಯದೇ

ಮೇಲಣ ಸ್ಥಾನವೆಂಬುದು ಸ್ಪಷ್ಟವಾದ ಅಹಲ್ಯೆಗೆ ಮುಗುಳುನಗೆಯನ್ನು ಹತ್ತಿಕ್ಕುವುದು ಪ್ರಯಾಸವಾಯಿತು. ಆಕೆ ರಾಧೆಯ ತೊಡೆಯನ್ನು ಮೆಲ್ಲನೆ ಚಿವುಟಿದಳು. ಅವರ ಕಣ್ಣುಗಳು ಪರಸ್ಪರ ಮಾತನಾಡಿ ಕೊಂಡುವು. ಚಂಪಾವತಿಯ ಸೂಕ್ಷ್ಮ ದೃಷ್ಟಿಗೆ ಇದೆಲ್ಲಾ ಬೀಳದೆ ಇರಲಿಲ್ಲ. ಆಕೆ ಮಾತ್ರ ಗಂಭೀರಳಾಗಿಯೇ ಇದ್ದಳು.

ಕಮಲಮ್ಮ ಹಾಡು ಮುಗಿಸಿದೊಡನೆ ಆಕೆಯೆಂದಳು :

"ಚೆನ್ನಾಗಿ ಹಾಡಿದ್ರಿ ಕಣ್ರೀ........"

"ಅಯ್ಯೋ ನಮ್ಮದೆಲ್ಲಿ ಏನಮ್ಮಾ........"

ಇನ್ನು ಒಬ್ಬಿಬ್ಬರು ಗಂಡಸರು ವಠಾರಕ್ಕೆ ಹಿಂತಿರುಗಿದ ಹಾಗಾಯಿತು. ಆದರೆ ಹೆಂಗಸರು ಮಿಸುಕಲಿಲ್ಲ.

"ನೀನು ಹಾಡಮ್ಮ ಅಹಲ್ಯಾ"

— ಎಂದಳು ಚಂಪಾವತಿ.

"ಅಣ್ಣ ಬಂದ."

—ಎನ್ನುತ್ತ ಉಪಾಧ್ಯಾಯರ ತಂಗಿ ಸುಮಂಗಳಾ ಎದ್ದು ಹೋದಳು. ಉಪಾಧ್ಯಾಯರ ಹೆಂಡತಿ ಮಾತ್ರ ಕದಲಲಿಲ್ಲ.

ಹಾಡಲು ಸಿದ್ಧಳಾದ ಅಹಲ್ಯಾ, ರಾಧೆಯನ್ನು ನೋಡಿ ನಕ್ಕಳು.

ಅಷ್ಟರಲ್ಲೆ ಪೋಲೀಸನ ಮಗ ಬಂದು ಹೇಳಿದ :

"ಅಮ್ಮಾ, ಅಪ್ಪ ಬಂದ."

ಆದರೆ ಪೋಲೀಸನ ಹೆಂಡತಿ ಏಳಲಿಲ್ಲ.

ಅಹಲ್ಯಾ ಆರಂಭಿಸಿದಳು :

"ಹುಣ್ಣಿಮೆ ಚಂದಿರ ಬಂದಿಹನೆಂದು—"

ಮೊದಲ ಸಾಲು ಕೇಳುತ್ತಲೆ ರಾಧೆಯ ಮುಖ ಕೆಂಪೇರಿತು ಅಹಲ್ಯಾ ಮುಗುಳುನಕ್ಕು ಮುಂದುವರಿಸಿದಳು :

ತಿಂಗಳ ಪೂಜೆಯ ಸಲ್ಲಿಸಲೆಂದು

ಬಂದಳು ರಾಧೆ ಯಮುನೆಯ ತಡಿಗೆ........"

ತನ್ನ ಹೆಸರು ಬಂದೊಡನೆ ರಾಧಾ ಕೊರಳು ಕೊಂಕಿಸಿದಳು. ಹೆಂಗಸರೇ[illegible] ನಕ್ಕರು. ನಗೆಯ ತೆರೆಗಳು ಏರಿ ಬರುತಿ

ದ್ದಂತೆಯೇ ಅಹಲ್ಯಾ ಹಾಡಿದಳು :

"........ತೋರಿತು ಹೊಸ ಶೃಂಗಾರದ ನಡಿಗೆ
ಹುಣ್ಣಿಮೆ ಚಂದಿರ ಬಂದಿಹನೆಂದು........"

ಕಂಠದ ಮಾಧುರ್ಯಕ್ಕೆ ಕೌಮಾರ್ಯದ ಮೋಹಕ ಮುಗ್ಧತೆಯೂ ಸೇರಿ ಆ ಹಾಡು ಅಲ್ಲಿದ್ದವರನ್ನು ಮರುಳುಗೊಳಿಸಿತು.

ನಿಂತಲ್ಲಿಂದಲೆ ವಠಾರದ ಹೆಬ್ಬಾಗಿಲತ್ತ ನೋಡಿದ ಮೀನಾಕ್ಷಮ್ಮ ಹೇಳಿದಳು :

"ಚಂಪಾವತೀ ನಿಮ್ಮ ಯಜಮಾನ್ರು ಬಂದ್ರು ಕಣ್ರೀ."

ಮತ್ತೊಬ್ಬ ಗಂಡಸಿನ ಆಗಮನ. ಇನ್ನು ಏಳಲೇ ಬೇಕಲ್ಲಾ ಎಂದು ಹೆಂಗಸರು ಚಂಪಾವತಿಯ ಮುಖವನ್ನೆ ಮಿಕಿ ಮಿಕಿ ನೋಡಿದರು.

ಕುಳಿತಲ್ಲಿಂದಲೆ ಚಂಪಾವತಿ ಕೇಳಿದಳು :

"ಬಂದೇ ಬಿಟ್ರೇನು?"

ಹೆಬ್ಬಾಗಿಲಿಗೆ ಬಂದ ಶಂಕರನಾರಾಯಣಯ್ಯನಿಗೆ ಅಹಲ್ಯೆಯ ಹಾಡಿನ ಸ್ವರ ಕೇಳಿಸಿತು. ತನ್ನ ಮನೆಯ ಒಳ ಹೊರಗೆ ಜನ ಸೇರಿದ್ದ ರೆಂಬುದೂ ಅಸ್ಪಷ್ಟವಾಗಿ ಕಂಡಿತು. ಆತ ಮುಗುಳು ನಕ್ಕು ಹಾಗೆಯೇ ಹಿಂತಿರುಗಿ ಹೊರಟುಬಿಟ್ಟ.

"ವಾಪಸು ಹೋದ್ರು ಕಣ್ರೀ!"

ಆ ಹೆಂಗಸರಲ್ಲಿ ಕೆಲವರಿಗೆ ಆಶ್ಚರ್ಯವಾಯಿತು. ಕೆಲವರಿಗೆ ಚಂಪಾವತಿಯ ಯಜಮಾನರು ಸಿಟ್ಟಾದರೇನೋ ಎಂದು ಅಳುಕು ಉಂಟಾಯಿತು.

ಆದರೆ ತನ್ನ ಗಂಡನನ್ನು ಚೆನ್ನಾಗಿ ತಿಳಿದಿದ್ದ ಚಂಪಾವತಿ ಹೇಳಿದಳು :

"ಹೋಗಲಿ ಬಿಡಿ. ಆಮೇಲೆ ಬರ್ತಾರೆ."

ಕುಳಿತಿದ್ದವರಲ್ಲಿ ಕೆಲವರೆಂದರು :

"ಕೊನೆಯದು ಒಂದು ನೀವೇ ಹೇಳಿ ಚಂಪಾವತಿ."

ಯಾವುದನ್ನು ಹೇಳುವುದು ಯೋಗ್ಯವೆಂದು ಚಂಪಾ ಒಂದು

ಕ್ಷಣ ಯೋಚಿಸಿದಳು.

"ಯಾವುದಾದರೂ ಮೈಸೂರು ಮಲ್ಲಿಗೆ ಹಾಡು ಹೇಳ್ಲೇನ್ರೀ ?"

"ಓ ! ಚೆನ್ನಾಗಿರುತ್ತೆ. ಅದೇ ಹೇಳಿ"

—ಎಂದಳು ಅಹಲ್ಯಾ. ಕಮಲಮ್ಮ ಮುಖ ಸ್ವಲ್ಪ ಸೊಟ್ಟಗೆ ಮಾಡಿದರು. ಆದರೆ ಆ ಹೆಂಗಸರಿಗೆ 'ಮೈಸೂರು ಮಲ್ಲಿಗೆ' ಹಾಡುಗಳು ಅಪರಿಚಿತವಾಗಿರಲಿಲ್ಲ. ರಂಗಮ್ಮನೆದುರು 'ಆ ಹಾಡುಗಳು ಚೆನ್ನಾಗಿವೆ' ಎಂದು ಹೇಳುವುದು ಸಾಧ್ಯವಿಲ್ಲದೆ ಹೋದರೂ ಕದ್ದು ತಿನ್ನುವ ಕೊಬರಿ ಬೆಲ್ಲದ ಹಾಗೆ ಅವು ಸಿಹಿಯಾಗಿದ್ದುವು.

ಚಂಪಾ ಪ್ರತಿಯೊಂದು ಪದಕ್ಕೂ ಜೀವ ತುಂಬಿ ಮೋಹಕವಾಗಿ ಹಾಡಿದಳು :

"ರಾಯರು ಬಂದರು ಮಾವನ ಮನೆಗೆ
ರಾತ್ರಿಯಾಗಿತ್ತು,
ಹುಣ್ಣಿಮೆ ಹರಿಸಿದ ಬಾನಿನ ನಡುವೆ
ಚಂದಿರ ಬಂದಿತ್ತು
ತುಂಬಿದ ಚಂದಿರ ಬಂದಿತ್ತು........"

ಈ ಹಾಡು ಮ ಯವೇ ಇಲ್ಲದೆ ಹೀಗೆಯೇ ಸಾಗಲಿ ಎನ್ನಿಸಿತು ಎಲ್ಲರಿಗೂ. ಮಾವನ ಮನೆ, ರಾಯರು, ಪದುಮ... ಪ್ರತಿಯೊಬ್ಬರ ದಾಂಪತ್ಯ ಜೀವನದಲ್ಲೂ, ಒಂದಲ್ಲ ಒಂದು ರೀತಿಯಲ್ಲಿ ಆ ಘಟ್ಟಗಳು ಕಳೆದಿದ್ದುವು. ಕವಿ ಹಾಡಿದಷ್ಟು ಪ್ರಿಯವಾಗಿರಲಿಲ್ಲ ಯಾವುದೂ. ಮಾವನ ಮನೆಗೆ ರಾಯರು ಮೊದಲು ಬಂದಾಗ ನಡೆದ ವಿವಾದಗಳು. "ನಿಮ್ಮ ಮಗಳೇ ಬೇಡ...." "ಬೇರೆ ಮದುವೆ...." ಬಂದು ತಲಪಿದೊಡನೆಯೇ ನಡೆದ ಆಯಾಸದಿಂದ ಗಾಢವಾಗಿ ನಿದ್ದೆ ಹೋಗಿದ್ದ ಅಳಿಯ....ಒಂದೊಂದು ಒಂದೊಂದು ತರಹೆ. ಆದರೂ ಅವರಿಗೆಲ್ಲ ಆ ಹಾಡು ಪ್ರಿಯವಾಗಿತ್ತು. 'ಪದುಮ' ಎಂಬ ಪದ ಬಂದಾಗ ಪದ್ಮಾವತಿ ಮಗುವನ್ನೆತ್ತಿಕೊಂಡು ಎದ್ದು ನಿಂತಳು. ಆದರೆ ಯಾರೂ ಅದನ್ನು ಗಮನಿಸಲಿಲ್ಲ. ಅಹಲ್ಯೆ ರಾಧೆಯರಿಗೆ ಅಂತಹ

ಅನುಭವಗಳಿರಲಿಲ್ಲ. ಆದರೂ ಆ ಹಾಡು, ಇಂಥದೇ ಎಂದು ಹೇಳಲಾಗ ದಂತಹ ಸವಿಯನ್ನು ಅವರಿಗೆ ನೀಡುತಿತ್ತು.

ಹಾಡು ಮುಗಿಯಿತು. ಕತ್ತಲಾಗಿತ್ತು ಆಗಲೆ.

"ಸಾಕಮ್ಮ ಇನ್ನು. ಎಲ್ಲರೂ ಕೆಲಸ ಬಿಟ್ಬಿಟ್ಟು ಬಂದಿದೀರಾ...."

ಹೆಂಗಸರೆಲ್ಲ ಒಬ್ಬೊಬ್ಬರಾಗಿ ಹೊರಟು ಹೋದರು. ಆದರೆ ಅಹಲ್ಯಾ ಮತ್ತು ರಾಧಾ ಏಳಲಿಲ್ಲ.

ಚಲಚ್ಚಿತ್ರ ನೋಡಲು ಅಹಲ್ಯೆಗೆ ಅವಕಾಶವೇ ಸಿಗುತ್ತಿರಲಿಲ್ಲ. ಆದರೆ ಚಲಚ್ಚಿತ್ರದ ಹಾಡುಗಳೆಂದರೆ ಆಕೆಗೆ ಬಲುಪ್ರೀತಿ. ಚಂಪಾವತಿಗೆ ಸಿನಿಮಾ ಹಾಡು ಖಂಡಿತ ಬರುತ್ತಿರಬಹುದೆಂದು ಈಗ ಅವಳಿಗೆ ನಂಬಿಕೆ ಯಾಗಿತ್ತು. ಅಂಗಲಾಚುವ ಧ್ವನಿಯಲ್ಲಿ ಆಕೆ ಕೇಳಿದಳು :

"ರೀ, ನಿಮಗೆ ಸಿನೀಮಾ ಹಾಡು ಬರೋಲ್ವೇನ್ರಿ...ಒಂದು ಹಾಡು ಹೇಳ್ರೀ....ಒಂದೇ ಸಾಕು."

ಚಂಪಾವತಿಗೆ ನಗು ಬಂತು.

"ಬೇಡವಮ್ಮಾ....ರಂಗಮ್ನೋರಿಗೆ ಗೊತ್ತಾದರೆ ಎಲ್ಲಾದರೂ......"

"ಹುಂ. ಅವರೇನು ಮಾಡ್ತಾರೆ !"

"ಕಮಲಮ್ಮನಂತೂ. "

"ಹೋಗಲಿ ಬಿಡ್ರಿ. ಅದೊಂದು....ಒಂದು ಹೇಳೀಂದ್ರೆ."

"ಮೆತ್ತಗೆ ಹೇಳ್ಲಾ?"

"ಹೂಂ. ಹೂಂ. ಮೆತ್ತಗೆ ಹೇಳಿ."

"ಬಾಗಿಲು ಹಾಕ್ಕೊಂಡು ಬಿಡಿ."

ಅಹಲ್ಯಾ ತಟಕ್ಕನೆದ್ದು ಬಾಗಿಲು ಹಾಕಿದಳು. ಹಾಗೆಯೇ ವಿದ್ಯುತ್ ಗುಂಡಿಯನ್ನೂ ಅಮುಕಿದಳು. ಆದರೆ ರಂಗಮ್ಮ 'ದೀಪ ಹಾಕಿ'ರಲಿಲ್ಲ.

ಕತ್ತಲೆಯಲ್ಲಿ ಚಂಪಾವತಿಯ ಮಗು ತಾಯಿಯನ್ನು ಬಿಗಿಯಾಗಿ ಅಪ್ಪಿಕೊಳ್ಳುತ್ತಾ ಆ ಮೂವರ ಮುಖಗಳನ್ನೂ ನೋಡಿತು.

ಮೃದುವಾದ ಹತ್ತಿಯ ಅತಿ ಸೂಕ್ಷ್ಮ ಎಳೆಗಳು ಗಾಳಿಯಲ್ಲಿ ತೇಲಾಡಿದ ಹಾಗೆ ಚಂಪಾವತಿಯ ಸ್ವರ ಹೊರಟಿತು ಪುಟ್ಟ ಕಿಟಕಿಯ

ಮೂಲಕ ಸೊಳ್ಳೆಗಳು ಝುಂಯ್‌ಗುಡುತ್ತ ಬಂದುವು. ಆದರೂ ಚಂಪಾ ಮೆಲುಧ್ವನಿಯಲ್ಲಿ ಹಾಡಿದಳು.

"ನಚೊ ನಾಚೊ ಪ್ಯಾರೆ ಮನ್‌ಕೆ ಮೋ....

ನಚೊ ನಾಚೊ...."

ಅಹಲ್ಯಾ ರಾಧೆಯರು ನಾಚಲಿಲ್ಲ. ಆ ಹಾಡಿನ ಅರ್ಥವೇನು ಎಂಬುದೂ ಅವರಿಗೆ ಗೊತ್ತಿರಲಿಲ್ಲ. ಆದರೆ ಅದು ಸಿನಿಮಾ ಹಾಡು. ಅವರಿಗೆ ಗೊತ್ತಿದ್ದುದಷ್ಟೇ. ಅದೊಂದು ಒಳ್ಳೆಯ ಸಿನಿಮಾ ಹಾಡು.

ಹಾಡು ಕೊನೆಯ ಸಾಲಿಗೆ ಬಂದಂತೆಯೇ ದೀಪ ಹತ್ತಿಕೊಂಡಿತು.

"ಸಾಕಮ್ಮಾ, ಇನ್ನು ಸಾಕು."

ಎಂದಳು ಚಂಪಾ.

ರಾಧೆ ಅಹಲ್ಯೆಯರು ಹೊರಡಲೆಂದು ಬಾಗಿಲು ತೆರೆಯುವುದಕ್ಕೂ 'ಅಹಲ್ಯಾ' ಎಂದು ಆಕೆಯ ಅಣ್ಣ ರಾಮಕೃಷ್ಣಯ್ಯ ಕರೆಯುವುದಕ್ಕೂ ಸರಿಹೋಯಿತು.

ಹೊರಡುತ್ತಲಿದ್ದ ಅಹಲ್ಯೆಯನ್ನು ಚಂಪಾವತಿ ಕೇಳಿದಳು :

"ಅಹಲ್ಯಾ, ಆ ಹಾಡು ನಿನಗೆಲ್ಲಿ ಸಿಗ್ತು?"

"ಯಾವುದ್ರಿ?"

"ಅದೇ, ಒಳಗೆ ಬಾ ಯಾತ್ರಿಕನೆ...."

"ಓ ಅದಾ? ರಾಧೆಯ ಅಣ್ಣ ಯಾವುದನ್ನೋ ನೋಡಿ ಬರೆದು ಕೊಂಡು ಬಂದಿದ್ನಂತೆ."

"ನನಗೂ ಸ್ವಲ್ಪ ಬರಕೊಡ್ತೀಯಾ?"

"ನಾನು ಬರಕೊಡ್ತೀನ್ರೀ"

ಎಂದು ರಾಧಾ ಆ ಕೆಲಸ ಮಾಡಿಕೊಡಲು ಒಪ್ಪಿದಳು.

ಹುಡುಗಿಯರು ಹೊರಹೋಗುತ್ತಲೆ ಚಂಪಾವತಿ ತಾನು ಮೆಚ್ಚಿದ ಆ ಹಾಡಿನ ಮೊದಲ ಸಾಲನ್ನು ನೆನಪು ಮಾಡಿಕೊಳ್ಳುತ್ತಾ ಗುಣ ಗುಣಿಸಿದಳು.

"ಅವರಿಗೆ ಈ ಹಾಡು ಖಂಡಿತ ಇಷ್ಟವಾಗುತ್ತೆ"

ಎಂದು ಚಂಪಾ ಮನಸಿನಲ್ಲೆ ಅಂದುಕೊಂಡಳು.

೨೧

ಮಹಡಿಯೇರಲೆಂದು ರಾಧಾ ಹೆಬ್ಬಾಗಿಲಿನತ್ತ ಬರುತ್ತಲಿದ್ದಂತೆ ಬಲಬದಿಯ ಮೊದಲ ಮನೆಯಿಂದ ರೋದನ ಕೇಳಿಸಿತು

"ಅಯ್ಯೋ ಹೊಡೀ ಬೇಡೀಂದ್ರೆ........ಸಿಮ್ಮ ದಮ್ಮಯ್ಯ!"

ಹುಂ—ಹುಂ—ಹೂಂಕಾರ. ಡುಬ್–ಡುಬ್–ಗುದ್ದಿನ ಸದ್ದು.

"ಅಯ್ಯಯ್ಯೋ—ಅಮ್ಮಾ! ಸತ್ತೆ—ಸತ್ತೆ........"

ಆ ಮನೆಯಿಂದ ಹಾಗೆ ಅಳು ಬರುವುದು ಹೊಸ ವಿಷಯವಾಗಿರಲಿಲ್ಲ. ಅದೊಂದು ಮನೆ. ಎದುರಿಗಿದ್ದ ಉಪಾಧ್ಯಾಯರಮ್ಮ, ಪಕ್ಕದಲ್ಲಿ ರಾಜಮ್ಮ ಮತ್ತು ಮಕ್ಕಳ ಜಗಳ, ಕಮಲಮ್ಮನ ಗಂಡ ಊರಿಗೆ ಬಂದಾಗಲೊಮ್ಮೆ ವಿರಸ, ನಾಗರಾಜರಾಯ–ಪದ್ಮಾವತಿಯರ ನಡುವೆ ಹುಣ್ಣಿಮೆ ಅಮಾವಾಸ್ಯೆಗೊಮ್ಮೆ ಕಲಹ....ಯಾವುದೂ ಹೊಸತಾಗಿರಲಿಲ್ಲ. ಯಾರಿಗೂ ಅದರಲ್ಲಿ ವಿಶೇಷ ಆಸಕ್ತಿ ಇರಲಿಲ್ಲ. 'ಎಲ್ಲರ ಮನೆ ದೋಸೆಯೂ ತೂತೇ' ಎಂದು ಸುಮ್ಮನಾಗುವುದೇ ಅಲ್ಲಿ ಕಂಡು ಬರುತಿದ್ದ ಮುಖ್ಯ ಪ್ರವೃತ್ತಿ. ಆದರೂ ಹೊಸ ಪ್ರಕರಣವಾದಾಗಲೆಲ್ಲ 'ಈಸಲ ಕಾರಣವೇನು?' ಎಂದು ತಿಳಿಯುವ ಕುತೂಹಲ ಮಾತ್ರ ಹಲವರಲ್ಲಿರುತಿತ್ತು.

ಈ ಸಲವೂ ಮೊದಲ ಮನೆಗಳ ಕೆಲವರು, ಪೋಲೀಸನ ಮನೆಯಿಂದ ಬರುತಿದ್ದ ಸ್ವರಗಳಿಗೆ ಕಿವಿಗೊಟ್ಟರು.

"ಸ್ವಲ್ಪಾನಾದ್ರೂ ಮೈಮೇಲೆ ಪ್ರಜ್ಞೆ ಬೇಡ ಸಿಂಗೆ? ಹೋಗಿ ಸಂಗೀತ ಕಛೇರೀಲಿ ಕೂತ್ಬಿಟ್ಟಿದಾಳೆ ಮಹಾರಾಣಿ. ಹುಂ!"

"ಇಲ್ಲಾ ಅಂದ್ರೆ....ಈಗ್ತಾನೇ ಹೋಗಿದ್ದೆ ಅಂದ್ರೆ........"

"ಮುಚ್ಚು ಬಾಯಿ!"

"ಅಯ್ಯೋ ಭಗವಂತಾ........"

ಭಗವಂತನನ್ನು ಕರೆದುದಕ್ಕಾಗಿ ಒದೆ.

"ಯಾರ್ಗೇ ಹೇಳಿದ್ದು ಬಾಯ್ಮುಚ್ಕೊಂತ ?"

"ಅಯ್ಯೋ! ಬೂಟ್ಸು—ಬೂಟ್ಸು........!"

ಆ ಗಂಡಸು ಒಂದು ಕ್ಷಣ ಅಳುಕಿದಂತೆ ತೋರಿತು. ಮತ್ತೆ ಕೈಯಲ್ಲೆ ಹೊಡೆತ.

"ನಿಮ್ಮ ದಮ್ಮಯ್ಯ........!"

"ಹೋಗ್ತೀಯಾ ಇನ್ನು ?"

"ಖಂಡಿತಾ ಹೋಗಲ್ಲ....ಮಗುವಿನಾಣೆ........"

ಅಲ್ಲಿ ಹಿತ್ತಿಲ ಗೋಡೆಗೊರಗಿ ನಿಂತಿದ್ದ ಜಯರಾಮು ತಂಗಿ ಬರುತಿದ್ದುದನ್ನು ನೋಡಿದ. ಆಕೆಯೂ ಅಣ್ಣನನ್ನು ಕಂಡು ಅವನ ಬಳಿಗೆ ಬಂದಳು. ಇಬ್ಬರೂ ಕತ್ತಲೆಯಲ್ಲಿ ನಿಂತು, ಕಿಟಕಿಯ ಮೂಲಕ ಸ್ವಲ್ಪ ಸ್ವಲ್ಪವಾಗಿ ಕಾಣುತಿದ್ದ ದೃಶ್ಯವನ್ನು ನೋಡಿದರು, ಕೇಳಿಸುತಿದ್ದ ಎಲ್ಲಾ ಮಾತುಗಳಿಗೂ ಕಿವಿಗೊಟ್ಟರು.

ಮಗುವಿನಾಣೆ..........!

ಮೂವರು ಮಕ್ಕಳೂ ಹೆದರಿ ಗಡಗಡನೆ ನಡುಗುತ್ತಾ ಅಡುಗೆ ಮನೆ ಸೇರಿದ್ದರು. ಹೊರಗೆ ನಿಂತಿದ್ದವರಿಗೆ ಅಸಹಾಯಳಾಗಿ ನೆಲದ ಮೇಲೆ ಬಿದ್ದಿದ್ದ ಹೆಂಗಸು ಕಾಣುತ್ತಿರಲಿಲ್ಲ. ಖಾಕಿಯ ಪೋಷಾಕು ಧರಿಸಿದ್ದ ಗಂಡಸು ಮಾತ್ರ ಅತ್ತಿತ್ತ ಚಲಿಸುವುದು ಕಾಣಿಸುತಿತ್ತು.

ಇದರ ಹಿನ್ನೆಲೆ ಅಣ್ಣನಿಗೆ ತಿಳಿಯಲೆಂದು ತಂಗಿ ಹೇಳಿದಳು :

"ಕೊನೇ ಮನೆಯವರು ಒಂದೆರಡು ಹಾಡು ಹೇಳಿದ್ರು ಅಣ್ಣ. ಅದನ್ನ ಕೇಳೋಕೆ ಈಕೆ ಬಂದಿದ್ರು."

"ಗೊತ್ತಾಯ್ತು ಕಣೇ........"

"ಅಯ್ಯೊ! ಹ್ಯಾಗೆ ಹೊಡೀತಿದಾನೆ ಆತ!"

ಮತ್ತೆ ಹೊಸತಾಗಿ ಹೆಂಗಸಿನ ಧ್ವನಿ ಕೇಳಿಸಿತು :

"ಅಯ್ಯೋ ಹೊಡೀಬೇಡೀಂದ್ರೆ....ದಮ್ಮಯ್ಯ.........."

ಜಯರಾಮು ಅವುಡುಕಚ್ಚಿ ಕಂಪಿಸುವ ಧ್ವನಿಯಲ್ಲಿ ಹೇಳಿದ :

"ಪಿಶಾಚಿ ! ಬೆಲ್ಟು ಬಿಚ್ಚಿ ಹೋಡೀತಿದಾನೋ ಏನೋ........"

"ಥೂ ! ಆತ ತುಂಬಾ ಕೆಟ್ಟೋನು."

"ಹೆಂಡತಿ ಅಂದರೆ ಕಾಲಿನ ಕಸ. ಇದು ಲಾಕಪ್ಪೂಂತ ತಿಳ ಕೊಂಡಿದಾನೆ. ಮೈ ಚರ್ಮ ಸುಲಿಯೋಕೆ ಅಲ್ಲಿ ಯಾರೂ ಇವತ್ತು ಸಿಗಲಿಲ್ವೇನೋ........"

"ಹೋಗಿ ರಂಗಮ್ನೋರನ್ನ ಕರೀಲೆ ಅಣ್ಣ ?"

"ಬೇಡ ರಾಧಾ. ಇನ್ನೇನು, ಅವರೂ ಬಂದ್ಬಿಡ್ತಾರೆ."

ಜಯರಾಮು ರಂಗಮ್ಮನವರ ನಡೆ ನುಡಿಯನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದ. ವಠಾರದಲ್ಲಿ ಜಗಳ ಆರಂಭವಾದರೆ ಆಕ್ಷಣವೆ ಅವರು ಬರುತ್ತಿರಲಿಲ್ಲ. ಪರಿಸ್ಥಿತಿ ತೀಕ್ಷ್ಣತೆಯ ಘಟ್ಟವನ್ನು ದಾಟಿ ಇಳಿಮುಖವಾದಾಗ ರಂಗಮ್ಮ ಬಂದು ಸ್ವರವೇರಿಸಿ ಮಾತನಾಡುತಿದ್ದರು.

"ಏನದು ಗಲಾಟೆ ? ಈ ವಠಾರ ಕುಡುಕರ ಕೇರಿ ಕೆಟ್ಹೋಯ್ತು !"

ಆಗಾಗ್ಗೆ ದೇಹದ ಉಗಿ ಹೊರಹೋಗಲು ಅವಕಾಶ ಕೊಡುವುದು ಆಗತ್ಯವೆಂಬುದೇ ಅವರ ಅಭಿಪ್ರಾಯವಾಗಿತ್ತು.

ಈ ದಿನವೂ ಅವರು ಬಂದು ಪೋಲೀಸನ ಮನೆ ಬಾಗಿಲಲ್ಲಿ ನಿಂತರು ;

"ಶಿವಸ್ವಾಮೀ ! ಶಿವಸ್ವಾಮೀ ! ಅದೇನ್ರೀ ಅದು ?"

ಒಂದು ಕ್ಷಣ ಮೌನ. ಆ ಬಳಿಕ, ತನಗೆ ಸಹಾನುಭೂತಿ ತೋರು ವವರು ಬಂದರೆಂದು, ಹೆಂಗಸು ಬಾಗಿಲಿನ ಹೊರಗೂ ಕೇಳಿಸುವಂತೆ ಗಟ್ಟಿಯಾಗಿ ಅತ್ತಳು.

ಪೋಲೀಸ್ ಖಾತೆಯವನೆಂಬ ಕಾರಣದಿಂದ ಬಹುವಚನದ ಗೌರವ ಆತನಿಗೆ ರಂಗಮ್ಮನಿಂದ ದೊರೆಯುತಿತ್ತು.

ಉತ್ತರ ಬರದೇ ಇದ್ದುದನ್ನು ಕಂಡು ರಂಗಮ್ಮ ಮತ್ತೊಮ್ಮೆ ಕೇಳಿದರು :

"ಶಿವಸ್ವಾಮೀ, ಏನಪ್ಪಾ ಅದು ?"

ಶಿವಸ್ವಾಮಿ ಬಾಗಿಲು ತೆರೆಯದೆಯೇ ಹೇಳಿದ :

"ನೋಡಿ ರಂಗಮ್ನೋರೆ ಈಕೆ ಮಾಡಿರೋದು. ಇವತ್ತು ರಾತ್ರೆ

ಡ್ಯೂಟಿ ಇದೇಂತ ಆಗ್ಎೇ ಹೇಳಿದ್ದೆ. ಬಂದು ಒಂದು ತುತ್ತು ತಿಂದು ಹೋಗೋಣ ಅಂದರೆ, ಇಲ್ಲಿ ಬಡಿಸೋವರಿಗೇ ಗತಿ ಇಲ್ಲ. ಸಂಗೀತ ಕೇಳೋಕೆ ಹೋಗಿದಾಳೆ ಈ ಮಹಾರಾಯ್ತಿ........"

"ಹೋಗಲಿ ಬಿಡಪ್ಪಾ ಅಷ್ಟಕ್ಕೆಲ್ಲಾ–"

"ನೀವು ಹೋಗಿ ರಂಗಮ್ನೋರೆ. ಹೊರಗೆ ದುಡಿಯೋ ಗಂಡಸಿನ ಕಷ್ಟ ಯಾರಿಗೆ ಗೊತ್ತಾಗುತ್ತೆ ?"

ಆ ಸಂಭಾಷಣೆ ಕೇಳಿಸುತಿದ್ದ ಉಪಾಧ್ಯಾಯರು ಹೆಂಡತಿಯತ್ತ ನೋಡಿದರು. ಓದುತಿದ್ದ ಇಬ್ಬರು ಹುಡುಗರೂ ಪರಸ್ಪರ ಮುಖನೋಡಿ ಕೊಂಡರು. ರಾಜಮ್ಮ ಬಾಗಿಲಬಳಿ ನಿಂತರು. ಗುಂಡಣ್ಣ ಬಾಗಿಸಿದ ತಲೆಯನ್ನು ಎತ್ತಲಿಲ್ಲ.

ಒಳಗೆ ನೆಲದ ಮೇಲೆ ಮುದುರಿದ್ದ ಹೆಂಗಸು ಎದ್ದು ಕುಳಿತಳು. ಬಾಗಿಲು ತೆರೆಯಿತು. ಕೈಯಲ್ಲಿ ಪಗಡಿ ಹಿಡಿದುಕೊಂಡು ಹೊರಬಂದ. ಕತ್ತಲಲ್ಲಿ ಆ ಮುಖ ಯಾರಿಗೂ ಕಾಣಿಸಲಿಲ್ಲ.

"ಯಾಕಪ್ಪ ಹೊರಟ್ಬಿಟ್ರಿ ? "

–ಎಂದು ರಂಗಮ್ಮ ಕೇಳುತಿದ್ದಂತೆಯೇ ಆತ ಅಂಗಳ ದಾಟಿ ಬೀದಿಗಿಳಿದ.

ಒಳಗಿನಿಂದ ಹೆಂಗಸು ಗೋಳಾಡಿದಳು :

"ಊಟ ಮಾಡ್ದೇನೇ ಹೋಗ್ತಿದಾರೆ ರಂಗಮ್ನೋರೇ...."

ರಾಜಿ ಮಾಡಿಸಲೆಂದು ರಂಗಮ್ಮ ಕರೆದರು :

"ಶಿವಸ್ವಾಮಿ !"

ಗಂಡಸು ಕೇಳಲೇ ಇಲ್ಲ. 'ಡ್ಯೂಟಿ'ಗಾಗಿ ಆತ ಹೊರಟು ಹೋಗಿದ್ದ.

ರಂಗಮ್ಮ ಸಂತೈಸುವ ನುಡಿಗಳನ್ನಾಡುತಿದ್ದಂತೆಯೇ ಈಗ ಶಿವ ಸ್ವಾಮಿಯ ಹೆಂಡತಿ, ಹೃದಯಪಾತ್ರೆಯನ್ನು ಆ ದಿನದ ಮಟ್ಟಿಗೆ ಬರಿದುಗೊಳಿಸಲೆಂದು ತುಂಬಿದ ದುಃಖವನ್ನೆಲ್ಲ ಹೊರಕ್ಕೆ ಹರಿಸಿದಳು.

ಜಯರಾಮು ನಿಟ್ಟುಸಿರು ಬಿಟ್ಟು ಬೇಸರದ ಧ್ವನಿಯಲ್ಲಿ ಹೇಳಿದ :

"ನಡಿ ರಾಧಾ, ಮನೆಗೆ ಹೋಗೋಣ."

ಅವರು ಮಹಡಿಯ ಮೆಟ್ಟಲೇರುತಿದ್ದಂತೆಯೇ, ಶಂಕರನಾರಾಯಣಯ್ಯ ಮತ್ತು ಚಂದ್ರಶೇಖರಯ್ಯ ಇಬ್ಬರೂ ವಠಾರಕ್ಕೆ ಬಂದರು. ಚಂದ್ರಶೇಖರಯ್ಯನ ಕೈಲಿ ಎಂದಿನಂತೆಯೇ ಕಡತಗಳನ್ನು ಹೊತ್ತ ಚರ್ಮದ ಚೀಲವಿತ್ತು. ಶಂಕರನಾರಾಯಣಯ್ಯನ ಕೈಲೊಂದು ಹಸುರೆಲೆಯ ಪೊಟ್ಟಣವಿತ್ತು–ಎಂದಿನಂತೆಯೇ.

"ಬರ್‍ತೀನಿ ಶಂಕರನಾರಾಯಣಯ್ಯ, ಗುಡ್‌ನೈಟ್"

–ಎಂದು ಚಂದ್ರಶೇಖರಯ್ಯನೆಂದರೆ ಶಂಕರನಾರಾಯಣಯ್ಯ ಮಾರುತ್ತರವಿತ್ತ.

"ನಮಸ್ಕಾರ, ನಮಸ್ಕಾರ."

ಮಹಡಿಯನ್ನೇರತೊಡಗಿದ್ದ ಅಣ್ಣ ತಂಗಿಯರನ್ನು ಕಂಡು ಚಂದ್ರಶೇಖರಯ್ಯ ಸ್ವಲ್ಪ ವೇಗವಾಗಿಯೇ ಹೆಜ್ಜೆ ಹಾಕಿದ. ಜಯರಾಮು ಮಾತನಾಡಿಸಲೇ ಬೇಕಾಯಿತು.

"ಇವತ್ತು ಬೇಗ್ನೆ ಬಂದ್ಬಿಟ್ಟಿದೀರಲ್ಲ ಚಂದ್ರಶೇಖರ್‌ರವರೆ?"

"ಬಂದ್ಬಿಟ್ಟೆ ಜಯರಾಂ."

"ಹೊಸ ಬಿಡಾರದವರ ಪರಿಚಯ ಮಾಡ್ಕೊಂಡ ಹಾಗಿದೆ."

"ಅಯ್ಯೋ, ಅದೊಂದು ದುರಭ್ಯಾಸ."

ಮುಂದಿದ್ದ ರಾಧಾ ಮನೆಯತ್ತ ಸಾಗುತ್ತ ಹಿಂತಿರುಗಿ ನೋಡಿದಳು. ಕತ್ತಲು. ಚಂದ್ರಶೇಖರಯ್ಯನ ಮುಖ ಸ್ಪಷ್ಟವಾಗಿ ಕಾಣಿಸಲಿಲ್ಲ. ಆದರೆ ಆ ಕಣ್ಣುಗಳೆರಡು ತನ್ನನ್ನೆ ದಿಟ್ಟಿಸುತ್ತಿದ್ದಂತೆ ರಾಧೆಗೆ ಭಾಸವಾಗಿ, ಮುಖದಲ್ಲಿ ರಕ್ತದ ತೀವ್ರ ಸಂಚಾರವಾಯಿತು.

ಚಂದ್ರಶೇಖರಯ್ಯ ತನ್ನ ಬಾಗಿಲಿನ ಬೀಗಕ್ಕೆ ಕೀಲಿಕೈ ತಿರುವುತಿದ್ದಂತೆ ಜಯರಾಮು ತಡೆದು ನಿಂತು ಕೇಳಿದ.

"ನಾಲ್ಕೈದು ದಿವಸದಿಂದ ನೀವು ಊರಲ್ಲಿರ್‍ಲಿಲ್ಲಾಂತ ತೋರುತ್ತೆ."

"ಅಯ್ಯೋ, ಇಲ್ಲೇ ಇದೀನಿ ಒಂದು ವಾರದಿಂದ."

"ನಿಜವೆ!........"

"ಯಾಕೋ ಬರಬರುತ್ತಾ ಬೆಂಗಳೂರು ಬೊಂಬಾಯಿ ಆಗ್ತಿದೆ.

ಪಕ್ಕದ್ಮನೇಲಿ ಯಾರಿದಾರೆ ಅನ್ನೋದೇ ಗೊತ್ತಾಗ್ತಾ ಇಲ್ಲ......"

–ಎಂದು ಚಂದ್ರಶೇಖರಯ್ಯ ನಕ್ಕುಬಿಟ್ಟ. ಜಯರಾಮುವೂ ನಕ್ಕು ತನ್ನ ಮನೆಯತ್ತ ಸಾಗಿದ. ಬೊಂಬಾಯಿಯೊಡನೆ ಹೋಲಿಕೆ. ಜಯರಾಮು ಆ ದೊಡ್ಡ ಊರನ್ನು ಕಂಡಿರಲಿಲ್ಲ. ಚಂದ್ರಶೇಖರಯ್ಯನೋ ಲೋಕಾನುಭವಿ. ಪಕ್ಕದ ಮನೆಯಲ್ಲಿ ಯಾರಿರುವರೆಂಬುದನ್ನೂ ತಿಳಿಯಲು ಬಯಸದೆ, ಅಥವಾ ತಿಳಿಯಲಾಗದೆ, ಜನ ಆ ದೊಡ್ಡ ನಗರದಲ್ಲಿ ಜೀವಿಸುವುದನ್ನು ಜಯರಾಮು ಚಿತ್ರಿಸಿಕೊಂಡ.

ಆತನ ತಾಯಿ ಪಿಸು ಧ್ವನಿಯಲ್ಲಿ ಕೇಳಿದರು:

"ಏನಂದ್ನೋ?"

"ಯಾರು?"

"ಶ್! ಪಕ್ಕದ್ಮನೆಯಾತ."

"ಏನೂ ಇಲ್ಲ!"

ತಾಯಿಯ ಪಿಸುಮಾತಿನಿಂದ ಜಯರಾಮುಗೆ ಆಶ್ಚರ್ಯವಾಯಿತು. ಮಗನ ಉತ್ತರದಿಂದ ತಾಯಿಗೆ ನಿರಾಶೆಯಾಯಿತು. "ಅಪ್ಪಾ ಬಂದಿಲ್ವಾ ಇನ್ನೂ?" ಎನ್ನುತ್ತ ಕಿಟಕಿಯಿಂದ ಹೊರಗಿಣಿಕಿ ಬೀದಿಯತ್ತ ನೋಡುತಿದ್ದ ತಂಗಿಯನ್ನು ದಿಟ್ಟಿಸಿದ ಜಯರಾಮು, ಏನೋ ಹೊಳೆದವನಂತೆ ತಾಯಿಯತ್ತ ನೋಡಿದ. 'ಓ' ಎನ್ನುವಂತೆ ಆತನ ಹುಬ್ಬುಗಳು ಮೇಲಕ್ಕೆ ಚಲಿಸಿದುವು. ಮರುಕ್ಷಣವೆ ಯೋಚನೆಯ ಮೋಡ ಕವಿದು ಮುಖ ಬಾಡಿತು.

ರಾಧಾ, ಅಣ್ಣ–ತಾಯಿ ಇಬ್ಬರೊಡನೆಯೂ ಅಂದಳು:

"ಆ ಕೊನೇಮನೆಯಾಕೆ ಚಂಪಾ ಎಷ್ಟು ಚೆನ್ನಾಗಿ ಹಾಡ್ತಾಳೇಂತ! ವಠಾರದೋರೆಲ್ಲ ಜಮೆಯಾಗ್ಬಿಟ್ಟಿದ್ರು."

"ಕೆಳಗೇನೋ ಗಲಾಟೆಯಾಗ್ತಿತ್ತಲ್ಲೋ. ಮೇಲಕ್ಬನ್ನೀಂತ ನಿಮ್ಮಪ್ಪನ್ನೂ ಕೂಗ್ದೆ–ನಿಮಗೆ ಕೇಳಿಸ್ಲೇ ಇಲ್ಲ."

ತಾಯಿ ಮಾತು ಮುಗಿಸುತ್ತಲೆ ಜಯರಾಮುವೆಂದ:

"ಕೊನೇಮನೆಯೋರು ಚೆನ್ನಾಗಿ ಹಾಡಿದ್ರು. ಅದನ್ನ ಕೇಳೋಕೆ ಹೋದಳೂಂತ ತನ್ನ ಹೆಂಡತಿಗೆ ಪೋಲೀಸ್ ಸಾಹೇಬರು ಚೆನ್ನಾಗಿ

ಶಿಕ್ಷೆ ಕೊಟ್ರು."

"ಅವನೊಬ್ಬ—"

ಏನೋ ಹೇಳಬೇಕೆಂದಿದ್ದರು ತಾಯಿ. ಆದರೆ ಮಾತು ಅಲ್ಲಿಗೆ ನಿಂತಿತು.........

ಕೆಳಗೆ ರಂಗಮ್ಮ ತಮ್ಮನ್ನು ಹಾದುಹೋಗುತ್ತಿದ್ದ ಶಂಕರ ನಾರಾಯಣಯ್ಯನನ್ನು ಕಂಡರು.

"ಈಗ ಬಂದಿರೇನಪ್ಪ?"

"ಹೂಂ ರಂಗಮ್ನೋರೆ."

ಮಾತು ಬೆಳೆಸಲು ಇಷ್ಟವಿಲ್ಲದ ಶಂಕರನಾರಾಯಣಯ್ಯ ಅಷ್ಟು ಹೇಳಿ ನೇರವಾಗಿ ತನ್ನ ಬಾಗಿಲಿನತ್ತ ನಡೆದ. ಆದರೆ ಶಿವಸ್ವಾಮಿಯ ಹೆಂಡತಿ ಹಣೆಯ ಮೇಲೆ ಕೈಯಿಟ್ಟು ಅಳುತ್ತಿದ್ದ ದೃಶ್ಯ, ತೆರೆದ ಬಾಗಿಲಿನ ಎಡೆಯಿಂದ ಆತನಿಗೆ ಕಾಣಿಸದಿರಲಿಲ್ಲ.

ರಂಗಮ್ಮ ಅಳುತ್ತಿದ್ದಾಕೆಯನ್ನು ಸಂತೈಸಲು ಯತ್ನಿಸಿದರು.

"ಏಳಮ್ಮ ನೀನು. ಮಕ್ಕಳಿಗೆ ಬಡಿಸು. ನೀನೂ ಊಟ ಮಾಡಿ ನಿದ್ದೆ ಹೋಗು. ಆತನೇನೂ ಇನ್ನು ಬರೋದಿಲ್ಲ. ಹೂಂ. ಏಳು ಏಳು!"

ಇಷ್ಟು ಹೇಳಿ ಅವರು ಅಸ್ಪಷ್ಟವಾಗಿ ಏನನ್ನೋ ಹೇಳುತ್ತ ತಮ್ಮ ಗೂಡನ್ನು ಸೇರಿದರು.

................

ಒಳಗಿಂದ ಅಗಣಿ ಹಾಕಿತ್ತು.

"ಬಾಗಿಲು !" ಎಂದು ಒರಟು ಒರಟಾಗಿ ಎಂದೂ ಕೂಗಿದವನಲ್ಲ ಶಂಕರನಾರಾಯಣಯ್ಯ. ಬಾಗಿಲು ಮುಚ್ಚಿದಾಗ ಹೊರಗೆ ನಿಂತು, ಪ್ರೀತಿಯೋ ಮಾತಾಯಿತೇನೊ ಎಂಬಂತೆ ಕರೆಯುತ್ತಿದ್ದ.

"ಚಂಪಾ !"

ಆ ಸ್ವರ ಕೇಳಿಸಿದ ಮನೆ ಹೆಂಗಸರಿಗೆಲ್ಲಾ ಕಸಿವಿಸಿಯಾಗುತ್ತಿತ್ತು. ಚಂಪಾವತಿ ಭಾಗ್ಯವಂತೆ ಎಂದುಕೊಳ್ಳುತ್ತಿದ್ದರು.

ಆ ಭಾಗ್ಯವಂತೆಯೊ ಗಂಡ ತನ್ನ ಹೆಸರು ಹಿಡಿದು ಕರೆಯುವಂತೆ ಮಾಡಬೇಕೆಂದೇ ಕತ್ತಲಾಗುತ್ತಲೇ ಬಾಗಿಲು ಹಾಕುತ್ತಿದ್ದಳು. ಅಷ್ಟೇ

ಅಲ್ಲ, ಎರಡನೇ ಬಾರಿ ಆತ ಕರೆಯಲೆಂದೇ ಆಕೆ ಮೊದಲ ಸಲಕ್ಕೇ ಬಾಗಿಲು ತೆಗೆಯುತ್ತಿರಲಿಲ್ಲ.

ಹೆಂಡತಿಯ ಈ ಹಂಚಿಕೆಯೊಂದೂ ತಿಳಿಯದ ಮುಗ್ಧನಾಗಿರಲಿಲ್ಲ ಶಂಕರನಾರಾಯಣಯ್ಯ. ಆತನಿಗೂ ಈ ಬಗೆ ಇಷ್ಟವಾಗಿತ್ತು.

"ಚಂಪಾ...."

ಮತ್ತಷ್ಟು ಮೃದುವಾದ, ಸ್ವಲ್ಪ ದೀರ್ಘವಾದ ಎರಡನೆಯ ಕರೆ.

ಮೊದಲ ಸಲ ಕರೆದಾಗಲೇ ಬಂದು ಬಾಗಿಲ ಹಿಂದೆಯೇ ನಿಂತಿದ್ದ ಚಂಪಾವತಿ ಚಿಲಕ ತೆಗೆದು ಬಾಗಿಲು ತೆರೆದಳು. ಮೀನು ನೀರೊಳಕ್ಕೆ ನುಸುಳಿದ ಹಾಗೆ ಸದ್ದಿಲ್ಲದೆ, ಆತ ಮನೆಯೊಳಕ್ಕೆ ಬಂದ. ನಿರೀಕ್ಷೆಯ ಮುಗುಳುನಗೆ ಆಕೆಯ ತುಟಿಗಳ ಮೇಲೆ ಮೂಡಿ ಅರಳುತಿತ್ತು. ಆತ ಕಣ್ಣವೆ ಮುಚ್ಚಿ ತೆರೆಯುವುದರೊಳಗೆ ಕದವನ್ನು ಹಿಂದಕ್ಕೆ ತಳ್ಳಿ ಅಗಣಿ ಹಾಕಿದ; ಕೈಯಲ್ಲಿದ್ದ ಪೊಟ್ಟಣವನ್ನು ನೆಲದ ಮೇಲಿರಿಸಿದ; ಓಡಿ ಹೋಗುವವಳಂತೆ ನಟಿಸುತಿದ್ದ ಚಂಪಾವತಿಯನ್ನು ಎರಡೂ ಬಾಹುಗಳಿಂದ ಸುತ್ತುವರಿದ. ಆತನ ದೃಷ್ಟಿ ಅರಳುತ್ತಲಿದ್ದ ಆ ತುಟಿಗಳ ಸೊಬಗಿನ ಮೇಲೆಯೇ ನೆಟ್ಟಿತು. ಆಕೆಯ ಅರೆಮುಚ್ಚಿದ ಕಣ್ಣುಗಳು ಯಾವುದೋ ಸುಖಕ್ಕಾಗಿ ತುಟಿಗಳೊಡನೆ ಸ್ಪರ್ಧಿಸಿದುವು. ಆತ ಬೆಳಕಿನೆದುರಲ್ಲಿ ಏನೂ ಕಾಣಿಸಬಾರದೆಂದು ಕಣ್ಣು ಮುಚ್ಚಿಯೆ ಕೊಟ್ಟ.

ಒಂದು, ಎರಡು, ಮೂರು........ನಾಲ್ಕು........

ಕಂಠದಿಂದ ಕುಲು ಕುಲು ಧ್ವನಿ ಹೊರಡಿಸುತ್ತಾ ಆಕೆಯೆಂದಳು.

"ಸುಸ್ತು, ಹೆಚ್ಚಾಯ್ತು ಇವತ್ತು !"

ಇಬ್ಬರೂ ತಮ್ಮನ್ನೇ ನೋಡುತಿದ್ದ ಮಗುವನ್ನು ಕಂಡರು. ಅಪ್ಪ ಅಮ್ಮ ಅದೇನೋ ಮಾಡುತ್ತಿದ್ದುದನ್ನು ಆ ಮಗು ನೋಡಿ ನಕ್ಕಿತು.

ಹುಸಿಮುನಿಸಿನ ಧ್ವನಿಯಲ್ಲಿ ಚಂಪಾ ಅಂದಳು :

"ನೋಡಿ........ಮಗು........ನಾಚಿಕೇನೂ ಇಲ್ಲ ನಿಮಗೆ."

"ಹೋಗಲಿ ಬಿಡು. ತನ್ನ ತಾಯಿ ಎಂಥವಳೂಂತ ಈಗಿನಿಂದ್ಲೇ ಗೊತ್ತಾಗಲಿ ಅದಕ್ಕೆ !"

"ಊಂ....ಆಗ಼್್ಲೇ ಬಂದಿದ್ರಂತೆ. ಎಲ್ಲಿಗೆ ಹೋಗಿದ್ರಿ ?"

“ಜನಾನಾ ಕಚೇರಿ ನಡೀತಾ ಇತ್ತು ಇಲ್ಲಿ. ಹೊರಟ್ಹೋದೆ. ಗಂಡಸರಿಗೆ ಪ್ರತ್ಯೇಕ ಸ್ಥಳದ ಏರ್ಪಾಟಾದರೂ ಇದೇಂತ ಹೇಳಿದ್ದಿದ್ರೆ–”

“ಸಾಕು ತಮಾಷೆ.”

“ಭರ್ಜರಿಯಾಗಿತ್ತೊ?”

“ಹೂಂ. ಎಲ್ಲರಿಗೂ ಖುಷಿಯಾಯ್ತು.”

“ಸರಿ ಇನ್ನು. ಹಾಡು ಹೇಳಿಯೇ ನೀರು ಬರಿಸು, ದೀಪ ತರಿಸು– ಅಂತಾರೆ ನೋಡು!”

“ರಂಗಮ್ನೋರು ಬಂದಿದ್ರು.”

“ಓ! ಅವರೆದುರು ಓ ಮೋರೆ ರಾಜಾಂತ ಹಾಡಿದ್ಯೇನು?”

“ಉಂಟೆ ಎಲ್ಲಾದರೂ? ಕಾಲಹರಣ ಮೇಲರಾ ಹರೇ ಹಾಡ್ದೆ.”

“ಭೇಷ್”

“ಅವರು ಹೋದ್ಮೇಲೆ—”

“ಗೊತ್ತು ಬಿಡು. ಹಾ ಪ್ರಿಯಾ ಪ್ರಾಣಾಂತ ಹೃದಯಾ ಹಾಸಿ–”

“ಘೂ-ಘೂ.... ಮೈಸೂರು ಮಲ್ಲಿಗೇದು ಹಾಡ್ದೆ.”

“ಬೇರೆ ಗನಾಯಿಗಳೂ ಇದ್ವೋ?”

“ಇದ್ದೆ ಇತ್ತಾರ್ರೈ —ಆದರೆ ಕೊನೇಲಿ–”

“ಏನಾಯ್ತು?”

“ಹಾಡು ಕೇಳೋಕೆ ಬಂದಿದ್ಲೂಂತ ಮೊದಲ್ನೇ ಮನೆ ಯಜಮಾನ ಹೆಂಡತಿಗೆ ಹೊಡೆದ್ನಂತೆ.”

ಬರುತ್ತ ತಾನು ಕಂಡ ದೃಶ್ಯ.... ಶಂಕರನಾರಾಯಣಯ್ಯನಿಗೆ ಸ್ಪಷ್ಟವಾಯಿತು ಈಗ.

“ಅವನಾ-ಪೋಲೀಸ್ನೋನು! ಅವನ ಪಿಂಡ.”

ಪೊಟ್ಟಣವನ್ನು ಬಿಚ್ಚಿ ಚಂಪಾ, ಹೂವಿನ ಸುವಾಸನೆಯನ್ನು ಒಳಕ್ಕೆಳೆದು ಶ್ವಾಸಕೋಶಗಳನ್ನು ತುಂಬಿಕೊಂಡಳು. ಆ ಕ್ಷಣ ಮತ್ತೊಮ್ಮೆ ಗಂಡನ ಎದೆಯಲ್ಲಿ ಒರಗುವ ಮನಸ್ಸಾಯಿತು. ಆದರೆ ಆಗಲೆ ಅತಿಯಾಗಬಾರದೆಂದು ಆಕೆ ಮನಸ್ಸನ್ನು ಬಿಗಿಹಿಡಿದು ಅಡುಗೆ ಮನೆಯತ್ತ ಹೋದಳು.

"ಆ ದೀಪಾನ ಇನ್ನೂ ಸ್ವಲ್ಪ ಈಚೆಗೆ ತರಬೇಕೂಂದ್ರೆ."

ಆತ ಬಟ್ಟೆ ಬದಲಾಯಿಸಿ, ಬಲ್ಬಿನ ಮೇಲುಗಡೆ ಒಂದು ದಾರ ವನ್ನು ಕಟ್ಟಿ ಅಡುಗೆ ಮನೆಯ ಛಾವಣಿಯತ್ತ ಎಳೆದು ಬಿಗಿದ. ನಡುವಿನ ಗೋಡೆಗೆ ನೇರವಾಗಿ ದೀಪ ಬಂದು, ಎರಡೂಕಡೆ ಒಂದೇ ಸಮನೆ ಬೆಳಕು ಬಿತ್ತು.

"ಸಾಕೇನೆ ?"

"ಹೂಂ. ಸಾಕು. ಸರಿಯಾಗಿದೆ."

ತನ್ನ ಬಡಕಲು ಕುರ್ಚಿಯ ಮೇಲೆ ನಿಂತಿದ್ದ ಶಂಕರನಾರಾಯಣಯ್ಯ ಕೆಳಕ್ಕೆ ಧುಮುಕುತ್ತ ಹೇಳಿದ :

"ಈಗ ಅಡ್ಡಗೋಡೆ ಮೇಲೆ ದೀಪ ಇಟ್ಟಹಾಗಾಯ್ತು."

ಚಂಪಾ ನಕ್ಕಳು.

ಆ ದಿನ ತಾನು ಮಾಡಿದ ಕೆಲಸ ; ನಡೆದ ಮಾತುಕತೆ ; ಹಳೆಯ ಸ್ನೇಹಿತನೊಬ್ಬನ ಸಂದರ್ಶನ; ಹಿಂದೆ ವಾಸವಾಗಿದ್ದ ಮನೆಯ ಪ್ರದೇಶದ ಪರಿಚಿತರೊಬ್ಬರು ಭೇಟಿಯಾದದ್ದು....ಚಂದ್ರಶೇಖರಯ್ಯನ ಜತೆಯಲ್ಲಿ ಕಾಫಿಕುಡಿದದ್ದು........

ಪ್ರತಿಯೊಂದರ ವರದಿಯನ್ನೂ ಆತ ಹೆಂಡತಿಗೆ ಒಪ್ಪಿಸಿದ. ಆಕೆ ಹೂಂಗುಟ್ಟುತ್ತಾ ಅಡುಗೆ ಮಾಡಿದಳು. ಅನ್ನ ಬೆಂದಿತು. ತಿಳಿಸಾರು ಸಿದ್ಧವಾಯಿತು.

ಚಂಪಾ ಹಾಸಿಗೆ ಹಾಸಿದಳು. ತನ್ನ ತೊಡೆಯ ಮೇಲೆಯೇ ನಿದ್ದೆ ಹೋಗಿದ್ದ ಮಗುವನ್ನು ಶಂಕರನಾರಾಯಣಯ್ಯ ಹಾಸಿಗೆಯ ಮೇಲೆ ಮಲಗಿಸಿದ.

ಗಂಡ ಹೆಂಡಿರಿಬ್ಬರೂ ಊಟಕ್ಕೆ ಕುಳಿತು ಒಬ್ಬರಿಗೊಬ್ಬರು ಬಡಿಸುತ್ತ ಉಂಡರು.

ಊಟ ಮುಗಿದು ಅವರು, ಸುವಾಸಿತ ಅಡಿಕೆಪುಡಿ ಬಾಯಿಗೆ ಹಾಕಿಕೊಂಡರು. ಶಂಕರನಾರಾಯಣಯ್ಯ ಸಿಗರೇಟು ಹಚ್ಚಿದ.

ಅಷ್ಟರಲ್ಲಿ ಓಣಿಯಿಂದ ರಂಗಮ್ಮನ ಸ್ವರ ಕೇಳಿಸಿತು :

"ಆಗ್ತಾ ಬಂತೇನ್ರೇ ? ಇನ್ನು ಹತ್ನಿಮಿಷ. ದೀಪ ಆರಿಸ್ತೀನಿ."

ದಂಪತಿಗಳು ಮಲಗಿಕೊಂಡು ಆ ವಿಷಯ ಈ ವಿಷಯ ಮಾತ ನಾಡಿದರು. ಅಷ್ಟರಲ್ಲೇ ದೀಪ ಆರಿತು. ಗಂಡ ಹೆಂಡಿರಿಬ್ಬರೂ ಹೊರಳಿ ಪರಸ್ಪರ ಮುಖಗಳನ್ನು ಸಮೀಪಕ್ಕೆ ತಂದರು

ಪಿಸುಮಾತಿನ ಸಂಭಾಷಣೆ ಮತ್ತೂ ನಡೆಯಿತು.

"ಎದುರು ಸಾಲ್ನಲ್ಲಿ ಎರಡ್ನೇ ಮನೇ ಇಲ್ವಾ–ಅಲ್ಲಿಯ ಹುಡುಗಿ ಅಹಲ್ಯಾ—"

"ಹೂಂ. ಏನು ?"

"ಎಷ್ಟು ಚೆನ್ನಾಗಿ ಹಾಡ್ತಾಳೇಂತ. ಇವತ್ತೊಂದು ಹೊಸ ಹಾಡು ಹಾಡಿದ್ಲು. ತುಂಬಾ ಸೊಗಸಾಗಿತ್ತು."

"ಯಾವುದು–ಅಂದು ತೋರ್ಸು."

"ಇನ್ನೂ ಬರ್ಕೊಂಡಿಲ್ಲಾಂದ್ರೆ."

"ಗೊತ್ತಮ್ಮಾ. ಮೊದಲ್ನೇ ಸಾಲು ಹೇಳು. ಸಾಕು. ಯಾವ ಹಾಡೂಂತ ನೋಡ್ತೀನಿ."

ಮಲಗಿದ್ದಲ್ಲಿಂದಲೇ ಪಿಸುಧ್ವನಿಯಲ್ಲೇ ಮೊದಲ ಸಾಲನ್ನು ಚಂಪಾ ಅಂದಳು :

"ಒಳಗೆ ಬಾ ಯಾತ್ರಿಕನೆ ಶಿಲೆಯಲ್ಲವೀ ಗುಡಿಯು
ಕಲೆಯ ಬಲೆಯು...."

ಶಂಕರನಾರಾಯಣಯ್ಯ ಮುಗುಳ್ನಕ್ಕ. ಚಂಪಾ ಕೇಳಿದಳು :

"ಹ್ಯಾಗಿದೆ ? ಚೆನ್ನಾಗಿಲ್ವಾ ?"

"ಚೆನ್ನಾಗಿದೆ. ನಾನು ಕೇಳೇ ಇಲ್ಲ ಈವರೆಗೂ."

"ನಾಳೆ ದಿವಸ ಪೂರ್ತಿ ಹಾಡ್ತೀನಿ."

"ಚಂಪಾ !"

ಎಷ್ಟೊಂದು ವೈವಿಧ್ಯಪೂರ್ಣವಾಗಿ ಆ ಹೆಸರನ್ನು ಆತ ಉಚ್ಚರಿಸು ತಿದ್ದ ! ಒಂದೊಂದು ಸ್ವರಕ್ಕೂ ಒಂದೊಂದು ಅರ್ಥ. ಈ ಸಲ ಕರೆದ ಧ್ವನಿಯ ಅರ್ಥವೇನೆಂಬುದು ಅವಳಿಗೆ ಗೊತ್ತಿತ್ತು. ಆಕೆ ಮಾತನಾಡ ಲಿಲ್ಲ. ರಾಗವೆಳೆದಳು :

"ಊ...."

"ನಾನು ಯಾತ್ರಿಕ. ನೀನು ಕಲೆಯ ಬಲೆ."

"ಊ...."

ಎಂದು ರಾಗವೆಳೆಯುತ್ತಲೇ ಚಂಪಾ ತನ್ನೊಂದು ತೋಳಿನಿಂದ ಆತನ ಕತ್ತನ್ನು ಬಳಸಿಕೊಂಡಳು.

....................

ಬಲಪಾರ್ಶ್ವದ ಮನೆಯಲ್ಲಿ ಪದ್ಮಾವತಿ ಚಡಪಡಿಸುತ್ತಿದ್ದಳು, ನಿದ್ದೆ ಬಾರದೆ. ಗಂಡ ನಾಗರಾಜರಾಯ ಗೊರಕೆ ಹೊಡೆಯುತ್ತಿದ್ದ. ಮಕ್ಕಳು ಎಂದೋ ಮಲಗಿದ್ದುವು. ಆ ಸಂಜೆ ಚಂಪಾವತಿಯ ಹಾಡುಗಳನ್ನು ಕೇಳಿದಾಗಿನಿಂದ ಆಕೆಯ ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು. ಮದುವೆಯ ಮೊದಲಿನ ಅನಂತರದ ದಿನಗಳೆಲ್ಲ ನೆನಪಿಗೆ ಬಂದುವು. ಸವಿಯಾದುದು ಎಷ್ಟೊಂದು ಅಲ್ಪವಾಗಿತ್ತು ಅದರಲ್ಲಿ! ಪದ್ಮಾವತಿ ಬುದ್ಧಿವಂತೆ. ನಾರಾಯಣಿ ಇದ್ದ ಮನೆಗೆ ಬಿಡಾರ ಬಂದವರು ಶ್ರೀಮಂತರಲ್ಲವೆಂಬುದನ್ನು ಆಕೆ ಸುಲಭವಾಗಿ ತಿಳಿದುಕೊಂಡಿದ್ದಳು. ಆದರೂ ಎಷ್ಟೊಂದು ಅನ್ಯೋನ್ಯವಾಗಿದ್ದರು ಇಬ್ಬರೂ.

ಅಂತಹ ಪ್ರೀತಿ ತನಗೆ ದೊರೆತಿರಲಿಲ್ಲ.

ಒಪ್ಪಿದ ಮೊದಲ ಗಂಡಿಗೇ ಹೆತ್ತ ತಾಯಿ ತಂದೆ ತನ್ನನ್ನು ಧಾರೆಯೆರೆದುಕೊಟ್ಟು ತಮ್ಮ ಪಾಲಿನ ಕರ್ತವ್ಯವನ್ನು ಪೂರೈಸಿದ್ದರು. ಗಂಡನ ಆಯ್ಕೆಯ ವಿಷಯದಲ್ಲಿ ಆಕೆ ಹೇಳುವುದೇನೂ ಇರಲಿಲ್ಲ. ಪಾಲಿಗೆ ಬಂದದ್ದನ್ನೆ ಪಂಚಾಮೃತವಾಗಿ ಆಕೆ ಸ್ವೀಕರಿಸಿದ್ದಳು.

ಪ್ರತಿಯೊಂದೂ ಯಾಂತ್ರಿಕವಾಗಿಯೆ ನಡೆಯುತ್ತಿತ್ತು, ಆ ಸಂಸಾರದಲ್ಲಿ. ಉಡುವುದು-ಉಣ್ಣುವುದು, ಪ್ರೀತಿಸುವುದು–ಮಕ್ಕಳನ್ನು ಹೆತ್ತು ಪೋಷಿಸುವುದು, ಪ್ರತಿಯೊಂದೂ. ಮಾತೂ ಅಷ್ಟೇ. ಆ ನಾಗರಾಜರಾಯ ಅತಿ ಮಿತಭಾಷಿ. ಒಮ್ಮೆ ಹೇಳಿದ ಮಾತುಗಳೇ, ಪ್ರತಿದಿನವೂ ಮತ್ತೆ ಮತ್ತೆ.

ಪಕ್ಕದ ಮನೆಯಲ್ಲಿ ಪಿಸುಮಾತು ನಡೆದೇ ಇತ್ತು. ಕಮಲಮ್ಮ ಪದ್ಮಾವತಿಗೆ ಹೇಳಿದ್ದರು:

"ಈ ಸರಸವೆಲ್ಲಾ ಮಾಡಿಕೊಂಡ ಹೊಸದರಲ್ಲಿ ಕಣ್ರೀ."

"ಅವರಿಗೆ ಮದುವೆ ಆಗಿ ಆಗ್ಲೇ ಐದು ವರ್ಷ ಆಯ್ತಂತೆ ಕಮಲಮ್ಮ."

"ತಾಳಿ ಸ್ವಲ್ಪ. ಬಗಲಿಗೊಂದು ಬೆನ್ನಿಗೊಂದು ಆ ಪಕ್ಕಕ್ಕೊಂದು ಈ ಪಕ್ಕಕ್ಕೊಂದು ಮಕ್ಕಳಾಗ್ಲಿ."

ಕಮಲಮ್ಮನ ನಾಲ್ಕು ಮಕ್ಕಳೂ ಕೈಬಿಟ್ಟು ಹೋಗಿದ್ದುವು. ಆ ಸಂಕಟದಿಂದ ಮನಸ್ಸು ಸದಾ ಕಹಿಯಾಗಿದ್ದರೂ ಮನುಷ್ಯ ಸ್ವಭಾವವನ್ನಾಕೆ ತಕ್ಕಮಟ್ಟಿಗೆ ಚೆನ್ನಾಗಿಯೇ ತಿಳಿದಿದ್ದಳು. ಸ್ವತಃ ಸುಖ ಕಂಡಿರದ ಜೀವ ಇನ್ನೊಬ್ಬರ ಸುಖವನ್ನು ನೋಡಿ ಕರುಬುತ್ತಿರಲಿಲ್ಲ ನಿಜ. ಆದರೆ ಅಂತಹ ಯಾವ ಸುಖವೂ ಸ್ಥಿರವಲ್ಲವೆಂಬುದು ಮಾತ್ರ ಆಕೆಯ ದೃಢ ನಂಬಿಕೆಯಾಗಿತ್ತು.

ಪಕ್ಕದ ಮನೆಯಲ್ಲಿ ಕತ್ತಲಲ್ಲಿ ದಂಪತಿಗಳು ಸಣ್ಣನೆ ನಕ್ಕ ಹಾಗೆ ಸದ್ದು. ನಿಜವೋ-ಭ್ರಮೆಯೊ. ಪಿಸುಮಾತು ಕೇಳಿಸುತ್ತಿರಲಿಲ್ಲ. ಮಾತು ನಿಂತಿತು ಎಂದ ಮೇಲೆ—

ಪದ್ಮಾವತಿ ಪಕ್ಕಕ್ಕೆ ಹೊರಳಿದಳು. ಮೂಗು ದಿಂಬನ್ನು ಸೋಂಕಿತು. ಎಣ್ಣೆಜಿಡ್ಡಿನ ವಾಸನೆ ದಿಂಬಿನಿಂದ ಹೊರಟು ಮೂಗನ್ನು ಹೊಕ್ಕಿತು. ಆಕೆ ನಿಟ್ಟುಸಿರು ಬಿಟ್ಟಳು. ದಯೆ ತೋರದೇ ಇದ್ದ ನಿದ್ದೆಯನ್ನು ಇದಿರು ನೋಡುತ್ತಾ ಆಕೆ ಕಣ್ಣೆವೆಗಳನ್ನು ಮುಚ್ಚಿಕೊಂಡು ಮಲಗಿದಳು.

........ಆ ಮನೆಯಾಚೆ ಕಮಲಮ್ಮನಿಗೆ ಅದೇ ಆಗ ನಿದ್ದೆ ಬಂದಿತ್ತು. ಹಿಟ್ಟು ರುಬ್ಬಿ ದಣಿದ ಜೀವಕ್ಕೆ ಸಾಮಾನ್ಯವಾಗಿ ನಿದ್ದೆ ಬರುವುದು ತಡವಾಗುತ್ತಿರಲಿಲ್ಲ. ಆದರೆ ಈ ದಿನ ಇತರ ದಿನಗಳಿಗಿಂತ ಪ್ರತ್ಯೇಕವಾಗಿತ್ತು. ಆವರೆಗೂ ಆ ವಠಾರದಲ್ಲಿ ದೇವರನಾಮ ಹಾಡಲು ಆಕೆಯನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಅಂತೂ ಮಕ್ಕಳಿಲ್ಲದ ಹೆಂಗಸೆಂದು ಯಾರೂ ಆಕೆಯನ್ನು ತಾತ್ಸಾರ ಮಾಡುತ್ತಿರಲಿಲ್ಲ.

ದೊಡ್ಡವರಾದ ಮಕ್ಕಳು ತನ್ನ ಮಾತು ಕೇಳಲಿಲ್ಲವೆಂದು ಅವರೊಡನೆ ಜಗಳಾಡಿ ಅತ್ತು ರಂಪಮಾಡಿದ್ದ ರಾಜಮ್ಮ ಒಮ್ಮೆ ಹೀಗೂ ಅಂದಿದ್ದಳು:

"ಹೆತ್ತು, ಸಾಕಿ, ಕೊನೆಗೆ ಆ ಮಕ್ಕಳ ಕೈಲೇ ಹಿಂಸೆ ಅನುಭೋಗಿ ಸೋದ್ಕಿಂತ ಮಕ್ಕಳಾಗ್ದೇ ಇದ್ರೇ ಮೇಲು ಕಮಲಮ್ಮ."

"ಎಂಥ ಮಾತು ಆಡ್ತೀರಮ್ಮ ನೀವು. ಉಂಟೆ ಎಲ್ಲಾದ್ರೂ-"

ಹಾಗೆ ಕಮಲಮ್ಮ ಆಗ ರಾಜಮ್ಮನಿಗೆ ಹೇಳಿದ್ದಳು. ರಾಜಮ್ಮ ನಿಗೆ 'ಅವರ' ನೆನಪಾಯಿತು.

"ನನಗೆ ಈ ಗತಿ ಮಾಡಿ ಹೊರಟ್ಹೋದ್ರು ಪುಣ್ಯಾತ್ಮ" ಎಂದು ಅವರು ಗೋಳಾಡಿದರು.

ಹೀಗೆ ಕಮಲಮ್ಮನೊಡನೆ ಮನಸ್ಸು ಬಿಚ್ಚಿ ಮಾತನಾಡದವರೇ ಇರಲಿಲ್ಲ. ಸ್ವತಃ ಕಮಲಮ್ಮ ಸಿರಿವಂತಿಕೆಯ ಸುಖವನ್ನು ಕಂಡಿರಲಿಲ್ಲ. ತಾಯ್ತನದ ಸುಖವೂ ಇರಲಿಲ್ಲ ಅವರ ಪಾಲಿಗೆ. ಆದರೂ ಅವಳು ಒಳ್ಳೆಯವಳಾಗಿಯೆ ಉಳಿದಿದ್ದಳು.

ಚಂಪಾವತಿಯ ಕಂಠಮಾಧುರ್ಯವನ್ನು ಕೇಳಿದಾಗ ಅಸೂಯೆಯೇ ಎನ್ನುವಂತಹ ಭಾವನೆ ಅವಳಲ್ಲಿ ಮೂಡಿತ್ತು. ಬದಲಾಗು ತಿದ್ದ ಮುಖಚರ್ಯೆಗಳನ್ನು ತಡೆ ಹಿಡಿಯುವುದು ಸಾಧ್ಯವಾಗಿರಲಿಲ್ಲ. ಚಂಪಾವತಿಯನ್ನು ಮೂದಲಿಸಿ ಮಾತನಾಡಬೇಕೆಂದೂ ಮನಸ್ಸಾಗಿತ್ತು.

ಆದರೆ ಮನೆಗೆ ಬಂದಮೇಲೆ, ಶಾಂತಚಿತ್ತಳಾಗಿ ಯೋಚಿಸಿದ ಮೇಲೆ, ಹೊಸಬಳ ಕಲಾ ಸಂಪತ್ತು ತನಗಿಂತ ಹಿರಿಯದೆಂಬುದು ಆಕೆಗೆ ಮನದಟ್ಟಾಯಿತು. ಆಗ, ಮಾಯವಾಗಿದ್ದ ಮನಸ್ಸಿನ ನೆಮ್ಮದಿ ಮರಳಿ ಬಂತು. ಹೀಗಾಗಿ, ನಿದ್ದೆ ಬರುವುದು ಎಂದಿಗಿಂತ ಸ್ವಲ್ಪ ತಡವಾದರೂ ಹೆಚ್ಚು ಹೊತ್ತೇನೂ ಹಿಡಿಯಲಿಲ್ಲ.

........ಕಮಲಮ್ಮನ ಮನೆಯಾಚೆಗಿನ ಕಾಮಾಕ್ಷಿ, ಗಂಡ ಬಂದೊಡನೆ ಚಂಪಾವತಿಯನ್ನು ಮುಕ್ತಕಂಠದಿಂದ ಹೊಗಳಿದಳು.

"ಎಂ.ಎಸ್. ಸುಬ್ಬಲಕ್ಷ್ಮೀನ ಮೀರಿಸ್ತಾರೆ ನೋಡಿ ಬೇಕಾದರೆ."

"ಸರಿ. ಮುಂದೆ ?"

"ಗಾನ ಸರಸ್ವತಿ ಒಲಿದಿದಾಳೇಂದ್ರೆ ಅವರಿಗೆ."

"ಸರಿ. ಇನ್ನೊಬ್ಬರನ್ನ ಹೊಗಳೋದರಲ್ಲೇ ಆಯಿತು ನಿನ್ನದೆಲ್ಲಾ. ನೀನೂ ಒಂದೆರಡು ಹಾಡು ಕಲಿ ನೋಡೋಣ."

ನಾರಾಯಣ ತಮಾಷೆಗೆ ಹೀಗೆ ಅಂದಿದ್ದರೂ ಕಾಮಾಕ್ಷಿಗೆ ದುಃಖ ಬಂತು. ಅದಕ್ಕೆ ಕಾರಣವಿಷ್ಟೆ. ಆಕೆಯ ಕಂಠ ಇಂಪಾಗಿರಲಿಲ್ಲ. ತವರು ಮನೆಯಲ್ಲಿ ಮದುವೆಗೆ ಮುಂಚೆ ಒಂದೆರಡು ಹಾಡನ್ನಾದರೂ ಕಲಿಯ ಬೇಕೆಂದು ಆಕೆ ಬಹಳ ಪ್ರಯತ್ನ ಪಟ್ಟಿದ್ದಳು. ಅದು ನಗೆಗೀಡಾದ ಪ್ರಯತ್ನ. ಆಗ ತಂದೆ ಹೇಳಿದ್ದರು :

"ಹೋಗಲಿ ಬಿಡೇ ಕಾಮೂ. ಹಾಡು ಬರದಿದ್ದರೆ ಅಷ್ಟೇ ಹೋಯ್ತು. ಯಾವನೇ ಆಗ್ಲಿ, ಇಷ್ಟ ಇದ್ರೆ ಕಟ್ಕೊಳ್ತಾನೆ, ಇಲ್ದಿದ್ರೆ ಮುಚ್ಕೊಂಡು ಹೊರಟೋಗ್ತಾನೆ."

ನಾರಾಯಣ ತನ್ನನ್ನು ನೋಡಲು ಬಂದಾಗ, ರೇಡಿಯೋ ಸದಾಕಾಲವೂ ಕಿರಿಚುತ್ತಲೇ ಇರುವಂತೆ ಕಾಮಾಕ್ಷಿಯ ತಂದೆ ಮಾಡಿದರು. 'ನಮ್ಮ ಹಸೂಗೆ ಹಾಡೋದಕ್ಕೂ ಬರತ್ತೆ' ಎಂದು ಗುಣ ವಿಶೇಷವನ್ನು ಬಣ್ಣಿಸುವ ಪ್ರಮೇಯ ಬಂದಿರಲಿಲ್ಲ. ನಾರಾಯಣನಿಗೆ ಕಾಮಾಕ್ಷಿಯ ಯೌವನ, ಸೌಂದರ್ಯ, ಒನಪು ವಯ್ಯಾರ ಬೇಕಾದುವು.

ಗಂಡನ ಮನೆಯಲ್ಲಿ ರೇಡಿಯೋ ಇರಲಿಲ್ಲ, ಹೇಳಿಕೊಳ್ಳುವ ಸೌಕರ್ಯಗಳಿರಲಿಲ್ಲ. ನಗರದಲ್ಲಿ ಆತ ಒಂಟಿಯಾಗಿದ್ದ. ಅತ್ತೆ ನಾದಿನಿ ಭಾವಮೈದುನಂದಿರ ಗೊಂದಲವಿಲ್ಲದೆ ಸದಾಕಾಲವೂ ಪತಿಯೊಡನೆ ಏಕಾಂತ ಕಾಮಾಕ್ಷಿಗೆ ದೊರೆಯಿತು. ಆಕೆಗೂ ನಾರಾಯಣನ ರೂಪು, ಯೌವನ, ಠೀವಿ ಠೇಂಕಾರ ಬೇಕಾಗಿದ್ದುವು.

ಆದರೂ ಹೀಗೆ ತನಗೆ ಹಾಡಲು ಬರದೆಂದು ಗಂಡ ಟೀಕಿಸಿದಾಗ ಕಾಮಾಕ್ಷಿಯ ಮನಸ್ಸಿಗೆ ನೋವಾಯಿತು. ಆಕೆ ತಟಕ್ಕನೆ ಮಾತು ನಿಲ್ಲಿಸಿ ಮೂಕಪ್ರಾಣಿಯಾಗಿ ಕುಳಿತಳು. ಮುಖ ಊದಿಕೊಂಡು, ಕಣ್ಣು ಗಳಲ್ಲಿ ಒರತೆಯೊಸರಿತು.

ನಾರಾಯಣ ತಡಮಾಡಲಿಲ್ಲ. ಕಾಮಾಕ್ಷಿಯನ್ನೆಳೆದುಕೊಂಡು ಅಡುಗೆ ಮನೆಗೆ ಹೋಗಿ ರಮಿಸಿದ.

"ತಪ್ಪಾಯ್ತು ಕಾಮೂ. ನಿನ್ನ ಹಾಡು ತಗೊಂಡು ನಾನೇನು ಮಾಡ್ಲೀ. ನಂಗೆ ನೀನು ಕಣೇ ಬೇಕಾಗಿರೋದು. ಅಯ್ಯೋ ರಾಮ...."

"ಮತ್ತೆ ಯಾಕೆ ಹಾಗಂದ್ರಿ ?"

"ನನ್ನ ಚಿನ್ನ, ಇನ್ನೊಬ್ಬಳ್ನ ಯಾತಕ್ಕೆ ಹೊಗಳ್ಬೇಕೂಂತ ಹಾಗಂದೆ."

"ಹೋಗಿ ನೀವು"

"ಹೋಗ್ಲೇನು ?"

ಕಾಮಾಕ್ಷಿ ನಾಲಿಗೆ ಹೊರ ಚಾಚಿ ಗಂಡನನ್ನು ಅಣಕಿಸಿದಳು. ಗಂಡ ಅಣಕಿಸುತಿದ್ದ ಬಾಯಿಗೆ ಬುದ್ಧಿ ಕಲಿಸಿದ. ರಾಜಿಯಾಯಿತು.

ಊಟ ಮುಗಿಸಿ ಸರಸ ಸಲ್ಲಾಪಗಳು ನಡೆದು ಅವರು ನಿದ್ದೆ ಹೋದರು.

........ಎದುರು ಸಾಲಿನ ಮನೆಗಳಲ್ಲಿ ಯಾರಿಗೂ ಎಚ್ಚರವಿರಲಿಲ್ಲ.

........ಮೂಲ ಕಟ್ಟಡದ ಮೇಲು ಮನೆಗಳಲ್ಲಿ ಓದುವ ಹುಡುಗರೂ ಜಯರಾಮು ಮನೆಯವರೂ ನಿದ್ದೆ ಹೋಗಿದ್ದರು. ಚಂದ್ರ ಶೇಖರಯ್ಯ ಮಾತ್ರ ಸೆಖೆ ತಡೆಯಲಾರದೆ, ಪಾಯಜಾಮ-ಬನೀನು ಗಳನ್ನಷ್ಟೇ ತೊಟ್ಟು, ಹೊರಗೆ ಮಹಡಿಯ ಮೆಟ್ಟಿಲ ಮೇಲೆ, ಒಂದಾದ ಮೇಲೊಂದು ಸಿಗರೇಟು ಸೇದುತ್ತ ಕುಳಿತಿದ್ದ. ಸರಪಳಿ ಸಿಗರೇಟು ಗಳನ್ನು ಸುಡುತ್ತಾ ಹಾಗೆ ಕುಳಿತಿದ್ದರೆ, ತಾನು ತುಂಬಾ ಯೋಚಿಸುತ್ತಿರ ಬೇಕೆಂದು ಆ ಚಂದ್ರಶೇಖರಯ್ಯ ತನಗೆ ತಾನೇ ಅಂದುಕೊಳ್ಳುತಿದ್ದ. ಯೋಚನೆಗಳಿಗೇನೂ ಕಡಿಮೆ ಇರಲಿಲ್ಲ........ಮುಂದಿನ ತಿಂಗಳಲ್ಲಿ ತನಗೆ ದೊರೆಯಬಹುದಾದ ಕಮೀಶನು, ತನ್ನೊಡನೆ ಸ್ಪರ್ಧಿಸುತಿದ್ದ ಬೇರೆ ಕಂಪನಿಯ ಪ್ರತಿನಿಧಿಗಳು, ತಾನು ದೂರದಿಂದಲೆ ಕಂಡು ನಿಷ್ಫಲ ವಾಗಿ ಬಯಸಿದ್ದ ಇಬ್ಬರು ಮೂವರು ಹುಡುಗಿಯರು....ಕೆಟ್ಟ ಬೇಸಿಗೆ, ಬೆವರು, ಗಾಳಿಯೇ ಇಲ್ಲ....ನಿದ್ದೆ ಬರುವುದು ಕಷ್ಟವಾಗಿತ್ತು, ಬಲು ಕಷ್ಟವಾಗಿತ್ತು.

ಕೆಳಗೆ ಉಪಾಧ್ಯಾಯರು ಹೆಂಡತಿ ಮಕ್ಕಳೊಡನೆ ಮಲಗಿದ್ದರು. ಅವರ ತಂಗಿ ಸುಮಂಗಳೆಗೆ ಮಾತ್ರ ನಿದ್ದೆ ಬಂದಿರಲಿಲ್ಲ. ಜಗಳಾದಿ ಗಂಡನ ಮನೆಯಿಂದ ಬಂದಿದ್ದ ಹುಡುಗಿ. ಭಿನ್ನಾಭಿಪ್ರಾಯಗಳ ಕಾವೆಲ್ಲ ದೀರ್ಘಕಾಲದ ವಿರಹದಿಂದ ತಣ್ಣಗಾಗಿತ್ತು. ಮತ್ತೊಮ್ಮೆ ಗಂಡನ ಸಾಮೀಪ್ಯವನ್ನು ಆಕೆ ಬಯಸುತಿದ್ದಳು. ಆ ಗಂಡ

ಅನಾಗರಿಕನಂತೆ ತುಂಬಾ ಒರಟಾಗಿ ವರ್ತಿಸುತಿದ್ದ ನಿಜ. ಆದರೆ ಆ ಒರಟುತನವೇ ಸುಖ ಎನ್ನುತಿತ್ತು ಆಕೆಯ ದೇಹ. ದೇಹದ ಜತೆಯಲ್ಲಿ ಮನಸ್ಸೂ ಸೋಲನ್ನೊಪ್ಪಿಕೊಂಡಿತ್ತು. ಗಂಡನ ಮನೆಯವರಂತೂ ಬಿಗಿಯಾಗಿದ್ದರು. ಅಂದಮೇಲೆ ತಾನೊಬ್ಬಳೇ ಹೋಗುವಂತಿರಲಿಲ್ಲ. ಅಣ್ಣ ಕರೆದುಕೊಂಡು ಹೋಗಬೇಕು; ಗಂಡನ ಮನೆಯನ್ನು ಹೊಕ್ಕು ಅಲ್ಲಿ ಸಂಧಾನ ನಡೆಸಬೇಕು. ಅದು ಬೇಸಗೆಯ ರಜದಲ್ಲಿ ಮಾತ್ರ ಸಾಧ್ಯ.

ಆ ರಜಾ ದಿನಗಳು ದೂರವಿರಲಿಲ್ಲ. ಆದರೆ ರಜೆಯ ಆರಂಭ ಸಮೀಪಿಸಿದಂತೆ ಹಗಲು ರಾತ್ರಿಗಳೆಲ್ಲ ಹೆಚ್ಚು ದೀರ್ಘವಾಗಿದ್ದಂತೆ ಸುಮಂಗಳೆಗೆ ತೋರಿದುವು.

ಪಕ್ಕದ ಮನೆಯಲ್ಲಿ ಇಬ್ಬರು ಹುಡುಗರೂ ಶುಭ್ರವಾಗಿ ಬೆಳಕು ಕೊಡುತಿದ್ದ ಕಂದೀಲು ಉರಿಸಿ, ಕೆಲವೇ ದಿನಗಳಲ್ಲಿ ಶುರುವಾಗಲಿದ್ದ ಪರೀಕ್ಷೆಗಾಗಿ ಸಿದ್ಧತೆ ನಡೆಸಿದ್ದರು.

ಆ ಮನೆಯ ಎದುರು ಕಡೆಯಲ್ಲಿ ರಾಜಮ್ಮ ಮಕ್ಕಳೊಡನೆ ನಿದ್ದೆ ಹೋಗಿದ್ದಳು.

ಅವರ ಬಲಭಾಗದಲ್ಲೆ ಮೊದಲ ಮನೆ ಶಿವಸ್ವಾಮಿಯದು. ಆತನ ಹೆಂಡತಿ, ಮಕ್ಕಳಿಗೆ ಉಣಬಡಿಸಿ ಮಲಗಿಸಿದಳು. ತಾನು ಮುಟ್ಟಲಿಲ್ಲ. ಹಾಗೆಯೇ ಚಾಪೆಯ ಮೇಲೆ ಛಾವಣಿ ನೋಡುತ್ತ ಮಲಗಿಕೊಂಡಳು.

ಏಟುತಿಂದ ಮೈ ಕೈ ನೋವಿನಿಂದ ಮಗ್ಗಲು ಹೊರಳುವುದೂ ಕಷ್ಟಸಾಧ್ಯವಾಗಿತ್ತು. ಕಣ್ಣುಗಳು ಉರಿಯುತಿದ್ದುವು. ಉಸಿರು ಬಿಸಿಯಾಗಿತ್ತು.

"ಹೀಗಾಯಿತಲ್ಲಾ ನನ್ನ ಗತಿ"

ಎಂದು ಮನಸಿನಲ್ಲೆ ಆಕೆ ಗೋಳಾಡುತ್ತಾ ಹೊತ್ತು ಕಳೆದಳು.

೧೨

ಪರೀಕ್ಷೆ ಮುಗಿದು ಮಹಡಿಯ ಮೇಲಿನ ಹುಡುಗರು ಕೊಠಡಿ ತೆರವು ಮಾಡಿ ಊರಿಗೆ ಹೋದರು. ಕೆಳಗಿನ ಮನೆಯ ತಾಯಿ ಮುಂದೆಯೂ ಮನೆ ತನಗೇ ಬೇಕೆಂದು ಹೇಳಿ, ಬೀಗ ತಗಲಿಸಿ, ಮಕ್ಕಳೊಡನೆ ಊರಿಗೆ ತೆರಳಿದಳು.

ರಂಗಮ್ಮ, 'ಮನೆ ಬಾಡಿಗೆಗೆ ಇದೆ' ಬೋರ್ಡನ್ನು ಹೊರಕ್ಕೆ ತೆಗೆದರು. ಸೊಗಸಾದೊಂದು ಬೋರ್ಡು ಬರೆದುಕೊಡುವೆನೆಂದು ಶಂಕರನಾರಾಯಣಯ್ಯ ಹಿಂದೆ ಹೇಳಿದ್ದನ್ನು ಅವರು ಮರೆತಿರಲಿಲ್ಲ. ಅವಕಾಶ ಒದಗಿದಾಗ ಆ ವಿಷಯ ಪ್ರಸ್ತಾಪಿಸಿದರಾಯಿತೆಂದು ಅವರು ಆವರೆಗೂ ಸುಮ್ಮನಿದ್ದರು.

ಶಂಕರನಾರಾಯಣಯ್ಯನಿನ್ನೂ ಮನೆಯಲ್ಲೇ ಇದ್ದ. ಬೆಳಗಿನ ಹೊತ್ತು. ರಂಗಮ್ಮ ರಟ್ಟಿಯ ಬೋರ್ಡಿನೊಡನೆ ಅಲ್ಲಿಗೆ ಬಂದರು.

"ಏನಪ್ಪಾ, ಇದ್ದೀರಾ ?"

"ಬನ್ನಿ ರಂಗಮ್ನೋರೆ."

ರಂಗಮ್ಮನವರ ಕೈಲಿದ್ದುದನ್ನು ನೋಡಿ ಅವರು ಬಂದುದರ ಉದ್ದೇಶ ಶಂಕರನಾರಾಯಣಯ್ಯನಿಗೆ ಅರ್ಥವಾಯಿತು.

"ಆ ದಿವಸ ಅದೇನೊ ಬರ್ಕೊಡ್ತೀನೀಂತ ಹೇಳಿದ್ರಿ."

"ಹೌದಲ್ಲ, ಮರ್ತೇ ಹೋಗಿತ್ತು. ಇಲ್ಕೊಡಿ. ಬರಕೊಡ್ತೀನಿ."

"ಮನೆ ಖಾಲಿಯಾಗ್ಬಿಟ್ಟಿದೆ. ಸದ್ಯಃ ಇದನ್ನೇ ತೂಗ ಹಾಕ್ತೀನಿ. ಬೇಗ್ನೆ ಬೇರೆ ಬರ್ಕೊಟ್ಬಿಡಿ."

"ಖಾಲಿಯಾಯ್ತೇನು–ಯಾವುದು ?"

"ಅದೇ ಮೇಲ್ಗಡೇದು. ಹುಡುಗರು ಓದ್ತಾ ಇರ್ಲಿಲ್ವೆ ?"

"ಓ ಅದಾ ?"

"ಯಾವಾಗ ಬರೀತೀರಪ್ಪಾ?"

"ನಾಳೇನೇ."

ರಂಗವ್ವ ಹೊರಹೋಗಿ, ಸದ್ಯಕ್ಕೆ ಅದೇ ಇರಲೆಂದು, ಹಳೆಯ ಬೋರ್ಡನ್ನೇ ತೂಗಹಾಕಿದರು. ಬೋರ್ಡು ನೋಡಿದೊಡನೆಯೇ ಯಾರಾದರೂ ಈ ಸಲ ಬರಬಹುದೆಂದು ರಂಗವ್ವ ನಂಬಿರಲಿಲ್ಲ. ಯಾಕೆಂದರೆ ಬಾಡಿಗೆಗಿದ್ದುದು ಅನುಕೂಲತೆಯಿದ್ದ ಮನೆಯಲ್ಲ, ಬರಿಯ ಕೊಠಡಿ ಮನೆ. ಮುಂದೆ ಶಾಲೆಗಳು ಆರಂಭವಾಗಿ ಬೇರೆ ಹುಡುಗರು ಬರುವವರೆಗೂ ಅದು ಹಾಗೆಯೇ ತೆರವಾಗಿ ಉಳಿದರೂ ಉಳಿಯಿತೇ. ಆ ಕೊಠಡಿಯ ಬಾಡಿಗೆ ಕಡಿಮೆಯೆಂದರೆ, ಎರಡು ತಿಂಗಳ ಮಟ್ಟಿಗಾದರೂ ತನಗೆ ನಷ್ಟವಾಗುವುದೆಂದು ಅವರು ತಿಳಿದಿದ್ದರು.

"ರಜಾ ತಗೊಂಡು ಇಲ್ಲೇ ಇದ್ಬಿಟ್ಟು ಬೋರ್ಡು ಬರಕೊಡೀಂದ್ರೆ"

ಚಂಪಾ, ಗಂಡನಿಗೆ ಹೇಳಿದಳು.

"ಹೂಂ. ಹೌದು. ಬೇರೇನೂ ಕೆಲಸ ಇಲ್ಲ ನಂಗೆ"

ಎಂದು ಆತ ನಟನೆಯ ಸಿಡುಕನ್ನು ತೋರಿದ.

ಆದರೆ ಆ ಸಂಜೆ ಮನೆಗೆ ಬಂದಾಗ, ಕರಿಯ ಬಣ್ಣ ಬಳಿದಿದ್ದ ಒಂದು ಡಬ್ಬದ ತುಂಡನ್ನೂ, ನುಣುಪಾಗಿದ್ದೊಂದು ಪುಟ್ಟ ಹಲಿಗೆಯನ್ನೂ ಮನೆಗೆ ತಂದ.

"ಚಿಕ್ಕದು ಯಾರಿಗೆ ?"

ಎಂದು ಚಂಪಾವತಿ ಕೇಳಿದಳು.

"ಆ ಚಂದ್ರಶೇಖರಯ್ಯನಿಗೆ ಹೆಸರು ಬರ್ಕೊಡ್ತೀನೀಂತ ಹೇಳಿದ್ದೆ."

"ಅದೂ ಬಿಟ್ಟೇನೊ?"

"ಇದು ಲಂಚ. ವಿಮೆಯ ವಿಷಯ ನನ್ನ ಹತ್ತಿರ ಯಾವತ್ತೂ ಪ್ರಸ್ತಾಪ ಮಾಡೋದಿಲ್ಲಾಂತ ಆತ ಮಾತು ಕೊಟ್ಟಿದ್ದಕ್ಕೆ!"

"ಸರಿ! ಸರಿ!"

ಮರುದಿನ ಬೆಳಿಗ್ಗೆ ಬ್ರಷು ಎಣ್ಣೆ-ಬಣ್ಣಗಳು ಉಪಯೋಗಕ್ಕೆ ಸಿದ್ಧವಾದುವು

ಶಂಕರನಾರಾಯಣಯ್ಯ ಕರಿಯ ಡಬ್ಬದ ಮೇಲೆ ಬರೆದ:

"ಮನೆ ಬಾಡಿಗೆಗೆ ಇದೆ."

ರಂಗಮ್ಮ ಬಂದು ನೋಡಿಕೊಂಡು ಹೋದರು.

"ಇನ್ನೂ ಒಣಗ್ಬೇಕು. ನಾಳೆ ತಗೊಂಡು ಹೋಗಿ"

–ಎಂದು 'ಪೇಂಟರ್' ಶಂಕರನಾರಾಯಣಯ್ಯ ಹೇಳಿದ.

ಆತ ಅಷ್ಟು ಬರೆದಿಟ್ಟುದನ್ನು ಆ ದಿನವೆಲ್ಲ ವಠಾರದ ಅವರಿವರು ಬಂದು ನೋಡುತ್ತಲೇ ಇದ್ದರು.

ಮರುದಿನ 'ಮನೆ ಬಾಡಿಗೆಗೆ ಇದೆ' ಎಂಬುದರ ಕೆಳಗೆ 'ಒಳಗಡೆ ಬಂದು ವಿಚಾರಿಸಿ' ಎಂದು ಸಣ್ಣ ಅಕ್ಷರದಲ್ಲಿ ಶಂಕರನಾರಾಯಣಯ್ಯ ಬರೆದ.

"ರಂಗಮ್ಮನವರನ್ನು ವಿಚಾರಿಸೀಂತ ಬರೀಬಾರದಾಗಿತ್ತೆ?"

ಚಂಪಾವತಿ ಗಂಡನನ್ನು ಲೇವಡಿ ಮಾಡಲೆತ್ನಿಸುತ್ತಾ ಹೇಳಿದಳು.

ಆ ಸಂಜೆ ಶಂಕರನಾರಾಯಣಯ್ಯ ಮನೆಗೆ ಬಂದ ಮೇಲೆ ಹೊಸ ಬೋರ್ಡು ವಠಾರದ ಹೊರಗಿನ ಗೋಡೆಯನ್ನು ಅಲಂಕರಿಸಿತು. ಬೆನ್ನ ಹಿಂದೆ ಇಲ್ಲವೆ ಎದೆಗೆ ಅಡ್ಡವಾಗಿ ಕೈ ಕಟ್ಟಿ ನಿಂತಿದ್ದ ವಠಾರದ ಹುಡುಗರ ಎದುರಲ್ಲಿ ಸ್ವತಃ ಶಂಕರನಾರಾಯಣಯ್ಯನೇ ಬೋರ್ಡನ್ನು ಅನಾವರಣ ಮಾಡಿದ.

"ಹಲಿಗೆಯಾದರೆ ಮಳೇಲಿ ನೆನೆದು ಹೋಗುತ್ತೆ. ಇದು ಡಬ್ಬ. ಮಿಸುಕೋದಿಲ್ಲ"

–ಎಂದು ಶಂಕರನಾರಾಯಣಯ್ಯ ವಿವರಿಸಿದ.

ರಂಗಮ್ಮನ ಸಂತೋಷಕ್ಕೆ ಪಾರವಿರಲಿಲ್ಲ. ಬಾಲ್ಯದಲ್ಲಿ ಅವರ ಮನೆಯಲ್ಲಿ ಒಮ್ಮೆ ಹಸು ಈದಾಗ ಆದಷ್ಟೆ ಸಂತೋಷ ಈಗ ಅವರಿಗಾಯಿತು.

ಹುಡುಗರೆಲ್ಲ ಚೆದರಿದ ಮೇಲೆ ಜಯರಾಮು ಕೆಳಗೆ ಬಂದವನು ಬೋರ್ಡನ್ನು ನೋಡಿದ. ಅಕ್ಷರಗಳು ಮುದ್ದಾಗಿದ್ದುವು.

ಮರುದಿನ ಚಂದ್ರಶೇಖರಯ್ಯನ ಹೆಸರು ಹಲಿಗೆ ಸಿದ್ಧವಾಯಿತು. ಇಂಗ್ಲಿಷಿನಲ್ಲಿ 'ಚಂದರ್ ಶೇಖರ್' ಎಂದು ಶಂಕರನಾರಾಯಣಯ್ಯ

ಬರೆದಿದ್ದ. ಅದೂ ಚಂದ್ರಶೇಖರಯ್ಯನವರ ಕಿಟಕಿಯ ಪಕ್ಕದಲ್ಲಿ ವಿರಾಜಮಾನವಾಯಿತು.

ಸಂಜೆ ತಡವಾಗಿ ಮನೆಗೆ ಬಂದ ಜಯರಾಮು ಹೊಸ ಬೋರ್ಡನ್ನು ನೋಡಿದ. ಆ ಅಕ್ಷರಗಳೂ ಸೊಗಸಾಗಿದ್ದುವು.

ತಾನು ಪೇಂಟರ್ ಶಂಕರನಾರಾಯಣಯ್ಯನನ್ನು ಮಾತನಾಡಿಸಲೇಬೇಕೆಂದು ಜಯರಾಮು ತೀರ್ಮಾನಿಸಿಕೊಂಡ.

ಅದಕ್ಕೆ ಮತ್ತೊಂದು ದಿನ ಕಳೆಯಬೇಕಾಯಿತು. ಆ ಸಂಜೆ ಜಯರಾಮು ಗೇಟಿನ ಬಳಿಯಲ್ಲಿ ನಿಂತು ಆತ ಬರುವುದನ್ನು ಇದಿರು ನೋಡಿದ. ಸಮೀಪ ಬರುತ್ತಲೆ ಜಯರಾಮು ಕೈಮುಗಿದ.

"ನಮಸ್ಕಾರ."

"ನಮಸ್ಕಾರ"

ತಾನು ಮಾತನಾಡಿಸಿದ್ದನ್ನು ಕಂಡು ಶಂಕರನಾರಾಯಣಯ್ಯನಿಗೆ ಆಶ್ಚರ್ಯವಾಗಬಹುದು ಎಂದುಕೊಂಡಿದ್ದ ಜಯರಾಮು. ಆದರೆ ಆತ, ಹಳೆಯ ಸ್ನೇಹಿತರಿಗೆ ಮರುವಂದನೆ ಮಾಡುವ ಹಾಗೆ ಮುಗುಳ್ನಕ್ಕ.

"ಹೊಸ ಪರಿಚಯ"

ಎಂದ ಜಯರಾಮು ಸ್ವಲ್ಪ ಸಂಕೋಚದಿಂದಲೇ.

"ನೀವು ಜಯರಾಮು ಅಲ್ವೆ?"

"ಯಾರು ಹೇಳಿದ್ರು?"

"ಇಷ್ಟು ದಿವಸದಿಂದ ನೋಡ್ತಾ ಇದೀನಿ. ನನಗೆ ಅಷ್ಟೂ ಗೊತ್ತಾಗಲ್ವೇನ್ರಿ?.... ನೀವು ಕತೆ ಗಿತೆ ಬರೀತೀರಂತೆ."

"ಓ! ಇಲ್ಲಪ್ಪ!"

"ಸುಳ್ಳು!"

ಶಂಕರನಾರಾಯಣಯ್ಯನಿಗೆ ಇಷ್ಟೆಲ್ಲ ಹೇಗೆ ತಿಳಿಯಿತೆಂದು ಜಯರಾಮುಗೆ ಆಶ್ಚರ್ಯವಾಯಿತು. ತನ್ನ ತಂಗಿ ಹೇಳಿರಬಹುದೆಂಬ ಸಂದೇಹ ಬಂತು. ಆದರೆ ಆ ಸಂದೇಹ ಸರಿ ಎಂದು ಭಾವಿಸಲು ಮನಸ್ಸು ಒಪ್ಪಲಿಲ್ಲ.

ವಾಸ್ತವವಾಗಿ ಇಷ್ಟೆಲ್ಲವನ್ನೂ ರಾಧೆ ಚಂಪಾವತಿಗೆ ಹೇಳಿದ್ದಳು;

ಚಂಪಾವತಿ ಗಂಡನಿಗೆ ಪರಿಚಯಿಸೊಪ್ಪಿಸಿದ್ದಳು.

ನೇರವಾಗಿ ಮನೆಗೆ ಹೋಗುವ ಆತುರದಲ್ಲಿದ್ದರೂ, ಶಂಕರ ನಾರಾಯಣಯ್ಯ ಒಂದು ಕ್ಷಣ ತಡೆದು ನಿಂತ.

"ಏನು, ಇಲ್ಲಿ ನಿಂತ್ಬಿಟ್ಟಿದೀರಾ ?"

ಎಂದು ಆತ, ಜಯರಾಮುವನ್ನು ಕೇಳಿದ. ಯಾಕೆ ನಿಂತುದು ಎಂದು ಊಹಿಸುವಷ್ಟು ದಕ್ಷ ಮನಃಶಾಸ್ತ್ರಜ್ಞ ಶಂಕರನಾರಾಯಣಯ್ಯ ನಾಗಿರಲಿಲ್ಲ. ಯಾಕೆಂಬುದನ್ನು ಜಯರಾಮುವೂ ಹೇಳುವಂತಿರಲಿಲ್ಲ.

"ಹೀಗೇ ನಿಂತೆ."

ಜಯರಾಮುವಿನ ದೃಷ್ಟಿ ಬೋರ್ಡುಗಳತ್ತ ಸರಿಯಿತು. ಶಂಕರ ನಾರಾಯಣಯ್ಯನೂ ಅತ್ತ ನೋಡಿದ.

"ತುಂಬಾ ಚೆನ್ನಾಗಿವೆ. ನೀವು ಚೆನ್ನಾಗಿ ಬರೀತೀರಾ?"

"ಈ ಬೋರ್ಡುಗಳೆ ? ಅಯ್ಯೊ!"

ತನ್ನ ಕೃತಿಯ ಬಗೆಗೇ ಆತನಿಗಿದ್ದ ತಾತ್ಸಾರ ಜಯರಾಮು ವನ್ನು ಚಕಿತಗೊಳಿಸಿತು.

"ನೀವು ಬರೆದಿರೋ ಬೇರೆ ಚಿತ್ರಗಳನ್ನ ನಾನು ನೋಡಿಲ್ಲ."

"ಚಿತ್ರಗಳು ? ನಾನು ಕಲಾವಿದ ಅಂತ ತಿಳಕೊಂಡ್ರೇನು ? ಹಾಗೇನಾದ್ರೂ ನಾನು ಅಂದ್ಕೊಂಡ್ರೆ ನಿಜವಾದ ಕಲಾವಿದರು ತಮಗೆ ಮಾನಹಾನಿಯಾಯ್ತೂಂತ ನನ್ನಮೇಲೆ ಮೊಕದ್ದಮೆ ಹೂಡಬಹುದು."

ಆ ಸ್ವರದಲ್ಲಿ ವ್ಯಂಗ್ಯವಿತ್ತು, ನೋವಿತ್ತು. ಆ ನಗೆ ಮಾತಿನ ತೆರೆಯ ಹಿಂದೆ ಸಂತೋಷವನ್ನು ಜಯರಾಮು ಕಾಣಲಿಲ್ಲ. ತನ್ನೆದುರು ನಿಂತಿದ್ದ ವ್ಯಕ್ತಿಯ ರಹಸ್ಯವನ್ನು ಭೇದಿಸಬಯಸುವವನಂತೆ ಜಯ ರಾಮು ಆತನನ್ನೆ ನೆಟ್ಟದೃಷ್ಟಿಯಿಂದ ನೋಡಿದ.

"ನಾನು ತೈಲಚಿತ್ರ ಬರೆಯೋಲ್ಲ ಜಯರಾಮು. ಚಿತ್ರ ಬರೆದು ಬದುಕೋಕೆ ಆಗೋದಿಲ್ಲ. ನಾನು ಬರೆಯೋದು ಸಿನಿಮಾ ಪೋಸ್ಟರು. 'ಶನಿ ಮಹಾತ್ಮ್ಯೆ'ಯ ದೊಡ್ಡ ಬೋರ್ಡು ನೋಡಿದೀರೋ ಇಲ್ವೊ? ಆನಂದರಾವ್ ಸರ್ಕಲಿನಲ್ಲೂ, ಮೆಜೆಸ್ಟಿಕಿನಲ್ಲೂ ಕಟ್ಟಿ ನಿಲ್ಲಿಸಿದಾರೆ. ಆ ದೇವರ ಚಿತ್ರ ಬರೆದೋನು ನಾನೇ. ಇನ್ನೊಂದನ್ನೂ ನೀವು ನೋಡಿರ

ಬೇಕು. 'ಜಣಕ್ ಜಣಕಾ'ಂತ-ವೈಕ್ಕೆ ಬಿಟ್ಕೊಂಡು ಕುಣಿಯೋದು. ಅದನ್ನ ಬರೆದೋನೂ ನಾನೇ."

ಏನನ್ನೋ ಮಾತನಾಡಬೇಕೆಂದು ಜಯರಾಮು ಯತ್ನಿಸಿದ. ಆದರೆ ನಾಲಿಗೆ ಗಂಟಲು ಆರಿಹೋಗಿದ್ದುವು.

ತನ್ನೊಳಗೆ ಇನ್ನೂ ಹಸುರಾಗಿಯೇ ಇದ್ದ ಗಾಯವೊಂದನ್ನು ಕೆದಕಿದಂತಾಗಿ ಶಂಕರನಾರಾಯಣಯ್ಯ ಅಷ್ಟು ಮಾತನಾಡಿದ್ದ. ಅದಕ್ಕೆ ಎಂತಹ ಪ್ರತ್ಯುತ್ತರ ಬಂದೀತೆಂಬ ಯೋಚನೆ ಅವನಿಗಿರಲಿಲ್ಲ. ಪ್ರತ್ಯುತ್ತರವನ್ನಾತ ಅಪೇಕ್ಷಿಸಲೂ ಇಲ್ಲ.

"ಬರ್‍ತೀನಿ" ಎಂದಷ್ಟೇ ಹೇಳಿ ಆತ, ಹೆಬ್ಬಾಗಿಲನ್ನು ದಾಟಿ ನಡು ಹಾದಿಯಲ್ಲಿ ನಿಂಗಿ, ಓಣಿಯೊಳಕ್ಕೆ ಕಾಲಿಟ್ಟ.

ಪಾದಗಳು ಬೇರುಬಿಟ್ಟು ನೆಲದೊಳಕ್ಕೆ ಇಳಿದುವೇನೊ ಎಂಬಂತೆ ಶಿಲಾಪ್ರತಿಮೆಯಾಗಿ ಸ್ವಲ್ಪ ಹೊತ್ತು ಜಯರಾಮು ನಿಂತ.

ಶಂಕರನಾರಾಯಣಯ್ಯನೊಡನೆ ತನ್ನ ಅಣ್ಣ ಮಾತನಾಡುತಿದ್ದು ದನ್ನು ಮೇಲಿನಿಂದಲೆ ಕಂಡಿದ್ದ ರಾಧಾ ಕರೆದಳು :

"ಅಣ್ಣ, ಬಾರೋ.......ಬಾ ಅಣ್ಣ."

ಅವರಿಬ್ಬರು ಅದೇನೇನು ಮಾತನಾಡಿದರೆಂದು ತಿಳಿಯುವ ಕುತೂಹಲದಿಂದ ರಾಧೆಗೆ ನಿಂತಲ್ಲಿ ನಿಲ್ಲಲಾಗುತ್ತಿರಲಿಲ್ಲ.

........................

ಇನ್ನೇನು ಬರುವ ಹೊತ್ತು, ಬಾಗಿಲು ಮುಚ್ಚಬೇಕು, ಎಂದು ಚಂಪಾ ಯೋಚಿಸುತ್ತಿದ್ದಾಗಲೇ ಶಂಕರನಾರಾಯಣಯ್ಯ ಒಳಗೆ ಬಂದು ಬಿಟ್ಟ. ಪುಟ್ಟ ಮಗು ಮಾತ್ರ ತಂದೆಗೆ ಸ್ವಾಗತ ಬಯಸಿತು. ಅದನ್ನು ಎತ್ತಿಕೊಂಡು ಆತ ಅಡುಗೆ ಮನೆಯೊಳಕ್ಕೆ ನುಗ್ಗಿದ.

ಒಮ್ಮೆ ಬೀರಿದ ನೋಟದಿಂದಲೇ ಚಂಪಾವತಿ ತಿಳಿದುಕೊಂಡಳು. ಗಂಡ ಎಂದಿನಂತಿರಲಿಲ್ಲ. ಆತನ ಮನಸ್ಸು ಉದ್ವಿಗ್ನವಾಗಿತ್ತೆಂಬುದನ್ನು ಮುಖದ ಬಣ್ಣ ತೋರಿಸುತಿತ್ತು.

ಊದುಕೊಳವೆಯನ್ನೆತ್ತಿಕೊಂಡು ಸೌದೆ ತುಂಡುಗಳೆಡೆಗೆ ಚಂಪಾ 'ಫೂ....ಫೂ....' ಎಂದಳು. ನಡುವೆ ಮುಖತಿರುಗಿಸಿ ಗಂಡನನ್ನು

ನೋಡಿ ಕೇಳಿದಳು :

"ಏನಾಯ್ತು ?"

"ಏನಿಲ್ಲ. ನಾನು ಬರೆದಿರೊ ಕಲಾಕೃತಿಗಳ ವಿಷಯ ಆ ಹುಡುಗ ಜಯರಾಮು ಕೇಳ್ದ !"

"ಯಾರು ರಾಧೆ ಅಣ್ಣನೇ ?"

"ಹೂಂ. ಮಹಡೀ ಮೇಲಿರೋನು."

"ಸರಿ. ನೀವೇನಂದಿರಿ ?"

"ಶನಿಮಹಾತ್ಮ್ಯ ದೇವರ ಚಿತ್ರ ನಾನು ಬರೆದಿದ್ದು ಅಂದೆ!"

ಚಂಪಾ ಮಾತನಾಡಲಿಲ್ಲ. ತಾನು ದೊಡ್ಡ ಕಲಾವಿದನಾಗಬೇಕೆಂದು ಶಂಕರನಾರಾಯಣಯ್ಯ ಹಿಂದೆ ಕನಸು ಕಂಡುದಿತ್ತು. ಆದರೆ ಕಲಾವಿದನಾಗಿ ಈ ಪ್ರಪಂಚದಲ್ಲಿ ಬಾಳ್ವೆ ನಡೆಸುವುದು ಕಷ್ಟಸಾಧ್ಯವೆಂಬುದು ಆತನಿಗೆ ಮನವರಿಕೆಯಾಗಲು ಹೆಚ್ಚು ಕಾಲ ಹಿಡಿಯಲಿಲ್ಲ. ಕಹಿ ಮನಸ್ಸಿನಿಂದ ಸಿಕ್ಕವರನ್ನೆಲ್ಲ ನಿಂದಿಸುತ್ತ ಕುಳಿತುಕೊಳ್ಳದೆ ಶಂಕರನಾರಾಯಣಯ್ಯ ವಾಸ್ತವವಾದಿಯಾಗಿ ಸಿನಿಮಾ ಪೋಸ್ಟರುಗಳ ಚಿತ್ರಕಾರನಾದ. ಅವನ ಜತೆಯಲ್ಲಿ ಬೇರೆ ಇಬ್ಬರು ದುಡಿಯುತಿದ್ದರು. ಅವರೆಲ್ಲ ಏನು ಚಿತ್ರ ಬರೆದರೂ ಕೆಳಗೆ ಹಾಕುತಿದ್ದ ಸಹಿ ಒಂದೇ—ರೂಪ್ ಆರ್ಟ್ಸ್. ಆ ಸಂಸ್ಥೆಯ ಒಡೆಯ ಚಿತ್ರಕಾರನಾಗಿರಲಿಲ್ಲ. ಆದರೆ ಆತ ಸಮರ್ಥನಾದ ಕೊಳ್ಳುವ- ಮಾರುವ, ಮಾರಾಟವನ್ನೇರ್ಪಡಿಸುವ ಯುವಕನಾಗಿದ್ದ. ಅವನ ಸ್ವಂತದ್ದೇ ಆದ ಜಾಹಿರಾತು ಸಂಸ್ಥೆಯೊಂದಿತ್ತು. ಮೂರು ವರ್ಷಗಳ ಉದ್ಯಮದ ಬಳಿಕ ನಾಲ್ಕು ಕಾಸು ಸುಲಭವಾಗಿ ಆತನ ಕೈಯಲ್ಲಿ ಓಡುವಂತಾಗಿತ್ತು. ಆ ಸಂಸ್ಥೆಯ ಚಲಿಸುವ ಒಂದು ಯಂತ್ರ ಶಂಕರನಾರಾಯಣಯ್ಯ. ಆ ಕೆಲಸ ನೀರಸವಾಗಿ ಎಷ್ಟೋವೇಳೆ ಆತನಿಗೆ ತೋರಿದರೂ, ಆ ಆವರಣದೊಳಗೇ ಒಂದಿಷ್ಟು ರಸಿಕತೆಯನ್ನು ತುಂಬಲೆತ್ನಿಸುತ್ತಾ, ಕಲೆಯನ್ನು ಹೊಟ್ಟೆಹೊರೆಯುವ ಸಾಧನವಾಗಿ ಬಳಸಿ ಆತ ಕಾಲ ಕಳೆಯುತಿದ್ದ.

ಹೀಗಿದ್ದರೂ ಆಗೊಮ್ಮೆ ಈಗೊಮ್ಮೆ ಕೈಗೂಡದ ಬಯಕೆಗಳು

ಕಣ್ಣು ತೆರೆದು ಆತನನ್ನು ಮಾತನಾಡಿಸುತಿದ್ದುವು.

ಆಗ ಹೇಗೆ ವರ್ತಿಸಬೇಕೆಂಬುದು ಚಂಪಾವತಿಗೆ ಗೊತ್ತಿತ್ತು.

ಅಂತಹದೇ ಸನ್ನಿವೇಶವಾದ ಈ ಸಂಜೆ....

ಚಂಪಾ ಮೆಲುಧ್ವನಿಯಲ್ಲಿ ಕೇಳಿದಳು :

"ಸೌತೆಕಾಯಿ ಇದೆ. ಏನು ಮಾಡ್ಲಿ ?"

"ಏನಾದರೂ ಮಾಡೇ."

"ಕೋಸಂಬರಿ ಮಾಡ್ಲೇನು ?"

"ಹೂಂ."

ಒಲೆಯ ಎದುರು ಮಗುವನ್ನೆತ್ತಿಕೊಂಡು ಗೋಡೆಗೊರಗಿ ಕುಳಿತಿದ್ದ ಗಂಡನತ್ತ ಸರಿದಳು ಚಂಪಾ.

"ಎಷ್ಟೊಂದು ಮುದ್ದಿಸೋದು ಮಗೂನ. ಇಲ್ಕೊಡಿ !"

ಮಗುವನ್ನೆತ್ತಿಕೊಂಡು ಆಕೆ ಬದಿಗೆ ಸರಿಸಿದಳು. ಬಾಹುಗಳಿಂದ ಗಂಡನ ಕೊರಳನ್ನು ಬಳಸಿ ಮುಖಕ್ಕೆ ಮುತ್ತು ಕೊಟ್ಟಳು—ಮತ್ತೊಂದು.

"ನನ್ನ ದೇವರಿಗೆ ನೋವಾಯ್ತಲ್ಲ ಅದಕ್ಕೆ."

ತನ್ನ ತೋಳಿನಿಂದ ಆಕೆಯನ್ನು ಶಂಕರನಾರಾಯಣಯ್ಯ ಆಧರಿಸಿದ. ಉಳಿದುದೆಲ್ಲವೂ ಆತನಿಗೆ ಮರೆತು ಹೋದುವು.

"ಅಯ್ಯೋ ! ಅದೇನೊ ಸದ್ದಾಯ್ತು. ಯಾರು ಬಂದರೊ ?"

—ಎಂದು ಚಂಪಾ ಗಡಬಡಿಸಿ ಎದ್ದು ಹೊರಬಂದಳು. ಒಳಗೆ ಕಾಲಿರಿಸಿದ್ದ ಅಹಲ್ಯಾ ಸರಕ್ಕನೆ ಹಿಂತಿರುಗಿ ಹೋಗುತಿದ್ದುದು ಕಂಡಿತು.

ಕರೆದು ನಿಲ್ಲಿಸಬೇಕೆಂದು ಆಕೆಯ ಹೆಸರು ನಾಲಿಗೆಯ ತುದಿಗೆ ಬಂದರೂ ಚಂಪಾ ತನ್ನನ್ನು ತಾನೆ ತಡೆದಳು.

ಒಳಕ್ಕೆ ಹಿಂತಿರುಗಿದ ಹೆಂಡತಿಯನ್ನು ಶಂಕರನಾರಾಯಣಯ್ಯ ಕೇಳಿದ :

"ಯಾರು ಚಂಪಾ ?"

"ಅಹಲ್ಯಾ ಕಣ್ರೀ. ನೋಡಿದಳೋ ಏನೋ ?"

"ಏನನ್ನ?"

"ನಾಚಿಕೆ ಇಲ್ಲ ನಿಮಗೆ...."

"ನಿನಗಿದೆ, ಅಲ್ಲ?"

"ಹೋಗ್ರಿ."

"ನೋಡಲಿ ಬಿಡು. ಕಲಿತ್ಕೋತಾಳೆ. ಹಾಡು ಹ್ಯಾಗೂ ಹೇಳಿ ಕೊಡ್ತಿದೀಯಾ. ಇದನ್ನೂ—"

"ಸಾಕು, ಥೂ !"

ಒಲೆಯ ಉರಿ ಮತ್ತೊಮ್ಮೆ ಆರಿಹೋಗಿತ್ತು. ಚಂಪಾ ಊದು ಕೊಳವೆಯನ್ನೆತ್ತಿಕೊಂಡಳು. ಶಂಕರನಾರಾಯಣಯ್ಯ ಸೌತೆಕಾಯಿ ಹೆಚ್ಚತೊಡಗಿದ.

................

ಹೊರಗೆ ಹೆಸರು-ಹಲಿಗೆ ಗೋಡೆಗೆ ತಗಲಿ ತೂಗುತಿತ್ತು.

"ಚಂದರ್ ಶೇಖರ್."

ಚಂದ್ರಶೇಖರಯ್ಯನೆಂದುಕೊಂಡ :

"ಒಳ್ಳೇ ತಮಾಷೆಯ ವ್ಯಕ್ತಿ ಈ ಶಂಕರನಾರಾಯಣಯ್ಯ. ಹೆಸರು ಹಲಿಗೆ ಬರ್ಕೊಡೀಂತ ತಮಾಷೆಗೆ ಅಂದಿದ್ರೆ ಬರದೇಬಿಟ್ಟಿದ್ದಾನೆ!"

ತಮಾಷೆಯಾಗಿತ್ತು. ರಂಗಮ್ಮನ ವಠಾರದಲ್ಲೊಂದು ಕೊಠಡಿ ಮನೆಗೆ ಹೆಸರು-ಹಲಿಗೆ; ಹರಿದ ಸೀರೆ ಹಳೆಯ ಚಪ್ಪಲಿಗಳ ಕರಿಯ ಹೆಂಗಸು ಕೈಯಲ್ಲಿ ವ್ಯಾನಿಟಿ ಬ್ಯಾಗ್ ಹಿಡಿದಹಾಗಿತ್ತು.

ಆ ಮನೆಯನ್ನು ಬಿಟ್ಟುಬಿಡಬೇಕೆಂದು ಎಷ್ಟೋ ಸಾರೆ ಆತ ಯೋಚಿಸಿದ್ದ. ಆದರೆ ಬೇರೆ ಒಳ್ಳೆಯ ಕೊಠಡಿಯನ್ನು ಹುಡುಕಲು ಆತನಿಗೆ ಬಿಡುವೇ ದೊರೆತಿರಲಿಲ್ಲ. ಬಿಡುವಿದ್ದಾಗ ಆಯಾಸವೆನಿಸುತಿತ್ತು. ಆಯಾಸವಿಲ್ಲದೆ ಇದ್ದಾಗ, 'ಹಾಳು ಬೇಸರ, ಯಾವುದಾದರೂ ಸಿನಿಮಾ ನೋಡೋಣ' ಎನಿಸುತಿತ್ತು.

ಅಗತ್ಯದ ಕೆಲಸವಿದ್ದರೆ ಉತ್ಸಾಹದಿಂದ ಒಂದೇ ಸಮನೆ ಆತ ದುಡಿಯುತಿದ್ದ. ಪ್ರವಾಸ ಹೋಗುತಿದ್ದ. ದಣಿವೆಂಬುದೇ ಅವನಿಗೆ ಅರಿವಾಗುತ್ತಿರಲಿಲ್ಲ. ಅದು ಮುಗಿದು ಒಮ್ಮೆ ಕಾಲು ಚಾಚಿದನೆಂದರೆ, ಚಂದ್ರಶೇಖರಯ್ಯ ಮಹಾ ಸೋಮಾರಿ. ಊಟ ಮಾಡುವುದಕ್ಕೂ ಕೂಡಾ ಹೋಟೆಲಿಗೆ ಹೊತ್ತಿಗೆ ಸರಿಯಾಗಿ ಹೋಗುತ್ತಿರಲಿಲ್ಲ. ತಡ

ವಾಗಿ ಹೋಗಿ ಊಟವಿಲ್ಲವೆಂದು ಪಕ್ಕದ ಹೋಟೆಲಿನಲ್ಲಿ ತಿಂಡಿ ತಿಂದು ಕಾಫಿ ಕುಡಿಯುತ್ತಿದ್ದ. ನೈರ್ಮಲ್ಯ ಆತನಿಗೆ ಇಷ್ಟವಾದರೂ ಅದನ್ನು ಕಾಪಾಡಲು ಆತ ಪ್ರಯತ್ನಿಸುತ್ತಿರಲಿಲ್ಲ. ಎಂದಾದರೊಮ್ಮೆ ಕೊಠಡಿಯನ್ನು ಅಚ್ಚುಕಟ್ಟಾಗಿಡಲು ಆತ ಯತ್ನಿಸುವುದಿತ್ತು. ಆದರೆ ಒಂದೆರಡು ದಿನಗಳಲ್ಲೇ ಎಲ್ಲವೂ ಮೊದಲಿನಂತೆಯೇ ಮಾರ್ಪಡುತ್ತಿದ್ದುವು.

ಮದುವೆಯಾಗಿದೆಯೆಂದು ಸುಳ್ಳು ಹೇಳಿ ಕೊಠಡಿಮನೆ ದೊರಕಿಸಿಕೊಂಡ ಬಳಿಕ, ನಿಜಸಂಗತಿ ರಂಗಮ್ಮನಿಗೆ ಗೊತ್ತಾಗಿತ್ತು. ರಂಗಮ್ಮ ರೇಗುತ್ತಿದ್ದಾಗಲೂ ತನುಮಾಷೆಯಾಗಿಯೇ ಇರಲು ಆತ ಯತ್ನಿಸುತ್ತಿದ್ದ.

ವಠಾರದಲ್ಲಿ ಉಂಟಾದ ಪ್ರಕ್ಷುಬ್ಧ ಪರಿಸ್ಥಿತಿ ಶಾಂತವಾಗಿ ಎಷ್ಟೋ ದಿನಗಳಾದಮೇಲೆ, ಪಕ್ಕದಮನೆಯಾತ ಒಳ್ಳೆಯವನು ಎಂದು ಜಯರಾಮುವಿನ ತಾಯಿ ಪ್ರಮಾಣಪತ್ರ ಕೊಟ್ಟಮೇಲೆ, ರಂಗಮ್ಮ ಒಂದು ದಿನ ಹೇಳಿದ್ದರು :

"ಚಂದ್ರಶೇಖರಯ್ಯ ನೀವು ಇಷ್ಟೆಲ್ಲಾ ಓದಿದೋರು, ಬುದ್ಧಿವಂತ. ಕೈತುಂಬಾ ಸಂಪಾದನೆ ಇದೆ. ಹೀಗಿದ್ದೂ ಈ ತರ ಇದೀರಲ್ಲಾ...."

ವಿಷಯವೇನೆಂದು ಊಹಿಸಿ, ಅವನ ಮುಖ ನಸುಗೆಂಪಾಯಿತು.

"ಯಾವ ಥರ ಇದೀನಿ ರಂಗಮ್ನೋರೆ ?"

"ಎಷ್ಟು ದಿನಾಂತ ಈ ಕೆಟ್ಟ ಹೋಟ್ಲೂಟ ಮಾಡ್ತೀರಪ್ಪಾ ?"

ಹೋಟೆಲು ಊಟ ಚೆನ್ನಾಗಿರುತ್ತದೆಂದು ಹೇಳಿದ ಒಬ್ಬ ಮನುಷ್ಯ ಪ್ರಾಣಿಯನ್ನು ಚಂದ್ರಶೇಖರಯ್ಯ ಆವರೆಗೂ ನೋಡಿರಲಿಲ್ಲ.

"ಏನಾಗಿದೆ ರಂಗಮ್ನೋರೆ ?"

"ನಿಮ್ಮ ಅವಸ್ಥೇನೋ, ನೀವೋ........ದೇವರಿಗೇ ಪ್ರೀತಿ."

ಚಂದ್ರಶೇಖರಯ್ಯ ನಕ್ಕು ಕೇಳಿದ್ದ.

"ನಾನು ಏನ್ಮಾಡಿದ್ರೆ ನಿಮಗಿಷ್ಟವಾಗುತ್ತೆ ಹೇಳಿ ?"

"ಬಾಯಿಬಿಟ್ಟು ಹೇಳ್ಬೇಕೇನಪ್ಪಾ ಅದನ್ನೂ ? ಇನ್ನೂ ಹೀಗೇ ಇರ್ಬೇಡಿ. ನೀವೇನು ಚಿಕ್ಕ ಹುಡುಗ್ನೆ ಈಗ? ಬೇಗ್ನೆ ಒಳ್ಳೆ ಹೆಣ್ಣು ನೋಡಿ ಮದುವೆ ಮಾಡಿಕೊಳ್ಳಿ. ನಿಮ್ಮ ತಂದೆ ತಾಯಿ ಇನ್ನೂ ಅದು ಹ್ಯಾಗೆ ಸಹಿಸಿಕೊಂಡಿದಾರೊ ?"

ಅವರು ಸಹಿಸಿಕೊಂಡಿರಲಿಲ್ಲ. ಹಿರಿಯಮಗನಾದ ಚಂದ್ರಶೇಖರಯ್ಯ ಮನೆಗೆ ಬಂದಾಗಲೆಲ್ಲಾ ಅವನನ್ನು ಗೋಳುಹೊಯ್ದುಕೊಳ್ಳುತಿದ್ದರು. ಆಳುಕಾಳು ಇಟ್ಟುಕೊಂಡು ಮನೆತನದ ಅಲ್ಪ ಆಸ್ತಿಯ ಉಸ್ತುವಾರಿ ಮಾಡುತಿದ್ದ ಆತನ ತಮ್ಮನಿಗೂ ಅಣ್ಣನನ್ನು ಕಂಡರಾಗುತ್ತಿರಲಿಲ್ಲ. ಆ ತಮ್ಮನಿಗೆ ಆಗಲೆ ಮದುವೆಯಾಗಲು ಮನಸ್ಸಿತ್ತು. ಹಿರಿಯರು ಸೋದರರಿಬ್ಬರಿಗೂ ಹುಡುಗಿಯರನ್ನು ನೋಡಿ ಇಟ್ಟಿದ್ದರು. ಆದರೆ ಅಣ್ಣ ಅವಿವಾಹಿತನಾಗಿ ಇರುವಷ್ಟು ಕಾಲ ತಮ್ಮ ಸುಮ್ಮನಿರಬೇಕಾಗಿತ್ತು. ಚಂದ್ರಶೇಖರಯ್ಯನೇನೋ ಹೇಳಿದ್ದ :

“ಅವನಿಗೆ ಮದುವೆ ಮಾಡಿಸ್ಬಿಡಿ. ಕಾಗದ ಬರೀರಿ. ಬಂದು ಹೋಗ್ತೀನಿ.”

“ನಿನಗೆ?”

“ನನಗೆ ಈಗ್ಬೇಡ....”

....ಕಿರ್‌ಕಿರೆನ್ನುತ್ತಿದ್ದ ಕಬ್ಬಿಣದ ಮಂಚದ ಮೇಲೆ ಅತ್ತಿತ್ತ ಹೊರಳುತ್ತಾ ಚಂದ್ರಶೇಖರಯ್ಯ ಕಿಟಕಿಯ ಮೂಲಕ ಹೊರಗೆ ನೋಡಿದ. ಒಂದು ಚೂರು ಆಕಾಶ ಕಾಣಿಸುತಿತ್ತು. ಅಲ್ಲಿ ಹಲವು ನಕ್ಷತ್ರಗಳು ಮಿನುಗುತಿದ್ದುವು.

‘ಈಗ ಬೇಡ’ – ಎಂದು ಧೈರ್ಯವಾಗಿ ಹೇಳಿ ಬಂದಿದ್ದ ನಿಜ. ಹಿಂದೆಯೇನೊ, ಮದುವೆಯಾಗುವುದರಲ್ಲಿ ಅರ್ಥವಿಲ್ಲ ಎಂದು ಆತ ಖಡಾಖಂಡಿತವಾಗಿ ವಾದಿಸುತಿದ್ದ. ಈಗ ವಾದಿಸುತ್ತಿರಲಿಲ್ಲ. ಮದುವೆ ಅನಿವಾರ್ಯವೆಂದು ಬಾಯಿತೆರೆದು ಹೇಳುತ್ತಿರಲಿಲ್ಲವಾದರೂ ಹಾಗೆಂದು ಆತನಿಗೆ ಆಗಲೇ ಮನವರಿಕೆಯಾಗಿತ್ತು.

ಆ ಯೋಚನೆ ಬಂದಾಗಲೆಲ್ಲ ರಾಧಾ ಈಗ ಆತನ ಕಣ್ಣಿಗೆ ಕಟ್ಟುತಿದ್ದಳು. ತಾನು ಬಂದ ಹೊಸತಿನಲ್ಲಿ, ಇದೊಂದು ಬರಿಯ ಹುಡುಗಿ ಎಂದು ಆತ ಸುಮ್ಮನಿದ್ದ. ಆದರೆ ಈ ಎರಡು ವರ್ಷಗಳಲ್ಲಿ ಆಕೆ ಎಷ್ಟೊಂದು ಬೆಳೆದುಬಿಟ್ಟಿದ್ದಳು!

ಒಂಟಿ ಇಟ್ಟಿಗೆಯ ಗೋಡೆಯಾಚೆ ನಿದ್ದೆಹೋಗಿತ್ತು ಆ ಸಂಸಾರ ....ಜಯರಾಮು....ರಾಧಾ.

## ೧೩

ಬೇಸಗೆಯ ಬೇಗೆಗೆ ಊರು ಬೇಯುತಿದ್ದಾಗಲೆ ಒಮ್ಮೆಲೆ ಒಂದು ಸಂಜೆ ಮಳೆ ಹನಿಯಿತು.

"ಮಳೆ ಬಂತು ! ಮಳೆ ಬಂತು !"

ಎಂದು ವಠಾರದ ಹುಡುಗರೆಲ್ಲ ಕುಣಿದರು. ರಂಗಮ್ಮನೂ ಹೆಬ್ಬಾಗಿಲ ಬಳಿ ನಿಂತು ಒದ್ದೆಯಾಗುತಿದ್ದ ಅಂಗಳವನ್ನು ನೋಡಿದರು. ಮಳೆ ಬರತೊಡಗಿದಾಗ ಅವರ ಮುಖ ಎಂದೂ ಗೆಲುವಾಗುತ್ತಿರಲಿಲ್ಲ.

ಆ ದಿನ ಹನಿ ಮಳೆ ಅಷ್ಟಕ್ಕೆ ನಿಂತಿತು.

ರಂಗಮ್ಮ ಸಮಾಧಾನದ ನಿಟ್ಟುಸಿರುಬಿಟ್ಟು ಒಳಕ್ಕೆ ಬಂದರು.

ಕರಿಯ ಮೋಡಗಳು ಕರಗಿಹೋಗಿ, ಅರಳೆರಾಶಿ ತೋರಿ ಬಂದು ಶುಭ್ರ ಆಕಾಶ ಕಾಣಿಸಿಕೊಂಡು, ಹೊಂಬಿಸಿಲು ಭೂಮಿಯಮೇಲೆ ಬಿತ್ತು.

"ಹೋ ಹೋ ಹೋ ಹೋ !" ಎಂದು ಹುಡುಗರು ಗದ್ದಲ ಮಾಡುತ್ತ ಅಂಗಳ ಬಿಟ್ಟು ಬೀದಿಗಿಳಿದರು.

ರಂಗಮ್ಮನಿಗೆ ಗೊತ್ತಿತ್ತು, ಇದು ಆರಂಭ ಮಾತ್ರ. ಕಷ್ಟದದಿನಗಳು ಮುಂದಿದ್ದುವು. ಪ್ರತಿ ವರ್ಷವೂ ಆ ದುಸ್ಥಿತಿಯ ಪುನರಾವರ್ತನೆ ಆಗುತ್ತಲೇ ಇದ್ದು ರಂಗಮ್ಮನಿಗೇನೋ ಬಹಳಮಟ್ಟಿಗೆ ಅದು ರೂಢಿಯಾಗಿತ್ತು. ಆದರೂ ಮಳೆಗಾಲದಲ್ಲಿ ರಂಗಮ್ಮನ ವಠಾರ ಕಳೆಗೆಟ್ಟು ಹೋಗುತಿದ್ದುದನ್ನು ಅವರು ಕಾಣುತ್ತ ಬಂದಿದ್ದರು. ದೇವರ ಮುಂದೆ ಕುಳಿತಾಗ, 'ಮಳೆಗಾಲ ಸುಲಭವಾಗಿ ಕಳೆದುಹೋಗಲಪ್ಪಾ ಪರಮಾತ್ಮಾ' ಎಂದು ಹೆಚ್ಚಿನ ಪ್ರಾರ್ಥನೆಯನ್ನು ಸೇರಿಸುತಿದ್ದರು.

ಮತ್ತೆ ನಾಲ್ಕು ದಿನ ಹನಿ ಬೀಳಲಿಲ್ಲ.

ಐದನೆಯ ದಿನ ಮಳೆ ಗುಡುಗು ಮಿಂಚುಗಳ ಆರ್ಭಟದೊಡನೆ ಬಂತು ಬೆಂಗಳೂರಿನ ತುಂತುರು ಹನಿಯಾಗಿ ಬರದೆ ಮಲೆನಾಡಿನ ಘನಘೋರ ಮಳೆಯಾಗಿ ಸುರಿಯಿತು. ರಂಗಮ್ಮ ಸಪ್ಪೆಮೋರೆ ಮಾಡಿಕೊಂಡು ತಮ್ಮ ಬಿಲದೊಳಗೆ ಸೋರದೇ ಇದ್ದ ಜಾಗದಲ್ಲಿ ಬೆಚ್ಚಗೆ ಕುಳಿತರು.

ರಂಗಮ್ಮನ ವಠಾರದಲ್ಲಿ ಹೆಚ್ಚಿನ ಮನೆಗಳೆಲ್ಲಾ ಸೋರುತಿದ್ದುವು. ಮಳೆ ಸುರಿಯುತಿದ್ದಾಗಲೆಲ್ಲಾ 'ಥೂ! ಹಾಳು ಮನೆ.... ಬೇಗನೆ ಬೇರೆಲ್ಲಿಗಾದರೂ ಹೋಗ್ಬೇಕು' ಎಂದು ಉದ್ಗಾರ ತೆಗೆಯುದವರೇ ಇರುತ್ತಿರಲಿಲ್ಲ.

ಈ ಸಲವೂ ಅಷ್ಟೆ. ಹಾವಳಿ ಮಾಡುತ್ತ ಸುರಿದುದು, ಪ್ರತಿ ವರ್ಷಕ್ಕಿಂತ ವಿಭಿನ್ನವಲ್ಲದ ಮಳೆ.

ಜಯರಾಮು, ರಾಧಾ, ಅವರ ತಾಯಿ ಸೋರುತಿದ್ದ ನಾಲ್ಕಾರು ಕಡೆಗೆಲ್ಲ ಪಾತ್ರಗಳನ್ನಿಟ್ಟರು. ಪಕ್ಕದ ಕೊಠಡಿ-ಮನೆಯ ಚಂದ್ರ ಶೇಖರಯ್ಯ ಹೊರ ಹೋಗಿದ್ದ.

"ಪಕ್ಕದ್ಮನೆಯೊಳಗೆ ಮಳೆ ನೀರು ಬಿದ್ದು ಎಲ್ಲಾ ಒದ್ದೆಯಾಗಿ ಹೋಗುತ್ತೆ ಅಲ್ವೆ ಅಣ್ಣ?"

ಆ ಪ್ರಶ್ನೆಯೊಡನೇ ರಾಧಾ ಜಯರಾಮುವಿನ ಮುಖ ನೋಡಿದಳು. ಆದರೆ ಆತನ ಪ್ರಶ್ನಾರ್ಥಕ ದೃಷ್ಟಿಯನ್ನು ಇದಿರಿಸಲಾರದೆ ನೀರು ಸುರಿಯುತಿದ್ದ ಭಾವಣಿಯತ್ತ ನೋಡಿದಳು.

ತಾಯಿ ರಾಧೆಯ ಮಾತಿಗೆ ಅರ್ಥ ಕಲ್ಪಿಸುವ ಗೊಡವೆಗೇ ಹೋಗದೆ ಹೇಳಿದಳು:

"ಅದೇನೇನು ಹರವಿಟ್ಟು ಹೋಗಿದಾನೋ ಮಹಾರಾಯಾ...."

ಮಹಡಿಯ ಕೆಳಗಿನ ನಾಲ್ಕು ಮನೆಗಳಷ್ಟೇ ಮಳೆಯನ್ನು ಸ್ವಲ್ಪ ಹೊತ್ತಾದರೂ ತಡೆ ಹಿಡಿದು ಇದಿರಿಸುತಿದ್ದುವು.

ಶಿವಸ್ವಾಮಿ 'ಡ್ಯೂಟಿ'ಯ ಮೇಲೆ ಹೋಗಿದ್ದ. ಉಪಾಧ್ಯಾಯರು ತಂಗಿ ಸುಮಂಗಳೆಯನ್ನು ಕರೆದುಕೊಂಡು ಭಾವನ ಊರಿಗೆ ತೆರಳಿದ್ದರು. ಆ ಎರಡೂ ಮನೆಗಳ ಒಡತಿಯರು, ಗಾಳಿ ಬೀಸಿದಾಗ

ಒಳ ಬರುತಿದ್ದ ಮಳೆಯನ್ನು ತಡೆಯಲೆಂದು ಕಿಟಕಿಗಳನ್ನು ಮುಚ್ಚಿದರು. ಹಾಗೆ ಮುಚ್ಚಿದ ಮೇಲೂ ಕಿಟಕಿಯ ಎಡೆಗಳಿಂದ ಇಳಿದು ಒಳಕ್ಕೆ ಹರಿಯುತಿದ್ದ ನೀರನ್ನು ಅವರು ಬಟ್ಟೆಯನ್ನದ್ದಿ ಪಾತ್ರೆಗೆ ಹಿಂಡಿದರು.

ಅವಾಂತರವಾಗುತಿದ್ದುದು ಓಣಿ ಮನೆಗಳಲ್ಲಿ. ನೀರು ಓಣಿಯಿಂದ ಸರಿಯಾಗಿ ಹೊರಗೆ ಹರಿಯದೆ ಮನೆಗಳೊಳಕ್ಕೆ ಬರುತಿತ್ತು. ಹೆಂಚಿನ ಬಿರುಕುಗಳಿಂದೆಲ್ಲ ನೀರು ಸುರಿಯುತಿತ್ತು. ಎದುರಿನ ಎರಡು ಮನೆಗಳಿಗಾದರೆ, ಗಾಳಿ ಬೀಸುತ್ತ ಮಳೆ ಬಂದಾಗ ಮಾತ್ರ ತೊಂದರೆ ಇರುತಿತ್ತು. ಓಣಿ ಮನೆಗಳಲ್ಲಿ, ಗಾಳಿ–ಮಳೆ ಜತೆಯಾಗಿಯೇ ಬಂದರೆ ಅಷ್ಟೊಂದು ಅಪಾಯವಿರಲಿಲ್ಲ. ಹೆಚ್ಚಿನ ನೀರು ಛಾವಣಿಯ ಹೊರಕ್ಕೆ ಹರಿಯುತಿತ್ತು. ಮಳೆಯಷ್ಟೆ ಬಲವಾಗಿ ಸುರಿದಾಗ ಮಾತ್ರ ಆ ಮನೆಗಳು ಕೆರೆಗಳಾಗುತಿದ್ದುವು. ಗೋಡೆ ತೊಯ್ದು ಎಲ್ಲಿ ಉರುಳುವುದೋ ಎಂದು ಭಯವಾಗುತಿತ್ತು. ಒಲೆ ಒದ್ದೆಯಾಗುತಿತ್ತು.

ಎಷ್ಟೋ ವರ್ಷಗಳಿಂದ ಅನುಭವವಿದ್ದವರು ಈ ಸಲವೂ ಗೊಣಗುತ್ತಾ ಸೋರುವ ನೀರನ್ನು ಹಿಡಿಯಲು ಎಂದಿನಂತೆ ಯತ್ನಿಸಿದರು. ಈ ವರ್ಷದ ಮಳೆಗೆ ಹೊಸತಾಗಿ ಸೋರಿದ ಜಾಗಗಳನ್ನು ಗುರುತಿಸಿದರು.

ಪರಿಸ್ಥಿತಿ ಹೀಗಿದ್ದರೂ ವಠಾರದ ಹೆಳಬರೆಲ್ಲ ಬಕೀಟುಗಳನ್ನೊ, ಬಾಯಿ ಅಗಲವಿದ್ದ ಪಾತ್ರೆಗಳನ್ನೋ ತಂದು ಛಾವಣಿಯಿಂದ ಕೆಳಕ್ಕೆ ಹರಿಯುವ ನೀರು ಬೀಳುತಿದ್ದ ಕಡೆ ಇಟ್ಟರು. ಹಾಗೆ ಹಿಡಿದ ನೀರಿಗೆ ಅವರು ದುಡ್ಡು ಕೊಡಬೇಕಾದ ಅಗತ್ಯವಿರಲಿಲ್ಲ!

ಚಂಪಾ ವಠಾರದಲ್ಲಿ ಅನುಭವಿಸಿದ ಮೊದಲ ಮಳೆ ಇದು. ಸೋರುವ ಮನೆಯನ್ನೇನೋ ಹಿಂದೆಯೂ ಆಕೆ ಕಂಡಿದ್ದಳು. ಆದರೆ ರಂಗಮ್ಮನ ವಠಾರದ ಮನೆಗಳು ಹಿಂದಿನ ದಾಖಲೆಗಳನ್ನೆಲ್ಲ ಮೀರಿಸುವ ಹಾಗಿದ್ದುವು.

ಮಗು ಅಳತೊಡಗಿತು. ಮೇಜಿನ ಮೇಲೆ ಸೋರುತ್ತಿರಲಿಲ್ಲ. ಚಂಪಾ ಹಾಸಿಗೆ, ಬಟ್ಟೆ ಬರೆಗಳನ್ನು ಅದರ ಮೇಲಿರಿಸಿದಳು. ಇದ್ದ

ಪಾತ್ರೆಗಳನ್ನೆಲ್ಲ ಸೋರುತಿದ್ದ ಜಾಗಗಳಿಗೆ ಸಮನಾಗಿ ಹಂಚಿದಳು. ಮುಬ್ಬು ಗಂಟಿಕ್ಕಿ ಮಗುವನ್ನೆತ್ತಿಕೊಂಡಳು.

"ಅಳಬೇಡ. ಅಳಬೇಡ್ವೆ........"

—ಎಂದು ಸಂತೈಸುವ ಮಾತನ್ನಾಡಿದಳು.

ಈ ಸೌಭಾಗ್ಯ ತನಗೊಬ್ಬಳಿಗೇ ಮೀಸಲಾಗಿರಲಾರದು ಎಂದು ಸಮಾಧಾನ ಪಟ್ಟುಕೊಂಡಳು. ಬಾಗಿಲಬಳಿ ಬಂದಾಗ, ಸ್ವಲ್ಪ ಬಾಗಿ ನೋಡಿದಾಗ, ಮಳೆಯ ನೀರು ಹಿಡಿಯಲೆಂದು ಓಣಿ ಮನೆಗಳವರು ಬಕೀಟು, ಪಾತ್ರೆಗಳನ್ನಿಟ್ಟುದನ್ನು ಕಂಡಳು. ಚಂಪಾವತಿಗೆ ನಗು ಬಂತು ಆಕೆಯೂ ಒಂದು ಬಕೀಟು ತಂದು, ತನ್ನ ಮನೆಯ ಛಾವಣಿಯಿಂದ ಧಾರೆಕಟ್ಟಿ ಸುರಿಯುತಿದ್ದ ನೀರನ್ನು ಹಿಡಿದಳು. ಮಳೆಯ ಧಾರೆಯ ಆಚೆ ಎದುರು ಮನೆ ಬಾಗಿಲಲ್ಲಿ ಮೀನಾಕ್ಷಿ ನಿಂತಿದ್ದಳು. ಹೊಸ ಬಿಡಾರದವರ ಅನುಭವವನ್ನು ಕಂಡು ಆಕೆಗೆ ನಗು ಬಂತು. ಚಂಪಾವತಿ ಸಿಟ್ಟಾಗದೆ ತಾನೂ ನಕ್ಕಳು.

ಸಂಜೆಯ ಹೊತ್ತಿಗೆ ಮಳೆ ನಿಂತಿತು. ಗಂಡಸರು ಮನೆಗೆ ಬಂದ ಹೆಂಗಸರ ಗೊಣಗಾಟಕ್ಕೆ ಕಿವಿಕೊಟ್ಟರು.

ಆ ರಾತ್ರೆ ರಂಗಮ್ಮ ಹೊರಗೆ ಬರಲೇ ಇಲ್ಲ. ಊಟವಾಯ್ತೆ? ಅಡುಗೆ ಏನು, ಎಂದು ಯಾರನ್ನೂ ಅವರು ವಿಚಾರಿಸಲೇ ಇಲ್ಲ

ದೀಪ ತಾನಾಗಿಯೇ ಆರಿಹೋಯಿತು. ನಡುರಾತ್ರೆಯಲ್ಲಿ ಎಲ್ಲಾದರೂ ಬಂದು ಬಿಡಬಹುದೆಂದು ರಂಗಮ್ಮ ವಿದ್ಯುತ್ ಹಿಡಿಯನ್ನು ಮೇಲಕ್ಕೆ ತಳ್ಳಿಬಿಟ್ಟರು.

ತಣ್ಣಗಿದ್ದ ನೆಲದ ಮೇಲೆ ಹೆಂಗಸರು, ಗಂಡಸರು ಮಕ್ಕಳಿಗಾಗಿಯೂ ತಮಗಾಗಿಯೂ ಚಾಪೆ ಹಾಸಿಗೆಗಳನ್ನು ಹಾಸಿದರು.

"ಸುಡುಗಾಡು ಮನೆ!"

—ಎಂದ ಶಂಕರನಾರಾಯಣಯ್ಯ.

"ಹಾಗನ್ಬೇಡಿ. ರಾತ್ರೆ ಹೊತ್ತು ಕೆಟ್ಟ ಮಾತು........"

—ತನ್ನ ಅಸಹಾಯತೆಗಾಗಿ ನೊಂದಿದ್ದ ಗಂಡನನ್ನು ಸಂತೈಸಲೆಂದು ಚಂಪಾ ಮೃದುವಾಗಿ ಮಾತನಾಡಿದಳು.

"ಈ ವಠಾರದಲ್ಲಿ ಜಾಸ್ತಿ ದಿನ ಇರೋಕಾಗಲ್ಲ ಚಂಪಾ."

"ಒಳ್ಳೇ ಮನೆ ಸಿಕ್ಕಿದಾಗ ಹೋದರಾಯ್ತು."

ಆ ಹೆಣ್ಣಿನ ಧ್ವನಿ ದೃಢವಾಗಿರಲಿಲ್ಲ. ಹೆಚ್ಚು ಬಾಡಿಗೆ ಕೊಟ್ಟು ಒಳ್ಳೆಯ ಮನೆಗೆ ಹೋಗುವ ಶಕ್ತಿ ತಮಗಿಲ್ಲವೆಂದು ಅವರಿಬ್ಬರೂ ತಿಳಿದಿದ್ದರು.

"ನೋಡು. ಇದೇ ನಾನು ನಿನಗೆ ಕೊಡುತ್ತಿರೋ ಸುಖ."

"ಶ್........ಮಾತಾಡ್ಬೇಡಿ."

ಗಂಡನ, ತನ್ನ ಮತ್ತು ಮಗುವಿನ ಮೇಲೆ ಬೆಚ್ಚಗಿನ ಹೊದಿಕೆಯನ್ನಾಕೆ ಬಿಗಿಯಾಗಿ ಎಳೆದುಕೊಂಡಳು.

ಆದರೆ ನಡುರಾತ್ರಿಯ ಮೇಲೆ ಮತ್ತೆ ಮಳೆ ಬಂತು. ವಠಾರದ ಸಂಸಾರಗಳು ಎದ್ದು ಕುಳಿತುಕೊಳ್ಳಬೇಕಾಯಿತು.

............

ಮರುದಿನವೆಲ್ಲ ರಂಗಮ್ಮ ತಮ್ಮಷ್ಟಕ್ಕೆ ಗೊಣಗುತ್ತಾ ಓಡಾಡಿದರು. ಅವರು ಯಾರನ್ನೂ ಮಾತನಾಡಿಸಲಿಲ್ಲ. ಯಾರೂ ಅವರನ್ನು ಮಾತನಾಡಿಸಲಿಲ್ಲ.

ಮಧ್ಯಾಹ್ನದ ಬಳಿಕ ಬಿಸಿಲು ಬಂತು. ರಂಗಮ್ಮ ಮೆಲ್ಲನೆ ಹೊರಬಂದು ಹೆಂಗಸರನ್ನು ಮಾತನಾಡಿಸತೊಡಗಿದರು :

"....ಬಹಳ ಸೋರುತ್ತೇನಮ್ಮ ?"

"....ಅದೇನು ಸುಡುಗಾಡು ಹೆಂಚೋ."

"....ಹೆಂಚು ಇರಿಸಿದ್ದು ಸರಿಯಾಗಿಲ್ಲಾಂತ ಎರಡು ವರ್ಷದ ಕೆಳಗೆ ಮತ್ತೊಮ್ಮೆ ಎತ್ತಿ ಹಾಸಿದ್ದಾಯ್ತು."

"ಏನಪ್ಪಾ ಮಾಡೋದು ? ಒಬ್ಬಂಟಿಗಳು ನಾನು. ಏನಾಗುತ್ತೆ ನನ್ಕೈಲಿ."

ಹೆಂಗಸರೆಲ್ಲ ಒಂದೇ ರೀತಿಯಾಗಿ ಉದ್ಬುದ್ಧವಾಗಿ ಉತ್ತರ ಕೊಟ್ಟರು. ಒಂದಂಗುಲ ಜಾಗವೂ ಬೆಚ್ಚಗಿರಲಿಲ್ಲ....ಒಂದು ನಿಮಿಷವೂ ರಾತ್ರಿ ಯಾರೂ ನಿದ್ದೆಮಾಡಲಿಲ್ಲ.

ರಂಗಮ್ಮನ ಎಡ ಪಕ್ಕದಲ್ಲಿದ್ದ ಮೂಲೆಕಟ್ಟಡದ ಒಂದು ಮನೆ,

ಇಬ್ಬರು ವಿದ್ಯಾರ್ಥಿಗಳೂ ಅವರ ತಾಯಿಯೂ ಇದ್ದುದು ಸೋರು ತ್ತಿರಲಿಲ್ಲ.

"ಅಲ್ಲಿಯಾದರೂ ನೀವು ಕೆಲವರು ಹೋಗಿ ಮಲಕ್ಕೋಬಹು ದಾಗಿತ್ತು ಕಣ್ರೀ....ಆದರೆ ಆಕೆ ಬೀಗ ಹಾಕ್ಕೊಂಡು ಹೋಗ್ಬಿಟ್ಟಿದಾಳೆ. ಏನ್ಮಾಡೋಕಾಗುತ್ತೆ?"

ರಂಗಪ್ಪ ಮಾತಿಗೆ ಹಾಗೆ ಹೇಳಿದ್ದರು ಅಷ್ಟೆ. ಮಕ್ಕಳೊಡನೆ ಆ ತಾಯಿ ಊರಿಗೆ ಹೋದಾಗ ಬರಲಿದ್ದ ಮಳೆಯ ನೆನಪು ರಂಗಪ್ಪ ನಿಗೆ ಆಗಿತ್ತು. ಆದರೆ ಅವರು ಬೀಗದಕ್ಕೆ ಕೇಳಿರಲಿಲ್ಲ. ಬಾಡಿಗೆ ಸಂದಾಯವಾದ ಮನೆಯ ಬೀಗದಕ್ಕೆ ಕೇಳುವುದೆಂದರೇನು? ಅಥವಾ ಕೇಳಿ ಇಸಕೊಂಡಿದ್ದರೂ ಎಷ್ಟು ಜನರಿಗೆ ಆ ಜಾಗವನ್ನು ಕೊಟ್ಟು ತೃಪ್ತಿಪಡಿಸುವುದು ಸಾಧ್ಯವಿತ್ತು?

ರಂಗಪ್ಪ ಹಲವಾರು ರಟ್ಟಿಯ ಚೂರುಗಳನ್ನು ಸಂಗ್ರಹಿಸಿ ಇಟ್ಟಿದ್ದರು ಎಲ್ಲಿಂದಲೋ. ಪ್ರತಿಯೊಂದು ಮನೆಗೂ ನಾಲ್ಕುನಾಲ್ಕನ್ನು ಹಂಚಲು ಅವರು ಮುಂದಾದರು.

"ಗುಂಡಣ್ಣಾ, ಒಳಗೇ ನಿಂತ್ಕೊಂಡು ಸೋರೋ ಹೆಂಚು ಯಾವುದೂಂತ ನೋಡಿ ಇದನ್ನೆಲ್ಲಾ ಇಡ್ತೀಯೇನಪ್ಪಾ?"

ಪರೋಪಕಾರಿಯಾದ ಗುಂಡಣ್ಣ, ರಂಗಪ್ಪನ ಅಪೇಕ್ಷೆಯಂತೆ ಸಿದ್ಧನಾದ. ಆದರೆ ಆತನನ್ನು, ಛಾವಣಿಯ ಮೇಲಕ್ಕೆ ಹೋಗಿ ಸರಿಪಡಿಸೆಂದು ರಂಗಪ್ಪ ಹೇಳಲಿಲ್ಲ. ಬೇರೆ ಯಾರೂ ಸೂಚಿಸಲಿಲ್ಲ.

"ಮೊದಲ್ನೇ ದಿವಸದ ಮಳೆಗೆ ಮಾತ್ರ ಹೀಗಾಗುತ್ತೆ"

ಎಂದು ಬೇರೆ ರಂಗಪ್ಪ ಚಂಪಾವತಿಯ ಎದುರು ಅಂದರು. ವಠಾರದ ಹಳಬರಿಗೆ ಆ ವಿಷಯದ ನಿಜರೂಪ ತಿಳಿದಿತ್ತು. ರಂಗಪ್ಪ ಹೇಳಿದೊಡನೆ ನಂಬುವ ಮುಗ್ಧೆಯೂ ಚಂಪಾವತಿಯಾಗಿರಲಿಲ್ಲ.

...............

ಅನಂತರ ಪ್ರತಿ ಸಂಜೆಯೂ ಮಳೆ ಸುರಿಯಿತು. ಸಂಜೆ ಬಂದ ಮಳೆ ರಾತ್ರೆ ಬಹಳ ಹೊತ್ತಿನತನಕವೂ ಇರುತಿತ್ತು. ಸೋರುವುದು ತಪ್ಪಲಿಲ್ಲ.

ನಗರದಲ್ಲಿ ಬೆಚ್ಚಗಿನ ಮನೆಗಳಿದ್ದವರು ಗೊಣಗುತಿದ್ದರು.

"ಹಗಲು ಯಾಕೆ ಬರುತ್ತೊ ಈ ಮಳೆ. ಸಾಯಂಕಾಲವಂತೂ ಪಿಕ್ಚರಿಗೆ, ವಾಕಿಂಗಿಗೆ ಯಾವುದಕ್ಕೂ ಹೋಗೋ ಹಾಗಿಲ್ಲ. ನಾವೆಲ್ಲಾ ನಿದ್ದೆಹೋದ ಮೇಲೆ ರಾತ್ರೆ ಈ ಮಳೆ ಬರಬಾರ್ದೆ?"

ಆದರೆ ರಂಗಮ್ಮನ ವಠಾರದವರು ಹೇಳುತಿದ್ದುದೇ ಬೇರೆ :

"ಈ ಮಳೆ ಹಗಲಾದರೂ ಬಂದು ಹೋಗಲಪ್ಪಾ. ರಾತ್ರೆ ಬರದೇ ಇರ್ಲಿ. ಮಕ್ಕಳು ಮರಿ ರಾತ್ರೆ ಹೊತ್ತು ಬೆಚ್ಚಗಿದ್ದು ನಿದ್ದೇನಾದರೂ ಮಾಡುವಂತಾಗಲಪ್ಪಾ."

ಆದರೆ ಮಳೆ ಇವರು ಯಾರ ಅಪೇಕ್ಷೆಯನ್ನೂ ಪರಿಶೀಲಿಸಿದಂತೆ ತೋರಲಿಲ್ಲ. ಅದು ತನಗಿಷ್ಟ ಬಂದಂತೆ ಸುರಿಯುತಿತ್ತು.

ಮಳೆಯು ಕಾಟದೊಡನೆ, ವಠಾರಕ್ಕೆ ಕಂಬಳಿ ಹುಳಗಳ ಪ್ರವೇಶ ವಾಯಿತು. ಹೆಂಚಿನ ಎಡೆಗಳಲ್ಲೂ ಗೋಡೆಯ ಮೂಲೆಗಳಲ್ಲೂ ಅವು ಮನೆಮಾಡಿದುವು. ಜೋರೋ ಎಂದು ಮಳೆ ಸುರಿಯುತಿದ್ದರೆ ಟಪ್ಪ ಟಪ್ಪ ಎಂದು ಕಂಬಳಿ ಹುಳಗಳು ಕೆಳಕ್ಕೆ ಉರುಳುತಿದ್ದುವು.

ಕಂಬಳಿ ಹುಳಕ್ಕೆ ಸಂಬಂಧಿಸಿದ ಮೊದಲ ಆರ್ತನಾದದ ಕೀರ್ತಿ ಈ ವರ್ಷ ಕಾಮಾಕ್ಷಿಗೆ ಹೋಯಿತು. ಮೇಲಿನಿಂದ ಬಿದ್ದ ಕಂಬಳಿ ಹುಳು ಆಕೆಯ ಕಿವಿಯನ್ನು ಸವರಿಕೊಂಡು ಕೆಳಕ್ಕೆ ಉರುಳಿತು. ಐದು ನಿಮಿಷಗಳೂ ಆಗಿರಲಿಲ್ಲ. ತುರಿಸುತ್ತಲಿದ್ದಂತೆ ಕಿವಿ ದಪ್ಪಗಾಯಿತು. ಮರದ ತುಂಡಿನಂತಾಯಿತು.

"ಅಯ್ಯಯ್ಯೋ—ಇನ್ನೇನು ಗತಿ ?"

-ಎಂದು ಆಕೆ ಕೂಗಾಡಿದಳು.

ಅದರಿಂದೇನೂ ಅಪಾಯವಿಲ್ಲವೆಂದು ರಂಗಮ್ಮ ವಿವರಿಸಿದರು.

"ಒಂದಿಷ್ಟು ಬಿಸಿ ನೀರಿನ ಶಾಕ ಕೊಟ್ಟು ಕೊಬರಿ ಎಣ್ಣೆ ಸವರು. ಸರಿಹೋಗುತ್ತೆ."

-ಎಂದು ಅವರು ಗೃಹವೈದ್ಯ ಹೇಳಿಕೊಟ್ಟರು.

ಅಷ್ಟರಲ್ಲಿ ಬೇರೆ ಹುಡುಗರೂ ಕಿರಿಚಿಕೊಂಡರು. ಹುಡುಗರಿಗೆ, ಹುಳಗಳ ಹರಿದಾಟವನ್ನಷ್ಟೆ ಕಂಡು ತೃಪ್ತಿಯಾಗಿರಲಿಲ್ಲ. ಕೋಲು

ಗಳಿಂದ ಅವುಗಳನ್ನು ಮುಟ್ಟಿ ಕೆದಕಿದರು. ಬೆರಳುಗಳಿಂದ ಪರೀಕ್ಷಿಸಿ ನೋಡಿದರು. ಪರಿಣಾಮ–ಕೋಲಾಹಲ.

ಚಂಪಾ ತನ್ನ ಪುಟ್ಟ ಕಂದನನ್ನು ಕಂಬಳಿ ಹುಳಗಳಿಂದ ಜೋಪಾನವಾಗಿಡಲು ತುಂಬಾ ಶ್ರಮಪಡಬೇಕಾಯಿತು.

ಇತರರ ಗದ್ದಲ ಕಡಿಮೆಯಾದ ಮೇಲೂ ಕಾಮಾಕ್ಷಿಯ ಸ್ವರ ಕೇಳಿಸುತಿತ್ತು.

"ಅಪರು ಬರ್ಲಿ. ನಾನಿನ್ನು ಒಂದು ಘಳಿಗೆಯೂ ಈ ಮನೇಲಿ ಇರೋದಿಲ್ಲ. ಇವತ್ತೇ ನಮ್ಮ ತವರೂರಿಗೆ ಹೊರಟ್ಹೋಗ್ತೀನಿ...."

ಕಕ್ಕಸಿಗೆಂದು ತಂಬಿಗೆ ಹಿಡಿದು ಹೊರಟು ಬಂದ ಜಯರಾಮು ಓಣಿಯಲ್ಲಿ ನಿಂತು ರಂಗಮ್ಮನವರನ್ನು ನೋಡುತ್ತ ಹೇಳಿದ:

"ವಠಾರ ಕೆಟ್ಹೋಯ್ತು ರಂಗಮ್ನೋರೇ, ವಠಾರ ಕೆಟ್ಟು ಹೋಯಿತು."

"ಏನೋ ಅದು ?"

"ಈ ಮಳೆ—ಕಂಬಳಿ ಹುಳು ಥೂ ಥೂ ಥೂ."

ರಂಗಮ್ಮ, ಹಲ್ಲುಗಳು ಕಡಿಮೆಯಾಗಿದ್ದ ಒಸಡನ್ನು ಅಮುಕುತ್ತಾ ಜಯರಾಮುವನ್ನೆ ದುರುಗುಟ್ಟಿ ನೋಡಿದಳು. ಜಯರಾಮು ಆ ನೋಟವನ್ನು ಲೆಕ್ಕಿಸದೆಯೇ ಮಾತನಾಡಿದ:

"ಕಂಬಳಿ ಹುಳ ಬಂದ ಜನರೂ ಕೆಟ್ಹೋದ್ರು........"

"ಸಾಕು ಕಣೋ."

"ನಾನ್ಹೇಳ್ತೀನಿ ರಂಗಮ್ನೋರೆ. ಈ ವಠಾರಾನ ರಿಪೇರಿ ಮಾಡಿಸೋಕೆ ಆಗೋದೇ ಇಲ್ಲ."

"ಆಗದಿದ್ರೆ ಅಷ್ಟೆ ಹೋಯ್ತು."

"ಇದಕ್ಕಿರೋದು ಒಂದೇ ಉಪಾಯ ರಂಗಮ್ನೋರೆ. ಈ ಮನೇ ನೆಲ್ಲಾ ಕಿತ್ತು ಹಾಕಿಸಿ, ಈ ಹದಿನಾಲ್ಕು ಹದಿನೈದರ ಬದಲು ನಾಲ್ಕು ಮನೆ ತಾರಸೀದು ಸೊಗಸಾಗಿ ಕಟ್ಸಿಸಿ."

ರಂಗಮ್ಮ ಕೋಪ–ಸಂಕಟಗಳನ್ನು ತಡೆಯಲಾರದೆ ಜಯರಾಮುವಿನ ಕಿವಿ ಹಿಂಡಲೆಂದು ಧಾವಿಸಿ ಬಂದರು. ಆದರೆ ಆತ

ಕಕ್ಕಸಿಗೆ ಓಡಿಹೋದ.

ರಂಗಮ್ಮ ಗಟ್ಟಿಯಾಗಿ ಕೂಗಾಡಿದರು :

"ತಾರಸಿ ಮನೆ ಕಟ್ಟಿಸೋಕೆ ನನ್ಹತ್ರ ದುಡ್ಡಿಲ್ಲ. ನಾನು ಯಾರನ್ನೂ ವಠಾರದಲ್ಲಿ ಕಟ್ಟಿಹಾಕಿಲ್ಲ. ಬೇಕಾದೋರು ಇರಿ—ಬೇಡ ದೋರು ಹೋಗಿ !.... ನಾನು ಮಾತ್ರ ಬಂಗ್ಲೇಲಿದೀನೇನು ? ನಿಮ್ಮ ಹಾಗೆ ನಾನೂ ಇಲ್ವೇನು ಈ ವಠಾರದಲ್ಲಿ ?"

ಯಾರೂ ಮಾತನಾಡಲಿಲ್ಲ. ರಂಗಮ್ಮ ಹಾಗೆ ಕೂಗಾಡ ತೊಡಗಿದ್ದನ್ನು ಕಂಡು ಎಲ್ಲರಿಗೂ ಸಂತೋಷವಾಯಿತು. ಅವರೆಲ್ಲ ಕೋಲುಗಳಿಗೆ ಪೊರಕೆ ಕಟ್ಟಿ ಕಂಬಳಿ ಹುಳಗಳನ್ನು ಗುಡಿಸಲು ಮುಂದಾದರು.

ಕತ್ತಲಾಯಿತು. ಇನ್ನು ಒಂದು ಕ್ಷಣವೂ ಇಲ್ಲಿ ಇರಲಾರೆನೆಂದು ಕೂಗಾಡಿದ ಕಾಮಾಕ್ಷಿ ಗಂಡನ ಮುಖ ನೋಡಿದ ಮೇಲೆ ತೆಪ್ಪಗಾದಳು. ಕಿವಿಯೂ ಸ್ವಲ್ಪ ಮೃದುವಾದಂತೆ ಕಂಡಿತು. ಗಂಡ ಅದನ್ನು ಮುಟ್ಟಿದ ಮೇಲೆ ಆಕೆಗೆ ಸ್ವಲ್ಪ ಹಾಯೆನಿಸಿತು. ಆ ಸಂಜೆ ಆತನೇ ಅಡುಗೆಯ ಕೆಲಸಕ್ಕೀಳಿದ. ಕುದಿಯುತ್ತಿದ್ದ ಸಾರಿಗೆ ಕಂಬಳಿಹುಳ ಬೀಳಬಹುದೆಂಬ ಹೆದರಿಕೆಯಿಂದ ಅದನ್ನು ಮುಚ್ಚಿಯೇ ಇಡಬೇಕಾಯಿತು. ಆದರೆ ಕುತು ಕುತು ಎನ್ನುತಿದ್ದ ಬಿಸಿನೀರು, ಬೇಳೆ ಮುಚ್ಚಳವನ್ನು ನೂಕಿ ಕೊಂಡು ಪ್ರತಿಬಾರಿಯೂ ಹೊರಕ್ಕೆ ಹರಿಯುತಿದ್ದುವು.

"ಇವರ ಮನೆ ಹಾಳಾಯ್ತು !"

—ಎಂದು ನಾರಾಯಣ ಶಪಿಸಿದ. ಆದರೆ ನಿರ್ದಿಷ್ಟವಾಗಿ ಯಾವುದನ್ನು ಕುರಿತು ತಾನು ಶಪಿಸಿದ್ದೆಂಬುದು ಆತನಿಗೇ ಗೊತ್ತಿರಲಿಲ್ಲ.

................

ಮಳೆ ಬಿಸಿಲುಗಳ ನಡುವೆ ನೆಗಡಿ, ಕೆಮ್ಮು, ಜ್ವರಗಳು ವಠಾರಕ್ಕೆ ಭೇಟಿಕೊಟ್ಟವು. ಮಕ್ಕಳು ಮಲಗಿದರು. ದೊಡ್ಡವರನ್ನೂ ಆ ಕಾಹಿಲೆ ಗಳು ಕಾಡಿದುವು. ವಠಾರದ ಜನ ಔಷಧಿಗಾಗಿ ಮ್ಯುನಿಸಿಪಲ್ ಆಸ್ಪತ್ರೆಗೆ ಹೋಗಿ ಬಂದರು.

ಸ್ವತಃ ರಂಗಮ್ಮನೂ ಒಂದೆರಡು ದಿನ ಮಲಗಿದರು.

"ಮಗನಿಗೆ ಕಾಗದ ಬರೀಬೇಕೆ ?"

—ಎಂದು ಅವರನ್ನು ಕೇಳಿದ್ದಾಯ್ತು.

"ಏನೂ ಬೇಡ ಇದೆಲ್ಲಾ ಎರಡು ದಿನಸದ ಕಾಹಿಲೆ. ಎದ್ಬಿಡ್ತೀನಿ" ಎಂದು ರಂಗಮ್ಮ ಆತ್ಮವಿಶ್ವಾಸದಿಂದಲೆ ಹೇಳುತಿದ್ದರು.

ಕಮಲಮ್ಮ, ಪದ್ಮಾವತಿ, ಮೀನಾಕ್ಷಮ್ಮ, ಪದ್ಮನಾಭಯ್ಯನ ಹೆಂಡತಿ, ಅಹಲ್ಯೆಯ ತಾಯಿ–ಯಾರಾದರೊಬ್ಬರು ರಂಗಮ್ಮನ ಬಳಿಯಲ್ಲೇ ಇದ್ದು ಸೇವೆ ಮಾಡಿದರು. ಬಂದು ವಿಚಾರಿಸಿಕೊಂಡು ಹೋಗುವ ವಿಷಯದಲ್ಲಿ ವಠಾರದ ಯಾರೂ ಹಿಂದಾಗಲಿಲ್ಲ.

ರಾಜಮ್ಮ ತನ್ನ ಕಂಪೌಂಡರ್ ಮಗನಿಗೆ ಹೇಳಿ ರಂಗಮ್ಮನಿಗಾಗಿ ಔಷಧಿ ತರಿಸಿದಳು. ಆದರೆ ಆ ಸೀಮೆ ಔಷಧಿಯನ್ನು ರಂಗಮ್ಮ ಕುಡಿಯಲಿಲ್ಲ.

ಅವರೇ ಹೇಳಿದ್ದಂತೆ ಎರಡು ದಿನಸ ಕಳೆದು ಮೂರನೆಯ ದಿನವೇ ಅವರ ಎದ್ದು ಕುಳಿತರು. ರಂಗಮ್ಮ ನಕ್ಕಾಗ, ಎಲ್ಲರಿಗೂ ಸಂತೋಷವಾಯಿತು.

ಮೀನಾಕ್ಷಮ್ಮ ಚಂಪಾವತಿಗೆ ಹೇಳಿದಳು :

"ರಂಗಮ್ಮ ಗಟ್ಟಿಮುಟ್ಟಾದ ಜೀವ ಕಣ್ರೀ. ಎಂಥ ಕಾಹಿಲೇನೇ ಬರ್ಲಿ, ಹುಷಾರಾಗಿ ಏಳ್ತಾರೆ."

ಅಹಲ್ಯೆಯ ಅಣ್ಣ ರಾಮಕೃಷ್ಣಯ್ಯ ನೋಡಲು ಗಟ್ಟಿಮುಟ್ಟಾಗಿಯೇ ಇದ್ದ. ಆತ ಕಾಹಿಲೆ ಬೀಳಬಹುದೆಂದು ಯಾರೂ ಭಾವಿಸಿರಲಿಲ್ಲ ಒಂದು ಸಂಜೆ ಹಿಂತಿರುಗಿದವನು 'ಮೈ–ಕೈ ನೋವು' ಎಂದ. 'ಹಸಿವಿಲ್ಲ, ಊಟ ಬೇಡ' ಎಂದು ಬೆಚ್ಚನೆ ಹೊದ್ದು ಮಲಗಿದ. ಮೈ ಕಾದು ಕೆಂಡವಾಯಿತು ತಾಯಿ ಗಾಬರಿಯಾದಳು. ಕಾಹಿಲೆ ಎಂಬ ಪದಕ್ಕೆ ಸಾವು ಎಂಬ ಅರ್ಥವೇ ಆಕೆಗೆ ತೋರುತಿದ್ದುದು. ಆಕೆಯ ಗಂಡ ತೀರಿಕೊಂಡಿದ್ದುದೂ ಹಾಗೆಯೇ. ಮಗ ಒಪ್ಪಲಿಲ್ಲವೆಂದು ಆಕೆ ಕೇಶಮುಂಡನ ಮಾಡಿಸಿಕೊಂಡಿರಲಿಲ್ಲ. 'ಯಾವುದಾದರೂ ಕ್ಷೇತ್ರಕ್ಕೆ ಹೋಗಿ ಮಾಡಿಸ್ಕೋಬೇಕು' ಎಂದು ಕೇಳಿದವರಿಗೆ ಹೇಳುತಿದ್ದಳು. 'ಸಕೇಶಿಯಾಗಿ ಉಳಿದದ್ದಕ್ಕೆ ದೇವರು ಈ ಶಿಕ್ಷೆ ಕೊಡುತಿದಾನೆಯೆ?'

ಎಂದು ಆ ತಾಯಿ ಮನಸಿನಲ್ಲೆ ಹೆದರಿದಳು.

ಬಂದು ನೋಡಿದ, ಚಂಪಾ ಎಂದಳು :

"ಔಷಧಿ ತರೋಕೆ ತಡಮಾಡ್ಬೇಡಿ."

ಕಂಗಲಾಗಿದ್ದ ತಾಯಿ ಕೇಳಿದಳು :

"ಎಲ್ಲಿಂದ ತರೋಣ್ವೆ ಅಹಲ್ಯಾ? ಮುನಿಸಿಪಾಲ್ಟಿ ಆಸ್ಪತ್ರೆಯಿಂದ್ಲೇನೇ!"

ಆಕೆಯ ಗಂಡನಿಗೆ-ಅಹಲ್ಯೆಯ ತಂದೆಗೆ-ಅಲ್ಲಿಂದಲೇ ತಂದಿದ್ದರು.

"ಬೇಡಮ್ಮ. ಮಲ್ಲೇಶ್ವರದಲ್ಲಿ ಒಬ್ಬ ಡಾಕ್ಟರಿದ್ದಾರೆ."

"ನಿಂಗೆ ಗೊತ್ತೆ ಅಹಲ್ಯಾ?"

ಅಹಲ್ಯೆ ತಡವರಿಸಿ ಹೇಳಿದಳು :

"ರಾಜಮ್ನೋರ ಮಗ ಅಲ್ಲೇ ಕೆಲಸ ಮಾಡ್ತಾರಮ್ಮ."

ಅಹಲ್ಯೆಯ ತಾಯಿ ಅಳುತ್ತ ರಾಜಮ್ಮನವರಲ್ಲಿಗೆ ಹೋದಳು.

"ಏನಾದರೂ ಮಾಡಿ ರಾಜಮ್ಮ ನಿಮ್ಮ ಮಗನಿಗೆ ಹೇಳಿ"

"ಅಳಬೇಡಿ. ಯಾಕೆ ಅಳ್ತೀರಾ?"

–ಎಂದು ರಾಜಮ್ಮನ ಮಗ ವೆಂಕಟೇಶ ಆ ತಾಯಿಯನ್ನು ಹಿಂಬಾಲಿಸಿ ಬಂದ. ರಾಮಕೃಷ್ಣಯ್ಯನ ನಾಡಿ ಹಣೆ ಮುಟ್ಟಿ ನೋಡಿದ. ಅಹಲ್ಯಾ ಸಜಲನಯನೆಯಾಗಿ ವೆಂಕಟೇಶನನ್ನೆ ನೋಡಿದಳು.

"ಡಾಕ್ಟರನ್ನ ಕರಕೊಂಡು ಬರ್ಬೇಕೇನಪ್ಪಾ?"

–ಎಂದು ತಾಯಿ ಕೇಳಿದಳು.

"ಈಗೇನೂ ಬೇಡಿ. ಒಂದೆರಡು ದಿವಸ ಔಷಧಿ ತಗೊಳ್ಳಿ. ಆಮೇಲೆ ಬೇಕಾದರೆ ಡಾಕ್ಟರನ್ನ ಕರಕೊಂಡ್ಬರ್ತೀನಿ."

"ದುಡ್ಡು ಎಷ್ಟು ಕೊಡ್ಬೇಕಪ್ಪ ಈಗ?"

"ಈಗ ಬೇಡಿ. ಆಮೇಲೆ ಕೊಟ್ಟೇರಂತೆ.... ಶೀಷೆ ಇದೆಯೇನು?"

"ಇದೆ."

"ನನ್ಜತೇಲಿ ಯಾರಾದರೂ ಬನ್ನಿ. ಔಷಧಿ ಕೊಡಿಸ್ತೀನಿ."

ತಾಯಿ, ಮಗಳ ಮುಖ ನೋಡಿದಳು.

"ಹೋಗಿ ತರ್ತೀಯಾ ಅಹಲ್ಯಾ?"

"ಹೂಂ."

"ಒಬ್ಬಳೇ ಬರೋಕಾಗುತ್ತಾ ಪಾಪ್ಪ?"

"ಹೂಂ."

ಅಹಲ್ಯಾ ವೆಂಕಟೇಶನ ಹಿಂದೆ ಹೊರಟು ಹೋದಳು. ವಠಾರದ ಹಲವರು ಅದನ್ನು ನೋಡಿದರು. ರಾಮಕೃಷ್ಣಯ್ಯ ಕಾಹಿಲೆ ಮಲಗಿದ್ದ. ಯಾರೂ ಮಾತನಾಡಲಿಲ್ಲ.

ಅಹಲ್ಯಾ ಔಷಧಿ ತಂದಾಗ, ಮಗನ ಯೋಚನೆಯಲ್ಲಿ ಇದ್ದ ತಾಯಿ, 'ಒಬ್ಬಳೇ ಬರುವುದು ಕಷ್ಟವಾಯ್ತೆ?' ಎಂದು ಮಗಳನ್ನು ಕೇಳಲಿಲ್ಲ.

ಔಷಧಿ ಸೇವನೆ ಕ್ರಮವಾಗಿ ನಡೆಯಿತು.

ಮಾರನೆ ದಿನವೂ ವೆಂಕಟೇಶನ ಜತೆಯಲ್ಲಿ ಅಹಲ್ಯೆ ಆಸ್ಪತ್ರೆಗೆ ಹೋದಳು

ಜ್ವರ ಹಾಗೆಯೇ ಇತ್ತು.

ಮೂರನೆಯ ಸಂಜೆ ಪುಟ್ಟ ಕಾರೊಂದು ವಠಾರದೆದುರು ಬೀದಿಯಲ್ಲಿ ನಿಂತಿತು.

'ಯಾರೋ ವಿಳಾಸ ತಪ್ಪಿ ಬಂದಿರಬೇಕು'

—ಎಂದುಕೊಂಡರು ಹೊರಗೇ ನಿಂತಿದ್ದ ರಂಗಮ್ಮ.

ರಂಗಮ್ಮನ ವಠಾರದ ಮುಂದೆ ಕಾರು ನಿಂತುದನ್ನು ಬೀದಿಯ ಆಚೆಗಿನವರೂ ವಠಾರದವರೂ ಜತೆಯಾಗಿಯೇ ನೋಡಿದರು.

ವೆಂಕಟೇಶ ಹೊರಕ್ಕಿಳಿದಾಗ ಕಾರು ತಮ್ಮ ವಠಾರಕ್ಕೇ ಬಂದುದೆಂದು ತಿಳಿದು ರಂಗಮ್ಮನಿಗೆ ಸಂತೋಷವಾಯಿತು. ಆತನ ಕೈಯಲ್ಲಿ ಸೂಟ್‌ಕೇಸಿತ್ತು. ಅವನ ಹಿಂದೆ ಡಾಕ್ಟರು ಬಂದರು.

ಆಗ ಎಲ್ಲರಿಗೂ ರಾಮಕೃಷ್ಣಯ್ಯನನ್ನು ನೋಡಲು ಡಾಕ್ಟರು ಬಂದರೆಂಬುದು ಸ್ಪಷ್ಟವಾಯಿತು. ರಾಜಮ್ಮ ಹೆಮ್ಮೆಯಿಂದ ಮಗನ ಹಿಂದೆ ತಾನೂ ನಡೆದಳು.

ವಠಾರವನ್ನು ನೋಡಿ 'ಹೂಂ' ಎಂದು ಡಾಕ್ಟರು, ರೋಗಿಯನ್ನು ಆಸ್ಪತ್ರೆಗೆ ಸಾಗಿಸಬೇಕಾಗುವುದೇನೋ ಎಂದಿದ್ದರು ಆದರೆ ಪರೀಕ್ಷಿಸಿದ

ಮೇಲೆ ಅದರ ಅಗತ್ಯವಿಲ್ಲವೆಂದು ಅವರಿಗೆ ತೋರಿತು.

"ಛಳಿ ಜ್ವರ. ಮಲೇರಿಯಾ. ಇನ್ನೆರಡೇ ದಿವಸ. ಇಳಿದು ಹೋಗುತ್ತೆ."

—ಎಂದು ಡಾಕ್ಟರು ವೆಂಕಟೇಶನನ್ನೂ ರೋಗಿಯ ತಾಯಿ ಮತ್ತು ತಾಯಿಯ ಮಗಳನ್ನೂ ನೋಡುತ್ತಾ ಹೇಳಿದರು.

ಮತ್ತೆ ಕಾರಿನತ್ತ ಹೋಗುತ್ತ ಅವರೆಂದರು :

"ಇದೇನೇನಯ್ಯಾ ನಿನ್ನ ವಠಾರ. ವೈಗಾಡ್! ಹುಂ!"

ವೆಂಕಟೇಶ ಲಜ್ಜೆಗೊಂಡು ನಕ್ಕ.

ಅಹಲ್ಯಾ ದಿನವೂ ವೆಂಕಟೇಶನ ಜತೆಗೆ ಹೋಗಿ ಔಷಧಿ ತಂದಳು. ಜ್ವರವಿಳಿಯಿತು. ವೆಂಕಟೇಶ ಟಾನಿಕ್ ಕೊಡಿಸಿದ. ರಾಮಕೃಷ್ಣಯ್ಯ ಮೊದಲಿನಂತೆ ಓಡಾಡಿದ.

ಅವನ ತಾಯಿ ಕೇಳಿದಳು :

"ಔಷಧೀದು ಎಲ್ಲಾ ಒಟ್ಟಿಗೆ ಎಷ್ಟಾಯಿತು?"

"ನಾಲ್ಕು ರೂಪಾಯಿ"

—ಎಂದ ವೆಂಕಟೇಶ. ಆ ತಾಯಿ ನಂಬಲಿಲ್ಲ.

"ಅಷ್ಟೇನೆ?"

ಆಕೆಯ ಕಡೆ ನೋಡದೆಯೇ ವೆಂಕಟೇಶ ಹೇಳಿದ :

"ಹೌದು, ಅಷ್ಟೆ."

## ೧೪

ಶಾಲೆ ಕಾಲೇಜುಗಳ ಆರಂಭವಾದೊಡನೆ, ಖಾಲಿ ಇದ್ದ ಕೊಠಡಿಯನ್ನು ಬಾಡಿಗೆಗೆ ಹಿಡಿಯಲು ರಂಗಮ್ಮನ ವಠಾರಕ್ಕೆ ಹುಡುಗರು ಬಂದರು. ಎಂದಿನಂತೆಯೇ ಈ ಸಲವೂ ಬ್ರಾಹ್ಮಣ ಹುಡುಗರಿಗೇ ಕೊಠಡಿಯನ್ನು ಕೊಡಲು ರಂಗಮ್ಮ ಯತ್ನಿಸಿದರು. ಆದರೆ ಎಂದಿನಂತೆಯೇ ಈ ಸಲವೂ ಯತ್ನ ಸಫಲವಾಗಲಿಲ್ಲ. ಪರ ಊರಿನ ಬ್ರಾಹ್ಮಣ ಹುಡುಗರು, ಬಾಡಿಗೆ ಹದಿಮೂರು ರೂಪಾಯಿ ಎಂದು ಕೇಳಿದೊಡನೆ ಅಲ್ಲಿಂದ ಕಂಬಿ ಕೀಳುತ್ತಿದ್ದರು. ಒಳ್ಳೆಯ ಬ್ರಾಹ್ಮಣ ಹುಡುಗರು ಬಂದರೆ ಒಂದು ರೂಪಾಯಿ ಕಡಿಮೆ ಮಾಡೋಣವೆಂಬ ಯೋಚನೆಯೂ ರಂಗಮ್ಮನಿಗೆ ಬಂತು. ಆದರೆ ಹಾಗೆ ಭೇದ ಭಾವ ತೋರುವುದು ಸರಿಯಲ್ಲವೆಂದು ಆ ಯೋಚನೆಯನ್ನು ಅವರು ಬಿಟ್ಟು ಕೊಟ್ಟರು.

ಒಂದು ಸಂಜೆ ಮೂವರು ಹುಡುಗರು ಬಂದು ಹೇಳಿದರು :

“ರಂಗಮ್ನೋರನ್ನು ನೋಡ್ಬೇಕಾಗಿತ್ತು.”

ರಂಗಮ್ಮ ಅವರನ್ನು ಒಳಗೆ ಕರೆಯದೆ ತಾವೇ ಹೊರಗೆ ಬಂದರು.

“ಯಾರಪ್ಪ ನೀವು ?”

“ಬಳ್ಳಾಪುರ ನಮ್ಮೂರು. ಪರಮೇಶ್ವರಪ್ಪ ಒಂದು ಕಾಗದ ಕೊಟ್ಟಿದಾರೆ.”

ಆ ಹುಡುಗರಲ್ಲೊಬ್ಬ ಮಡಚಿದ್ದೊಂದು ಲಕೋಟೆಯನ್ನು ಹೊರ ತೆಗೆದ.

“ಯಾರು ಪರಮೇಶ್ವರಪ್ಪ ?”

“ಅವರು ಹೋದ ವರ್ಷ ಇಲ್ಲೇ ಓದ್ಕೊಂಡಿದ್ರು.”

"ಓ ಪರಮೇಶ್ವರಪ್ಪಾ ?"

—ಎಂದು ರಂಗಮ್ಮ ರಾಗವೆಳೆದರು. ಹಿಂದಿನ ವರ್ಷ ಮೇಲಿನ ಕೊಠಡಿಯಲ್ಲಿ ವಾಸವಾಗಿದ್ದವರ ಮುಖ್ಯಸ್ಥ ತನಗೆ ಕಾಗದ ಬರೆದಿದ್ದನೆಂಬುದು ಅವರಿಗೆ ಹೆಮ್ಮೆಯನ್ನುಂಟು ಮಾಡಿತು. ಕಾಗದ ಕೊಡಲು ಕೈ ಚಾಚಿದ ಹುಡುಗನನ್ನು ನೋಡುತ್ತ ಅವರೆಂದರು :

"ಅದೇನು ಬರದಿದ್ದಾನೋ ನೀವೇ ಸ್ವಲ್ಪ ಓದೀಪ್ಪ."

ಪರಮೇಶ್ವರಪ್ಪ ತನ್ನ ಊರಿನ ಹುಡುಗರ ಪರಿಚಯ ಮಾಡಿಕೊಟ್ಟು, ತಾನು ಹಿಂದೆ ಇದ್ದ ಕೊಠಡಿಯನ್ನು ಬೇರೆ ಯಾರಿಗೂ ಕೊಡದೆ ಆ ಹುಡುಗರಿಗೇ ಕೊಡಬೇಕೆಂದು ಕೇಳಿಕೊಂಡಿದ್ದ. 'ಬೇಡುವ ಆಶೀರ್ವಾದಗಳು' ಎಂದೇನೂ ಬರೆದಿರಲಿಲ್ಲ. ಆದರೆ 'ಇತಿ ನಮಸ್ಕಾರಗಳು' ಎಂದು ತಿಳಿಸಿದ್ದ.

ಓದಿಯಾದ ಮೇಲೆ ಆ ಕಾಗದವನ್ನು, ಕೈ ಸ್ವಲ್ಪ ಕೆಳಕ್ಕೆ ಒಡ್ಡಿ ರಂಗಮ್ಮ ಇಸಕೊಂಡರು.

"ಬಾಡಿಗೆ ಎಷ್ಟೂಂತ ಗೊತ್ತೇನಪ್ಪ ?"

"ಪರಮೇಶ್ವರಪ್ಪ ಹೇಳಿದಾರೆ—ಹದಿನೂರು ರೂಪಾಯೀಂತ."

ಉಳಿದ ಷರತ್ತುಗಳನ್ನೂ ರಂಗಮ್ಮ ವಿವರಿಸಿದರು.

"ಪರಮೇಶ್ವರಪ್ಪ ವಿಶ್ವಾಸವಿಟ್ಟು ಬರೆದಿದಾನೆ ಅಂದ್ಮೇಲೆ ಕೊಡದೆ ಇರೋಕಾಗುತ್ತೆ ?.... ಅವನಿಗೆ ಪಾಸಾಯ್ತು ಅಲ್ವೆ ?"

"ಅವರಿಗೆ ಪಾಸಾಯ್ತು. ಬೇರೆ ಇಬ್ಬರಿಗೆ ಒಂದೊಂದು ಪಾರ್ಟು ಹೋಗಿದೆ. ಸೆಪ್ಟೆಂಬರಿಗೆ ಕಟ್ತಾರೆ."

ರಂಗಮ್ಮನಿಗೆ ಆ ವಿವರವೊಂದೂ ಅರ್ಥವಾಗಲಿಲ್ಲ.

"ಅಂತೂ ಚೆನ್ನಾಗಿದಾನಲ್ಲಾ. ಅಷ್ಟೇ ಸಂತೋಷ. ನಮ್ಮ ವಠಾರದಲ್ಲಿ ಓದಿದ ಹುಡುಗರಿಗೆಲ್ಲ ದೊಡ್ಡ ಕೆಲಸ ಸಿಕ್ಕಿಯೇ ಸಿಗುತ್ತೆ."

ರಂಗಮ್ಮ ಪ್ರಯಾಸ ಪಟ್ಟು ಮಹಡಿಯ ಮೆಟ್ಟಿಲುಗಳನ್ನೇರಿ ಆ ಹುಡುಗರನ್ನು ಕರೆದೊಯ್ದು ಕೊಠಡಿ ತೋರಿಸಿದರು. ಕಾಗದ ಕೊಟ್ಟವನು ಹದಿನೂರು ರೂಪಾಯಿಗಳನ್ನೂ ಎಣಿಸಿ ಕೊಟ್ಟ. ತಮ್ಮ ಸಾಮಾನು ತರಲೆಂದು ಇಳಿದು ಹೋದ ಹುಡುಗರನ್ನು

ಜಯರಾಮು ಮತ್ತು ರಾಧಾ ಮೇಲಿನಿಂದಲೆ ನೋಡಿದರು.

ಶಂಕರನಾರಾಯಣಯ್ಯ ಬರೆದಿದ್ದ 'ಮನೆ ಬಾಡಿಗೆಗೆ ಇದೆ ಒಳಗಡೆ ವಿಚಾರಿಸಿ' ಬೋರ್ಡು ರಂಗಮ್ಮನ ಮನೆಯೊಳಕ್ಕೆ ಹೋಯಿತು.

ಹುಡುಗರ ಕೈಯಲ್ಲಿ ರಂಗಮ್ಮ ಕರಾರು ಪತ್ರ ಬರೆಸುವ ಪದ್ಧತಿ ಇರಲಿಲ್ಲ. ಆದರೆ ರಾತ್ರಿ ಸುಬ್ಬುಕೃಷ್ಣಯ್ಯನನ್ನು ಕರೆಸಿ ಪರಮೇಶ್ವರಪ್ಪ ಬರೆದಿದ್ದ ಕಾಗದವನ್ನು ಮತ್ತೊಮ್ಮೆ ಓದಿಸಿದರು.

"ನೋಡು. ಬ್ರಾಹ್ಮಣನಲ್ದೇ ಇದ್ದರೆ ಏನಾಯ್ತು ? ಈ ಊರು ಬಿಟ್ಟು ಹೋದ್ಮೇಲೂ ರಂಗಮ್ಮನ ವಠಾರವನ್ನ ಆತ ಮರೆತಿಲ್ಲ. ಎಷ್ಟೊಂದು ವಿಶ್ವಾಸ ಇಟ್ಕೊಂಡಿದ್ದಾನೆ !"

ಒಂದು ಕ್ಷಣ ತಡೆದು ರಂಗಮ್ಮ ಪ್ರಶಂಸೆಯನ್ನು ಮತ್ತೂ ಮುಂದುವರಿಸಿದರು :

"ಒಳ್ಳೇ ಹುಡುಗ ಪರಮೇಶ್ವರಪ್ಪ. ಯಾವ ಗಲಾಟೇನೂ ಇರ್ಲಿಲ್ಲ. ರಾತ್ರೆಯೆಲ್ಲಾ ದೀಪ ಉರಿಸ್ದೇನೇ ಪ್ಯಾಸ್ ಮಾಡ್ಕೊಂಡ."

ಸುಬ್ಬುಕೃಷ್ಣಯ್ಯನೆದ್ದು, ರಂಗಮ್ಮನನ್ನು ಅವರ ಯೋಚನೆಗಳ ಜತೆಗೆ ಬಿಟ್ಟು, ಊಟಕ್ಕೆ ಹೊರಟ.

........ರಂಗಮ್ಮನ ಪಕ್ಕದ ಮನೆಯಾಕೆಯೂ ಮಕ್ಕಳೊಡನೆ ಬಂದಳು. ಒಬ್ಬನಿಗೆ ತೇರ್ಗಡೆಯಾಗಿತ್ತು. ಇನ್ನೊಬ್ಬ ಅಷ್ಟು ಭಾಗ್ಯವಂತನಾಗಿರಲಿಲ್ಲ.

ಜಯರಾಮುವಿನ ತಂದೆ ಮತ್ತೊಂದು ಪ್ರವಾಸ ಮುಗಿಸಿ ಮನೆಗೆ ಬಂದರು.

"ಈ ಮಳೇಲಿ ಇನ್ನು ಎರಡು ತಿಂಗಳು ಹೊರಗೆ ಕಾಲುಹಾಕೋ ಹಾಗೇ ಇಲ್ಲ. ಉಸ್ಸಪ್ಪ !"

ಎಂದು ಉದ್ಗಾರ ತೆಗೆದರು.

ಸೆಪ್ಟೆಂಬರ್ ತಿಂಗಳನ್ನು ಇದಿರು ನೋಡುತ್ತಾ ಕೊನೆಯ ಹಂತವನ್ನು ದಾಟಿ ಮುಗಿಸಲು ಜಯರಾಮು ಸಿದ್ಧತೆ ನಡೆಸಿದ.

ಹಸ್ತ ಸಾಮುದ್ರಿಕದ ಪದ್ಮನಾಭಯ್ಯ ಅಳಿಯನೂರಿಗೆ ಹೋಗಿ,

ತಿಂಗಳು ತುಂಬಿದ್ದ ಮಗಳನ್ನು ಗೌರಿಹಬ್ಬಕ್ಕೆಂದು ಕರೆದು ತಂದ. ಮೈ ತುಂಬಿ ಮುದ್ದಾಗಿದ್ದ ಆಕೆಯನ್ನು ಕಂಡು ಕಾಮಾಕ್ಷಿಗೆ ಒಂದು ವಿಧ ವಾಯಿತು. ಆಕೆಗೆ ಪದ್ಮನಾಭಯ್ಯನ ಮಗಳ ಪರಿಚಯವೂ ಇರಲಿಲ್ಲ. ಎರಡು ದಿನ ಹಾಗೆಯೇ ಇದ್ದ ಮೇಲೆ, ಅಹಲ್ಯಾ ಅವರಿಬ್ಬರಿಗೂ ಪರಿಚಯ ಮಾಡಿಸಿಕೊಟ್ಟಳು. ಪದ್ಮನಾಭಯ್ಯನ ಮಗಳು ಪರಮ ಸುಖಿಯೇನೂ ಆಗಿರಲಿಲ್ಲ. ಆಕೆಯ ಗಂಡ ಒಳ್ಳೆಯವನಾಗಿದ್ದ. ಆದರೆ ಆತನದೇನೂ ಮನೆಯಲ್ಲಿ ನಡೆಯುತ್ತಿರಲಿಲ್ಲ. ಇತರರು ಅವಳಿಗೆ ಹಿಂಸೆ ಕೊಡುತಿದ್ದರು. ಆ ಕಥೆಯನ್ನೆಲ್ಲ ಕೇಳುತ್ತ ಕಾಮಾಕ್ಷಿ, ತಾನೇ ಪರವಾಗಿಲ್ಲ ಎಂದುಕೊಂಡಳು.

ಪದ್ಮನಾಭಯ್ಯ ಅಲ್ಲೇ ಇದ್ದರೂ ವಠಾರದವರು ಯಾರೂ ಅವನಿಗೆ ಕೈ ತೋರಿಸಲು ಬರಲಿಲ್ಲ. ಹಿತ್ತಿಲಗಿಡ ಮದ್ದಲ್ಲ. ಅಲ್ಲದೆ ವಠಾರ ದವರ ಕೈ ಓದುವ ಇಷ್ಟವೂ ಆತನಿಗಿರಲಿಲ್ಲ.

ಚಂದ್ರಶೇಖರಯ್ಯನ ಹೆಸರು ಹಲಗೆ–ಅವನ ಕಣ್ಣಿಗೆ ಬಿತ್ತು. ಎದುರು ಬದಿಯ ಕೊನೆಯ ಮನೆಯವರ ಖ್ಯಾತಿ ಕಿವಿಗೆ ಬಿತ್ತು. ಪದ್ಮನಾಭಯ್ಯ ಶಂಕರನಾರಾಯಣಯ್ಯನ ಪರಿಚಯಮಾಡಿಕೊಂಡ.

"ನೀವು ನನಗೊಂದು ಬೋರ್ಡು ಯಾಕೆ ಬರಕೊಡಬಾರ್ದು ?"

"ಓಹೋ ! ಅದಕ್ಕೇನು ? ಬರೆಯೋಣ—ಬರೆಯೋಣ."

"ಪಾಮಿಸ್ಟ್ರಿ ಬೋರ್ಡು ಒಂದಿದ್ರೆ ಚೆನ್ನಾಗಿರುತ್ತೆ. ಅಲ್ಲ ಅಂತೀರಾ ?"

"ಚೆನ್ನಾಗಿರುತ್ತೆ! ನೀವು ಎರಡಡಿ ಉದ್ದ ಒಂದಡಿ ಅಗಲದ್ದು ಒಳ್ಳೇ ಹಲಿಗೆ ಸಂಪಾದಿಸ್ಕೊಂಡು ಬನ್ನಿ."

"ನೀವು ಕೆಲಸ ಮಾಡೋ ಕಡೆ ಯಾವುದಾದರೂ ಚೂರು—"

"ಇಲ್ಲ. ಅಲ್ಲಿ ಬಟ್ಟೇ ಮೇಲೆ ಬರೆಯೋದು."

ಹಲಿಗೆ ಸಿಗದೆ ಬೋರ್ಡಿನ ಯೋಚನೆಯನ್ನು ಆತ ಬಿಟ್ಟುಕೊಡ ಬಹುದು ಎಂದು ಭಾವಿಸಿದ್ದ ಶಂಕರನಾರಾಯಣಯ್ಯ. ಅದು ಸುಳ್ಳಾ ಯಿತು. ಊರೆಲ್ಲ ಸುತ್ತಾಡಿ ಪದ್ಮನಾಭಯ್ಯ ಮೂರು ಕಾಸು ಕೊಡ ದೆಯೇ ಒಂದು ಹಲಿಗೆ ದೊರಕಿಸಿಕೊಂಡು ಬಂದ.

ಶಂಕರನಾರಾಯಣಯ್ಯನೆಂದ :

"ಬೋರ್ಡು ಅದೇನು ಬರೀಬೇಕೋ ಅದನ್ನ ಕಾಗದದ ಮೇಲೆ ಬರಕೊಡಿ."

ಆತ ಬರೆದುಕೊಟ್ಟ :

'ಪಾಮಿಸ್ಟ್ರಿ ಪ್ರೊಫೆಸರ್ ಪದ್ಮನಾಭಯ್ಯ.'

ಶಂಕರನಾರಾಯಣಯ್ಯ ಪ್ರಯಾಸಪಟ್ಟು ನಗು ತಡೆದುಕೊಂಡು ಹೇಳಿದ :

"ಇದೇ ಸರಿಯಾಗಿದೆ ಅಂತೀರಾ ?"

"ಹೂಂ. ಹೂಂ. ಹಾಗೇ ಇರ್ಬೇಕು."

ಎರಡು ದಿನಗಳಲ್ಲಿ ಬೋರ್ಡು ಸಿದ್ಧವಾಯಿತು. ಬರೆದುದಕ್ಕೆ ಪ್ರತಿಫಲದ ಮಾತನ್ನು ಯಾರೂ ಆಡಲಿಲ್ಲ. ರಂಗಮ್ಮನಿಗೆ, ಪದ್ಮನಾಭಯ್ಯ ಬೋರ್ಡು ತೂಗಹಾಕುವ ಯೋಚನೆ ಹಿಡಿಸಲಿಲ್ಲ. ಅಲ್ಲದೆ ಪದ್ಮನಾಭಯ್ಯನ ಮನಸ್ಸಿನೊಳಗೇ ಇದ್ದ ಅಂಜಿಕೆಯೂ ನಿಜವಾಯಿತು. ವಠಾರದ ಹೊರಗಿನ ಗೋಡೆಗಳಲ್ಲೆಲ್ಲೂ ಬೋರ್ಡನ್ನು ತೂಗಹಾಕುವಂತಿರಲಿಲ್ಲ.

"ಜಗಳಕ್ಕೆ ಕಾರಣ. ಅದೆಲ್ಲಾ ಬೇಡೀಪ್ಪಾ"

—ಎಂದು ಖಡಾಖಂಡಿತವಾಗಿ ರಂಗಮ್ಮ ಹೇಳಿದರು.

ಆದರೂ ಎದೆಗುಂದದೆ ಪದ್ಮನಾಭಯ್ಯ, ಬೀದಿಗೆ ಕಾಣಿಸುವಂತೆ ಹಿತ್ತಿಲ ಗೋಡೆಯ ಮೂಲೆಯಲ್ಲಿ ಬೋರ್ಡನ್ನು ಒರಗಿಸಿದ.

ಚಂಪಾ ಕೇಳಿದಳು :

"ಬೋರ್ಡು ಬರೆದದ್ದಕ್ಕೆ ಏನಾದರೂ ಬಂತೇಂದ್ರೆ ?"

ಶಂಕರನಾರಾಯಣಯ್ಯ ಉತ್ತರವಿತ್ತ :

"ಪ್ರೊಫೆಸರುಗಳು ದುಡ್ಡು ಕೊಡ್ತಾರೇನೆ ?"

ಚಂಪಾವತಿ ನಕ್ಕು ನುಡಿದಳು :

"ಅದರ ಬದಲು ಅವರಿಗೊಂದಿಷ್ಟು ಕೈನಾದರೂ ತೋರಿಸ್ಬಾರ್ದೆ?"

"ಕೈತೋರಿಸಿ ಅವಲಕ್ಷಣ ಅನ್ನಿಸ್ಕೋಬೇಕೇನು ?"

"ಏನಿಲ್ಲ. ನಿಮ್ಮ ಕೈ ನೋಡಿ, ಎಲ್ಲಾ ಚೆನ್ನಾಗಿದೇಂತ ಆತ

ಅನ್ನದೇ ಇದ್ದರೆ ಆಮೇಲೆ ಹೇಳಿ!"

"ಹೌದು. ಅಷ್ಟು ಸೊಗಸಾಗಿ ಬೋರ್ಡು ಬರೆದಿರೋ ಕೈ!"

ಮೂರನೆಯ ದಿನ ಬೆಳಗು ಮುಂಜಾನೆ ಬೋರ್ಡು ಅಲ್ಲಿರಲಿಲ್ಲ. ರಾತ್ರೆ ಹೊತ್ತು ಯಾರೋ ಎಗರಿಸಿಕೊಂಡು ಹೋಗಿದ್ದರು. ಅಳುವ ಹಾಗಾಯಿತು ಪದ್ಮನಾಭಯ್ಯನಿಗೆ. ಅವಾಚ್ಯ ಪದಗಳ ಪ್ರಯೋಗ ವೆಲ್ಲ ಮುಗಿದ ಮೇಲೆ ಆತ ಗುಮ್ಮೆಂದು ಸುಮ್ಮನಾದ. ವಠಾರದ ಎಷ್ಟೋ ಮನೆಗಳಲ್ಲಿ ಆ ಪ್ರಕರಣದಿಂದಾಗಿ ಜನ ನಕ್ಕುನಕ್ಕು ಆರೋಗ್ಯ ವಂತರಾದರು. ಪದ್ಮನಾಭಯ್ಯನ ಹೆಸರು ಪ್ರೊಫೆಸರ್ ಎಂದು ಮಾರ್ಪಟ್ಟಿತು.

ಅದಾದ ಮೂರನೆಯ ದಿನ ಪದ್ಮನಾಭಯ್ಯನ ಅಳಿಯ ಬಂದು ಗರ್ಭಿಣಿಯಾದ ಹೆಂಡತಿಯನ್ನು ಕರೆದೊಯ್ದ...

....ಚಂಪಾವತಿ ತುಂಬಾ ಖುಷಿಯಾಗಿದ್ದಳು. ಶಂಕರ ನಾರಾಯಣಯ್ಯನಿಗೆ ಅರ್ಥವಾಗಲಿಲ್ಲ.

"ಯಾಕೆ ಹಾಗೆ ನನ್ನನ್ನೇ ನೋಡ್ತಿದೀಯಾ?"

"ಎಲ್ಹೋಗಿದ್ದೆ?"

ಹಾಗೆ ಕೇಳಿ, ಗಟ್ಟಿಯಾಗಿ ಚಂಪಾ ನಕ್ಕಳು.

ರಹಸ್ಯ ಬಹಳ ಹೊತ್ತು ಬಗೆಹರಿಯಲೇ ಇಲ್ಲ.

ದೀಪ ಆರಿದಾಗಲಿನ್ನೂ ಹಾಸಿಗೆ ಬಿಡಿಸಿರಲಿಲ್ಲ. ಕತ್ತಲಲ್ಲಿ ಹಾಸುತ್ತ ಚಂಪಾ ಹೇಳಿದಳು:

"ಇವತ್ತು ಪ್ರೊಫೆಸರ್‌ರ ಅಳಿಯ ಬಂದಿದ್ರೂಂದ್ರೆ...."

"ಅಂತೂ ಬೋರ್ಡು ಬರೆಸಿ ಬಿರುದು ಗಿಟ್ಟಿಸ್ಕೊಂಡ!"

"ಹೂಂ. ಆ ಅಳಿಯ ಪ್ರೊಫೆಸರ್ ಮಗಳ್ನ ಕರಕೊಂಡುಹೋದ."

"ಆಕೆ ಬಸುರೀಂತ ಹೇಳಿದ್ಯಲ್ಲೇ ನೀನು?"

"ಹೌದು, ಅದಕ್ಕೇ ಕರಕೊಂಡು ಹೋದ. ಅನುಕೂಲಸ್ಥ ಅಂತ ತೋರುತ್ತೆ. ಜಗಳ ಆಯ್ತು. ಚೊಚ್ಚಲ ಬಾಣಂತನ ಇಲ್ಲೇ ಆಗ್ಲಿ ಅಂದರು ಪ್ರೊಫೆಸರ್ ಹೆಂಡತಿ. ಬೇಡ, ನಮ್ಮೂರಲ್ಲಿ ಒಳ್ಳೇ ಆಸ್ಪತ್ರೆ ಇದೆ. ಅಲ್ಲಿಗೇ ಕರಕೊಂಡು ಬಾ ಅಂದಿದಾರೆ ನಮ್ಮಮ್ಮ ಎಂದ ಅಳಿಯ.

ಹುಡುಗಿ ಎದ್ದೇಬಿಟ್ಟಳು ಗಂಡನ ಜತೆಗೆ."

"ಭೇಷ್!"

ಆಮೇಲೆ ಚಂಪಾ ಮಾತನಾಡಲಿಲ್ಲ. ತಲೆಗಳು ದಿಂಬನ್ನು ಸೋಂಕಿದುವು. ಒಮ್ಮೆಲೆ ಶಂಕರನಾರಾಯಣಯ್ಯ ಏನೋ ಹೊಳೆದ ವನಂತೆ ಅಂದ :

"ಚಂಪಾ !"

"ಏನು ?"

"ಈ ತಿಂಗಳು ನೀನು ಹೊರಗೆ ಕೂತೇ ಇಲ್ವಲ್ಲೇ!"

ಚಂಪಾ ನಗೆ ತಡೆದುಕೊಂಡು ಹೇಳಿದಳು :

"ಇಲ್ಲ, ಅದಕ್ಕೆ?"

ಆಕೆ ಆ ಸಂಜೆಯೆಲ್ಲ ವಿಚಿತ್ರವಾಗಿ ತನ್ನನ್ನು ನೋಡುತಿದ್ದುದು, ಪದ್ಮನಾಭಯ್ಯನ ಮಗಳ-ಅಳಿಯನ ಪ್ರಸ್ತಾಪ, ಪ್ರತಿಯೊಂದೂ ಆತ ನಿಗೆ ಅರ್ಥವಾಯಿತು. ಮೊದಲೇ ತಿಳಿಯದೆಹೋದೆನೆಂದು ತನ್ನ ಬಗ್ಗೆ ತಾನೇ ರೇಗುತ್ತಾ ಆತನೆಂದ :

"ಏನು ಇಲ್ಲ, ಅದಕ್ಕೆ?"

"ಇನ್ನೇನು ಹೇಳ್ಬೇಕು ನಿಮಗೆ ?"

"ಕೆಟ್ಟವಳು !"

"ನೀವೇ ಕೆಡಿಸ್ದೋರು !"

ಮತ್ತೂ ಸ್ವಲ್ಪ ಸಂದೇಹಿಸುತ್ತಾ ಆತ ಕೇಳಿದ :

"ನಿಜವೇನೆ ಹಾಗಾದರೆ ?"

"ಅಷ್ಟೂ ತಿಳೀದೇನೋ ನಿಮಗೆ !"

ಚಂಪಾ ನಕ್ಕಳು. ಆತ ಆ ನಗುವನ್ನು ಸಿಲ್ಲಿಸಿದ. ತನಗೆ ನಿದ್ದೆ ಬಂದಿಲ್ಲವೆಂದು ಮಗು ಅತ್ತಿತು.

................

ಊರೂರು ಸುತ್ತಿ ಆಗಾಗ್ಗೆ ಬರುತ್ತಿದ್ದ ಕಮಲಮ್ಮನ ಗಂಡ, ಹೆಂಡತಿಯನ್ನು ಪ್ರೀತಿಸುವುದಿತ್ತು-ಮನಸ್ಸು ತೃಪ್ತಿಯಾಗುವವರೆಗೆ. ಆ ಬಳಿಕ ಕಮಲಮ್ಮನ ಪಾಡು ಕಮಲಮ್ಮನಿಗೆ. ಆತ ಮಧ್ಯ ವಯ

ಸ್ಸಿನ ಕಟ್ಟು ಮಸ್ತಾದ ಆಸಾಮಿ. ಕಮಲಮ್ಮನನ್ನು ಬಿಟ್ಟು ಬಿಡುವ, ಬೇರೆ ಮದುವೆ ಮಾಡಿಕೊಳ್ಳುವ, ಯೋಚನೆ ಆತನಿಗೆ ಎಷ್ಟೋಸಾರೆ ಬಂದಿತ್ತು. ಆದರೆ ಯಾವುದೋ ಸಂಸ್ಕಾರ ಅಡ್ಡಬಂದು, "ಛೆ! ಹಾಗೆ ಮಾಡಬಾರದು," ಎಂದಿತ್ತು ಪ್ರತಿಸಲವೂ.

ಅದೇ ಸಂಸ್ಕಾರದ ಫಲವಾಗಿಯೇ ಒಮ್ಮೊಮ್ಮೆ, ಕ್ರೂರವಾಗಿದ್ದರೂ ಸತ್ಯವಾಗಿದ್ದ ಮಾತುಗಳು ಆತನ ಬಾಯಿಯಿಂದ ಹೊರಡುತಿದ್ದುವು.

"ವೈದಿಕ ವೃತ್ತಿ ಹುಂ! ನಿಜವಾಗಿ ನೋಡಿದರೆ ಇದು ತಿರುಪೆ ಎತ್ತೋದು."

ಅಥವಾ–

"ಹಾಡಿದ್ದೇ ಹಾಡ್ಕೊಂಡು ಒರಲ್ದೆ ತಂಬೂರಿ ದಾನ? ಹಾಗೆ ನಮ್ಮ ಮಂತ್ರ ಪಠನ."

ಆತನಿಗೆ ಹೆಚ್ಚಿನ ವಿದ್ವತ್ತಿರಲಿಲ್ಲ. ಸಂಸ್ಕೃತ-ಕನ್ನಡ ಯಾವುದರಲ್ಲೂ ಆಳವಾದ ಅಭ್ಯಾಸವಿರಲಿಲ್ಲ. ತನ್ನ ವೃತ್ತಿ ಸಾಗಿಸಿಕೊಂಡು ಹೋಗಲು ಎಷ್ಟು ಬೇಕೋ ಅಷ್ಟೆ. ಆದರೆ ತನ್ನ ವೈಯಕ್ತಿಕ ಇರುವಿಕೆಗಾಗಿ ಲೋಕದ ಮೇಲೆಯೇ ಮುನಿಸಿಕೊಂಡಿದ್ದ ಆತ ವಕ್ರಾಚಾರ್ಯನಾಗಿದ್ದ. ಸ್ನೇಹಿತರು, ಸಂಬಂಧಿಕರು ಇಲ್ಲವೆ ಕಮಲಮ್ಮನೊಡನೆ ಮಾತನಾಡಿದಾಗಲೆಲ್ಲ ಆತನ ಮಾತು ವಕ್ರವಾಗಿರುತಿತ್ತು.

ಇನ್ನು ತನಗೆ ಮಕ್ಕಳಾಗುವುದಿಲ್ಲವೆಂಬುದು, ಮಕ್ಕಳಾದರೂ ಉಳಿಯುವುದಿಲ್ಲವೆಂಬುದು, ಕಮಲಮ್ಮನಿಗೆ ಖಚಿತವಾಗಿತ್ತು. ಹೆಂಗಸರ ಕಾಹಿಲೆಗಳನ್ನೆಲ್ಲ ಗುಣಪಡಿಸುವ ದೊಡ್ಡ ಲೇಡಿ ಡಾಕ್ಟರೊಬ್ಬರ ವಿಷಯ ಒಮ್ಮೆ ಯಾರೊ ಪ್ರಸ್ತಾಪಿಸಿದ್ದರು. ಆದರೆ ಆ ಡಾಕ್ಟರ ಜಾತಿ ಬೇರೆ ಅಲ್ಲದೆ ಅದು ನೂರಿನ್ನೂರು ರೂಪಾಯಿ ವೆಚ್ಚದ ಬಾಬು. ಆ ವಿಷಯವನ್ನು ಗಂಡನ ಕಿವಿ ಮೇಲೆ ಹಾಕಿ ಕಮಲಮ್ಮ ಸುಮ್ಮನಾಗಿದ್ದಳು.

ಆತ ಗದರಿ ನುಡಿದಿದ್ದ :

"ಮಾರವಾಡಿ ಕಾಲು ಹಿಡಿದು ಸಾಲ ತರಬೇಕು ಅಂತೀಯೇನು? ಲೇಡಿ ಡಾಕ್ಟರು !........"

"ನಾನೆಲ್ಲಿ ಹಾಗಂದೆ? ಸುಮ್ನೆ ಹೇಳ್ದೆ ಅಷ್ಟೆ."

ಡಾಕ್ಟರು ಯಾವ ಜನವಾದರೇನು ? ಮನುಷ್ಯರು ತಾನೆ? ತಾನು ಬಡವ ಬಡವ ಎಂದು ಹೇಳಿಕೊಂಡರೆ ರೋಗ ಪರೀಕ್ಷೆಗೇನೂ ಖರ್ಚಾಗಲಾರದು—ಎಂದು ಆತ ಯೋಚಿಸಿದ. ಆದರೆ, ಪರೀಕ್ಷೆಯಾದ ಮೇಲೆ ಔಷಧಿ ತರಬೇಕು. ಅದಕ್ಕೆ ಬೇಕು ದುಡ್ಡು, ಎಷ್ಟು ರೂಪಾಯಿಯೋ ಏನೋ. ಆ ಚಿಂತೆ ಆತನನ್ನು ಕಾಡಿತು.

"ಮನುಷ್ಯನ ಕೈಲಿ ಏನಿದೆ? ಎಲ್ಲಾ ಆ ಭಗವಂತನ ಇಚ್ಛೆ. ಆ ಮಹಾರಾಯ ಅದೇನು ಬರೆದಿದಾನೋ?"

–ಎಂದು ಆತ ಹೆಂಡತಿಗೆ ಹೇಳಿದ.

ಆದರೆ ಹೊರಗೆ ಹಾಗೆ ಹೇಳಿದರೂ ಮನಸ್ಸಿನೊಳಗೆ ಆಸೆ ಇದ್ದೇ ಇತ್ತು. 'ಅನುಕೂಲವಾದಾಗ ಒಮ್ಮೆ ಪರೀಕ್ಷೆ ಮಾಡಿಸಬೇಕು.' ಎಂದು ತೀರ್ಮಾನಿಸಿದ್ದ. ಆದರೆ ಇಷ್ಟು ವರ್ಷಗಳಾದರೂ ಅನುಕೂಲವಾಗಿಯೇ ಇರಲಿಲ್ಲ.

ಒಂಟಿಯಾಗಿಯೆ ಅಸಂಖ್ಯ ರಾತ್ರಿಗಳನ್ನು ಕಳೆದು ಅಭ್ಯಾಸವಾಗಿದ್ದ ಕಮಲಮ್ಮ........

........ಈ ರಾತ್ರೆ ಆಕೆ ಒಂಟಿಯಾಗಿರಲಿಲ್ಲ. ಗಂಡ ಬಂದಿದ್ದ.

ಗಂಡ ಬಂದೊಡನೆ ಸರಸ ಸಲ್ಲಾಪಗಳಾದುವೆಂದು ಅರ್ಥವಲ್ಲ. ಅಂತಹ ಅಭ್ಯಾಸವನ್ನು ಆ ವಕ್ರಾಚಾರ್ಯ ಇಟ್ಟಿರಲಿಲ್ಲ. ದಾಂಪತ್ಯ ಜೀವನದ ಮೊದಲ ವರ್ಷಗಳ ಸುಖವೀಗ ಗತಕಾಲದ ನೆನಪು ಮಾತ್ರ. ಆದರೆ ಆ ನೆನಪು ಕೂಡಾ ಒಂದು ಶತಮಾನದ ಹಿಂದಿನ ಕತೆಯೇನೋ ಎನ್ನುವ ಹಾಗೆ ಮಾಸಿ ಹೋಗಿತ್ತು.

ಗಂಡ ಊರಿಗೆ ಬಂದಾಗ ಕಮಲಮ್ಮ ಆತನ ಜತೆಯಲ್ಲಿ ಮಲಗುತಿದ್ದಳು. ಆದರೆ, ಗಂಡನ ರೋಮತುಂಬಿದ ವಕ್ಷಸ್ಥಳದ ಮೇಲೆ ಮುಖವಿಟ್ಟು ಅಳಬೇಕೆಂದು ಆಕೆಗೆ ತೋರುತ್ತಿರಲಿಲ್ಲ. ಹೃದಯದ ದುಗುಡವನ್ನು ಬಿಚ್ಚಿಟ್ಟು ಹೆಂಡತಿಯೊಡನೆ ಮಾತನಾಡಬೇಕೆಂದು ಆತನಿಗೂ ಅನ್ನಿಸುತ್ತಿರಲಿಲ್ಲ.

........ಮಲಗಿದೊಡನೆ ಏನೋ ನೆನಪಾಗಿ ಈಸಲ ಆತ ಕೇಳಿದ :

"ಈ ತಿಂಗಳ ಬಾಡಿಗೆ ಕೊಟ್ಬೆಯೇನು ?"

"ಹೂಂ."

"ಇಲ್ಲಿ ಮಳೆ ಚೆನ್ನಾಗಿ ಬಿತ್ತೆ ?"

"ಹೌದು."

"ರಂಗಮ್ಮ ಈ ವರ್ಷವೂ ಛಾವಣಿ ದುರಸ್ತಿ ಮಾಡಿಸ್ಲಿಲ್ಲ."

"ಇಲ್ಲ."

ಮಾತು ನಿಂತಿತು. ಮತ್ತೆರಡು ನಿಮಿಷಗಳಲ್ಲಿ ಆತ ಗೊರಕೆ ಹೊಡೆಯುವುದು ಕೇಳಿಸಿತು.

೧೫

ಆ ವರ್ಷ ವಠಾರಕ್ಕೆ ಬಂದ ಮೂವರು ಹುಡುಗರಿಗೂ ಬೆಂಗಳೂರು ಹೊಸದಾಗಿತ್ತು. ಅಂತಹ ವಠಾರ ಜೀವನವೂ ಹೊಸದು. ಆದರೂ ಊರಲ್ಲಿದ್ದಾಗ ಕತೆ ಕಾದಂಬರಿಗಳಲ್ಲಿ ಬೆಂಗಳೂರಿನ ವಿಷಯ ಸಾಕಷ್ಟು ಓದಿ ಅವರು ನಾಲಿಗೆ ಚಪ್ಪರಿಸಿದ್ದರು. ಈಗ ಬೆಂಗಳೂರು ಜೀವನ ವ್ಯೆಗೊಡಲು ಅವರಿಗೆ ಹೆಚ್ಚುಕಾಲ ಹಿಡಿಯಲಿಲ್ಲ.

ಆ ಮೂವರಲ್ಲಿ ಪರಮೇಶ್ವರಪ್ಪನ ಕಾಗದ ತಂದು ಕೊಟ್ಟು ರಂಗಮ್ಮನೊಡನೆ ಮಾತನಾಡಿದ ಹುಡುಗ ಒಳ್ಳೆಯವನಾಗಿದ್ದ. ಆದರೆ ಆತ ಪುಸ್ತಕ ಕೀಟ. ಪಠ್ಯಪುಸ್ತಕಗಳ ಹೊರಗೆ ಬೇರೆ ಪ್ರಪಂಚವಿದೆ ಎಂಬುದನ್ನು ಎಂದೂ ಒಪ್ಪಿದವನಲ್ಲ. ಎರಡು ವಾರಗಳಿಗೊಮ್ಮೆ ತಪ್ಪದೆ ಊರಿಗೆ ಕಾಗದ ಬರೆಯುತಿದ್ದ. ನಿಯಮಕ್ಕೆ ಮೀರಿ ಹೋಟೆಲು ಗಳಿಗೆ ಭೇಟಿಕೊಡುತ್ತಿರಲಿಲ್ಲ. ಸಂಜೆ ಒಬ್ಬನೇ ತಿರುಗಾಡಲು ಹೋಗುತ್ತಿದ್ದ. ಆದರೆ ಆಗಲೂ ಕಂಕುಳಲ್ಲೊಂದು ಪುಸ್ತಕವಿರುತಿತ್ತು. ಕತ್ತಲಾದೊಡನೆ ಕೊಠಡಿಗೆ ಹಿಂತಿರುಗುತಿದ್ದ.

ಸೂಕ್ಷ್ಮ ನಿರೀಕ್ಷಣೆಯಲ್ಲಿ ಸಮರ್ಥನಾದ ಜಯರಾಮುವಿಗೆ ಈ ಹುಡುಗನ ಗುಣ ತಿಳಿಯಿತು. ಸ್ನೇಹಿತರನ್ನು ಗಳಿಸಿಕೊಳ್ಳುವ ಆತುರವೇನೂ ಜಯರಾಮುವಿಗೆ ಇರಲಿಲ್ಲವಾದರೂ, ಒಂದೇ ವಠಾರ ವೆಂದ ಮೇಲೆ ಮಾತನಾಡಿಸದೆ ಇರಬಾರದೆಂದು ಭಾವಿಸಿದ.

ವಠಾರಕ್ಕೆ ಅಂಚೆಯವನು ಬರುತಿದ್ದುದು ಎಂದಾದರೊಮ್ಮೆ. ಹೊರ ಅಂಗಳದಲ್ಲಿ ಯಾರಾದರೂ ಇದ್ದರೆ, ಆ ಬೀದಿಯಲ್ಲಿ ಅಂಚೆ ಯವನು ಹಾದು ಹೋದಾಗ ಎಲ್ಲರ ಕಣ್ಣುಗಳೂ ಅವನ ಕಡೆಗೆ ತಿರುಗು ತಿದ್ದುವು. ಆತ ವಠಾರದೊಳಕ್ಕೆ ಬರುವ ಕೃಪೆ ತೋರಿದ ದಿನ, ಎಲ್ಲರ

ಕತ್ತುಗಳೂ ನೀಳವಾಗುತ್ತಿದ್ದುವು ಕಾಗದ ತಮ್ಮದಿರಬಹುದು, ತಮ್ಮದೇ ಇರಬೇಕು ಎಂದು ಪ್ರತಿಯೊಂದು ಮನೆಯುವರೂ ಭಾವಿಸುತಿದ್ದರು. ಆಗ ರಂಗಮ್ಮನೂ ಹೊರ ಬಂದು, ಕಾಗದ ಯಾವುದಾದರೂ ಮನೆಯು ಒಳಹೋಗುವುದನ್ನು ನೋಡುತಿದ್ದರು. ಆಗ ಇತರರಿಗೆ ನಿರಾಶೆ ಯಾಗುತಿತ್ತು. ಆದರೂ ಅಪ್ಪಿ ತಪ್ಪಿ ತಮ್ಮ ಕಾಗದವೇ ಆ ಮನೆ ಯೊಳಗೆ ಹೋಗಿರಬಹುದೆಂದು ಶಂಕೆ ಕೆಲವರಿಗೆ ತಲೆದೋರದೆ ಇರು ತ್ತಿರಲಿಲ್ಲ ಹೀಗಾಗಿ, ಕಾಗದ ಬಂದು ಯಾವುದಾದರೂ ಮನೆ ಸೇರಿ ಐದು ನಿಮಿಷಗಳಾಗುವವರೆಗೂ ಅವರು ಕಾಯುತಿದ್ದರು.

ಒಂದು ದಿನ ಅಂಚೆಯುವನು ಗೇಟಿನ ಹೊರಗೇ ನಿಂತು, ಒಂದು ಲಕೋಟೆಯುನ್ನು ಕೈಯಲ್ಲಿತ್ತಿ ಹಿಡಿದ. ಹಲವು ಮುಖಗಳು ಆತನಿಗೆ ಸ್ವಾಗತ ಬಯಸಿದುವು. ಅಂಚೆಯುವನು ಕೇಳಿದ :

"ಇಲ್ಲಿ ರಾಜಶೇಖರ ಅಂತ ಯಾರಿದಾರೆ ? ಪಿ. ವೈ. ರಾಜ ಶೇಖರ ?"

"ಯಾರೂ ಇಲ್ವಲ್ಲಾ !"

ಎಂದರು ಒಬ್ಬಿಬ್ಬರು ಹೆಂಗಸರು.

"ಮಹಡಿ ಮೇಲಿರೋರೋ ಏನೋ"

ಎಂದಳು ಇನ್ನೊಬ್ಬಳು.

"ಅವರು ಚಂದ್ರಶೇಖರಯ್ಯ ಕಣೇ"

–ಎಂದು ಮತ್ತೊಬ್ಬಳು ಸಂದೇಹ ಪರಿಹರಿಸಿದ್ದೂ ಆಯಿತು.

"ಅವರಲ್ಲ. ಅವರಲ್ಲ"

ಹಾಗೆ ಅಂಚೆಯುವನೂ ಧ್ವನಿಕೂಡಿಸಿದ.

ಮೇಲೆ ಪರೀಕ್ಷೆಗೆ ಓದುತ್ತ ಕುಳಿತಿದ್ದ ಜಯರಾಮು ಅಂಚೆಯುವ ನನ್ನು ನೋಡಿ ಕೆಳಕ್ಕೆ ಇಳಿದು ಬಂದ. ಅಂಚೆಯುವನು ಮತ್ತೊಮ್ಮೆ ತನ್ನ ಪ್ರಶ್ನೆಯನ್ನು ಕೇಳಿದ್ದಾಯಿತು.

ಆ ಕಾಗದ, ಹೊಸತಾಗಿ ಬಂದ ವಿದ್ಯಾರ್ಥಿಗಳದಿರಬಹುದೆಂದು ಜಯರಾಮುವಿಗೆ ಹೊಳೆಯಿತು. ಹೊರಗೆ ಬರುತಿದ್ದ ರಂಗಮ್ಮನನ್ನು ಉದ್ದೇಶಿಸಿ ಆತ ಕೇಳಿದ :

"ಹೊಸದಾಗಿ ಬಂದಿರೋರಲ್ಲಿ ರಾಜಶೇಖರ ಅಂತ ಒಬ್ರಿದಾರೆ. ಅಲ್ವೆ ರಂಗಮ್ನೋರೆ ?"

"ಅದೇ ಆ ಓದೋ ಹುಡುಗರ ಪೈಕಿ ?"

"ಹೂಂ. ಹೌದು."

"ಇದಾನೆ—ಇದಾನೆ."

ಅಂಚೆಯವನು ಕಾಗದವನ್ನು ಜಯರಾಮು ಕೈಗೆ ಕೊಟ್ಟು ಹೊರಟು ಹೋದ.

ತನಗೆ ಕಾಗದ ಬರೆಯುವಂತಹ ನೆಂಟರಿಷ್ಟರು ಯಾರೂ ಇಲ್ಲದೇ ಇದ್ದ ರಾಜಮ್ಮ ಕೇಳಿದಳು :

"ಯಾವೂರಿಂದ ಬಂದಿದೆ ?"

ಜಯರಾಮು ಮಾತನಾಡಲಿಲ್ಲ. ಅರೆಕ್ಷಣ ಆ ಹೆಂಗಸರನ್ನೆಲ್ಲ ಆತ ದುರದುರನೆ ನೋಡಿ, ಕಾಗದದೊಡನೆ ಮಹಡಿಯ ಮೆಟ್ಟಿಲು ಗಳನ್ನೇರಿದ.

ಲಕೋಟೆಯ ಮೇಲೆ ವಿಳಾಸ ಬರೆದಿತ್ತು :

ಪಿ. ವೈ. ರಾಜಶೇಖರನಿಗೆ, ರಂಗಮ್ಮನ ವಠಾರ, ಶ್ರೀರಾಮಪುರ, ಬೆಂಗಳೂರು ಸಿಟಿ. ಸಿಟಿಯ ಮುಂದೆ ಕತ್ತರಿ ಗುರುತು ಹಾಕಿ ನಾಲ್ಕು ಚುಕ್ಕೆ ಇಟ್ಟಿದ್ದರು. ಅದರ ಕೆಳಗೆ ಕೆಂಪು ಮಸಿಯಲ್ಲಿ ಬೆಂಗಳೂರು ಎಂದು ಇಂಗ್ಲಿಷಿನಲ್ಲಿತ್ತು. ಅದನ್ನು ಅಂಚೆಯವರು ಬರೆದಿರಬೇಕು ಎಂದು ಜಯರಾಮು ಊಹಿಸಿಕೊಂಡ.

ಅವನ ಕಲ್ಪನೆ ಆ ವಿವಿಧ ಪದಗಳ ಸುತ್ತಲೂ ಸ್ವಲ್ಪ ಹೊತ್ತು ಸುಳಿದಾಡಿತು. ಅದು ಹುಡುಗರ ಕೈ ಬರಹ. ದುಂಡು ದುಂಡಗಿತ್ತು. ರಾಜಶೇಖರನ ತಮ್ಮ ಬರೆದಿದ್ದನೇನೊ ? ಅಥವಾ ತಂಗಿ ?........ ಆ ಮೂವರಲ್ಲಿ ಯಾವನು ರಾಜಶೇಖರ ? ಆ ಕಾಗದದಲ್ಲಿ ಏನಿದೆಯೊ ? ತನ್ನ ತಂದೆ ತನಗೆ ಬರೆಯುವಂತೆ ಅವನ ತಂದೆ ಆತನಿಗೆ ಬರೆದಿರ ಬಹುದಲ್ಲವೆ ?

ಕಾಗದದ ಒಕ್ಕಣೆಯನ್ನು ಊಹಿಸಿಕೊಳ್ಳುವುದು ಜಯರಾಮು ವಿಗೆ ಕಷ್ಟವಾಗಿರಲಿಲ್ಲ :

'ಕುಶಲ' ಎಂದಿರಬಹುದು ಮೇಲ್ಗಡೆ ಇಲ್ಲವೆ, ಕಾಗದದ ಮೂಲೆಯಲ್ಲಿ 'ಕ್ಷೇಮ' ಎಂದು ಬರೆದು ಅದರ ಕೆಳಗೆ ಎರಡು ಗೆರೆ ಎಳೆದಿರಬಹುದು.......ಚಿ||ಗೆ ಮಾಡುವ ಆಶೀರ್ವಾದ.......ನಾವು ಇಲ್ಲಿ ಎಲ್ಲರೂ ಕ್ಷೇಮ.......ನಿನ್ನ ಕ್ಷೇಮಕ್ಕೆ ಆಗಾಗ್ಗೆ ಬರೆಯುತ್ತಿರು.......

ಹಾಗೆ ಕಾಗದ ಬರೆದ ತಂದೆ... ...ರಾಜಶೇಖರನ ತಂದೆಯನ್ನು ಚಿತ್ರಿಸಿಕೊಳ್ಳಲು ಜಯರಾಮು ಯತ್ನಿಸಿದ. ಆ ಆಕೃತಿ ಅಷ್ಟು ಸ್ಪಷ್ಟವಾಗಿ ಮೂಡಲಿಲ್ಲ. ತನ್ನ ಯೋಚನೆಗಳನ್ನು ಕಂಡು ಆತನಿಗೆ ನಗು ಬಂತು.

ರಾಧಾ ಬಾಗಿಲಿನಿಂದ ಹೊರಕ್ಕೆ ಇಣಿಕಿ ನೋಡಿ ಕೇಳಿದಳು:

"ಯಾರದಣ್ಣ ಕಾಗದ?"

"ನಮಗಲ್ವೆ"

–ಎಂದ ಜಯರಾಮು, ತನ್ನ ಯೋಚನೆಗಳನ್ನು ನಿಲ್ಲಿಸಿ. ಆ ಸ್ವರದಲ್ಲಿ ಸಿಡುಕಿತ್ತು. ವಠಾರದ ಇತರ ಹೆಂಗಸರ ಹಾಗೆ ತನ್ನ ತಂಗಿಯೂ ಅತಿ ಕುತೂಹಲಿಯಾಗುವುದು ಆತನಿಗೆ ಇಷ್ಟವಿರಲಿಲ್ಲ.

ಜಯರಾಮು ಮೊದಲ ಕೊಠಡಿಯ ಬಾಗಿಲ ಸಂದಿಯೊಳಗಿಂದ ಲಕೋಟೆಯನ್ನು ಒಳಕ್ಕೆ ತಳ್ಳಿದ.

ತರಗತಿ ಮುಗಿದೊಡನೆ ಒಂದಿನಂತೆ ಬಂದವನು ಆ ಹುಡುಗನೇ. ಕಾಲಲ್ಲಿ ಚಪ್ಪಲಿ ಇಲ್ಲದ ಆತ ಮೆಟ್ಟಿಲೇರಿದರೆ ಸದ್ದಾಗುತ್ತಿರಲಿಲ್ಲ. ಬಾಗಿಲ ಬೀಗವನ್ನೂ ಸಾವಧಾನವಾಗಿ ತೆರೆಯುತಿದ್ದ.

ಕಿಟಕಿಯ ಬಳಿ ಕುಳಿತಿದ್ದ ಜಯರಾಮುಗೆ, ಆ ಹುಡುಗ ಬಂದುದು ತಿಳಿಯಿತು. ಆತನೇ ರಾಜಶೇಖರನಿರಬಹುದು; ಕಾಗದ ತೆರೆದು ಓದುತ್ತಿರಬಹುದು ಎಂದು ಜಯರಾಮು ಕಲ್ಪಿಸಿಕೊಂಡ. ಸ್ವಲ್ಪಹೊತ್ತಾದ ಮೇಲೆ ಎದ್ದು, ಆ ಹುಡುಗನನ್ನು ಮಾತನಾಡಿಸೋಣವೆಂದು ಆ ಕೊಠಡಿಯತ್ತ ಸಾಗಿದ.

ಚಾಪೆಯ ಮೇಲೆ ಕುಳಿತುಕೊಂಡು ತಲೆಬಾಗಿಸಿ ಎರಡನೆಯ ಸಾರೆ ಕಾಗದ ಓದುತಿದ್ದ ಹುಡುಗ ಮುಖವೆತ್ತಿ ಬಾಗಿಲಿನತ್ತ ನೋಡಿದ. ತಾನು ಎಷ್ಟೋ ದಿನಗಳಿಂದ ನೋಡುತ್ತಲಿದ್ದ ವಠಾರದವನು ಅಲ್ಲಿ

ನಿಂತುದನ್ನು ಕಂಡು ಆ ಹುಡುಗನಿಗೆ ಸಂಕೋಚವೂ ಆಯಿತು ಸಂತೋಷವೂ ಆಯಿತು. ಎದ್ದು ನಿಂತು ಆತ ಹೇಳಿದ :

"ಒಳಗ್ಬನ್ನಿ."

"ಪರವಾಗಿಲ್ಲ....ಅಂಚೆಯವನು ಒಂದು ಕಾಗದ ತಂದ್ಕೊಟ್ಟ. ಒಳಗೆ ಹಾಕ್ದೆ. ಸಿಕ್ತೇನು ?"

"ಓ–ಸಿಕ್ತು."

"ನೀವೇನಾ ರಾಜಶೇಖರ ಅಂದರೆ ?"

"ಹೌದು. ಒಳಗ್ಬನ್ನಿ. ನಿಮ್ಮ ಹೆಸರು ಜಯರಾಮು ಅಲ್ವಾ?"

"ಹೌದು. ಜಯರಾಂ ಅಂತ"

ಎಂದು ಸ್ವಲ್ಪ ತಿದ್ದುವ ಧ್ವನಿಯಲ್ಲಿ ಜಯರಾಮು ಹೇಳಿದ. ತನ್ನ ತಾಯಿ ಹೆಸರು ಹಿಡಿದು ಕರೆಯುವುದನ್ನು ಕೇಳಿ ತಿಳಿದುಕೊಂಡಿರ ಬೇಕು ಎಂದು ಲೆಕ್ಕ ಹಾಕಿದ.

ಜಯರಾಮು ಒಳಗೆ ಬರಲಿಲ್ಲವೆಂದು ರಾಜಶೇಖರ ಎದ್ದು ನಿಂತ. ಆತನ ದೃಷ್ಟಿ ಜಯರಾಮು ಹಿಡಿದಿದ್ದ ಪುಸ್ತಕದತ್ತ ಹೋಯಿತು. ತಾನು ಸೆಪ್ಟೆಂಬರ್ ವೀರನೆಂದು ಹೇಳಬೇಕಾದ ಹೊತ್ತು ಬಂತು ಎಂದುಕೊಂಡ ಜಯರಾಮು.

ಮಾತು ಮುಂದವರಿಸಬೇಕೊ ಬೇಡವೊ ಎಂದು ಸಂಕೋಚ ಪಡುತ್ತಲೆ ರಾಜಶೇಖರ ಕೇಳಿದ :

"ನೀವು ಕ್ಲಾಸಿಗೆ ಹೋಗಲ್ವೆ ?"

"ಇಲ್ಲಾರಿ. ಸೆಪ್ಟೆಂಬರ್‌ಗೆ ಕಟ್ಟಿದೀನಿ."

"ಬಿ. ಎಸ್. ಸೀನೆ ?"

ಇದು ನುಂಗಲಾಗದ ತುತ್ತು ಎನ್ನಿಸಿತು ಜಯರಾಮುಗೆ.

"ಅಲ್ಲ. ಇಂಟರ್. ಒಂದು ಪಾರ್ಟೆದೆ, ಅಷ್ಟೆ."

ಕಣ್ಣುಗಳನ್ನು ಮಿನುಗಿಸುತ್ತಾ ರಾಜಶೇಖರ ಕೇಳಿದ :

"ನಿಮಗೆ ಪರಮೇಶ್ವರಪ್ಪ ಗೊತ್ತಾ ?"

ಪರಮೇಶ್ವರಪ್ಪನ ವಿಷಯವಾಗಿ ಆ ಹುಡುಗನಿಗೆ ತುಂಬಾ ಗೌರವವಿತ್ತೆಂಬುದು ಆ ಧ್ವನಿಯಿಂದಲೆ ಸ್ಪಷ್ಟವಾಗುತಿತ್ತು.

"ಹೌದು ಹೋದ ವರ್ಷ ಇಲ್ಲೇ ಇದ್ರು."

"ಅವರ ಸಹಾಯದಿಂದಲೇ ನನಗೆ ಈ ಕೊಠಡಿ ಸಿಗ್ತು."

ಪರಮೇಶ್ವರಪ್ಪ ರಂಗಮ್ಮನಿಗೆ ಕಾಗದ ಬರೆದಿದ್ದ ವಿಷಯ ವಂತೂ ಜಯರಾಮುಗೆ ಗೊತ್ತಿತ್ತು.

"ಪರಮೇಶ್ವರಪ್ಪ ಈಗೇನು ಮಾಡ್ತಾರೆ?"

"ಓ – ಅವರು ಬೆಳಗಾಂವಿಗೆ ಹೊರಟ್ಹೋದ್ರು. ವಕೀಲಿ ಓದ್ತಾರಂತೆ."

"ಅದ್ಯಾಕೆ, ಅಷ್ಟು ದೂರ ?"

"ಅಲ್ಲಿ ಪೇಷ್ಕು ಕೆಲಸ ಸುಲಭವಾಗಿ ಸಿಗುತ್ತಂತೆ. ಅದನ್ನೂ ಮಾಡ್ಕೊಂಡು ವಕೀಲಿ ಓದ್ತಾರಂತೆ."

"ಓ.... ಹಾಗಾ ?"

ಸಂಭಾಷಣೆ ಮುಂದುವರಿಸಲು ಬೇರೆ ವಿಷಯವಿಲ್ಲದೆ ರಾಜಶೇಖರ ತಡವುತಿದ್ದಂತೆ ಕಂಡಿತು. ಜಯರಾಮುವಂತೂ ಮೊದಲೇ ಕಡಿಮೆ ಮಾತಿನ ಮಹಾನುಭಾವ.

"ಆಗಲಿ, ಬರ್ತೀನಿ ರಾಜಶೇಖರ್."

"ಹೂಂ."

ಜಯರಾಮು ತನ್ನ ಬಾಗಿಲಿನತ್ತ ತಿರುಗಿದೊಡನೆಯೇ ರಾಜಶೇಖರ ಕರೆದುದು ಕೇಳಿಸಿತು.

"ಸಾರ್–ಒಂದ್ನಿಮಿಷ."

ಜಯರಾಮು ತಿರುಗಿ ನೋಡಿದ. ಕಾಗದವನ್ನು ಕೈಲಿ ಹಿಡಿದಿದ್ದಂತೆಯೇ ರಾಜಶೇಖರ ತನ್ನ ಕೊಠಡಿಯ ಹೊರಕ್ಕೆ ಬಂದಿದ್ದ. 'ಸಾರ್' ಸಂಬೋಧನೆಯಿಂದ ಜಯರಾಮುಗೆ ಹೇಗೋ ಹೇಗೋ ಆಯಿತು.

"ಏನು?"

"ನಾಳೆ ನನಗೊಂದು ಮನಿಯಾರ್ಡರ್ ಬರುತ್ತೆ. ಇಲ್ಲಿಗೆ ಪೋಸ್ಟ್ ಬರೋದು ಎಷ್ಟು ಘಂಟೆಗೆ ಹೇಳ್ತೀರಾ?"

"ಮನಿಯಾರ್ಡರೆ ? ಅದೆಲ್ಲಾ ಬರೋದು ಎರಡ್ನೇ ಪೋಸ್ಟ್‌ನಲ್ಲಿ.

ಈ ಬೀದಿಗೆ ಸುಮಾರು ಮೂರು ಘಂಟೆಗೆ ಬರ್ತಾನೆ."

ರಾಜಶೇಖರನ ಮುಖ ಸಪ್ಪಗಾಯಿತು.

"ನನಗೆ ಕ್ಲಾಸಿದೆಯಲ್ಲಾ?"

"ಏನು ಮಾಡೋ ಹಾಗೂ ಇಲ್ಲ. ನಾಳೆ ಒಂದ್ಹೊತ್ತು ನೀವು ರಜಾ ತಗೋಬೇಕು."

ಅಂತಹ ಪರಿಸ್ಥಿತಿ ರಾಜಶೇಖರನಿಗೆ ಇಷ್ಟವಿದ್ದಂತೆಯೇ ತೋರಲಿಲ್ಲ.

"ಬೇರೆ ಉಪಾಯವೇ ಇಲ್ಲ. ಇನ್ಮೇಲಿಂದ ಮನಿಯಾರ್ಡರೆಲ್ಲಾ ಕಾಲೇಜು ಅಡ್ರೆಸಿಗೇ ತರಿಸ್ಕೊಳ್ಳಿ."

ಪರಊರಿನ ಎಷ್ಟೋ ಹುಡುಗರು ಹಾಗೆ ಮಾಡುವುದನ್ನು ಜಯರಾಮು ಕಂಡಿದ್ದ.

"ಹೂಂ. ಹಾಗೇ ಮಾಡ್ಬೇಕು...."

ಎಂದು ಬಾಡಿದ ಮುಖದೊಡನೆ ರಾಜಶೇಖರ ಒಳಹೋದ. ಔಪಚಾರಿಕವಾದ 'ಥ್ಯಾಂಕ್ಸ್' ಪದ ಪ್ರಯೋಗವೆಲ್ಲ ಆತನಿಗೆ ಮರೆತು ಹೋಯಿತು. ತನ್ನನ್ನು ಸಾರ್ ಎಂದು ಕರೆಯಬಾರದೆಂದು ಹೇಳ ಬೇಕೆಂದಿದ್ದ ಜಯರಾಮು. ಆದರೆ ರಾಜಶೇಖರ ಅಷ್ಟು ಬೇಗನೆ ಒಳ ಸೇರಿಬಿಟ್ಟುದರಿಂದ ಅದು ಸಾಧ್ಯವಾಗಲಿಲ್ಲ. ಇನ್ನೊಮ್ಮೆ ಕಂಡಾಗ ತಪ್ಪದೆ ಹೇಳಬೇಕು ಎಂದು ಜಯರಾಮು ಮನಸ್ಸಿನಲ್ಲೆ ಅಂದುಕೊಂಡ.

................

ಆ ಕೊಠಡಿಯ ಉಳಿದಿಬ್ಬರು ಹುಡುಗರು ರಾಜಶೇಖರನ ಹಾಗಿರಲಿಲ್ಲ. ಅವರಲ್ಲೊಬ್ಬ – ದೇವಯ್ಯ – ಒಂದು ತಿಂಗಳೊಳಗೇ ಕಾಲೇಜಿನ ಸೊಗಸುಗಾರನಾದ.

"ಇದು ಸುಡುಗಾಡು ರೂಮು. ಮುಂದಿನ ಟರ್ಮಿನ ಹೊತ್ತಿಗೆ ಕಾಲೇಜು ಹಾಸ್ಟೆಲಿಗೇ ಸೇರ್ಕೊಳ್ತೀನಿ."

ಎಂದು ಪದೇ ಪದೇ ಆತ ಹೇಳುವುದಿತ್ತು. ಆತನ ತಾಯಿ ತಂದೆ ರಾಜಶೇಖರನಲ್ಲಿ ವಿಶ್ವಾಸವಿಟ್ಟಿದ್ದರು. ಅವನ ಸಹವಾಸದಲ್ಲಿ ತಮ್ಮ ಹುಡುಗ ಕೆಡಲಾರನೆಂಬುದು ಅವರು ಇಟ್ಟುಕೊಂಡಿದ್ದ ಆಸೆ.

ಆದರೆ ಸ್ವತಃ ಸಪ್ಪಗಣಿಯಾದರೂ ಮತ್ತೊಬ್ಬರ ಮೇಲೆ ಪ್ರಭಾವ ಬೀರುವಷ್ಟರ ವ್ಯಕ್ತಿತ್ವ ರಾಜಶೇಖರನಿಗೆ ಇರಲಿಲ್ಲ.

ಆ ಹುಡುಗ ದಿನಬಿಟ್ಟು ದಿನ, ಒಮ್ಮೊಮ್ಮೆ ದಿನವೂ, ಸಿನಿಮಾ ನೋಡುತ್ತಿದ್ದರೆ ರಾಜಶೇಖರ ಹೇಳುವುದಿತ್ತು :

"ಕಣ್ಣಿಗೆ ಕೆಟ್ಟು ಕಣಪ್ಪ. ಎಷ್ಟೊಂತ ನೋಡ್ತೀಯಾ ?"

"ಓಗ್ಲಿ ಬಿಡು. ಕಣ್ಣಿಗೆ ಕನ್ನಡಕ ಆಕಿಸ್ಕೊಂಡ್ರಾಯ್ತು."

ಮೊದಮೊದಲು ದೇವಯ್ಯ ರಾಜಶೇಖರನಿಗೆ ತಿಳಿಯದಂತೆ ಹೊರಗೆ ಸಿಗರೇಟು ಸೇದುತ್ತಿದ್ದ. ಕ್ರಮೇಣ ಅವನೆದುರೇ ಸೇದಿದ. ಆಗಲೂ ರಾಜಶೇಖರ ಒಳ್ಳೆಯ ಮಾತು ಹೇಳಲು ಪ್ರಯತ್ನಿಸಿದ್ದುಂಟು.

"ಯಾಕಪ್ಪ ಸಿಗರೇಟು ಸೇದ್ತೀಯಾ ? ಕ್ಷಯರೋಗ ಬತ್ತದೆ ನೋಡು !"

"ನಾಕು ಬಿಡೋ. ಊರ ಹೊರ್ಗೆ ಸಾಂಟೋರಿಯಂ ನೋಡಿದ್ಯೋ ಇಲ್ವೊ ?"

ಒಂದು ದಿನ ಕೊಠಡಿಯಲ್ಲೇ ಆತ ಸಿಗರೇಟು ಹಚ್ಚಿದಾಗ ರಾಜಶೇಖರನಿಗೆ ರೇಗಿತು.

"ಬೇಡಪ್ಪೋ. ಆರ್ಸು. ಆರ್ಸು."

"ಯಾಕೆ ? ಬೆಂಕಿ ಹತ್ಕೊಂತಾ ಮನೆಗೆ ?"

"ಲೇ, ಆರ್ಸೋ. ಆ ಯಮ್ಮಂಗೆ ಗೊತ್ತಾದ್ರೆ ನಮ್ನೆಲ್ಲಾ ಓಡಿಸ್ತಾರೆ."

"ಅದು ಹೆಂಗೆ ಓಡಿಸ್ತಾರೆ ? ಬಿಟ್ಟೀ ಕುಂತಿದೀವಾ ಇಲ್ಲಿ ? ಬಾಡಿಗೆ ಕೊಡಲ್ವೇನು?"

"ಬ್ರಾಂಬರ ಮನೆ ಕಣಪ್ಪಾ...."

ರಾಜಶೇಖರ ಆ ಬಾಣವೆಸೆದ, ಅದಾದರೂ ತಾಗಬಹುದೆಂದು.

"ನೋಡಿದೀನಿ ಬಿಡು. ಪಕ್ಕದ್ಮನೆಯೋರು ಸೇದಲ್ವಾ?"

ದೇವಯ್ಯನೊಡನೆ ಎದುರು ವಾದಿಸಿ ಗೆಲ್ಲುವುದು ಸಾಧ್ಯವಿರಲಿಲ್ಲ.

ಆತ ಪಾಠಗಳಿಗೆ ಗಮನ ಕೊಡುತ್ತಿರಲಿಲ್ಲ. ತಡವಾಗಿ ಏಳುತ್ತಿದ್ದ.

ರಾಧೆಯನ್ನು ನೋಡಿ ಒಂದೆರಡು ಬಾರಿ ಮುಗುಳ್ನಗುವುದಕ್ಕೂ

ದೇವಯ್ಯ ಗುರ್ತಿಸಿದ. ಒಮ್ಮೆ ಹಾಗೆ ಮಾಡಿದಾಗ ರಾಧೆ ಜಯರಾಮುಗೆ ದೂರು ಕೊಟ್ಟಳು. ಆತ ಹೊರಬಂದು ಎರಡು ನಿಮಿಷ ಆ ಹುಡುಗನನ್ನೇ ಎವೆಯಿಕ್ಕದೆ ನೋಡಿದ. ಆದರೆ ಆ ನೋಟದಿಂದೇನೂ ಪರಿಣಾಮವಾಗಲಿಲ್ಲ!

ಒಂದು ರಾತ್ರೆ ದೇವಯ್ಯ ಸ್ವಲ್ಪ ತಡವಾಗಿ ಬಂದ. ಸಿಳ್ಳು ಹಾಕುತ್ತಾ ಮೆಟ್ಟಲೇರಿದ. ದೀಪ ಆರಿಸುವ ಹೊತ್ತಾಯಿತೆಂದು ಕೊನೆಯ 'ಗಸ್ತಿ' ಮಾಡುತ್ತಾ ಹೆಬ್ಬಾಗಿಲಿಗೆ ಬಂದ ರಂಗಮ್ಮನಿಗೆ ಆ ಸಿಳ್ಳು ಕೇಳಿಸಿತು. 'ಓದುವ ಹುಡುಗರ ಪೈಕಿ'ಯೇ ಇರಬೇಕೆಂದು ರಂಗಮ್ಮನಿಗೆ ಖಚಿತವಾಯಿತು.

ಅವರು ಸ್ವರವೆತ್ತಿ ಕೂಗಾಡಿದರು :

"ಯಾಂದು—ಸಿಳ್ಳು ಹಾಕ್ತಿರೋದು ?"

ಉತ್ತರ ಬರಲಿಲ್ಲ.

ರಂಗಮ್ಮ ರೇಗುತ್ತ ಅಂದರು :

"ಇದೇನು ಸಂತೇ ಬೀದಿ ಕೆಟ್ಹೋಯ್ತು ? ಮಾನ ಮರ್ಯಾದೆ ಒಂದೂ ಬೇಡ್ವೆ ? ಯಾರಪ್ಪಾ ಅದು ? ಸಿಳ್ಳು ಹಾಕೋವಷ್ಟು ಸೊಕ್ಕು ಬಂದಿರೋದು ಯಾರಿಗಪ್ಪ ?"

ಎದುರಿನ ಹಾಗೂ ಪಕ್ಕದ ಸಂಸಾರಗಳು ಮೌನವಾಗಿ ರಂಗಮ್ಮನ ಮಾತಿಗೆ ಕಿವಿಗೊಟ್ಟುವು.

ರಾಧಾ ಅಣ್ಣನಿಗೆಂದಳು :

"ಆ ಹುಡುಗ್ನೇ ಇರ್ಬೇಕು."

ಆ ಹುಡುಗ—ಎಂದರೆ ರಾಧೆಯನ್ನು ನೋಡಿ ಮುಗುಳು ನಕ್ಕಿದ್ದವನು. ತಂಗಿಯ ಊಹೆ ಸರಿ ಎಂಬ ವಿಷಯದಲ್ಲಿ ಜಯರಾಮುಗೆ ಸಂದೇಹವಿರಲಿಲ್ಲ.

ದೇವಯ್ಯ ಮಾತನಾಡಲಿಲ್ಲ. ರಾಜಶೇಖರನ ಎದೆ ಡವಡವನೆ ಹೊಡೆದುಕೊಂಡಿತು. ಮತ್ತೊಬ್ಬನಿಗೂ ಗಾಬರಿಯಾಯಿತು. ಆದರೆ ಸಿಳ್ಳು ಹಾಕಿದ ಸದ್ಗೃಹಸ್ಥ ಬೂಟ್ಸು ತೆಗೆದಿಟ್ಟು, ಅರ್ಥವಾಗದಂತೆ ಏನನ್ನೊ ಗೊಣಗುತ್ತಾ, ಚಾಪೆಯ ಮೇಲೆ ಉರುಳಿಕೊಂಡ. ಆದಷ್ಟು

ಬೇಗನೆ ಆ ವಠಾರ ಬಿಟ್ಟು ಹೋಗಬೇಕೆಂಬ ಅವನ ಯೋಚನೆ ಬಲವಾಯಿತು. "ಈ ವಠಾರದಲ್ಲಿ ಓದಲು ಅನುಕೂಲವಿಲ್ಲ. ಹಾಸ್ಟೆಲಿಗೆ ಸೇರ್ಕೊ ಅಂತ ಪ್ರೊಫೆಸರೂ ಹೇಳಿದ್ದಾರೆ" ಎಂದೆಲ್ಲ ತಂದೆಗೆ ಬರೆಯಬೇಕೆಂದು ತೀರ್ಮಾನಿಸಿದ.

ಮೂರನೆಯವನು ಚಿಕ್ಕ ಹುಡುಗ. ಮೊದಲ ಬಾರಿ ಬೆಂಗಳೂರಿಗೆ ಬಂದಾಗ ಸಿಂಹದ ಬೋನಿನ ಬಾಗಿಲ ಬಳಿ ತಂದು ಬಿಟ್ಟ ಹಾಗಾಗಿತ್ತು ಆತನ ಸ್ಥಿತಿ. ಪೋಕಿ ಹುಡುಗನ ಜತೆಗಾರನಾಗಲು ಆತನಿಗೆ ಭಯವೆನಿಸುತ್ತಿತ್ತು. ಆ ಹುಡುಗ ಬಡವನೇ. ಆಗಾಗ್ಗೆ ದೇವಯ್ಯ ಆತನನ್ನು ಕರೆಯುತ್ತಿದ್ದ.

"ಏ, ಬಾರೋ. ಪಿಕ್ಚರ್ ನೋಡ್ಕೊಂಬರೋಣ"

"ನೀನು ಹೋಗು. ನಾ ಒಲ್ಲೆ."

"ಅದ್ಯಾಕೆ ಬೆಕ್ಕಿನ್ಮರಿ ಅಂಗೆ ಅವುಕ್ಕೊಂತೀಯಾ ರೂಮ್ನಲ್ಲಿ? ಬಾ-ಬಾ....ಟಿಕೆಟಿನ ದುಡ್ಡು ನಾ ಕೊಡ್ತೀನಿ."

ಚಿಕ್ಕ ಹುಡುಗ ದೊಡ್ಡವನೊಡನೆ ಸಿನಿಮಾ ನೋಡಲು ಹೋದ. ಆದರೆ ಆತನ ಜತೆಯಲ್ಲಿ ಸಿಗರೇಟು ಸೇದಲಿಲ್ಲ. ದೊಡ್ಡವನು ಹುಡುಗಿಯರನ್ನು ನೋಡಿ ನಗೆಮಾತನ್ನಾಡಿದಾಗ ಚಿಕ್ಕವನು ನಕ್ಕನೇ ಹೊರತು, ತಾನು ಸ್ವತಃ ಯಾವ ಮಾತನ್ನೂ ಆಡಲಿಲ್ಲ.

ಚಿಕ್ಕವನೂ ಸಹವಾಸದೋಷದಿಂದ ಕೆಟ್ಟುಹೋಗುತಿದಾನಲ್ಲಾ ಎಂದು ರಾಜಶೇಖರನಿಗೆ ಕೆಡುಕೆನಿಸಿತು.

ಆದರೆ ಅವನು ಕೆಟ್ಟುಹೋಗಲಿಲ್ಲ. ಆ ಪುಟ್ಟ ಹುಡುಗನಿಗೆ ಬೇಗನೆ ಪಂದ್ಯಾಟದ ಹುಚ್ಚು ಹಿಡಿಯಿತು. ಎಚ್ಚರದಲೂ ನಿದ್ದೆಯಲ್ಲೂ ಆತ ಕ್ರಿಕೆಟ್ ಮಂತ್ರ ಜಪಿಸಿದ. ಸ್ವತಃ ಕಣಕ್ಕಿಳಿಯದಿದ್ದರೂ ಕ್ರಿಕೆಟ್ ಪ್ರೇಮಿಯಾದ.

ಆಟಗಳಲ್ಲಿ ಆಸಕ್ತಿಯಿಲ್ಲದ ರಾಜಶೇಖರನಿಗೆ ಆ ಹುಡುಗನ ಕ್ರಿಕೆಟ್ ಪ್ರೇಮ ಒಪ್ಪಿಗೆಯಾಗದೆ ಹೋದರೂ, ದೇವಯ್ಯನ ಪೋಲಿತನಕ್ಕಿಂತ ಇದು ಸಹಸ್ರ ಪಾಲು ಮೇಲು ಎನ್ನುವುದು ಆತನ ಅಭಿಪ್ರಾಯವಾಗಿತ್ತು.

ರಂಗಮ್ಮ ಬೇಗನೆ ದೀಪ ಆರಿಸುತಿದ್ದುದರಿಂದ ರಾಜಶೇಖರನಿಗೆ ಓದಿಕೊಳ್ಳಲು ಕಷ್ಟವಾಯಿತು. ಒಂದು ರೂಪಾಯಿ ಕೊಟ್ಟು ಆತ ಬೆಡ್‌ಲ್ಯಾಂಪ್ ಕೊಂಡು ತಂದ. ಆತ ತರುತ್ತಲಿದ್ದಾಗ ಅದನ್ನು ನೋಡಿದ ಜಯರಾಮು ಕೇಳಿದ:

"ರಾತ್ರಿ ಓದ್ಕೋಕೆ ದೀಪ ಇಟ್ಕೊಂಡರೆ ಆಗುತ್ತೆ ಅಲ್ವೆ?"

"ಹೂಂ ಕಣ್ರೀ."

'ಸಾರ್' ಹೊರಟು ಹೋಗಿತ್ತು. ಅವರು ಆತ್ಮೀಯ ಗೆಳೆಯರಾಗದೆ ಹೋದರೂ ಒಳ್ಳೆಯ ಪರಿಚಿತರಾಗಿದ್ದರು.

"ನಮ್ಮನೇಲೂ ಅಂಥದೇ ಒಂದಿದೆ."

ಇನ್ನು ರಾಜಶೇಖರ ಒಂದು ಶೀಷೆ ಸೀಮೆಎಣ್ಣೆ ತರಬೇಕು. ಅದಕ್ಕಾಗಿ ಖಾಲಿ ಶೀಷೆಯೊಂದನ್ನು ಕೊಳ್ಳಬೇಕು. ತಮ್ಮ ಮನೆಯಲ್ಲಿ ಒಂದು ಖಾಲಿಶೀಷೆ ಇದ್ದುದು ಜಯರಾಮುಗೆ ನೆನಪಾಗಿ ಅದನ್ನು ಆತನಿಗೆ ಕೊಟ್ಟು ಬಿಡೋಣವೆನ್ನಿಸಿತು. ಆ ವಿಚಾರ ಮಾತನಾಡಬೇಕೆಂದು ನಾಲಿಗೆ ಸಿದ್ಧವಾಗುತಿದ್ದಾಗಲೆ 'ತಡೆ' ಎಂದಿತು ಮಿದುಳು. 'ಹಳೇ ಪೇಪರ್-ಶೀಷೆ'ಯವನಿಗೆ ಅದನ್ನು ಮಾರಬೇಕೆಂದು ರಾಧಾ ಆಗಲೆ ಲೆಕ್ಕ ಹಾಕಿದ್ದಳು. ಅವರ ಮನೆಯ ಮುಖನೋಡುವ ಕನ್ನಡಿ ಒಡೆದು ಹೋಗಿತ್ತು. ದುಡ್ಡು ಕೂಡಿಟ್ಟು ಆದಷ್ಟು ಬೇಗನೆ ಮತ್ತೊಂದನ್ನು ಕೊಳ್ಳಬೇಕೆಂಬುದು ರಾಧೆಯ ಯೋಜನೆ........ಅದೇ ಸರಿಯಾಗಿತ್ತು. ಔದಾರ್ಯವನ್ನು ತೋರಿಸೋಣವೆಂದು ಭಾವಿಸಿದ್ದ ಆತ, ಆ ಯೋಚನೆಯನ್ನು ಬಿಟ್ಟುಕೊಟ್ಟು ತೆಪ್ಪಗಾದ.

ಆದರೆ ಆ ಬೆಡ್‌ಲ್ಯಾಂಪಿನ ಅಗತ್ಯದ ವಿಷಯವಾಗಿ ಕೊಠಡಿಯಲ್ಲಿ ಏಕಾಭಿಪ್ರಾಯವಿರಲಿಲ್ಲ. ಅಷ್ಟೇ ಅಲ್ಲ. ಹೊಸದೀಪ ಭಿನ್ನಾಭಿಪ್ರಾಯಗಳನ್ನು ಮತ್ತಷ್ಟು ತೀವ್ರಗೊಳಿಸಿತು.

ರಾಜಶೇಖರನ ಸ್ವರವನ್ನೆ ಅಣಕಿಸುತ್ತ ದೇವಯ್ಯ ಹೇಳಿದ:

"ಆ ದೀಪ ಉರಿಸ್ಬೇಡವೋ ಮಾರಾಯ. ಕಣ್ಣಿಗೆ ಕೆಟ್ದು."

ರಾಜಶೇಖರ ಉತ್ತರ ಕೊಡಲಿಲ್ಲ.

"ನಮಗೆ ನಿದ್ದೆ ಬರದ ಹಾಗೆ ಮಾಡ್ತೀಯಪ್ಪ ನೀನು!"

ದೇವಯ್ಯ ಹೊಸ ಅಸ್ತ್ರ ಪ್ರಯೋಗಿಸಿದ.

ಆದರೆ ಚಿಕ್ಕವನು ಆತನ ಜತೆ ಸೇರಲಿಲ್ಲ.

"ನಂಗೆ ಪರವಾಗಿಲ್ಲ. ದೀಪ ಇದ್ರೂ ನಿದ್ದೆ ಬತ್ತದೆ. ನಮ್ಮನೇಲಿ ದೀಪ ಉರಿಸ್ಕಂಡೆ ಮಲಕ್ಕೋತೀವಿ."

"ಬೆಳಕಿಗೆ ರಟ್ಟೆ ಅಡ್ಡ ಇಡ್ತೀನಿ. ಯಾರಿಗೂ ತೊಂದ್ರೆ ಆಗೋದಿಲ್ಲ ಬಿಡು."

ಆದರೆ ದೇವಯ್ಯ ಮಾತಿನಲ್ಲಿ ಸೋಲಲು ಇಷ್ಟಪಡಲಿಲ್ಲ. ಪುಸ್ತಕ ಕ್ರಿಮಿ, ಮಹಾಪಂಡಿತ, ಮೆರಿಟ್ ಸ್ಕಾಲರ್,—ಎಂದೆಲ್ಲಾ ರಾಜಶೇಖರ ನನ್ನು ಲೇವಡಿ ಮಾಡಿದ.

"ಪರೀಕ್ಷೆ ಬರ್ಲಿ. ಆಗ ಗೊತ್ತಾತದೆ"

—ಎಂದು ರಾಜಶೇಖರ ಎಚ್ಚರಿಕೆಯ ಮಾತನ್ನಾಡಿದ.

ಆ ಸ್ವರ ಕೇಳಿ ಚಿಕ್ಕ ಹುಡುಗನಿಗೆ ಭಯವಾಯಿತು. ಆತ ಹೇಳಿದ:

"ನಾನೂ ಓದ್ಕೋಬೇಕು."

ನಿದ್ದೆ ಹೋಗಲು ಸಿದ್ಧನಾಗುತ್ತಾ ದೇವಯ್ಯ ಚಿಕ್ಕವನ ಸ್ವರ ವನ್ನೂ ಅಣಕಿಸಿದ:

"ಓಹೋಹೋಹೋ........ನಾನೂ ಓದ್ಕೋಬೇಕು. ಭಪ್ಪರೇ ವಿದ್ಯಾಪ್ರವೀಣ!"

ರಾಜಶೇಖರನಿಗೆ ಇದು ಸಹನೆಯಾಗಲಿಲ್ಲ.

"ನೀನು ಹೀಗೆಲ್ಲಾ ಆಡೋದು ನಿಮ್ತಂದೆಗೆ ಗೊತ್ತಾದ್ರೆ ನಿನ್ನ ಚರ್ಮ ಸುಲೀತಾರೆ ನೋಡ್ಕೊ."

ನಿಜ ಸಂಗತಿಯನ್ನೇ ಹೇಳಿದ್ದ ರಾಜಶೇಖರ. ಆ ಹುಡುಗನ ತಂದೆಯ ಸಿಡುಕ ಪ್ರವೃತ್ತಿ ಆತನಿಗೆ ಗೊತ್ತೇ ಇತ್ತು. ಆದರೆ ತಂದೆಯ ನೆನಪು ಮಾಡಿಕೊಟ್ಟುದು ಆ ಹುಡುಗನಿಗೆ ರುಚಿಸಲಿಲ್ಲ. ಆತ ಸುಟ್ಟು ಬಿಡುವ ಕಣ್ಣುಗಳಿಂದ ರಾಜಶೇಖರನನ್ನು ನೋಡುತ್ತಾ ಹೇಳಿದ:

"ಅದೇನೋ ಅದು? ನಮ್ತಂಥೆಗೆ ಕಾಗದ ಬರೀಬೇಕೂಂತ ಮಾಡೀಯೇನು? ಸಿ.ಐ.ಡಿ. ಕೆಲ್ಸ! ಅಂಥಾದ್ದೇನಾದ್ರೂ ಮಾಡ್ದೆ

ಅಂದ್ರೆ—"

ರಾಜಶೇಖರ ಹೆದರಲಿಲ್ಲ. ಆದರೆ ಅವನಿಗೆ ಬೇಸರವಾಯಿತು. ಕಾಲು ಗಂಟೆ ಆತ ಹೊಸ ದೀಪದ ಬೆಳಕಿನಲ್ಲಿ ಓದಲು ಯತ್ನಿಸಿದ. ಆದರೆ ದುಗುಡ ಒತ್ತರಿಸಿ ಬಂದು ದೃಷ್ಟಿ ಮಸಕಾಯಿತು. ಎಷ್ಟೊಂದು ಉತ್ಸಾಹದಲ್ಲಿ ಹೊಸದೀಪವನ್ನು ಕೊಂಡು ತಂದಿದ್ದ ಆತ! ಈಗ ಎಳ್ಳಷ್ಟೂ ಉತ್ಸಾಹ ಉಳಿದಿರಲಿಲ್ಲ. ಪುಸ್ತಕ ಮಡಚಿ ದೀಪ ಆರಿಸಿ ಆತ ಚಾಪೆಯ ಮೇಲೆ ಉರುಳಿಕೊಂಡ. ತಲೆದಿಂಬು ಕಣ್ಣೀರಿನಿಂದ ತೋಯ್ದು ಹೋಯಿತು.

ಮೊದಲು ಚಿಕ್ಕವನು ನಿದ್ದೆ ಹೋದ. ದೊಡ್ಡವನು ಉದ್ರಿಕ್ತನಾಗಿದ್ದ ಮನಸ್ಸನ್ನು ನಿದ್ದೆಯ ಹೊದಿಕೆಯೊಳಗೆ ಮುಚ್ಚಲೆತ್ನಿಸುತ್ತಾ ಅತ್ತಿತ್ತ ಹೊರಳಾಡಿದ

ರಾಜಶೇಖರನಿಗೆ ಬಹಳ ಹೊತ್ತು ನಿದ್ದೆ ಬರಲೇ ಇಲ್ಲ. ಬಂದ ಆರಂಭದಲ್ಲಿ ಅವನು ಆಸೆ ಕಟ್ಟಿಕೊಂಡಿದ್ದ—ತಮ್ಮ ಊರಿನ ತಾವು ಮೂವರೂ ಜತೆಯಾಗಿಯೇ ಸ್ನೇಹದಿಂದ ಇರಬೇಕೆಂದು. ಆ ಆಸೆ ಈಗ ಇರಲಿಲ್ಲ. ತನ್ನಿಂದ ಬಲು ದೂರ ಸಾಗಿದ್ದ ಆ ಜತೆಗಾರ ತನ್ನ ತಂದೆಯನ್ನು ಒಪ್ಪಿಸಿ ಕಾಲೇಜು ಹಾಸ್ಟೆಲಿಗೇ ಹೋಗುವ ಸಂಭವವಿತ್ತು. ಹಾಗೆ ಹೋದರೆ ಕೊಠಡಿಯ ಬಾಡಿಗೆಯ ಭಾರ ಉಳಿದಿಬ್ಬರ ಮೇಲೆಯೇ ಬೀಳುವುದು. ಜತೆಯಾಗಿರಲು ಬೇರೊಬ್ಬ ವಿದ್ಯಾರ್ಥಿ ಸುಲಭವಾಗಿ ಸಿಗುವ ಸಂಭವವಿರಲಿಲ್ಲ.

ಮುಂದಿನ ವರ್ಷವಾದರೂ ಉಚಿತ ವಿದ್ಯಾರ್ಥಿನಿಲಯದಲ್ಲಿ ಜಾಗ ದೊರಕಿಸಿಕೊಳ್ಳಲು ತಾನು ಯತ್ನಿಸಬೇಕೆಂದು ರಾಜಶೇಖರ ಅಂದುಕೊಂಡ.

ನಾಲ್ಕು ಅಡಿಗಳ ಅಂತರದಲ್ಲಿ ಮಲಗಿದ್ದ ಸಹಪಾಠಿಯೊಡನೆ ಹೃದಯ ತೆರೆದು ಮಾತನಾಡಬೇಕೆಂಬ ಆಸೆಯಾಯಿತು, ಅತ್ತು ಮನಸ್ಸು ತಿಳಿಯಾಗಿದ್ದ [illegible]ರನಿಗೆ. ಆದರೆ ಆ ಸಹಪಾಠಿಗೆ ನಿದ್ದೆ ಬಂದಿತ್ತು ಅಷ್ಟರ[illegible]

..........

ಈ ವರ್ಷ ರಂಗಮ್ಮ ಮಹಡಿಯ ಮೇಲಿನ ವಿದ್ಯಾರ್ಥಿಗಳ ವಿಷಯದಲ್ಲಿ ಒಳ್ಳೆ ಅಭಿಪ್ರಾಯ ತಳೆಯಲಿಲ್ಲ. ಹುಡುಗರಲ್ಲೊಬ್ಬ ಸಿಗರೇಟು ಸೇದುತ್ತಿದ್ದುದೂ ಅವರಿಗೆ ಗೊತ್ತಾಯಿತು. ನಾಲ್ಕು ದಿನ 'ಕಾಲ ಕೆಟ್ಟುಹೋಯ್ತು'ಂದು ಅವರು ಗೊಣಗಿದರು. ಆ ಬಳಿಕ, 'ಬಾಡಿಗೆ ಸರಿಯಾಗಿ ಬರ್ತಿದೇಂತ ಸುಮ್ಮನಿದೀನಿ' ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡರು.

ಬಂದ ಆರಂಭದಲ್ಲಿ ಮೂವರು ಹುಡುಗರೂ ವಠಾರದ ಕಕ್ಕಸನ್ನು ಉಪಯೋಗಿಸಲು ಯತ್ನಿಸಿದ್ದರು. ಆದರೆ ಅಲ್ಲಿ ಕ್ಯೂ ನಿಂತು, ಎರಡು ದಿನಗಳಲ್ಲೇ ಅವರಿಗೆ ಸಾಕೋಸಾಕು ಅನ್ನಿಸಿಹೋಯಿತು. ಆ ಬಳಿಕ ಪ್ರತಿಯೊಂದಕ್ಕೂ ಅವರು ಹೋಟೆಲನ್ನೇ ಅವಲಂಬಿಸಿದರು. ರಾಜಶೇಖರ ಬೆಳಿಗ್ಗೆ ಒಂದು ಬಕೇಟು ನೀರನ್ನಷ್ಟು ಒಯ್ದು ಮೇಲಿಡುತಿದ್ದ. ಬಾಯಾರಿದಾಗ ಕುಡಿಯುವುದಕ್ಕೂ ಓದಿನ ನಡುವೆ ತೂಕಡಿಸಿದಾಗ ಕಣ್ಣಿಗೆ ಮುಕ್ಕಿಸುವುದಕ್ಕೂ ಅದು ಉಪಯೋಗವಾಗುತಿತ್ತು.

ಹೋಟೆಲಿನ ಊಟ ಸೇರದೆ ಚಿಕ್ಕವನು ನಾಲ್ಕು ದಿನ ವಾಂತಿ ಭೇದಿಯಿಂದ ನರಳಿದ್ದೂ ಆಯಿತು.

"ಹುಡುಗ ಹ್ಯಾಗಿದ್ದಾನೆ?"

—ಎಂದು ರಂಗಮ್ಮ ರಾಜಶೇಖರನನ್ನು ಒಂದೆರಡು ಸಾರೆ ವಿಚಾರಿಸಿ ಸುಮ್ಮನಾದರು. ಬಡಕಲಾಗಿದ್ದ ಪುಟ್ಟ ಹುಡುಗ ದಿನಕ್ಕೆ ಆರೇಳು ಸಾರೆ ಕಕ್ಕಸಿಗೆಂದು ಒಣಿ ದಾಟಿ ಬರುತಿದ್ದುದನ್ನು ಅವರು ಕಂಡರು.

"ಅದೇನೊಂತ ಇಷ್ಟು ಚಿಕ್ಕ ಹುಡುಗರನ್ನ ಅಷ್ಟುದೂರ ಕಳಿಸ್ತಾರೋ"

—ಎಂದು ರಂಗಮ್ಮ ಈಗಿನ ವಿದ್ಯಾಪದ್ಧತಿಯ ವಿಷಯದಲ್ಲೇ ಅಸಮ್ಮತಿ ಸೂಚಿಸುತ್ತಾ ಹೇಳಿದರು.

ರಾಜಶೇಖರ ಎಡೆಬಿಡದೆ ಆ ಹುಡುಗನ ಆರೈಕೆ ಮಾಡಿದ. ಕಾಹಿಲೆ ಗುಣವಾಗಿ ಹುಡುಗ ಬೇಗನೆ ಚೇತರಿಸಿಕೊಂಡಾಗ ರಾಜಶೇಖರನಿಗೆ ಸಮಾಧಾನವಾಯಿತು.

ಚಿಕ್ಕವನು ನಾಲ್ಕು ದಿನ ರಜಾ ಪಡೆದು ಊರಿಗೆ ಹೋಗಿ ಬಂದ.

................

ಆದರೆ ರಂಗಮ್ಮ ಆ ಹುಡುಗರ ವಿಷಯವಾಗಿ ಕಟುಮಾತು ಆಡಬೇಕಾಗ ಮತ್ತೊಂದು ಸನ್ನಿವೇಶ ಒದಗಿ ಬಂತು. ಅದಕ್ಕೆ ಕಾರಣ ದೇವಯ್ಯ.

ರಾಘವ ಯೋಜನೆಯನ್ನು ಬಿಟ್ಟುಕೊಟ್ಟ ಆ ಹುಡುಗನ ಕಣ್ಣುಗಳು ವಿಶ್ರಾಂತಿ ಇಲ್ಲದೆ ಅತ್ತಿತ್ತ ಹೊರಳಿ ನೋಡುತಿದ್ದುವು. ಎದುರು ಬದಿಯ ಮೂಲೆಯಲ್ಲಿದ್ದ ಮಹಡಿಯ ದೊಡ್ಡಮನೆಯ ಹುಡುಗಿಯನ್ನು ಆತ ಕಂಡ. ಮೊದಮೊದಲು ಏನೋ ಎತ್ತವೋ ಎಂದು ಸ್ವಲ್ಪ ಅಳುಕು ಆತನನ್ನು ಬಾಧಿಸಿತು. ಆದರೆ ಕ್ರಮೇಣ ಆತನ ಅಭಿಪ್ರಾಯಗಳು ಬೆಳೆದು ನಿರ್ದಿಷ್ಟ ರೂಪ ತಳೆದುವು. ಎಲ್ಲ ಹುಡುಗಿಯರೂ ಒಂದೇ—ನೋಡಿ ಮುಟ್ಟಿ ಆನಂದಿಸಬೇಕಾದ ಆಟದ ಬೊಂಬೆಗಳು, ಎಂಬುದು ಅವನ ಅಭಿಪ್ರಾಯಗಳಲ್ಲಿ ಒಂದಾಗಿತ್ತು. ಆತನಿಗಿದ್ದುದು ನೋಟದ ಅನುಭವ ಮಾತ್ರ. ಆತ ಹೇಳಿಕೊಳ್ಳುವ ಸ್ಫುರದ್ರೂಪಿಯೇನೂ ಆಗಿರಲಿಲ್ಲ. ಆದರೆ ಆತನ ಅಭಿಪ್ರಾಯದಲ್ಲಿ ಮಾತ್ರ ತಾನು ಅತ್ಯಂತ ಸುಂದರನಾದ ಯುವಕ, ಯಾವ ಹುಡುಗಿಯಾದರೂ ಸರಿಯೆ, ತನ್ನನ್ನು ಕಂಡು ಮೋಹಿಸಲೇ ಬೇಕು.

ಅಷ್ಟು ಆತ್ಮವಿಶ್ವಾಸವಿದ್ದ ದೇವಯ್ಯ, ಎದುರು ಬೀದಿಯ ಶ್ರೀಮಂತ ಹುಡುಗಿಗೆ ಕಾಣಿಸುವಂತೆ ಕಿಟಕಿಯ ಬಳಿ ನಿಂತುಕೊಳ್ಳತೊಡಗಿದ. ಬಾಲ್ಕನಿಗೆ ಆಗಾಗ್ಗೆ ಬರುತಿದ್ದ ಆ ಹುಡುಗಿ ದೇವಯ್ಯನನ್ನು ನೋಡಿದಳು. ಆದರೆ ಶಿಲಾಪ್ರತಿಮೆಯ ಹಾಗೆ ಅವಳ ಮುಖದಮೇಲೆ ಯಾವ ಭಾವನೆಯೂ ತೋರಿಬರಲಿಲ್ಲ. ದೇವಯ್ಯ ಮುಂದಿನ ಹೆಜ್ಜೆಯೆಂದು ಆ ಹುಡುಗಿಯನ್ನು ನೋಡಿ ಹಲ್ಲುಕಿರಿದ. ಹುಡುಗಿ ದುರದುರನೆ ವಠಾರದತ್ತ ನೋಡಿದಳು.

"ಕಿಟಕಿಯಿಂದೀಚೆಗೆ ಬಾರೋ. ಓದಕ್ಕೆ ಕಾಣ್ಸಲ್ಲ...."

—ಎಂದು ರಾಜಶೇಖರ ಎರಡು ಸಾರಿ ದೂರಿಕೊಂಡಮೇಲೆ ದೇವಯ್ಯ ಹೊರಬಂದು, ವಠಾರದ ಮಹಡಿ ಮೆಟ್ಟಲುಗಳ ಮೇಲೆ

ನಿಂತು ನೋಡತೊಡಗಿದ.

ಇದು ಜಯರಾಮು ದೃಷ್ಟಿಗೆ ಬಿತ್ತು. ಆ ಹುಡುಗಿಯ ವಿಷಯವಾಗಿ ಆತನಿಗೆ ತೀರ ಕೆಟ್ಟ ಅಭಿಪ್ರಾಯವೂ ಇರಲಿಲ್ಲ; ಅಷ್ಟು ಒಳ್ಳೆಯ ಅಭಿಪ್ರಾಯವೂ ಇರಲಿಲ್ಲ. ಆದರೆ ಆ ದೇವಯ್ಯನ ವಿಷಯದಲ್ಲಿ ಮಾತ್ರ ಮನಸ್ಸು ವ್ಯಗ್ರವಾಯಿತು.

ದೇವಯ್ಯ ನಿಧಾನವಾಗಿ ನಯವಾಗಿ ವರ್ತಿಸಿದ್ದರೆ, ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರಲಿಲ್ಲ. ಆದರೆ ಆತನದು ಆತುರ ಪ್ರಕೃತಿ, ಎಲ್ಲಿಲ್ಲದ ಅವಸರ. ಆ ಹುಡುಗಿ ಕಾಲೇಜಿಗೆ ಹೊರಟಾಗ ಪ್ರತಿದಿನವೂ ಬೆಳಗ್ಗೆ ಆಕೆಯ ಹಿಂದೆ ಬಸ್ ಸ್ಟಾಪಿನ ವರೆಗೂ ಹೋದ.

ಒಮ್ಮೆ ಆಕೆ "ಕೋತಿ!" ಎಂದು ಬಯ್ದಳು.

ದೇವಯ್ಯನಿಗೆ ಮುಖಭಂಗವಾಯಿತು. ಇವಳ ಜಂಭ ಎಷ್ಟರ ತನಕ ಇರುತ್ತೋ ಒಂದು ಕೈ ನೋಡಿಯೇ ಬಿಡಬೇಕು–ಎಂದು ತೀರ್ಮಾನಿಸಿದ.

ದೃಷ್ಟಿಧಾಳಿ ಏಕಪ್ರಕಾರವಾಗಿ ನಡೆಯಿತು.

ಒಂದು ದಿನ ಆತ ವಠಾರದ ಮೆಟ್ಟಿಲುಗಳ ಮೇಲೆ ನಿಂತು ನೋಡುತಿದ್ದಂತೆಯೇ ಒಬ್ಬಾಕೆ ಒಳಬಂದು "ಅಮ್ಮಣ್ಣೀ" ಎಂದು ರಂಗಮ್ಮನನ್ನು ಕರೆದಳು. ಆಕೆ ಆ ದೊಡ್ಡ ಮನೆಯ ಕೆಲಸದವಳೆಂಬುದು ದೇವಯ್ಯನಿಗೆ ಗೊತ್ತಾಗಲಿಲ್ಲ.

ಆಕೆ ತಂದ ಸಂದೇಶ ಕೇಳಿ ರಂಗಮ್ಮ ಕಿಡಿಕಿಡಿಯಾದರು.

"ಎಂಥಾ ಹಲ್ಕಾ ಹುಡುಗರು ಸೇರ್ಕೊಂಡುವಪ್ಪಾ ಈ ವರ್ಷ...."

ಎಂದು ಆಕೆ ಆಕ್ರೋಶ ಮಾಡಿದರು.

ಆ ಸದ್ದು ಕೇಳುತ್ತಲೆ ಗಾಬರಿಯಾಗಿ ದೇವಯ್ಯ ಕೊಠಡಿಯೊಳಕ್ಕೆ ಓಡಿದ.

ರಂಗಮ್ಮ ಬಲುಪ್ರಯಾಸಪಟ್ಟು ಮೆಟ್ಟಲೇರಿ ಬಂದರು.

"ಯಾರೋ ಅದು? ಯಾಕಪ್ಪಾ ಹೀಗ್ಸಯ್ತೀರಾ? ನಿಮಗೆ ಅಕ್ಕತಂಗಿ ಇಲ್ವೇನಪ್ಪಾ ಯಾರಿಗೂ? ನಮ್ಮ ವಠಾರಕ್ಕೇ ಕೆಟ್ಟ ಹೆಸರು ಮಾಡ್ತೀರಲ್ಲಪ್ಪಾ ನೀವು!"

ದೇವಯ್ಯನ ಮುಖ ಕಪ್ಪಿಟ್ಟಿತು. ಚಿಕ್ಕ ಹುಡುಗ ಆಶ್ಚರ್ಯದ ನೋಟದಿಂದ ದೊಡ್ಡವನನ್ನು ನೋಡಿದ. ರಂಗಮ್ಮ ಹೇಳುತಿದ್ದುದು ಜಯರಾಮುಗೆ ಕೇಳಿಸುತ್ತಿದೆಯಲ್ಲಾ. ಈ ವಠಾರದಲ್ಲಿನ್ನು ತಲೆ ಎತ್ತದ ಹಾಗೆ ಆಯಿತಲ್ಲಾ ಎಂದು ರಾಜಶೇಖರ ಮನಸ್ಸಿನೊಳಗೇ ಗೋಳಾಡಿದ.

ನಾಕ್ಸೈದು ನಿಮಿಷ ಹೇಳಿದ್ದನ್ನೆ ಹೇಳಿ ರಂಗಮ್ಮ ಕೊನೆಯ ಎಚ್ಚರಿಕೆ ಕೊಟ್ಟರು:

"ಇದೇ ಆಖೈರು. ಇನ್ನೊಂದ್ಸಲ ಹೀಗೇನಾದ್ರೂ ಆದ್ರೆ ಈ ರೂಮು ಬಿಟ್ಟು ನೀವು ಹೊರಟೋಗ್ಬೇಕು. ತಿಳೀತಾ? ಹುಷಾರಾಗಿರಿ!"

ರಂಗಮ್ಮ ಮೆಲ್ಲನೆ ಕೆಳಕ್ಕಿಳಿದರು. ಗದ್ದಲ ಕೇಳಿ ಹೊರಬಂದಿದ್ದ ಚಂಪಾವತಿಯನ್ನು ನೋಡಿ ಅವರೆಂದರು:

"ನನಗೆ ಗೊತ್ತು. ಆ ಜನವೇ ಹಾಗೆ."

ವಿಷಯ ಏನೆಂದು ತಿಳಿದ ಚಂಪಾ ಅಂದಳು:

"ಆ ಜನ ಅಂತ ಏನು ರಂಗಮ್ನೋರೆ? ಬ್ರಾಹ್ಮಣ ಹುಡುಗ ರೇನು ಕಡಿಮೇನೆ? ಹುಡುಗರು ಅಂದ್ರೆ ಯಾವಾಗಲೂ ಅಷ್ಟೇ. ಈಗಿನೋರಲ್ಲಿ ಸ್ವಲ್ಪ ಪೋಲಿತನ ಜಾಸ್ತಿ."

"ಪೋಲಿತನ ಅಲ್ಲ ಚಂಪಾ. ಭಂಡತನ-ಭಂಡತನ!"

# ೧೬

ಜಯರಾಮುವಿನ ಪರೀಕ್ಷೆ ಮುಗಿದು ನವರಾತ್ರಿ ಹಬ್ಬ ಬಂತು.

ಹಬ್ಬ ಬಂದಾಗಲೆಲ್ಲ ರಂಗಮ್ಮನಿಗೆ ಮಕ್ಕಳು ಮೊಮ್ಮಕ್ಕಳನ್ನು ನೋಡುವ ಬಯಕೆ ಹೆಚ್ಚುತಿತ್ತು. ಆದರೆ ಈ ಸಲ ಯಾರೂ ಬರಲಿಲ್ಲ.

ಮಂಜು ಕವಿದ ಒಂದು ಮುಂಜಾನೆ ರಂಗಮ್ಮನೆಂದರು :

"ಮಳೆ ಹೋಯ್ತೂಂತ ಕಾಣುತ್ತೆ."

ಹೊರಗೆ ತೋರಸೇ ಇದ್ದರೂ ಒಳಗೆ, ಮಳೆ ನಿಂತಿತಲ್ಲಾ ಎಂದು ಅವರಿಗೆಷ್ಟೋ ಸಮಾಧಾನವೆನಿಸಿತ್ತು.

ನಾದಿನಿ ಹೋದಂದಿನಿಂದ ಉಪಾಧ್ಯಾಯರ ಹೆಂಡತಿ ಕಷ್ಟಕ್ಕೆ ಒಳಗಾಗಿದ್ದಳು. ಐದು ಜನ ಮಕ್ಕಳಿದ್ದ ಆ ಸಂಸಾರದ ಗೃಹಕೃತ್ಯವನ್ನು ಒಬ್ಬಳಿಂದಲೇ ನೆರವೇರಿಸಿಕೊಂಡು ಹೋಗುವುದು ಸುಲಭವಾಗಿರಲಿಲ್ಲ. ಸಾಲದುದಕ್ಕೆ ಆವಳ ಆರೋಗ್ಯವೂ ಸರಿಯಾಗಿರಲಿಲ್ಲ. ಈ ವರ್ಷ ವರ್ಗ ಖರೆ ಆಗುವುದೆಂಬ ಕಿಂವದಂತಿ ಹುಟ್ಟಿಕೊಂಡು ಲಕ್ಷ್ಮೀನಾರಾಯಣಯ್ಯ ಗಾಬರಿಯಾಗಿದ್ದರು. ಈ ಸಲ ಬೀಸುತಿದ್ದ ದೊಣ್ಣೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲವೆಂಬುದು ಅವರಿಗೆ ಸ್ಪಷ್ಟವಾಗಿತ್ತು.

"ಮುಂದಿನ ಏಪ್ರಿಲ್ ಹೊತ್ತಿಗೆ ವರ್ಗವಾದರೂ ಆಗಬಹುದು"

ಎಂದು ಲಕ್ಷ್ಮೀನಾರಾಯಣಯ್ಯ ರಂಗಮ್ಮನಿಗೆ ಸುದ್ದಿ ತಿಳಿಸಿದರು.

"ವರ್ಗವಾದರೂ ಎಲ್ಲಾದರೂ ಹತ್ತಿರಕ್ಕೇ ಆಗುತ್ತೆ. ಸಂಸಾರವನ್ನೆಲ್ಲಾ ಇಲ್ಲೇ ಬಿಟ್ಟಿರ್ತೀನಿ"

ಎಂದು ಮುಂದಿನ ಯೋಜನೆಯನ್ನೂ ಲಕ್ಷ್ಮೀನಾರಾಯಣಯ್ಯ

ತಿಳಿಸಿದ್ದರಿಂದ 'ಮನೆ ಬಾಡಿಗೆಗೆ ಇದೆ' ಬೋರ್ಡಿನ ವಿಚಾರ ರಂಗಮ್ಮ ಯೋಚಿಸಲಿಲ್ಲ.

...... .........

ಈ ನಡುವೆ ವಠಾರದ ನೆಮ್ಮದಿಯನ್ನು ಕದಡಿದೊಂದು ಪ್ರಕರಣ ನಡೆದುಹೋಯಿತು.

ಅದು ಆರಂಭವಾದುದು ನೀರಿನ ನಲ್ಲಿಯ ಬಳಿ. ರಾಧೆಯ ಬಕೀಟಿನ ಹಿಂದೆ ರಾಜಮ್ಮನ ಕೊಡವಿತ್ತು. ಅನಂತರ ಅಹಲ್ಯೆಯ ಸರದಿ.

"ಒಂದು ರಾಶಿ ಬಟ್ಟೆ ಬಿದ್ದಿದೆ ಒಗೆಯೋಕೆ. ನಾನು ಮೊದಲು ನೀರು ಹಿಡಕೋತೀನಿ ಕಣೆ"

ಎಂದು ಅಹಲ್ಯಾ ರಾಧೆಗೆ ಹೇಳಿದಳು. ರಾಧೆ ಬೇಡವೆನ್ನಲಿಲ್ಲ. ಅವರಿಬ್ಬರೂ ಸ್ಥಳ ಬದಲಿಸಿಕೊಂಡರು. ತಟ್ಟೆಯಲ್ಲಿ ಉಪ್ಪಿಟ್ಟು ತುಂಬಿ ವೆಂಕಟೇಶನಿಗೆ ಕೊಟ್ಟು ಬಂದ ರಾಜಮ್ಮನಿಗೆ, ಅಹಲ್ಯಾ ತನಗಿಂತ ಮುಂದಾಗಿ ನಿಂತಿದ್ದುದು ಕಂಡಿತು. ಆಕೆ ಏನಾಗಿತ್ತೆಂಬುದನ್ನು ಗಮನಿಸದೆ ಅಹಲ್ಯೆಯತ್ತ ಧಾವಿಸಿದಳು

"ಅಹಹಹಾ ನಿನ್ನ ಚಾಲಾಕೀನೇ! ನಡೀ ಹಿಂದೆ!"

ಎಂದು ಅಹಲ್ಯೆಯ ರಟ್ಟೆ ಹಿಡಿದು ಆಕೆ ಎಳೆದಳು.

ಆಗ ಕೊಳಾಯಿಯ ಬಳಿ ಇದ್ದ ಪದ್ಮಾವತಿಯೆಂದಳು :

"ನನ್ನದಾಯ್ತು. ಇನ್ನು ಹಿಡಕೊಳ್ಳೀಮ್ಮಾ."

ಅಹಲ್ಯಾ ತನ್ನ ಕೊಡವಿಡಬೇಕು. ಆದರೆ ರಾಜಮ್ಮ ಬಿಡಲೊಲ್ಲಳು. ಅಹಲ್ಯಾ ಮತ್ತು ರಾಧಾ ಅದೇನನ್ನೋ ಹೇಳಲು ಹೊರಟರು. ಆದರೆ ಸ್ವರವೇರಿಸಿ ಬೈಯುವುದರಲ್ಲೇ ನಿರತಳಾದ ರಾಜಮ್ಮನಿಗೆ ಅದು ಒಂದೂ ಕೇಳಿಸಲಿಲ್ಲ. ಕಲಿಕಾಲದ ಹುಡುಗಿಯರು ಬಜಾರಿಗಳೆಂದು ಆಕೆ ಸಾರಿದಳು. ಹಿಡಿಯುವವರಿಲ್ಲದೆ ನೀರು ವೃಥಾ ಹರಿದುಹೋಯಿತು.

ಗದ್ದಲ ಕೇಳಿ ಬಂದ ರಂಗಮ್ಮ ಆಕ್ರೋಶ ಮಾಡಿದರು :

"ಅಯ್ಯೋ ನಮ್ಮಪ್ಪಾ! ನೀರು ಸುರಿದು ಹೋಗ್ತಾ ಇದೆಯಲ್ಲೇ!"

ತಾಯಿಯ ಸ್ವರ ಕೇಳಿ ವೆಂಕಟೇಶ ಉಪ್ಪಿಟ್ಟನ್ನು ಅರ್ಧದಲ್ಲೇ

ಬಿಟ್ಟು ಹೊರ ಬಂದ. ಆತನನ್ನು ನೋಡುತ್ತಲೆ ಅಹಲ್ಯಾ ಅಳತೊಡಗಿದಳು.

"ಹೋಗ್ಲಿ. ನಾನೇ ಹಿಡಕೋತೀನಿ"

—ಎಂದು ರಾಧಾ ತನ್ನ ಬಕೀಟನ್ನು ಕೊಳಾಯಿಯ ಕೆಳಗಿಟ್ಟಳು.

ರಾಜಮ್ಮ ಗಟ್ಟಿಯಾಗಿ ಕಿರಿಚಕೊಳ್ಳುತ್ತಾ ಆ ಬಕೀಟನ್ನು ಪಕ್ಕಕ್ಕೆ ತಳ್ಳಿದಳು. ಆ ಗಲಾಟೆಯ ಮಧ್ಯೆ, ನಿಜ ಸಂಗತಿ ರಾಜಮ್ಮನಿಗೆ ಹೊಳೆಯಿತು. ಅಹಲ್ಯಾ ರಾಧೆಯರು ಸ್ಥಳಗಳನ್ನು ಮಾತ್ರ ಬದಲಾಯಿಸಿಕೊಂಡಿದ್ದರೆಂಬುದು ಸ್ಪಷ್ಟವಾಯಿತು. ತಪ್ಪು ತನ್ನದೆಂದು ಗೊತ್ತಾದೊಡನೆ ಅವರು ಮತ್ತಷ್ಟು ಗಟ್ಟಿಯಾಗಿ ಕೂಗಾಡಿದರು:

"ರಾಮಾ ರಾಮಾ! ಈ ಹುಡುಗೀರು ಹೊಡೆಯೋಕೇ ಬರ್ತಾವಲ್ಲೇ!"

ಬೀದಿಯಲ್ಲೂ ಜನ ಗುಂಪು ಕಟ್ಟಿಕೊಂಡು ವಠಾರದತ್ತ ನೋಡತೊಡಗಿದರು.

ವೆಂಕಟೇಶ ತಾಯಿಗೆ ಹೇಳಿದ :

"ನೀನು ಬಾಮ್ಮಾ ಒಳಕ್ಕೆ. ಎಲ್ಲರ್ದೂ ಆದ್ಮೇಲೆ ನೀರು ಹಿಡ್ಕೊ."

ಮಗನೂ ಹುಡುಗಿಯರ ಪಕ್ಷ ವಹಿಸಿದ್ದನ್ನು ಕಂಡು ರಾಜಮ್ಮನಿಗೆ ರೇಗಿಹೋಯಿತು.

"ಅಯ್ಯೋ ಮುಂಡೇಗಂಡಾ! ನೀನೂ ನಿಮ್ಮಮ್ಮನಿಗೇ ಅಂತೀಯೇನೋ!"

—ಎಂದು ರಾಜಮ್ಮ ತನ್ನ ಕೊಡವೆತ್ತಿಕೊಂಡಳು.

"ಈ ನಲ್ಲೀ ನೀರೇ ಬೇಡ. ಬೀದಿ ಕೊಳಾಯಿಯಿಂದ ತರ್ತೀನಿ"

—ಎಂದು ಹೇಳಿ ಅವರು, ಎದುರುಗಡೆ ದೊಡ್ಡಮಹಲಿನ ಹೊರ ಭಾಗದಲ್ಲಿದ್ದ ಬೀದಿ ಕೊಳಾಯಿಯತ್ತ ಸಾಗಿದರು.

ವಠಾರದ ಕೊಳಾಯಿಯನ್ನು ಆಗಲೆ ನಿಲ್ಲಿಸಿಬಿಟ್ಟಿದ್ದರು ರಂಗಮ್ಮ. ರಾಜಮ್ಮ ಹೊರಟು ಹೋದಮೇಲೆ ಅವರು ಮತ್ತೊಮ್ಮೆ ನಲ್ಲಿ ತಿರುಗಿಸಿದರು. ರಾಧಾ ನೀರು ಹಿಡಿದಳು. ಅಹಲ್ಯಾ ಅಳುತ್ತಾ ಒಳ ಹೋದ ಮೇಲೆ ಆಕೆಗೆ ಒಂದೇಟು ಕೊಟ್ಟು ಮಗಳ ಬದಲು

ಆಕೆಯ ತಾಯಿ ಹೊರ ಬಂದಳು.

ವೆಂಕಟೇಶ ಕೋಪದಿಂದ ಮುಖ ಊದಿಸಿಕೊಂಡು, ಉಪ್ಪಿಟ್ಟನ್ನು ಅರ್ಧದಲ್ಲೇ ಬಿಟ್ಟು, ಚಪ್ಪಲಿ ಮೆಟ್ಟಿ ಹೊರಟು ಹೋದ

ಬೀದಿಯ ಕೊಳಾಯಿ ತೆರವಾಗಿರಲಿಲ್ಲ. ಶ್ರೀಮಂತರ ಮನೆಯ ಮಾಲಿಯೂ ಜವಾನನೂ ನೀರು ಹಿಡಿದು ಒಳಕ್ಕೊಯ್ದು ಹೂ ಗಿಡಗಳಿಗೆ ಚಿಮುಕಿಸುತ್ತಿದ್ದರು. ಬೀದಿಯ ಕೊಳಾಯಿಯ ನೀರಿಗೆ ದುಡ್ಡು ಕೊಡಬೇಕಾಗಿರಲಿಲ್ಲವಾದ್ದರಿಂದ ಅದನ್ನೆ ಆ ದೊಡ್ಡ ಮನೆಯವರು ಉಪಯೋಗಿಸುವುದು ಸಹಜವಾಗಿತ್ತು.

"ಒಂದೆರಡು ಕೊಡ ನೀರು ಹಿಡ್ಕೋತೀನಪ್ಪಾ"

ಎಂದು ರಾಜಮ್ಮ ಅಂಗಲಾಚಿದರು.

"ಒಂದ್ಗಂಟೆ ಒತ್ತು ಬಿಟ್ಕೊಂಬನ್ನಿ"

—ಎಂದನೊಬ್ಬ. ಇನ್ನೊಬ್ಬ ಹೇಳಿದ:

"ವಠಾರದ ಕೊಳಾಯಿ ಕೆಟ್ಹೋಗೈತಾ ?"

ಆ 'ನೊ—ಮುಂಡೇವು'ಗಳೆದುರು ಬೇಡುತ್ತ ನಿಲ್ಲುವುದು ಮಾನಗೇಡೆಂದು ರಾಜಮ್ಮ, ಬುಸುಗುಟ್ಟಿಕೊಂಡು ವಠಾರಕ್ಕೆ ವಾಪಸು ಬಂದಳು. ಮನೆಯೊಳಗೇ ಇದ್ದು, ಎಲ್ಲರದೂ ಆದ ಬಳಿಕ ತಾನು ನೀರು ಹಿಡಿದುಕೊಂಡಳು.

... .. .........

ಅಷ್ಟೇ ಆಗಿದ್ದರೆ ಅದು, ನಾಲ್ಕು ದಿನಗಳೊಳಗೆ ಮರೆತು ಹೋಗಬೇಕಾದ ಸಾಮಾನ್ಯ ವಿಷಯವಾಗುತ್ತಿತ್ತು.

ಆದರೆ ಅದು ಅಷ್ಟೇ ಆಗಿರಲಿಲ್ಲ.

ಹಾಗೆಂದು ಮೊದಲು ಕಂಡು ಹಿಡಿದವಳು ಚಂಪಾ.

ಒಂದು ಮಧ್ಯಾಹ್ನ 'ಚಂದ್ರಲೇಖಾ' ಚಿತ್ರದ ಮ್ಯಾಟಿನಿ ಪ್ರದರ್ಶನ ನೋಡಲು ಚಂಪಾವತಿಯ ನಾಯಕತ್ವದಲ್ಲಿ ವಠಾರದಿಂದ ಒಂದು ತಂಡ ಸೆಂಟ್ರಲ್ ಟಾಕೀಸಿಗೆ ಹೊರಟಿತು. ಬರಲು ಬಹಳ ಜನ ಒಪ್ಪಿದ್ದರೂ ಹೊರಟಾಗ ಅವರಿದ್ದುದು ಚಂಪಾವತಿಯ ಮಗುವನ್ನೂ ಸೇರಿಕೊಂಡು ಆರು ಜನ. ರಾಧಾ, ಅಹಲ್ಯಾ, ಕಾಮಾಕ್ಷಿಯರ

ಉತ್ಸಾಹ ಹೇಳತೀರದು. ಮೀನಾಕ್ಷಮ್ಮನ ಮಗ ಆ ಚಿತ್ರವನ್ನು ಹಿಂದೆಯೇ ನೋಡಿದ್ದ. ಆತನಿಗೆ ಒಂಪಾಣೆ ಲಂಚ ಕೊಟ್ಟು ತಾಯಿ ಒಬ್ಬಳೇ ಗುಂಪಿನ ಜತೆ ಹೊರಟಳು. ಚಂಪಾವತಿ ಮಗಳನ್ನೆತ್ತಿ ಕೊಂಡು ಬಂದಳು.

ಈಗ ಸ್ವಲ್ಪ ಸಮಯದಿಂದ ಅಹಲ್ಯೆಯ ಮುಖದಮೇಲೊಂದು ಕಳೆ ಇದ್ದುದನ್ನು ಚಂಪಾ ಕಂಡಿದ್ದಳು. ಹುಡುಗಿ ಬೆಳೆಯುತ್ತಿರುವುದರಿಂದ ಹಾಗೆ ಎಂದಷ್ಟೇ ವಿವರಣೆ ಕೊಡಲು ಚಂಪಾ ಸಿದ್ಧಳಿರಲಿಲ್ಲ. ಆ ಕಳೆಯ ಅರ್ಥವೇನೆಂಬುದು ಆಕೆಗೆ ಗೊತ್ತಿತ್ತು. ಪ್ರಾಯಶಃ ಓಗಿದೆಯೇನೋ ಎಂದು ಆಕೆ ಊಹಿಸಿಕೊಂಡಳು. ಆ ಊಹೆ, ಇತರ ಎಷ್ಟೋ ವಿಷಯಗಳಂತೆ ಮನಸಿನೊಂದು ಮೂಲೆಯಲ್ಲಿ ವಿಶ್ರಾಂತಿ ಪಡೆಯಿತು.

ಅವರೆಲ್ಲ ರಾಜಾಮಿಲ್ಲನ್ನು ಬಳಸಿಕೊಂಡು ನಡೆದೇ ಹೋದರು. ನಡೆಯುತ್ತಿದ್ದಾಗ ತಮ್ಮನ್ನು ನೋಡುತ್ತಿದ್ದ ಗಂಡಸರ ನೋಟಗಳು ಅವರಿಗೆ ಹೊಸದಾಗಿರಲಿಲ್ಲ. ಆದರೆ ಅವರು ಗಂಡಸರನ್ನು ನೋಡುತ್ತಿದ್ದ ದೃಷ್ಟಿ........

ಅಹಲ್ಯೆ ಚಂಚಲಳಾಗಿ ಬಾರಿ ಬಾರಿಗೂ ಅತ್ತಿತ್ತ ನೋಡುತಿದ್ದಳು. ಯಾರನ್ನೋ ಹುಡುಕುವ ಹಾಗಿತ್ತು ಆಕೆ........

ಅದನ್ನು ಗಮನಿಸಿ ಚಂಪಾ ಮುಗುಳ್ನಕ್ಕಳು.

ಚಿತ್ರ ಅವರೆಲ್ಲರಿಗೂ ತುಂಬಾ ಹಿಡಿಸಿತು. ಆಗಲೆ ಆರೂವರೆ ಘಂಟೆಯಾಗಿತ್ತು. ಗಂಡ ಅಷ್ಟರಲ್ಲೇ ಬಂದಿರಬೇಕೆಂದು ಕಾಮಾಕ್ಷಿ ಚಡಪಡಿಸಿದಳು. ಆದರೂ "ಮಲ್ಲೇಶ್ವರ ಅಂಗಡಿ ಬೀದಿ ಮೇಲಿಂದ ಹೋಗೋಣ್ವೇನ್ರೀ?" ಎಂದು ಕೇಳಿದಾಗ ಯಾರೂ ಬೇಡವೆನ್ನಲಿಲ್ಲ.

ಅಂಗಡಿ ಬೀದಿ ತಲಪಿದಾಗ, ಯಾವುದೋ ಬೋರ್ಡಿನತ್ತ ಬೊಟ್ಟು ಮಾಡುತ್ತಾ ರಾಧಾ ಎಂದಳು :

"ಅದೇ ನೋಡಿ ಡಾಕ್ಟರ ಶಾಪು. ಆ ದಿವಸ ಅಹಲ್ಯಾ ಮನೆಗೆ ಬಂದಿರ್ಲಿಲ್ವೆ ?–ಆ ಡಾಕ್ಟರು."

"ರಾಜಮ್ಮನ ಮಗ ಕೆಲಸ ಮಾಡ್ತಿರೋ ಶಾಪಾ ?"

–ಎಂದು ಮೀನಾಕ್ಷಮ್ಮ, ಅತ್ತ ನೋಡುತ್ತಾ ಕೇಳಿದಳು. ಚಂಪಾ-ಕಾಮಾಕ್ಷಿಯರೂ ನೋಡಿದರು.

"ಹೂಂ. ಅವೇ"

–ಎಂದಳು ರಾಧಾ.

ಚಂಪಾ ಸರಕ್ಕನೆ ದೃಷ್ಟಿ ತಿರುಗಿಸಿ ಅಹಲ್ಯೆಯನ್ನು ದಿಟ್ಟಿಸಿದಳು. ಲಜ್ಜೆ–ಕಾತರಗಳ ಸಮ್ಮಿಶ್ರಣದ ಸೊಬಗು........ಆ ಔಷಧಾಲಯ ದತ್ತ ಕಣ್ಣೆತ್ತಿ ನೋಡುವುದಕ್ಕೂ ಅಧೈರ್ಯ. ಅರ್ಥವಾಯಿತು ಚಂಪಾವತಿಗೆ.

ಅಹಲ್ಯಾ ಮೊದಲನೆಯ ಮಾತನಾಡ ತೊಡಗಿದ್ದು, ಬೇರೆ ಬೀದಿಗೆ ಕಾಲಿಟ್ಟ ಮೇಲೆಯೇ!

ಆ ರಾತ್ರಿ, ಒಂದೆಡೆ ಕಾಮಾಕ್ಷಿ ರಾಜಕುಮಾರಿಯ ಸಾಹಸ ಗಳನ್ನು ನಾರಾಯಣನಿಗೆ ಬಣ್ಣಿಸುತಿದ್ದಂತೆಯೇ, ಇನ್ನೊಂದೆಡೆ ಚಂಪಾ ತನ್ನ ಸಂಶೋಧನೆಯನ್ನು ಗಂಡನಿಗೆ ತಿಳಿಸಿದಳು.

ಇದು ಸಿನಿಮಾದ ಪ್ರೇಮ ಕಥೆಯಾಗಿರಲಿಲ್ಲ, ವಾಸ್ತವವಾಗಿತ್ತು.

"ವೆಂಕಟೇಶ ಒಳ್ಳೆಯವನೇ........ಅಲ್ಲ ಅಂತೀಯಾ?"

–ಎಂದು ಶಂಕರನಾರಾಯಣಯ್ಯ ಹೆಂಡತಿಯನ್ನು ಕೇಳಿದ. ಚಂಪಾವತಿಗೆ, ನಲ್ಲಿ ನೀರಿಗಾಗಿ ಜಗಳವಾದಾಗ ವೆಂಕಟೇಶ ಹುಡುಗಿ ಯರ ಪಕ್ಷ ವಹಿಸಿದ್ದು ನೆನಪಾಗಿ ನಗುಬಂತು.

"ಒಳ್ಳೆಯವನೇ!"

–ಎನ್ನುತ್ತ, ಆ ಘಟನೆಯನ್ನು ಚಂಪಾ ಗಂಡನಿಗೆ ನೆನಪು ಮಾಡಿಕೊಟ್ಟಳು.

"ಆತನಿಗೆ ಉದ್ಯೋಗ ಬೇರೆ ಇದೆ. ನಾವು ಪಟ್ಟ ಸುಖ ಅವರು ಅನುಭವಿಸ್ಬೇಕಾದ್ದಿಲ್ಲ!"

ಶಂಕರನಾರಾಯಣಯ್ಯ ಚಂಪಾವತಿಯರ ಸಂಬಂಧವೂ ಹಾಗೆಯೇ ಆರಂಭವಾಗಿತ್ತು. ಆದರೆ ಆಗ ಶಂಕರನಾರಾಯಣಯ್ಯ, ನಿರುದ್ಯೋಗಿಯಾಗಿದ್ದ ಕಡುಬಡವ. ವಿವಾಹ ಸಾಧ್ಯವಾಗಲು ಕೆಲವು ವರ್ಷಗಳ ಕಾಲ ಅವರು ಕಾಯಬೇಕಾಯಿತು. ಅದು ಯಮಸಂಕಟ.

ಆ ಸುಖವನ್ನು ವೆಂಕಟೇಶ-ಅಹಲ್ಯೆಯರು ಅನುಭವಿಸಬೇಕಾದು ಇರಲಿಲ್ಲ.

"ಆದರೆ ಅವನೂ ಒಬ್ಬನಿದ್ದಾನಲ್ಲಾ ಮಿಸ್ಸೇಸ್ಸರ?"

"ಯಾರು ಗುಂಡಣ್ಣ? ಅವನಿಗೊಂದು ಮದುವೆ ಬೇರೆ!"

ಅದೂ ಹೌದೆನ್ನಿಸಿತು ಚಂಪಾವತಿಗೆ. ಅಹಲ್ಯೆಗೆ ತಾನು ಬೆಂಬಲವಾಗಿ ನಿಂತು ಆಕೆಯನ್ನು ಸುಖಿಯಾಗಿ ಮಾಡಲು ಯತ್ನಿಸಬೇಕೆಂದು ತೀರ್ಮಾನಿಸಿ, ಚಂಪಾ ನಿದ್ದೆ ಹೋದಳು.

.................

ಹಾಗೆ ಬೆಂಬಲವಾಗಿ ನಿಲ್ಲಲು ಅವಕಾಶವೇ ಇಲ್ಲದ ಹಾಗೆ ಅನಿರೀಕ್ಷಿತವಾದುದು ನಡೆದು ಹೋಯಿತು.

ಆ ಸಂಜೆ, ಹೊರಗೆ ಹಿತ್ತಿಲಲ್ಲಿ ಬೀದಿಯಮುಖಿ ಉಪಾಧ್ಯಾಯರ ಹೆಂಡತಿ ಮಗುವನ್ನಾಡಿಸುತ್ತ ನಿಂತಿದ್ದಳು. ಒಬ್ಬರ ಮುಖ ಇನ್ನೊಬ್ಬರಿಗೆ ಅಸ್ಪಷ್ಟವಾಗಿ ಮಾತ್ರ ಕಾಣಿಸುವಷ್ಟು ಕತ್ತಲಾಗಿತ್ತು. ಬೀದಿಯ ದೀಪಗಳು ಹತ್ತಿಕೊಂಡಿದ್ದುವು. ಬೀದಿಯುದ್ದಕ್ಕೂ ಕೆಳಗೆ ನೋಡುತ್ತಿದ್ದ ಉಪಾಧ್ಯಾಯರ ಹೆಂಡತಿ ಅವರಿಬ್ಬರನ್ನೂ ಕಂಡರು-ಅಹಲ್ಯಾ ಮತ್ತು ವೆಂಕಟೇಶ ಪರಸ್ಪರ ಮುಟ್ಟಿಕೊಂಡೇ ಇದ್ದರೇನೋ ಎನ್ನುವಂತೆ ಒಬ್ಬರಿಗೊಬ್ಬರು ಸಮೀಪವಾಗಿಯೇ ನಡೆದು ಬರುತ್ತಿದ್ದರು. ಬೇರೆ ಯಾರಾದರೂ ಇರಬಹುದೆಂಬ ಸಂಶಯ ಬಂದು ಮತ್ತೆ ಸ್ವಲ್ಪ ಹೊತ್ತು ಆಕೆ ತಡೆದಳು. ಅವರೇ. ಸಂದೇಹವೇ ಇರಲಿಲ್ಲ. ಆಕೆಯ ಮೆದುಳು ಬೇಗ ಬೇಗನೆ ಕೂಡಿಸಿ ಕಳೆದು ನೋಡಿತು. ಹೌದು! ಸಂಜೆಯಲ್ಲಾ ಅಹಲ್ಯೆಯನ್ನು ಆಕೆ ವಠಾರದಲ್ಲಿ ನೋಡಿಯೇ ಇರಲಿಲ್ಲ. ಆತನಿಗಂತೂ ಭಾನುವಾರ. ಪ್ರತಿಯೊಂದೂ ಸ್ಪಷ್ಟವಾಗಿತ್ತು!

ವೆಂಕಟೇಶನನ್ನು ಬಿಟ್ಟು ಅಹಲ್ಯೆಯೊಬ್ಬಳೇ ಈಗ ಬೇಗ ಬೇಗನೆ ನಡೆಯುತ್ತಿದ್ದಂತೆ ಕಂಡಿತು.

ಉಪಾಧ್ಯಾಯರ ಹೆಂಡತಿ ಮಗುವನ್ನೆತ್ತಿಕೊಂಡು ರಾಜಮ್ಮನ ಮನೆಗೆ ಧಾವಿಸಿದಳು. ಗುಂಡಣ್ಣ ಅಲ್ಲಿರಲಿಲ್ಲ. ಇದ್ದವಳು ಮುದುಕಿ ಒಬ್ಬಳೇ.

"ರಾಜಮ್ಮ ! ರಾಜಮ್ಮ !"

"ಯಾರು ? ಏನು ?"

ಬಲು ಪ್ರಯಾಸದಿಂದ ಉಸಿರು ಬಿಡುತ್ತ, ಆಕೆ ತಾನು ಕಂಡುದನ್ನು ರಾಜಮ್ಮನಿಗೆ ಹೇಳಿದಳು. ಕೊಳಾಯಿಯ ಬಳಿ ತನಗೆ ಅವಮಾನವಾದ ದಿನದಿಂದ ಉಗುಳುನುಂಗಿಯೇ ಇದ್ದ ರಾಜಮ್ಮ ಹೆಡೆ ಮೆಟ್ಟಿದ ನಾಗಿಣಿಯಾದಳು. ಆಕೆ ಬಾಗಿಲ ಬಳಿ ಬಂದು ನಿಂತಳು. ಉಪಾಧ್ಯಾಯರ ಹೆಂಡತಿ ತನ್ನ ಮನೆಗೋಡಿ ಅಲ್ಲೆ ಬಾಗಿಲ ಹಿಂದೆ ಅವಿತುಕೊಂಡಳು.

ಅಹಲ್ಯಾ ಅಂಗಳಕ್ಕೆ ಬಂದು, ಬೇಗ ಬೇಗನೆ ನಡುಮನೆಯ ಹಾದಿಯನ್ನು ದಾಟಿ ಓಣಿಗಿಳಿದಳು. ಕತ್ತಲಲ್ಲಿ ನಾಲ್ಕು ಕಣ್ಣುಗಳು ತನ್ನನ್ನೆ ನೋಡುತಿದ್ದುದು ಆಕೆಗೆ ಕಾಣಿಸಲಿಲ್ಲ.

ಮತ್ತೆ ಎರಡು ನಿಮಿಷಗಳಲ್ಲೆ ವೆಂಕಟೇಶ ಬಂದ. ಆತನನ್ನು ಮನೆಯೊಳಕ್ಕೆ ಬರಬಿಡುತ್ತ ತಾಯಿ ಕೂಗಾಡಿದಳು :

"ನನ್ನ ಮಾನ ಕಳೀಬೇಕೂಂತ ಮಾಡಿದೀಯೇನೊ ಮುಂಡೇ ಗಂಡ !"

ಇಂತಹ ವಿಷಯಗಳಲ್ಲಿ ತಪ್ಪೆಲ್ಲಾ ಹುಡುಗಿಯರದೇ ಎಂಬುದು ಆಕೆಯ ನಿಶ್ಚಿತ ಅಭಿಪ್ರಾಯ. ತನ್ನ ಮಗನನ್ನು ಬಲೆಗೆ ಕೆಡವಲು ಮುಂದಾದ ಪಾಪಿಯನ್ನೆ ದಂಡಿಸಲು ಕೈಯಲ್ಲಿ ಪೊರಕೆ ಹಿಡಿದು ಆಕೆ ಹೊರಟಳು.

ಮನೆಯ ದೀಪಗಳೆಲ್ಲ ಹತ್ತಿಕೊಂಡುವು. ವಠಾರವೆಲ್ಲ ಓಣಿಗೆ ಇಳಿಯಿತು. ರಾಜಮ್ಮ ನಡುಓಣಿಯಲ್ಲಿ ನಿಂತು ಗುಡುಗಿದಳು :

"ಎಲ್ಲಿ ಆ ಗಯ್ಯಾಳಿ ಅಹಲ್ಯಾ! ಬಾರೇ ಇಲ್ಲಿ! ನನ್ಮನೇನ ಮುಳುಗಿಸ್ಬೇಕೂಂತ ಮಾಡಿದೀಯೇನೆ ?"

ಸಂದರ್ಭವೇನೆಂದು ಊಹಿಸಿಕೊಂಡ ಚಂಪಾವತಿಗೆ ಹೃದಯ ತಣ್ಣಗಾಯಿತು. ಆಕೆ ರಾಜಮ್ಮನನ್ನು ತಡೆಯಬೇಕೆಂದು ಅಂದಳು :

"ನಮ್ಮನೇ ಒಳಗ್ಬನ್ನೀಮ್ಮಾ. ಏನು ಸಮಾಚಾರ ?"

"ನೀವು ಸುಮ್ನಿರಿ! ಯಾರೂ ನನ್ನ ತಡೀಬೇಡಿ! ಇವತ್ತು

ಇವರ ಮಾನಮರ್ಯಾದೆಯೆಲ್ಲಾ ಧೂಳೆಬ್ಬಿಸಿಬಿಡ್ತೀನಿ. ಕೆಟ್ಟ ರಂಡೆ!"

ರಾಮಕೃಷ್ಣಯ್ಯ ಮನೆಯಲ್ಲಿರಲಿಲ್ಲ. ಇದೇನು ಗಂಡಾಂತರ ಬಂತೆಂದು ಆತನ ತಾಯಿ ನಡುಗಿದಳು. ರಾಜಮ್ಮನ ಬಾಯಿ ಮುಚ್ಚಿಸೋಣವೆಂದು ಅಹಲ್ಯೆಯ ತಾಯಿ ಮಗಳನ್ನು ಕರೆದಳು.

"ಇಲ್ಲಿ ಬಾರೇ ಅಹಲ್ಯಾ! ಏನ್ಮಾಡ್ಕೊಂಡು ಬಂದ್ಯೇ?"

ಏನು ಮಾಡಿಕೊಂಡು ಬಂದಿರಬಹುದೆಂದು ಆಗಲೆ ಊಹಿಸಿದ್ದ ರಾಜಮ್ಮ, ವಠಾರದ ಹೆಂಗಸರೆಲ್ಲರ ಮುಂದೆ, ಹೆಂಗಸರ ಹಿಂದೆ ನಿಂತಿದ್ದ ಕೆಲವರು ಗಂಡಸರಿಗೂ ಕೇಳಿಸುವಂತೆ ಅಂದಳು :

"ನನ್ನ ಹಣ ಎತ್ತ್ಕೊಳ್ಳೋಕ್ಕಂಚೇನೇ ವೆಂಕಟೇಶನ ಮೇಲೆ ಬಲೆ ಬೀಸಿದಾಳಲ್ರೀ ಈ ಢಾಕಿನಿ! ವಠಾರಾನ ಯಾಕಮ್ಮ ಹೊಲಸೆಬ್ಬಿಸ್ತೀಯೇ? ಬೇಕಿದ್ರೆ ಬೇರೆ ಬೀದಿಗೆ ಹೋಗಿ ಅಂಗಡಿ ತೆರಕೋ!"

ಅಹಲ್ಯೆಯ ತಾಯಿ ಎಂದೂ ಧೈರ್ಯಪ್ರಕೃತಿಯವಳಾಗಿರಲಿಲ್ಲ. ರಾಜಮ್ಮನ ಮಾತು ಕೇಳಿ ಅವಳ ಜಂಘಾಬಲ ಉಡುಗಿಹೋಯಿತು. ಆದರೂ ಆಕೆ ಅಹಲ್ಯೆಯ ತುರುಬು ಹಿಡಿದು ಹೊರಕ್ಕೆಳೆದು ಧಪಧಪನೆ ಗುದ್ದಿದಳು.

"ಅದೇನು ಬೊಗಳೇ! ಇಂಥಾ ಮಾತು ಕೇಳೋ ಹಾಗೆ ಮಾಡಿದ್ಯಲ್ಲೇ!"

"ನಾನೇನೂ ಮಾಡಿಲ್ಲಮ್ಮಾ, ಏನೂ ಮಾಡಿಲ್ಲ"

—ಎಂದು ಅಹಲ್ಯಾ ರೋದಿಸಿದಳು.

ವೆಂಕಟೇಶ ಬಿರುಗಾಳಿಯಂತೆ ನುಗ್ಗಿ ತಾಯಿಯ ರಟ್ಟೆ ಹಿಡಿದೆಳೆದು ಅರಚಿದ :

"ನಡಿಯಮ್ಮಾ ಒಳಗೆ. ನಿನಗೆ ಹುಚ್ಚು!"

"ನನಗೆ ಹುಚ್ಚು! ಹುಚ್ಚು! ತಾಯಿಗೇ ಹೊಡೆಯೋಕೆ ಬರ್ತೀಯಲ್ಲೋ ಪಾಪಿ!"

ರಾಜಮ್ಮ ಅಳತೊಡಗುತ್ತಾ ಕೈಯಲ್ಲಿದ್ದ ಪೊರಕೆಯಿಂದ ಮಗನಿಗೆ ಹೊಡೆದಳು........

........ಇನ್ನು ತಾವು ಓಣಿಗೆ ಪ್ರವೇಶಿಸಬಹುದೆಂದು ನಿರ್ಧರಿಸಿ

ರಂಗಮ್ಮ ಹೊರಕ್ಕೆ ಬಂದು, ಎತ್ತರದ ಧ್ವನಿಯಲ್ಲಿ ಗದರಿದರು :

"ಏನಿದು ಗಲಾಟೆ ? ವಠಾರಕ್ಕೆ ಪೋಲೀಸ್ನೋರ್ನ ಕರಕೊಂಡು ಬರ್ಬೇಕೂಂತಾ ಮಾಡಿದೀರೋ ಹ್ಯಾಗೆ ? ಇಷ್ಟು ಬುದ್ಧಿ ಇಲ್ದೆ ಹೋಯಿತೆ ನಿಮಗೆ? ಏನು ಸಮಾಚಾರ ?. ಬನ್ನಿ ಇಲ್ಲಿ—ನಮ್ಮನೇಗೆ ಬನ್ನಿ.... ರಾಜಮ್ಮ, ಅಹಲ್ಯಾ-ಎಲ್ರೂ ಬನ್ನಿ "

ರಂಗಮ್ಮನ ಮನೆ ತುಂಬಿಹೋಯಿತು. ಅಹಲ್ಯಾಯನ್ನು ಎಳೆದುಕೊಂಡು ಬಂದರು ವೆಂಕಟೇಶ, ಉಟ್ಟ ಬಟ್ಟೆಯಲ್ಲಿ-ಬರಿಗಾಲಲ್ಲಿ "ರಾಕ್ಷಸರು ! ಪಿಶಾಚಿಗಳು !" ಎಂದು ಶಪಿಸುತ್ತಾ ವಠಾರದಿಂದ ಹೊರ ಹೋದ.

ಅಹಲ್ಯಾ ಅಳುತ್ತಳುತ್ತ ಹೇಳಿದಳು :

"ಏನೂ ಇಲ್ಲ ರಂಗಮ್ನೋರೆ. ನನ್ನ ಸ್ನೇಹಿತೆ ಇಂದಿರಾ ಮನೆಗೆ ಹೋಗಿದ್ದೆ. ಸೇತುವೆ ದಾಟ್ತಿದ್ದಾಗ ರಾಜಮ್ಮನ ಮಗಾನೂ ಬಂದರು. ........ಇಷ್ಟುದೂರ ಒಂದೇ ರಸ್ತೇಲಿ ನಡಕೊಂಡು ಬಂದ್ವಿ."

'ರಾಜಮ್ಮನ ಮಗ' ಎಂದಿದ್ದಳು ಹುಡುಗಿ; 'ವೆಂಕಟೇಶ' ಎಂದಲ್ಲ.

ಸ್ವಲ್ಪ ದೂರ ಜತೆಯಲ್ಲಿ ನಡೆದು ಬಂದರೆಂಬುದೇನೋ ಸತ್ಯಾಂಶವೇ ಆಗಿತ್ತು.

"ಅಷ್ಟಕ್ಕೇ ಇಷ್ಟೆಲ್ಲಾ ರಂಪ ಮಾಡ್ಬೇಕೆ ?"

—ಎಂದು ಚಂಪಾವತಿ ಸಂಧಿ ಸಾಧಿಸಿ ಒಳ್ಳೆಯ ಮಾತನ್ನು ಆಡಿದಳು.

"ಔಷಧಿ ತರೋಕೆ ಅವತ್ತೆಲ್ಲಾ ಜತೇಲೆ ಕಳಿಸ್ತಿರ್ಲಿಲ್ವೇನೊ ?"

—ಎಂದು ಕಾಮಾಕ್ಷಿಯೂ ಅಹಲ್ಯೆಯ ಬೆಂಬಲಕ್ಕೆ ಬಂದಳು.

ಅಹಲ್ಯೆ ಆಡಿದುದು ಸತ್ಯವಿರಲಿ ಸುಳ್ಳಿರಲಿ, ಆ ಪ್ರಕರಣವನ್ನು ಮುಂದಕ್ಕೆ ಬೆಳೆಯಗೊಡಲು ರಂಗಮ್ಮ ಬಿಡುವಂತಿರಲಿಲ್ಲ. ವಠಾರದ ಒಳ್ಳೆ ಹೆಸರಿಗೆ ಮಸಿ ಬಳೆಸಿಕೊಳ್ಳಲು ಅವರು ಸಿದ್ಧರಿರಲಿಲ್ಲ. ಅಷ್ಟರಲ್ಲೆ ಬೇರೊಂದು ಯೋಚನೆಯೂ ಅವರಿಗೆ ಹೊಳೆಯಿತು. ಅದನ್ನು ಕಾರ್ಯಗತ ಗೊಳಿಸುವುದಕ್ಕೆ ಪೂರ್ವಭಾವಿಯಾಗಿ ವಠಾರದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಅವರು ಉದ್ಯುಕ್ತರಾದರು.

"ಅಹಲ್ಯಾ, ಬಾಮ್ಮ ಇಲ್ಲಿ. ಇದು ದೇವರ ಪಠ. ಇದನ್ನ ಮುಟ್ಟಿ ಆಣೆಮಾಡಿ ಹೇಳು."

ಅಹಲ್ಯಾ ಹಾಗೆ ಮಾಡಿದಳು.

"ರಾಜಮ್ಮ, ಇಷ್ಟಕ್ಕೆ ಸಾಕು. ಆಗಿರೋದ್ನೆಲ್ಲಾ ಎಲ್ಲರೂ ಮರೆ ತ್ಬಿಡಿ........ಹೋಗಿ ಇನ್ನು, ಹೋಗಿ. ಹೋಗಮ್ಮ ಅಹಲ್ಯಾ."

........ಮನೆಗೆ ಬಂದ ರಾಮಕೃಷ್ಣಯ್ಯ ವಿಷಯ ತಿಳಿದು, ಇಂಥ ವರ ಮೇಲೆಯೇ ಎಂದಿಲ್ಲದೆ ರೇಗಾಡಿದ.

ಗದ್ದಲವಾದಾಗ ಜಯರಾಮು-ರಾಧಾ ಇಬ್ಬರೂ ಮನೆಯಲ್ಲಿರ ಲಿಲ್ಲ. ಬಂದೊಡನೆ ರಾಧಾ, ಸುದ್ದಿ ಕೇಳಿ, ಚಂಪಾವತಿಯಲ್ಲಿಗೆ ಬಂದು ಅದೇನೆಂದು ವಿಚಾರಿಸಿದಳು.

ಚಂಪಾ ಚುಟುಕಾಗಿ ಹೇಳಿ, ಅಂದಳು.

"ಏನೋ ಆಯ್ತು ಬಿಡು. ಅದೆಲ್ಲಾ ಮನಸ್ಸಿಗೆ ಹಚ್ಕೋ ಬಾರದು."

ಆದರೆ ತನ್ನ ಗೆಳತಿಯ ಮೇಲೆ ಆರೋಪ ಹೊರಿಸಿದ ರಾಜಮ್ಮ ನನ್ನು ಕ್ಷಮಿಸಲು ರಾಧಾ ಸಿದ್ಧಳಿರಲಿಲ್ಲ. ಸಾಮಾನ್ಯವಾಗಿ ಶಾಂತಳಾ ಗಿಯೇ ಇರುತಿದ್ದ ರಾಧಾ ಆದಿನ ಔಡುಗಚ್ಚಿ ಅಂದಳು :

"ತಾಳಿ ! ಆ ಮುದಿ ಗೂಬೆಗೆ ಮಾಡ್ತೀನಿ ಒಂದಿನ್ನ !........"

ಮನೆಗೆ ಬಂದ ಮೇಲೆ ಅದುವೆಲ್ಲವನ್ನೂ ತಿಳಿದ ಶಂಕರನಾರಾ ಯಣಯ್ಯನಿಗೆ ತುಂಬಾ ಕೆಡುಕೆನಿಸಿತು.

ವೆಂಕಟೇಶ ಬಹಳ ಹೊತ್ತಾದರೂ ಬರಲಿಲ್ಲವೆಂದು ರಾಜಮ್ಮ ಗಾಬರಿಯಾದಳು.

"ಹೋಗಿ ಹುಡ್ಕೋ ಗುಂಡಾ"

—ಎಂದು ದೊಡ್ಡ ಮಗನನ್ನು ಕೇಳಿಕೊಂಡಳು.

"ನಿನಗೆ ಬುದ್ಧಿ ಇಲ್ಲವಮ್ಮ"

—ಎಂದು ಹೇಳಿ ಗುಂಡಣ್ಣ, ಹಾಸಿಗೆ ಸುರುಳಿ ಬಿಚ್ಚಿ ಮಲಗಿಕೊಂಡ.

ತನ್ನ ದೊಡ್ಡ ಮಗನ ಕೈಲಿ ಎಂದೂ ಅಂತಹ ಮಾತು ಕೇಳದೆ

ಇದ್ದ ರಾಜಮ್ಮ ತನ್ನ ದೈವವನ್ನು ಹಳಿಯುತ್ತ ಅಳುತ್ತ ಕುಳಿತಳು.

ನಡುರಾತ್ರಿಯ ಹೊತ್ತಿಗೆ ವೆಂಕಟೇಶ ಮನೆಗೆ ಬಂದ.

................

ವೆಂಕಟೇಶ–ಅಹಲ್ಯೆಯರ ವಿಷಯದಲ್ಲಿ ಬರಿಯ ಕನಿಕರವನ್ನಷ್ಟೆ ಚಂಪಾ ತೋರುವುದು ಸಾಧ್ಯವಿದ್ದರೆ, ರಂಗಮ್ಮ ತಾವು ಮನಸಿನಲ್ಲೆ ಲೆಕ್ಕ ಹಾಕಿದ್ದೊಂದು ಕೆಲಸವನ್ನು ಮಾಡಲು ಹೊರಟರು.

ಆದರೆ ರಾಜಮ್ಮ ಖಂಡ ತುಂಡವಾಗಿ ಹೇಳಿದಳು :

"ಯಾರು ? ಆ ಸಕೇಶಿ ಮಗಳನ್ನೆ ? ಆ ಬಜಾರಿ ಲೌಡೀನ ಸೊಸೆಯಾಗಿ ಕರಕೋ ಅಂತ ನನಗೆ ಅಂತೀರಾ ? ಈ ವಿಷಯ ಇನ್ನೊಮ್ಮೆ ಎತ್ತಬೇಡಿ ರಂಗಮ್ನೋರೆ !"

ತಮಗೆ ಅವಮಾನವಾಯಿತೆಂದುಕೊಂಡರು ರಂಗಮ್ಮ.

ವಿಧವೆಯಾದ ಎದುರುಮನೆಯಾಕೆಯ ಕೇಶರಾಶಿಯನ್ನು ದಿನವೂ ನೋಡುತಿದ್ದ ರಾಜಮ್ಮ, ಆಕೆಯ ಮಗಳನ್ನೆ ಸೊಸೆಯಾಗಿ ತರುವುದು ಸಾಧ್ಯವಿತ್ತೆ ? ರಾಮಕೃಷ್ಣಯ್ಯ ಕಾಹಿಲೆ ಮಲಗಿದ್ದಾಗ ವಿಷಯ ಬೇರೆಯಾಗಿತ್ತು. ತನ್ನ ಮಗ ವೆಂಕಟೇಶನ ಹಿರಿಮೆಯನ್ನು ತೋರಿಸುವುದಕ್ಕಾಗಿ ಆತ ಆ ಮನೆಯವರಿಗೆ ಸಹಾಯಕವಾಗುವಂತೆ ರಾಜಮ್ಮ ಮಾಡಿದ್ದರು. ಆ ಸಹಾಯದ ಪರಿಣಾಮ ಈ ರೀತಿಯಾಗ ಬಹುದೆಂಬ ಸಂದೇಹ ಒಂದಿಷ್ಟಾದರೂ ಉಂಟಾಗಿದ್ದರೆ, ಆಕೆ ಹೀಗೆ ಆಗಗೊಡುತ್ತಿರಲಿಲ್ಲ.

ರಂಗಮ್ಮ ಮಾಡುವಂತಹದೇನೂ ಉಳಿಯಲಿಲ್ಲ. ಆಕೆ ಸೋಲ ನ್ನೊಪ್ಪಿಕೊಳ್ಳಬೇಕಾಯಿತು.

ರಂಗಮ್ಮನ ರಾಯಭಾರದ ವಿವರ ತಿಳಿದ ಮೇಲೆ ಚಂಪಾ ವತಿಯೂ ನಿರಾಶಳಾದಳು.

ವೆಂಕಟೇಶನೇನೂ ತಾಯಿಯ ಮಾತನ್ನು ಮೀರಿ ಹೋಗು ವಷ್ಟರ ಧೈರ್ಯವಂತನಾಗಿರಲಿಲ್ಲ. ರಾಜಮ್ಮ ಇಬ್ಬರೂ ಮಕ್ಕಳಿ ಗಾಗಿಯೂ ಕನ್ಯಾನ್ವೇಷಣೆ ನಡೆಸಿದಳು. ಮನಸ್ಸು ಕಹಿಯಾಗಿದ್ದ ವೆಂಕಟೇಶ ಹೇಳಿದ :

"ನೀನು ಮದುವೆ ಮಾತೆತ್ತಿದರೆ ಈ ಮನೆ ಬಿಟ್ಟು ಹೋಗ್ತೀನಿ."

ಹಾಗೆ ಹೆದರಿಸಿದವನು, 'ಮದುವೆಯಾದರೆ ಅಹಲ್ಯೆಯನ್ನೇ' ಎಂದು ಹೇಳಲಿಲ್ಲ

ಸೊರಗುತಿದ್ದ ಅಹಲ್ಯೆಯನ್ನು ಸೂಕ್ಷ್ಮವಾಗಿ ಚಂಪಾ ಪರೀಕ್ಷಿಸುತಿದ್ದಳು. ವೆಂಕಟೇಶನೊಡನೆ ಸಂಪರ್ಕ ಬೆಳೆಸಲು ಆಕೆ ಯತ್ನಿಸಿದಂತೆಯೇ ತೋರಲಿಲ್ಲ.

'ಇವರಿಬ್ಬರ ನಡುವೆ ಯಾವ ಮಾತು ಕತೆಯೂ ಆಗಿಯೇ ಇಲ್ಲವೇನೊ. ತುಟಿಗಳು ಹೋಗಲಿ, ಕಣ್ಣುಗಳೇ ಪರಸ್ಪರ ಮಾತನಾಡಿದಂತಿಲ್ಲ. ಅಷ್ಟರಲ್ಲೇ ಸುತ್ತಿಗೆ ಏಟು ಹೊಡೆದು ಅಪ್ಪಚ್ಚಿ ಮಾಡಿಪ್ದಾಯ್ತು........'

—ಎಂದು ಚಂಪಾ ಮನಸಿನೊಳಗೇ ಅಂದುಕೊಂಡು ನಿಟ್ಟುಸಿರು ಬಿಟ್ಟಳು.

ಆದಾದ ಒಂದೂವರೆ ತಿಂಗಳಲ್ಲಿ ಅಹಲ್ಯೆಯ ಮದುವೆ ಯಾಯಿತು. ವಠಾರದ ಹೊರಗೆ ಊರ ದೇವಸ್ಥಾನದಲ್ಲೇ ನಡೆಯಿತು, ಮದುವೆ. ಆಕೆ ಗಂಡನೊಡನೆ ಚನ್ನಪಟ್ಣಕ್ಕೆ ಹೊರಟು ನಿಂತಳು. ವರ, ರಾಮಕೃಷ್ಣಯ್ಯನ ಹಳೆಯ ಸಹಪಾಠಿಯಾಗಿದ್ದ. ಅಹಲ್ಯೆಯ ತಾಯಿಯ ಕಡೆಯವರು ಬಂದು ನಿಂತು ಮದುವೆ ಮಾಡಿಸಿದರು.

ರಾಧಾ ಕೊನೆಯ ನಿಮಿಷದವರೆಗೂ ಅಹಲ್ಯೆಯ ಜತೆಯಲ್ಲೇ ಇದ್ದಳು.

ಅಹಲ್ಯೆಯನ್ನು ಬೀಳ್ಕೊಡುವಾಗ ತನಗೆ ಅಳು ಬಂದುದನ್ನು ಕಂಡು ಚಂಪಾವತಿಗೇ ಆಶ್ಚರ್ಯವಾಯಿತು. ಆಕೆ ಕಂಪಿಸುವ ಧ್ವನಿಯಲ್ಲಿ ಅಂದಳು:

"ಹೋಗಿ ಬರ್ತೀಯಾ ಅಹಲ್ಯಾ? ಪ್ರಪಂಚದಲ್ಲಿ ಕೆಟ್ಟದೂ ಇದೆ—ಒಳ್ಳೇದೂ ಇದೆ. ಕೆಟ್ಟದ್ದನ್ನಷ್ಟೇ ಜ್ಞಾಪಿಸ್ಕೋಬೇಡವಮ್ಮ—ಮನಸ್ಸಿಗೆ ಆಗಿರೋ ನೋವೆಲ್ಲ ಮರೆತ್ಬಿಡು....ಬರ್ತೀಯಾ? ನಮ್ಮನ್ನ ಮರೀಬೇಡವಮ್ಮ."

ಅಹಲ್ಯಾ ಅಳುತ್ತ ರಂಗಮ್ಮನ ವಠಾರದಿಂದ ಹೊರಟು

ಹೋದಳು.

ಇದನ್ನೆಲ್ಲಾ ನೋಡುತಿದ್ದ ಜಯರಾಮುಗೆ, ಬೇಕು ಬೇಕೆಂದೇ ಯಾರೋ ಕಾದ ಕಬ್ಬಿಣದಿಂದ ತನ್ನ ಹೃದಯದ ಮೇಲೆ ಬರೆ ಎಳೆದಂತಾಯಿತು. ಆತನ ಮುಖ ಬಾಡಿತು. ಗೆಳತಿ ಹೊರಟು ಹೋದಳೆಂದು ಅಳುತಲಿದ್ದ ರಾಧೆಯನ್ನು ಅವಳ ಪಾಡಿಗೆ ಬಿಟ್ಟು, ಕೆರೆಯಾಚೆ ಇದ್ದ ಬಂಡೆಕಲ್ಲುಗಳ ಗುಡ್ಡದತ್ತ ಆತ ಸಾಗಿದ.

ವಠಾರದ ಇತಿಹಾಸದಲ್ಲಿ ಇದು ಮೂರನೆಯ ಮದುವೆಯಾದರೂ, ಇಂತಹ ಹಿನ್ನೆಲೆಯಲ್ಲಿ ಸಮಾರಂಭ ಹೀಗೆ ಜರಗಿದ್ದು ಇದೇ ಮೊದಲು. ಹೀಗಾಗಿ ರಂಗಮ್ಮನಿಗೆ ತುಂಬಾ ಬೇಸರವಾಯಿತು. ಆ ದಿನವೆಲ್ಲಾ ಅವರು ಅಸ್ಪಷ್ಟವಾಗಿ ಏನನ್ನೊ ಗೊಣಗುತ್ತಲೇ ಇದ್ದರು.

ರಾಜಮ್ಮ ಅಡುಗೆ ಮನೆಯಿಂದ ಹೊರ ಬರಲೇ ಇಲ್ಲ.

ಜಯರಾಮುವಿನ ತಾಯಿ ರಾಧೆಯನ್ನೆ ನೋಡುತ್ತ ಜೋಲು ಮೋರೆ ಹಾಕಿ ಕುಳಿತಳು.

ವೆಂಕಟೇಶ ಆ ಬಳಿಕ ಸ್ವಲ್ಪ ದಿನ ಮೌನವಾಗಿದ್ದ. ಕ್ರಮೇಣ ಚೇತರಿಸಿಕೊಂಡು ಹಿಂದಿನಂತೆ ಓಡಾಡಿದ. ಆದರೆ ಸಿಡುಕುತನವೊಂದು ಆತನಿಗೆ ಗಟ್ಟಿಯಾಗಿಯೆ ಅಂಟಿಕೊಂಡಿತು. ಆತ ತಾಯಿಯೊಡನೆ ಸದಾ ಕಾಲವೂ ಒರಟಾಗಿಯೇ ವರ್ತಿಸಿದ.

## ೧೭

ಬೇರು ಕಿತ್ತು ಬೇರೆ ಕಡೆ ಮಣ್ಣು ಪಾತ್ರೆಯಲ್ಲಿ ನೆಟ್ಟ ಗಿಡ ಎಷ್ಟೆಂದರೂ ಅಷ್ಟೆ. ಸರಿಯಾದ ಆರೈಕೆ ಇಲ್ಲದ ಮೇಲಂತೂ ಅದರ ಅವಸ್ಥೆ ಹೇಳುವುದು ಬೇಡ.

ಪಠಾರದ ಹೆಚ್ಚಿನ ಸಂಸಾರಗಳೆಲ್ಲ ಅಂಥವು. ಹಲವರು ಕೆಲವು ತಲೆಮಾರುಗಳಿಂದ ಬೆಂಗಳೂರಲ್ಲೆ ಒಂದಲ್ಲ ಒಂದು ಕಡೆ ಬದುಕಿದವರು. ಕೆಲವರು ಹಳ್ಳಿಗಳಿಂದ ಬಂದು ನೆಲೆಸಿದವರು. ಆದರೆ ಅಂಥವರಲ್ಲಿ ಹೆಚ್ಚಿನವರು ತಮ್ಮ ಹಿಂದೆ ಏನನ್ನೂ ಬಿಟ್ಟುಬಂದವರಲ್ಲ.

ಇದಕ್ಕೆ ಅಪವಾದವಾಗಿದ್ದ ಒಂದು ಸಂಸಾರವೆಂದರೆ ರಂಗಮ್ಮನ ಬಲಬದಿಗೆ ಇದ್ದ ತಾಯಿ–ಮಕ್ಕಳು. ಕೋಲಾರದ ಕಡೆಯ ಆ ಕುಟುಂಬ ತೇಲುತಿದ್ದ ದೋಣಿಯಾಗಿರಲಿಲ್ಲ. ಅವರಿಗೆ ಒಂದಿಷ್ಟು ಜಮೀನಿತ್ತು. ಆದರೆ ಅವರು ಶ್ರೀಮಂತರೇನೂ ಅಲ್ಲ.

ಶ್ರೀಮಂತರು ಆ ಪಠಾರದಲ್ಲಿ ನೆಲೆಸುವುದಿಲ್ಲವೆಂಬುದು ರಂಗಮ್ಮನಿಗೂ ಗೊತ್ತಿತ್ತು. ಇತರ ಸಂಸಾರಗಳಿಗೂ ಗೊತ್ತಿತ್ತು. ಆದರೆ ವೆಂಕಟಸುಬ್ಬಮ್ಮನದು ಜಮೀನ್ದಾರರ ಕುಟುಂಬ ಎಂಬ ಅಂಶವನ್ನು ಅವರು ಗಮನಿಸಿದ್ದರು. ಆ ಜಮೀನುದಾರಿಕೆ ವೆಂಕಟಸುಬ್ಬಮ್ಮನ ಸೀರೆಯಲ್ಲಿ ಆಭರಣದಲ್ಲಿ ಕಂಡುಬಾರದೆ ಅವರೆಲ್ಲರಿಗೆ ನಿರಾಸೆಯಾಗಿತ್ತು.

ಶ್ರೀರಾಮಪುರದವರೇ ಒಬ್ಬರು ಬಂದು ಬಾಡಿಗೆಗೆ ಗೊತ್ತು ಮಾಡಿ ಹೋಗಿದ್ದರು

ವೆಂಕಟಸುಬ್ಬಮ್ಮನ ವ್ಯಕ್ತಿತ್ವ ಇತರರ ದೃಷ್ಟಿಯಲ್ಲಿ ಸ್ವಲ್ಪವಿಚಿತ್ರವಾಗಿಯೇ ಇತ್ತು. ಆಕೆ ಪಠಾರದ ಹೆಂಗಸರೊಡನೆ ಬೆರೆಯುತಿರಲಿಲ್ಲ, ಹರಟೆಗೆ ಬರುತಿರಲಿಲ್ಲ, ಇನ್ನೊಬ್ಬರ ವಿಷಯ ತಿಳಿದುಕೊಳ್ಳಲು

ಕುತೂಹಲ ತಳೆಯುತ್ತಿರಲಿಲ್ಲ. ಒಂದು ಮಾತಿಗೆ ಒಂದೇ ಉತ್ತರ. ಎಷ್ಟು ಬೇಕೋ ಅಷ್ಟು. ಆಕೆ ಒಂದು ದಿನವಾದರೂ ಸ್ವರವೇರಿಸಿ ಮಾತನಾಡಿದ್ದನ್ನು ಇಲ್ಲವೆ ಗಟ್ಟಿಯಾಗಿ ನಕ್ಕುದನ್ನು ಯಾರೂ ಕಂಡಿರಲಿಲ್ಲ. ಮನೆಯೊಳಗೂ ಅಷ್ಟೆ. ಮಕ್ಕಳ ಜತೆಯಲ್ಲೂ ಮೃದುವಾಗಿಯೆ ಮಾತನಾಡುತಿದ್ದಳು. ಅಲ್ಲಿ ತಾಯಿ ಮಕ್ಕಳ ಜಗಳವಾಗುವುದನ್ನು ನೋಡಿದವರೇ ಇಲ್ಲ.

'ವೆಂಕಟಸುಬ್ಬಮ್ನೋರೆ, ಇದೀರೇನು ?'

—ಎಂದು ಕೇಳುವ ಪ್ರಮೇಯವೇ ಇರಲಿಲ್ಲ. ಆಕೆ ಸದಾ ಕಾಲವೂ ಮನೆಯಲ್ಲೇ ಇರುತಿದ್ದಳು.

ಹೀಗಾಗಿ ಬಾಗಿಲ ಬಳಿ ನಿಂತು ಯಾವಳಾದರೂ ಹೆಂಗಸು ಕೇಳುತಿದ್ದುದಿಷ್ಟು :

"ಏನ್ಮಾಡ್ತಿದೀರಿ ವೆಂಕಟಸುಬ್ಬಮ್ಮ?"

ಈ ಪ್ರಶ್ನೆಯನ್ನು ಕೇಳಿದಾಗಲೆಲ್ಲ ಸಮಯಕ್ಕೆ ಅನುಸರಿಸಿ ಉತ್ತರಗಳು ಬದಲಾಗುತಿದ್ದವು :

"ಕಾಫಿಗೆ ನೀರಿಟ್ಟಿದೀನಿ, ಹುಡುಗರು ಬರೋ ಹೊತ್ತಾಯ್ತು."

ಇಲ್ಲವೆ—

"ಹುಡುಗರಿಗೆ ಊಟಕ್ಕಿಡ್ತಾ ಇದೀನಮ್ಮ."

ಅಥವಾ—

"ಹುಡುಗರಿಗೆ ಹಾಸಿಗೆ ಹಾಸ್ತಾ ಇದೇನೆ ರಂಗಮ್ನೋರೆ."

ಯಾವಾಗ ನೋಡಿದರೂ ಹುಡುಗರು—ಹುಡುಗರು. ಮಕ್ಕಳನ್ನು ಬಿಟ್ಟು ಬೇರೆ ಬದುಕೇ ಇರಲಿಲ್ಲ ಆ ಜೀವಕ್ಕೆ. ಆಕೆಯದು ಸೊರಗಿದ ಶರೀರ. ಮುಖ ಸದಾ ಕಾಲವೂ ಬಾಡಿಯೇ ಇರುತ್ತಿತ್ತು. ಬೇರೆಬೇರೆ ಕಾಲೇಜುಗಳಲ್ಲಿ ಓದುತಿದ್ದರೂ ಅಣ್ಣ ತಮ್ಮಂದಿರು ಜತೆಯಾಗಿಯೇ ಮನೆಗೆ ಮರಳುತಿದ್ದರು. ಅವರು ಹಿಂತಿರುಗಲು ಇನ್ನೂ ಅರ್ಧ ಘಂಟೆ ಇದೆ ಎನ್ನುವಾಗಲೇ ವೆಂಕಟಸುಬ್ಬಮ್ಮ ಹೊರ ಅಂಗಳದ ಗೇಟಿಗೆ ಆತುಕೊಂಡು ನಿಂತುಬಿಡುತಿದ್ದಳು ದೂರದಿಂದಲೆ ಮಕ್ಕಳನ್ನು ಕಂಡೊಡನೆಯೆ ಆಕೆಯ ಬಾಯಿಯಿಂದ ಮಾತು ಹೊರಡುತಿತ್ತು :

"ಹುಡುಗರು ಬರ್‍ತಾ ಇದಾರೆ."

ಹತ್ತಿರ ಯಾರಾದರೂ ಇರಲಿ, ಇಲ್ಲದೆ ಇರಲಿ, ಆ ಮಾತನ್ನು ಆಕೆ ಹೇಳಿಯೇ ಹೇಳುತಿದ್ದಳು. ಮೊದಮೊದಲು ದಿನವೂ ಅದನ್ನೇ ಕೇಳಿ ಇತರ ಹೆಂಗಸರಿಗೆ ತಮಾಷೆ ಎನಿಸಿತ್ತು. ಕ್ರಮೇಣ ವೆಂಕಟ ಸುಬ್ಬಮ್ಮನ ಆ ಮಾತಿಗೆ ಲಕ್ಷ್ಯ ಕೊಡುವುದನ್ನೇ ಹೆಂಗಸರು ಕಡಿಮೆ ಮಾಡಿದರು.

ಪ್ರತಿ ತಿಂಗಳೂ ಐದನೆಯ ತಾರೀಕಿಗೆ ಸರಿಯಾಗಿ ವೆಂಕಟ ಸುಬ್ಬಮ್ಮ ಬಾಡಿಗೆ ಕೊಡುತಿದ್ದಳು. ಆಕೆ ಹಿಡಿಯುತ್ತಿದ್ದ ಮೂರು ಕೊಡ ಹೆಚ್ಚಿನ ನೀರಿಗಾಗಿ ಎಂಟಾಣೆಯೂ ರಂಗಮ್ಮನಿಗೆ ಬರುತಿತ್ತು.

"ಎಲ್ಲರೂ ಹೀಗೆಯೇ ಹೊತ್ತಿಗೆ ಸರಿಯಾಗಿ ಬಾಡಿಗೆ ಕೊಟ್ಟರೆ ಎಷ್ಟು ಚೆನ್ನಾಗಿರತ್ತೆ"

—ಎಂದು ರಂಗಮ್ಮ, ಇತರರ ಉಪಯೋಗಕ್ಕಾಗಿ ವೆಂಕಟ ಸುಬ್ಬಮ್ಮನನ್ನು ಹೊಗಳುತಿದ್ದರು.

ಮೌನದ ಚಿಪ್ಪಿನೊಳಗೆ ಮುದುಡಿಯೇ ಇರುತಿದ್ದ ವೆಂಕಟ ಸುಬ್ಬಮ್ಮನ ಮನಸ್ಸಿನ ಹಿಂದೆ ಏನೇನಿದೆಯೆಂದು ತಿಳಿಯಲು ಆರಂಭ ದಲ್ಲಿ ರಂಗಮ್ಮ ಕುತೂಹಲಿಯಾಗಿದ್ದರು. ಬಹಳ ಕಾಲದ ಬಳಕೆಯ ಬಳಿಕ ಮಾತ್ರ, ವೆಂಕಟಸುಬ್ಬಮ್ಮನ ಬಾಯಿ ಬಿಡಿಸುವುದು ಸಾಧ್ಯ ವಾಯಿತು. ಒಂದು ದಿನ ಮಧ್ಯಾಹ್ನ ಅಳುತಳುತ ಆ ಹೆಂಗಸು ಹೇಳಿದ ಸ್ವಪರಿಚಯವೆಲ್ಲ ಕಣ್ಣೀರಿನ ಕಥೆಯೇ.

ಸ್ವಲ್ಪ ಜಮೀನು ಇತ್ತೆಂಬುದು ನಿಜ. ಎಚ್ಚರಿಕೆಯಿಂದಿದ್ದರೆ ಸುಖವಾಗಿ ದಿನ ಕಳೆಯಲು ಅದು ಸಾಕಾಗಿಯೂ ಇತ್ತು. ಆದರೆ ಅವರ ಯಜಮಾನರು ದುಂದು ವೆಚ್ಚಕ್ಕೆ ಪ್ರಖ್ಯಾತರಾಗಿದ್ದರು. ಹಳ್ಳಿ ಯಲ್ಲಿರುವುದರ ಬದಲು ಅವರು ಪೇಟೆಯಲ್ಲಿ ಮನೆಮಾಡಿದರು.

"ಅಷ್ಟೇ ಅಲ್ಲ ರಂಗಮ್ನೋರೆ, ಆಮೇಲೆ ಎರಡ್ನೇ ಮದುವೇನೂ ಮಾಡ್ಕೊಂಡ್ರು."

"ಹಾಗೇನು ?"

—ಎಂದರು ರಂಗಮ್ಮ. 'ನಿನ್ನಹಾಗೆ ಸಪ್ಪೆ'ಗಿದ್ದರೆ ಬೇರೆ ಮದುವೆ

ಮಾಡಿಕೊಳ್ಳದೇನು ನಾಚಿಯಾರು?—ಎಂದು ಮನಸಿನೊಳಗೇ ಅಂದು ಕೊಂಡರು.

"ಆಕೆಗೆ ಎಷ್ಟು ಜನ ಮಕ್ಕಳು ?"

"ಇಬ್ಬರು, ರಂಗಮ್ನೋರೆ. ಎರಡೂ ಹೆಣ್ಣು."

ಸವತಿಯ ಸಂತಾನ ಹೆಣ್ಣೆಂದು ಸಮಾಧಾನ ಪಡುವುದಷ್ಟೇ ಉಳಿದಿದ್ದುದು ವೆಂಕಟಸುಬ್ಬಮ್ಮನಿಗೆ !

"ಹೋಗಲಿ, ಎಲ್ಲಾ ಅನ್ಯೋನ್ಯವಾಗಿ ಇದೀರಿ ತಾನೆ ?"

"ಹೂಂ."

ಅದು ನಿಜವಾಗಿರಲಿಲ್ಲ. ಗಂಡನ ಮನೆಯಲ್ಲಿ ವೆಂಕಟ ಸುಬ್ಬಮ್ಮ ಬರಿಯ ಪರಿಚಾರಿಕೆಯ ಮಟ್ಟಕ್ಕೆ ಇಳಿದಿದ್ದಳು.

"ಧರ್ಮಾತ್ಮ ಮಕ್ಕಳು ಓದೋಕಾದರೂ ವ್ಯವಸ್ಥೆ ಮಾಡಿ ದಾನಲ್ಲ."

"ಹೂಂ."

ಅದು ನಿಜವಾಗಿರಲಿಲ್ಲ. ಹಿರಿಯ ಹೆಂಡತಿ ತನ್ನ ಆಭರಣ ಗಳನ್ನೆಲ್ಲ ಮಾರಿ ಮಕ್ಕಳ ವಿದ್ಯಾಭ್ಯಾಸದ ವೆಚ್ಚವನ್ನು ನಿರ್ವಹಿ ಸುತಿದ್ದಳು.

ಮಕ್ಕಳ ಪ್ರಸ್ತಾಪ ಬಂದಾಗ ಆಕೆಯೆಂದಳು :

"ದೊಡ್ಡ ಹುಡುಗನ ಮೇಲೆ ಯಜಮಾನರಿಗೆ ತುಂಬಾ ಪ್ರೀತಿ."

ಎಂತಹ ಅಲ್ಪ ಸಂತೋಷಿ ಆ ವೆಂಕಟಸುಬ್ಬಮ್ಮ !

"ದೇವರಿದಾನಮ್ಮ. ಮುಪ್ಪಿನ ಕಾಲದಲ್ಲಿ ಮಕ್ಕಳೇ ಅಲ್ವೆ ನಮ್ಮನ್ನ ನೋಡೋದು ?"

ರಂಗಮ್ಮನ ಮಾತು ಕೇಳಿದರೆ, ಆಕೆಗಂತೂ ಮುಪ್ಪು ಇನ್ನೂ ಬಂದೇ ಇಲ್ಲವೇನೊ ಎನ್ನಬೇಕು ಯಾರಾದರೂ ! ಆದರೂ ವಾಡಿಕೆಯ ಒಳ್ಳೆಯ ಮಾತೆಂದು ರಂಗಮ್ಮ ಅದನ್ನು ಅಂದರು

ವೆಂಕಟಸುಬ್ಬಮ್ಮನನ್ನು ಕುರಿತು ಅಷ್ಟೆಲ್ಲವನ್ನೂ ರಂಗಮ್ಮ ಬೇರೆ ಹೆಂಗಸರಿಗೆ ಹೇಳಲಿಲ್ಲ. ಆದರೂ ದಿನ ಕಳೆದಂತೆ ಹೇಗೋ ಹೇಗೋ ಒಂದೊಂದೇ ಅಕ್ಷರವಾಗಿ ಆ ವಿಷಯ ವಠಾರದಲ್ಲಿ ಹರಡಿಕೊಂಡಿತು.

"ಅಯ್ಯೋ ಪಾಪ !"

—ಎಂದರು ಎಷ್ಟೋ ಹೆಂಗಸರು. ತನ್ನ ಗಂಡನನ್ನು ಹತೋಟಿ ಯಲ್ಲಿಟ್ಟುಕೊಳ್ಳಲಾರದೇ ಹೋದ ಆ ಹೆಂಗಸಿನ ಬಗೆಗೆ ಅವರೆಲ್ಲರಿಗೂ ಕನಿಕರವೆನಿಸಿತು.

ಒಂದು ದಿನ ಪೋಲೀಸ್ ಶಿವಸ್ವಾಮಿಯ ಹೆಂಡತಿ, ಒಂದು ಬಟ್ಟಲು ಬೇಳೆ ಸಾಲ ಕೇಳಲೆಂದು ವೆಂಕಟಸುಬ್ಬಮ್ಮನ ಬಾಗಿಲ ಮುಂದೆ ನಿಂತಿದ್ದಳು. ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತಿದ್ದ ಹುಡುಗ ಆಗಲೆ ಹೊರಟುಹೋಗಿದ್ದ. ಚಿಕ್ಕವನು ಹೊರಡಲು ಹೊತ್ತಾಯಿತೆಂದು ಅವಸರ ಅವಸರವಾಗಿ ಉಣ್ಣುತಿದ್ದ.

"ಏನ್ಮಾಡ್ತಿದೀರಿ ವೆಂಕಟಸುಬ್ಬಮ್ಮ ?"

ಎಂದು ಶಿವಸ್ವಾಮಿಯ ಹೆಂಡತಿ ಅಂದಳು.

"ಬಡಿಸ್ತಾ ಇದೀನಿ, ಬಂದ್ಬಿಟ್ಟೆ ಕಣ್ರೀ."

ಆದರೆ ಆಕೆ ಹೊರಬರುವುದರೊಳಗೇ ವಠಾರದೆದುರು ಒಂದು ಜಟಕಾಗಾಡಿ ನಿಂತಿತು. ಮಧ್ಯ ವಯಸ್ಸು ದಾಟಿದ್ದ ಭಾರೀ ಗಾತ್ರದ ಬಿಳಿ ಮೀಸೆಯ ದೊಡ್ಡರುಮಾಲಿನ ಗೃಹಸ್ಥರೊಬ್ಬರು ಕೆಳಕ್ಕಿಳಿದು ಗಾಡಿಯವನನ್ನು ಕೇಳಿದರು :

"ಇದೇನೇನಯ್ಯ ?"

"ಹೂಂ. ಸಾಮಿ."

ಎಡಗೈಯಲ್ಲಿ ಕೊಡೆ, ಬಲಗೈಯಲ್ಲಿ ಧೋತರದ ಅಂಚು. ಎಕ್ಕಡ ಮೆಟ್ಟಿಕೊಂಡು ಉಸಿರು ಬಿಡುತ್ತ, ಅನುಮಾನಿಸುತ್ತ ಅಂಗಳ ಸೇರಿದರು.

'ಯಾರೋ ಬಂದ್ರು', 'ಯಾರೋ ಬಂದ್ರು' ಎಂದು ಸುದ್ದಿ ವಠಾರ ತುಂಬ ಕುಪ್ಪಳಿಸಿತು.

ಶಿವಸ್ವಾಮಿಯ ಹೆಂಡತಿಯನ್ನು ನೋಡಲು ಬಾಗಿಲಿಗೆ ಬಂದ ವೆಂಕಟಸುಬ್ಬಮ್ಮನೂ ಹೊರಕ್ಕೆ ಇಣಿಕಿದಳು. ಒಮ್ಮೆಲೆ ಅವಳ ಮುಖ ಅಷ್ಟಗಲವಾಯಿತು.

"ಅಯ್ಯೊ ! ನಮ್ಮ ಯಜಮಾನ್ರು"

—ಎಂದು ಆಕೆ ಪಿಸು ಧ್ವನಿಯಲ್ಲಿ ಅಂದು, ಉಣ್ಣುತಿದ್ದ

ಮಗನಿಗೆ ಕೇಳಿಸುವಂತೆ ಹೇಳಿದಳು :

"ನಿಮ್ಮಪ್ಪ ಬಂದ್ರು ಕಣೋ."

ಹಾಗೆ ಹೇಳಿ ಸೆರಗು ಸರಿಪಡಿಸಿಕೊಳ್ಳುತ್ತಾ ಆಕೆ ಹೆಬ್ಬಾಗಿಲಿನತ್ತ ಬಂದಳು. ಬಂದ 'ಯಜಮಾನರು' ಹೆಂಡತಿಯನ್ನು ನೋಡಿದರು. ಮುಗುಳುನಗೆ ಆ ಮುಖವನ್ನು ಅಲಂಕರಿಸಿದಂತೆ ತೋರಿತು. ಹೆಂಡತಿಯನ್ನು ಹಿಂಬಾಲಿಸಿ ಅವರು ಒಳಕ್ಕೆ ಕಾಲಿರಿಸಿದರು.

ನಾಲ ಕೇಳಲು ಬಂದಾಕೆ ಆಗ ಬಾಗಿಲಲ್ಲಿರಲಿಲ್ಲ. ವೆಂಕಟ ಸುಬ್ಬಮ್ಮನ ಗಂಡ ಬಂದ ಸುದ್ದಿಯನ್ನು ಮನೆ ಮನೆಗೂ ತಿಳಿಸುವ ಕಾರ್ಯದಲ್ಲಿ ಆಕೆ ನಿರತಳಾಗಿದ್ದಳು.

'ಯಜಮಾನರು' ರುಮಾಲು ತೆಗೆದಿರಿಸಿ ಹೆಂಡತಿ ಹಾಸಿದ ಚಾಪೆಯ ಮೇಲೆ ಕುಳಿತರು. ಮಗನತ್ತ ನೋಡುತ್ತ ಕೇಳಿದರು :

"ಸ್ಕೂಲ್ಗೆ ಹೋಗೋ ಹೊತ್ತಾಗ್ಲಿಲ್ವೇನೊ ?"

ಅವರ ದೃಷ್ಟಿಯಲ್ಲಿ ಸ್ಕೂಲು—ಕಾಲೇಜು ಎಲ್ಲಾ ಒಂದೇ.

"ಇನ್ನು ಹೊರಟ್ಬಿಡ್ತಾನೆ. ಕಂಠಿ ಆಗ್ಲೇ ಹೋದ."

—ಎಂದು ತಾಯಿಯೇ ಉತ್ತರವಿತ್ತಳು.

ಮಗ ಕೈ ತೊಳೆದು, ಪುಸ್ತಕಗಳನ್ನೆತ್ತಿಕೊಂಡು, "ಬರ್ತೀನಪ್ಪಾ —ಅಮ್ಮಾ ಬರ್ತೀನಿ," ಎಂದು ಹೇಳಿ ಹೊರಕ್ಕೆ ಧಾವಿಸಿದ.

ವೆಂಕಟಸುಬ್ಬಮ್ಮನ ಯಜಮಾನರು ಮನೆಯೊಳಗಿನ ಕತ್ತಲೆ ಯನ್ನು ಕಂಡು ಮೂಗು ಮುರಿದರು.

"ಇದೊಳ್ಳೇ ಮನೆ !"

–ಎಂದು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

"ಇಲ್ಲಿ ಒಳ್ಳೇಮನೆ ಸಿಗೋದೇ ಕಷ್ಟ"

–ಎಂದಳು ವೆಂಕಟಸುಬ್ಬಮ್ಮ.

ಆ ಬಾಗಿಲಿನ ಎದುರಿನಿಂದ ಅತ್ತಿತ್ತ ಹಾದು ಹೋಗುವ ಹೆಂಗ ಸರ ಸಂಖ್ಯೆ ಒಮ್ಮೆಲೆ ಹೆಚ್ಚಿತು. ಅವರೆಲ್ಲ ಒಳಗೆ ಕುಳಿತಿದ್ದ ಗಂಡಸಿ ನತ್ತ ದೃಷ್ಟಿ ಬೀರಿದರು. ಹೆಂಗಸರ ದೃಷ್ಟಿಯನ್ನು ಎದುರಿಸುವುದರಲ್ಲಿ ಯಜಮಾನರು ಎಂದೂ ಹಿಂದಾದವರಲ್ಲ.

"ಅಂತೂ ಪರವಾಗಿಲ್ಲ ವಠಾರ !"

—ಎಂದರು ಯಜಮಾನರು, ಅಷ್ಟೊಂದು ಜನ ತಮ್ಮನ್ನು ನೋಡುತ್ತ ಅತ್ತಿತ್ತ ಹೋದಬಳಿಕ.

ನಡೆಗೋಲಿನ ಸದ್ದಾಯಿತು. ರಂಗಮ್ಮ ಬಂದು ಬಾಗಿಲ ಬಳಿ ನಿಂತರು.

"ಇವರೇ ರಂಗಮ್ನೋರು"

—ಎಂದಳು ವೆಂಕಟಸುಬ್ಬಮ್ಮ. ಆಕೆಯ ಯಜಮಾನರು ಮುಗುಳ್ನಕ್ಕರು. ಅವರನ್ನು ನೋಡಿ ರಂಗಮ್ಮನೂ ನಕ್ಕರು.

"ಯಾವಾಗ ಬರೋಣವಾಯ್ತು ?"

"ಇದೇ ಈಗ ಬಸ್ನಲ್ಲಿ ಬಂದೆ."

"ವಠಾರಕ್ಕೆ ಬರ್ತಿರೋದು ಇದೇ ಮೊದಲ್ನೇ ಸಲ."

"ಹೌದು."

ರಂಗಮ್ಮ, ಆ ಗಂಡಸನ್ನು ಮಾತಿನಿಂದ ತಿವಿದು ನೋಡಲು ಬಯಸಿದರು.

"ಹೋದ ವರ್ಷವೆಲ್ಲಾ ಬೆಂಗಳೂರಿಗೆ ಬರ್ಲೇ ಇಲ್ಲವೇನೋ ?"

"ಇಲ್ಲ. ಒಂದೂವರೆ ವರ್ಷದ ಮೇಲಾಯ್ತು ಬೆಂಗಳೂರಿಗೆ ಬರದೆ."

ಹೆಂಡತಿ ಮಕ್ಕಳನ್ನು ಹೀಗೆ ಬಿಟ್ಟದ್ದ ಈತನಿಗೆ ನಾಚಿಕೆ ಎಂಬುದೇನೂ ಇಲ್ಲವೆಂಬುದು ಸ್ಪಷ್ಟವಾಗಿತ್ತು. 'ಒಳ್ಳೇ ಗಂಡಸು!' ಎಂದು ಮನಸಿನಲ್ಲೇ ಅಂದುಕೊಂಡು ರಂಗಮ್ಮ ಏನನ್ನೋ ಗೊಣಗಿದರು.

"ಆಗಲಿ, ಈಗಲಾದರೂ ಬಂದಿರಲ್ಲ, ಸಂತೋಷ"

ಎಂದು ರಂಗಮ್ಮ, ಟೀಕೆ ಅಷ್ಟು ಸಾಕೆಂದು ಮುಂದೆ ನಡೆದರು. ಹೆಬ್ಬಾಗಿಲು ಸಮೀಪಿಸುವುದರೊಳಗೇ ಅವರ ಸ್ವರ ಕೇಳಿಸಿತು.

"ಯಾವುದೋ ಹಸು ಒಳಕ್ಕೆ ಬಂದ್ಬಿಟ್ಟಿದೆ ! ಯಾರೇ ಅದು ಗೇಟು ತೆರ್ದಿಟ್ಟು ಬಂದಿರೋರು ? ಹೈ....ಹೈ....!"

ತನ್ನ ಗಂಡ ತೆರೆದಿಟ್ಟು ಬಂದಿರಬೇಕೆಂದು ವೆಂಕಟಸುಬ್ಬಮ್ಮನಿಗೆ ಹೊಳೆಯಿತು. ಆದರೆ ಆ 'ಯಜಮಾನ'ರಿಗೆ ಅದು ಅರ್ಥವಾಗಲಿಲ್ಲ.

ಹೆಂಗಸರ ಅಂತಹ ಕೂಗಾಟಗಳಿಗೆಲ್ಲ ಅವರು ಗಮನ ಕೊಡುವ ಪದ್ಧತಿಯೇ ಇರಲಿಲ್ಲ.

"ಕೋಟು ಬಿಚ್ಬಾರ್ದೆ? ಸ್ನಾನಕ್ಕೆ ನೀರಿಡ್ತೀನಿ...."

ಎಂದು ವೆಂಕಟಸುಬ್ಬಮ್ಮ ಗಂಡನನ್ನು ಉದ್ದೇಶಿಸಿ ಹೇಳಿದಳು.

"ಏನೂ ಬೇಡ, ಸ್ನಾನ ಮಾಡ್ಕೊಂಡೇ ಬಂದೆ."

ಹುಡುಗರ ಊಟವಾಗಿತ್ತು. ಆಕೆ ಇನ್ನೂ ಏನನ್ನೂ ತೆಗೆದುಕೊಂಡಿರಲಿಲ್ಲ.

"ಊಟಕ್ಕೇಳಿ ಹಾಗಾದರೆ"

ತನ್ನ ಪಾಲಿನ ಊಟವನ್ನು ಹೆಂಡತಿ ಕೊಡುತ್ತಾಳೆಂದು ಆ ಗಂಡನಿಗೆ ಗೊತ್ತಿತ್ತು. 'ನಿನಗೇನು ಮಾಡ್ತೀಯಮ್ಮಾ?' ಎಂದು ಆತ ಕೇಳಲಿಲ್ಲ. ಮತ್ತೆನ್ನ ಬೇಯಿಸುತ್ತಾಳೆ ಎಂಬುದನ್ನೂ ಅವರು ತಿಳಿದಿದ್ದರು.

ತಂಬಿಗೆ ನೀರನ್ನೆತ್ತಿಕೊಂಡು ಓಣಿಯುದ್ದಕ್ಕೂ ಅವರು ಅತ್ತಿತ್ತ ದೃಷ್ಟಿ ಹಾಯಿಸುತ್ತಾ ಹೋಗಿ ಬಂದರು. ಮಾತಿಲ್ಲದೆಯೇ ಅವರ ಊಟ ಮುಗಿಯಿತು. ಹೆಂಡತಿ ಕೊಟ್ಟ ಅಡಿಕೆಪುಡಿಯನ್ನಷ್ಟು ಬಾಯಿಗೆ ಹಾಕಿಕೊಂಡು ಅವರು ಮತ್ತೆ ಕೋಟಿಗೆ ಕೈಹಾಕಿದರು.

"ಇದೇನು ಹೊರಟೇಬಿಟ್ರಿ?"

"ಹೂಂ. ಕೋರ್ಟಿಗೆ ಹೋಗ್ಬೇಕು. ಆ ದಿವಸ ಡಿಕ್ರಿ ಆಗಿರ್ಲಿಲ್ವೆ? ಅದರ ಅಪೀಲು ಇವತ್ತು."

"ಆಮೇಲೆ ಬರ್ತೀರಿ ತಾನೆ?"

"ಇಲ್ಲ. ಸಾಯಂಕಾಲ ಐದು ಘಂಟೆ ಬಸ್ಸಿಗೇ ಹೋಗ್ಬೇಕು."

ವೆಂಕಟಸುಬ್ಬಮ್ಮನಿಗೆ ಅಳು ಚಿಮ್ಮಿ ಬಂದು, ಸ್ವರ ಗಂಟಲಲ್ಲೆ ಉಡುಗಿಹೋಯಿತು. ಆದರೂ ಪ್ರಯಾಸಪಟ್ಟು ಆಕೆ ಸುಧಾರಿಸಿಕೊಂಡಳು. ತನಗೋಸ್ಕರ ಆತ ರಾತ್ರೆ ನಿಲ್ಲುವುದಿಲ್ಲವೆಂಬುದಂತೂ ಗೊತ್ತೇ ಇತ್ತು. ಸವತಿ ಆತನಿಗಾಗಿ ಅಲ್ಲಿ ಕಾಯುತಿದ್ದಳು.

ಕಣ್ಣಿಗೆ ಕತ್ತಲು ಕವಿದಹಾಗಾಯಿತು ಆಕೆಗೆ.

"ಕಂದೀನ ನೋಡಲ್ವೆ?"

"ಎಷ್ಟು ಹೊತ್ತಿಗೆ ಬರ್ತಾನೆ ?"

"ಆರು ಘಂಟೆಗೆ."

"ಮತ್ತೆ ! ಕಡೇ ಬಸ್ಸು ಐದು ಘಂಟೆಗೇ ಹೊರಡುತ್ತೆ."

ವೆಂಕಟಸುಬ್ಬಮ್ಮನ ಬತ್ತಳಿಕೆ ಬರಿದಾಗಿತ್ತು. ಒಂದು ಕಾಲದಲ್ಲಿ ತನ್ನೊಬ್ಬಳ ಸೊತ್ತೇ ಆಗಿದ್ದ ಆ ಜೀವವನ್ನು ಕಾತರದ ದೃಷ್ಟಿಯಿಂದ ಆಕೆ ನೋಡಿದಳು.

ಆಕೆಯ ಗಂಡ ಕೊಡೆಯನ್ನು ಕೈಗೆತ್ತಿಕೊಂಡರು. ಚಪ್ಪಲಿಗಳತ್ತ ಪಾದಗಳು ಚಲಿಸಿದುವು.

"ಏನಾದರೂ ದುಡ್ಡು ಬೇಕೇನು ?"

ಈ ಪ್ರಶ್ನೆಯಿಂದ ವೆಂಕಟಸುಬ್ಬಮ್ಮನ ಸ್ವಾಭಿಮಾನ ಕೆರಳಿತು.

"ಬೇಡಿ. ಇದೆ."

"ಸರಿ ಹಾಗಾದರೆ. ಬರ್ತೀನಿ."

"ಹುಡುಗರು ಇದ್ದಿದ್ದರೆ ಜಟಕಾ ತರಿಸಬಹುದಾಗಿತ್ತು."

"ಬೇಡ ಹಾದಿ ಗೊತ್ತಿದೆ. ಅಂಗಡಿ ಬೀದಿಗೆ ನಡಕೊಂಡು ಹೋಗಿ ಅಲ್ಲಿಂದ ಬಸ್ನಲ್ಲಿ ಹೋಗ್ತೀನಿ."

ಅಷ್ಟು ಹೇಳಿ ವೆಂಕಟಸುಬ್ಬಮ್ಮನ ಯಜಮಾನರು ಬೀದಿಗಿಳಿದು ಹೊರಟೇ ಹೋದರು.

ಕುಸಿದುಬೀಳುವ ಹಾಗಾಯಿತೆಂದು ಆ ಹೆಂಗಸು ಕ್ಷಣಕಾಲ ಬಾಗಿಲಿಗೊರಗಿ ನಿಂತುಕೊಂಡಳು. ಆಮೇಲೆ ಅಡುಗೆ ಮನೆಗೆ ಹೋಗಿ, ಸೀರೆಯ ಸೆರಗನ್ನು ಕಣ್ಣುಗಳಿಗೆ ಒತ್ತಿಕೊಂಡು ಎರಡು ನಿಮಿಷ ಮೌನವಾಗಿ ಅತ್ತಳು. ಮತ್ತೆ ಅನ್ನ ಬೇಯಿಸುವ ಗೋಜಿಗೆ ವೆಂಕಟಸುಬ್ಬಮ್ಮ ಹೋಗಲಿಲ್ಲ. ಊಟಮಾಡಬೇಕೆಂದೇ ಆಕೆಗೆ ಅನಿಸಲಿಲ್ಲ.

ವೆಂಕಟಸುಬ್ಬಮ್ಮನ ಯಜಮಾನರು ಅಷ್ಟು ಬೇಗ ಹೊರಟು ಹೋದರೆಂದು ತಿಳಿದು ರಂಗಮ್ಮನಿಗೆ ಆಶ್ಚರ್ಯವಾಯಿತು. ಹೊರಟಾಗ ತನಗೊಂದು ಮಾತು ಹೇಳಿ ಹೋಗಲಿಲ್ಲವೆಂದು ಮನಸಿನೊಳಗೇ ಕುಟುಕಿತು. ತಾನು ಏನು ಹೇಳಿದರೂ ವೆಂಕಟಸುಬ್ಬಮ್ಮನಿಗೆ ನೋವಾಗುವುದೆಂದು ತಿಳಿದು ರಂಗಮ್ಮ, ನಿಟ್ಟುಸಿರನ್ನಷ್ಟೆ ಬಿಟ್ಟು

ಸುಮ್ಮನಾದರು.

ಆದಾಗಿ ಬಹಳ ದಿನಗಳು ಕಳೆದರೂ, ಊರಿನಿಂದ ಬಂದ ವೆಂಕಟ ಸುಬ್ಬಮ್ಮನ ಯಜಮಾನರು ರಾತ್ರೆ ನಿಲ್ಲದೆ ಸಂಜೆಯೇ ಹೊರಟು ಹೋದ ವಿಷಯ ಮಾತ್ರ ವಠಾರದ ಯಾರಿಗೂ ಮರೆತು ಹೋಗಲಿಲ್ಲ. ಅವರೆಲ್ಲಾ ತಮ್ಮ ತಮ್ಮೊಳಗೇ ವೆಂಕಟಸುಬ್ಬಮ್ಮನ ವಿಷಯವಾಗಿ ಸಹಾನುಭೂತಿಯ ಮಾತನ್ನಾಡಿದರು.

ಆ ತಾಯಿ ಮಾತ್ರ ಮಕ್ಕಳ ಸೇವೆಯಲ್ಲಿ ಎಂದಿನಂತೆಯೇ ನಿರತಳಾದಳು.

................

ಮತ್ತೊಮ್ಮೆ ಒಂದು ಜಟಕಾ ವಠಾರದೆದುರು ಬಂದು ನಿಂತಿತು. ನಡುಮಧ್ಯಾಹ್ನ ಆಗ. ತಲೆಯ ಮೇಲೆ ಜರಿ ರುಮಾಲು, ಉಣ್ಣೆಯ ಕೋಟು, ಕಚ್ಚೆಪಂಚೆ, ಕೈಯಲ್ಲಿ ಛತ್ರಿ, ಕಾಲಲ್ಲಿ ಚುರುಚುರು ಸದ್ದಾಗು ತಿದ್ದ ಭಾರೀ ಎಕ್ಕಡ. ದೇಹ ಎತ್ತರವಾಗಿದ್ದರೂ ಕ್ಷೀಣವಾಗಿತ್ತು. ಬಿಳಿ ಮೀಸೆ ಇದ್ದರೂ ಅದನ್ನು ಸೊಟವಾಗಿ ಎರಡು ಬದಿಗಳಿಗೆ ವಿಂಗಡಿಸಿ ಇರಲಿಲ್ಲ.

ಆತ ಜಟಕಾ ಗಾಡಿಯಿಂದಿಳಿದು ಅತ್ತಿತ್ತ ನೋಡುತಿದ್ದುದನ್ನು ಮೊದಲು ಕಂಡ ರಾಜಮ್ಮ, 'ನಮ್ಮ ಜನವಲ್ಲ, ಯಾರೋ ಬೇರೆ. ವಿಳಾಸ ತಪ್ಪಿದೆಯೇನೋ' ಎಂದುಕೊಂಡಳು.

ಆದರೆ ಆ ಸದ್ಗೃಹಸ್ಥ ವಠಾರದ ಗೇಟನ್ನೇ ಸಮೀಪಿಸಿದ :

"ಅಮ್ಮಣ್ಣಿ, ರಂಗಮ್ನೋರ ವಠಾರ ಅಂದರೆ ಇದೇ ಅಲ್ವೆ ?"

ಅಮ್ಮಣ್ಣಿ ಎಂಬ ಪದ ಕೇಳಿ ರಾಜಮ್ಮ ಸುಪ್ರಸನ್ನಳಾದಳು.

"ಹೌದು, ಇದೇ. ಯಾರು ಬೇಕಾಗಿತ್ತು?"

"ರಂಗಮ್ನೋರ್ನ ರವಷ್ಟು ನೋಡ್ಬೇಕು."

"ತಾಳಪ್ಪಾ. ಹೋಗಿ ಹೇಳ್ತೀನಿ."

ರಾಜಮ್ಮ ಸುದ್ದಿ ಮುಟ್ಟಿಸಿದಳು. "ನಿಮ್ಮ ಮಗನ ಕಡೆಯಿಂದ ಬಂದಿದಾರೋ ಏನೋ" ಎಂದು ತನ್ನ ಸ್ವಂತದ ಸಂದೇಹವನ್ನೂ ಮುಂದಿಟ್ಟಳು.

ರಂಗಮ್ಮ ಬೇಗಬೇಗನೆ ನಡೆಗೋಲನ್ನೂರಿಕೊಂಡು ಬಂದರು.

"ಯಾರಪ್ಪಾ. ಎಲ್ಲಿಂದ್ಬಂದ್ರಿ?"

"ಇಲ್ಲಿ ರಾಜಶೇಖರ ಅಂತ ಒಬ್ಬ ಹುಡುಗ ಇಲ್ವೆ?"

"ಹೌದು, ಇದಾನೆ."

"ಅವನ ಜತೇಲಿ ದೇವಯ್ಯ ಅಂತ ಒಬ್ಬ—"

"ಹೌದು, ದೇವಯ್ಯಾಂತಿದಾನೆ."

"ನಾನು ದೇವಯ್ಯನ ತಂದೆ."

"ಹಾಗೋ? ಬನ್ನಿ-ಬನ್ನಿ—"

ಆದರೆ ಬಂದಿದ್ದ ಗೌಡರು ಕುಳಿತುಕೊಳ್ಳುವುದಕ್ಕೂ ಸರಿಯಾದ ಜಾಗವಿರಲಿಲ್ಲ. ಅಧಿಕಾರಿಗಳು ಯಾರಾದರೂ ಬಂದರೆ. ಜಾತಿ ಮತಗಳ ಯೋಚನೆ ಮಾಡದೆ ರಂಗಮ್ಮ ಅವರನ್ನು ತಮ್ಮ ಮನೆಗೆ ಕರೆದೊಯ್ಯುವುದಿತ್ತು. ಬಂದವರನ್ನು ಹಾಗೆಯೇ ನಿಲ್ಲಗೊಡುವುದು ಸರಿಯಲ್ಲವೆಂದು ರಂಗಮ್ಮ ಈಗಲೂ ಕರೆದರು :

"ಒಳಗ್ಬನ್ನಿ."

ಆದರೆ ಗೌಡರು ಬರಲಿಲ್ಲ.

"ಬ್ಯಾಡಿ. ಇಲ್ಲೇ ಇರ್ತೀನಿ. ನಮ್ಮ ದೇವಯ್ಯ—"

ರಂಗಮ್ಮ ಆತನ ಮಾತಿಗೆ ಕಿವಿಗೊಡದೆ, ಪೋಲೀಸ್ ಶಿವಸ್ವಾಮಿಯ ಹುಡುಗನನ್ನು ಕಳುಹಿಸಿ ಚಂಪಾವತಿಯ ಮನೆಯಿಂದ ಕುರ್ಚಿ ತರಿಸಿದರು. ಗೌಡರು ಹೆಬ್ಬಾಗಿಲ ಬಳಿಯಲ್ಲೇ ಕುರ್ಚಿಯ ಮೇಲೆ ಆಸೀನರಾದರು. ರಂಗಮ್ಮನೂ ಗೋಡೆಗೊರಗಿ ಬಾಗಿಲ ಬಳಿ ಕುಳಿತುಕೊಂಡರು.

ತನ್ನ ಮಗ ದೇವಯ್ಯನ ವಿಷಯವಲ್ಲವೆ ಆ ತಂದೆ ಕೇಳುತಿದ್ದುದು? ಎಷ್ಟೊಂದು ಸಾರಿ ತಮ್ಮ ಮನಸ್ಸಿನ ನೆಮ್ಮದಿಯನ್ನು ಕದಡಿತ್ತು ಆ ವಿದ್ಯಾರ್ಥಿಗಳ ಕೊಠಡಿ! 'ನನಗೆ ಯಾಕೆ ಇದೆಲ್ಲ? ಹಾಳಾಗಿ ಹೋಗಲಿ' ಎಂದು ಆವರೆಗೂ ರಂಗಮ್ಮ ಸುಮ್ಮನಾಗಿದ್ದರು. ಆದರೆ ಈಗ, ಹೆತ್ತ ತಂದೆಯೇ ಕೇಳುತಿದ್ದಾಗ, ತಮ್ಮ ಹೃದಯದಲ್ಲಿದ್ದುದನ್ನೆಲ್ಲಾ ಆತನೆದುರು ತೋಡಿಕೊಳ್ಳಲು ರಂಗಮ್ಮನಿಗೆ ಅಪೇಕ್ಷೆಯಾಯಿತು. ಅಲ್ಲದೆ

ಆ ಹುಡುಗನನ್ನು ಒಳ್ಳೆಯ ಹಾದಿಗೆ ತರಲು ಸ್ವತಃ ತಾವೂ ಎಷ್ಟೊಂದು ಪ್ರಯತ್ನ ಪಟ್ಟೆವೆಂಬುದನ್ನು–ಸ್ವಲ್ಪ ಉಪ್ಪು ಖಾರ ಹಚ್ಚೆಯೇ–ಆತನಿಗೆ ತಿಳಿಸಲು ಅವರು ಬಯಸಿದರು.

"ನಿಮ್ಮ ಹುಡುಗನ ವಿಷಯ–ಏನಪ್ಪ ಹೇಳ್ಲಿ ನಾನು ?"

—ಎಂದು ಆರಂಭಿಸಿ ರಂಗಮ್ಮ, ಸ್ವಲ್ಪ ಹೊತ್ತು ತಡೆದು ಹೇಳುತ್ತಿರುವುದೊಂದೂ ತಮಗೆ ಪ್ರಿಯವಲ್ಲವೆಂಬಂತೆ ತಲೆಯಾಡಿಸಿ, ಮನಸ್ಸಿನಲ್ಲಿದ್ದುದನ್ನೆಲ್ಲಾ ಹೇಳಿಯೇ ಬಿಟ್ಟರು.

ಅದನ್ನು ಕೇಳುತಿದ್ದ ಆ ಸದ್ಗೃಹಸ್ಥರ ಮುಖ ಸಪ್ಪಗಾಯಿತು ; ಹೃದಯ ಭಾರವಾಯಿತು. ಅವರು ದೀರ್ಘವಾಗಿ ಶ್ವಾಸವೆಳೆದರು.

ಗೌಡರು ಮಾತಿಲ್ಲದೆ ಕುಳಿತುದನ್ನು ಕಂಡು, ತಾವು ಆಡಿದುದು ಅತಿಯಾಯಿತೇನೋ ಎಂದು ರಂಗಮ್ಮನಿಗೇ ವ್ಯಾಕುಲವಾಯಿತು

"ಆದರೆ ಇದನ್ನೆಲ್ಲ ಮನಸ್ಸಿಗೆ ಹಚ್ಕೋಬಾರ್‍ದು. ಚಿಕ್ಕ ಹುಡುಗ. ಇನ್ನೂ ಬುದ್ಧಿ ತಿಳೀದು......ಒಂದೆರಡು ಸಾರೆ ಬಂದು ಬುದ್ಧಿವಾದ ಹೇಳಿದ್ರೆ ತಿದ್ಕೊಂತಾನೆ."

"ಅದ[illegible]ಸ್ಕೋತಾನೋ."

–ಎಂದಷ್ಟೇ ಉತ್ತರ ಬಂತು.

ಒಂದು ಕ್ಷಣ ತಡೆದು, ಏನೋ ನಿರ್ಧಾರಕ್ಕೆ ಬಂದವರಂತೆ ಗೌಡರೆಂದರು :

"ಎಷ್ಟೊತ್ತಿಗೆ ಬರ್ತವೆ ಹುಡುಗ್ರು ?"

"ಸಾಯಂಕಾಲ ಆರುಘಂಟೆಗೆಲ್ಲಾ ಸಾಮಾನ್ಯವಾಗಿ ಒಂದ್ಬಿಡ್ತಾರೆ. ರಾಜಶೇಖರನೇನೋ ತಪ್ಪದೆ ಬರ್‍ತಾನೆ. ನಿಮ್ಹುಡುಗ—"

ಗೌಡರು ಕುಳಿತಲ್ಲಿಂದ ಎದ್ದರು :

"ಆಗಲ್ರಮ್ಮ. ಸಿಟೀ ಕಡೆ ಸ್ವಲ್ಪ ಕೆಲಸ ಇತ್ತು. ಮುಗಿಸ್ಕೊಂಡು ಬರ್‍ತೀನಿ."

ಅಷ್ಟು ಎತ್ತರವಾಗಿದ್ದ ಗೌಡರು ರಂಗಮ್ಮನ ಮಾತು ಕೇಳಿ ಅಷ್ಟರಲ್ಲೆ ಸ್ವಲ್ಪ ಕುಗ್ಗಿ ಹೋಗಿದ್ದರು. ಅವರು ಬೀದಿಗಿಳಿದು ಮರೆಯಾದುದನ್ನೆ ನೋಡುತ್ತಲಿದ್ದ ರಂಗಮ್ಮನಿಗೆ ಕಸಿವಿಸಿ ಎನಿಸಿತು.

"ನಾನು ಇಷ್ಟೆಲ್ಲಾ ಹೇಳಬಾರದಿತ್ತೇನೋ. ಆ ಮೂಲೇ ಮನೆ ಹುಡುಗಿ ವಿಷಯಾನಾದರೂ ಬಿಡಬಹುದಾಗಿತ್ತು. ಓದೋದನ್ನೇ ನಿಲ್ಲಿಸಿ ಬಿಡ್ತಾನೋ ಏನೋ."

—ಎಂದು ಅವರು ಮನಸಿನಲ್ಲೆ ಪರಿತಪಿಸಿದರು.

ವೆಂಕಟಸುಬ್ಬಮ್ಮನ ಯಜಮಾನರು ಬಂದಾಗ ತೋರಿದಷ್ಟು ಕುತೂಹಲವನ್ನು ದೇವಯ್ಯನ ತಂದೆ ಬಂದಾಗ ವಠಾರದ ಹೆಂಗಸರು ತೋರಲಿಲ್ಲ. ಆದರೂ ರಂಗಮ್ಮನ ಮಾತಿಗೆ ಕಿವಿಗೊಡುತ್ತಾ ಕುಳಿತಿದ್ದ ವಯಸ್ಸಾಗಿದ್ದ ಗೌಡರನ್ನು–ಮಹಡಿಯ ಮೇಲಿನ ಹುಡುಗರೆಲ್ಲೊಬ್ಬನ ತಂದೆಯನ್ನು—ನೋಡುವ ಕೆಲಸವನ್ನಷ್ಟು ಅವರು ಮಾಡಿದರು.

ಅಷ್ಟೇ ಆಗಿದ್ದರೆ, ಆ ಸಂದರ್ಶನವನ್ನೆ ಅವರು ಮರೆತು ಬಿಡುತಿದ್ದರೇನೊ. ಆದರೆ ದೇವಯ್ಯನ ತಂದೆ ಅದಕ್ಕೆ ಅವಕಾಶ ಕೊಡಲಿಲ್ಲ.

ವೆಂಕಟಸುಬ್ಬಮ್ಮನ ಯಜಮಾನರು ತಮ್ಮ ಹುಡುಗರನ್ನು ಸರಿಯಾಗಿ ಮಾತನಾಡಿಸದೆಯೇ ಹೊರಟು ಹೋದರು. ಆದರೆ ದೇವಯ್ಯನ ತಂದೆ, ತಮ್ಮ ಹುಡುಗನನ್ನು ಸರಿಯಾಗಿಯೇ ಮಾತನಾಡಿಸಲೆಂದು ಸಂಜೆ ವಾಪಸು ಬಂದರು.

ಆಗ ಕೊಠಡಿಗೆ ಬಂದಿದ್ದವರು ರಾಜಶೇಖರ ಮತ್ತು ಚಿಕ್ಕ ಹುಡುಗ ಮಾತ್ರ. ದೇವಯ್ಯನ ತಂದೆಯ ಆಗಮನದ ವಾರ್ತೆಯನ್ನು ರಂಗಮ್ಮನಿಂದ ತಿಳಿದ ರಾಜಶೇಖರನಿಗೆ ಗಲಿಬಿಲಿಯೆನಿಸಿತು. ನವರಾತ್ರಿಯ ಹಬ್ಬಕ್ಕೆ ದೇವಯ್ಯನೂ ಚಿಕ್ಕ ಹುಡುಗನೂ ಊರಿಗೆ ಹೋಗಿದ್ದರು. ಊರಿನಿಂದ ಹಿಂತಿರುಗಿದ ಮೇಲೆ ದೇವಯ್ಯನ ಹಾರಾಟ ಸ್ವಲ್ಪ ಕಡಿಮೆಯಾಗಿತ್ತು. ಕಾಲೇಜ್ ಹಾಸ್ಟೆಲಿಗೆ ಸೇರುವ ಪ್ರಸ್ತಾಪವನ್ನು ಮತ್ತೆ ಆತ ಮಾಡಲಿಲ್ಲ. ಆದರೆ ಕೆಟ್ಟ ಅಭ್ಯಾಸಗಳನ್ನು ಆತ ಬಿಟ್ಟು ಕೊಡಲೂ ಇಲ್ಲ.

ರಾಜಶೇಖರ, ದೇವಯ್ಯ ಸೇದಿ ಎಸೆದಿದ್ದ ಸಿಗರೇಟು ಚೂರುಗಳನ್ನು ಹೆಕ್ಕಿ ತೆಗೆದ; ಕೊಠಡಿಯನ್ನು ಶುದ್ಧಗೊಳಿಸಿದ.

ಕೊಠಡಿಗೆ ಬಂದ ಗೌಡರು ಮೌನವಾಗಿದ್ದರು. ಆ ಮೌನವನ್ನು ಕಂಡು ರಾಜಶೇಖರನ ಭಯ ಹೆಚ್ಚಿತು.

"ಅಯ್ಯೋ, ಇವರು ಸ್ಸಾತನ್ನಾದರೂ ಆಡಬಾರದೆ ?"

—ಎಂದು ರಾಜಶೇಖರ ಮನಸಿನೊಳಗೇ ಸಂಕಟ ಪಟ್ಟ.

ಗೌಡರು ಯಾವುದೋ ಕನ್ನಡ ಪುಸ್ತಕವನ್ನೋದುತ್ತ ಮಗನ ಚಾಪೆಯ ಮೇಲೆ ಕುಳಿತರು. ಮಗನ ಆಗಮನದ ನಿರೀಕ್ಷಣೆಯಲ್ಲಿ ಗೌಡರಿದ್ದುದನ್ನು ತಿಳಿದ ರಂಗಮ್ಮ ಕತ್ತಲಾದೊಡನೆಯೆ—ಎಂದಿಗಿಂತ ಸ್ವಲ್ಪ ಬೇಗನೆ—ದೀಪ ಹಾಕಿದರು.

ಏಳೂವರೆಯ ಹೊತ್ತಿಗೆ ದೇವಯ್ಯ ಕೊಠಡಿಗೆ ಬಂದ. ತಂದೆಯನ್ನು ಕಂಡೊಡನೆ ದೇಹದ ಕಸುವೆಲ್ಲ ಹೊರಟು ಹೋದಂತಾಯಿತು ಅವನಿಗೆ.

"ಎಷ್ಟು ಹೊತ್ತಿಗೋ ಮನೇಗ್ಬರೋದು ?"

—ಎಂದು ಗುಡುಗುತ್ತಾ ಗೌಡರು ಎದ್ದು ನಿಂತು ಮಗನ ಸಮೀಪಕ್ಕೆ ಬಂದರು.

ತಪ್ಪಿಸಿಕೊಳ್ಳಲು ಹಾದಿಯೇ ಇಲ್ಲದ ಅಪರಾಧಿಯ ಹಾಗಾಯಿತು ದೇವಯ್ಯನ ಸ್ಥಿತಿ. ತಾವು ಬರುವ ವಿಷಯವನ್ನು ತಂದೆ ಮೊದಲೇ ಬರೆದು ತಿಳಿಸದೆ ಈ ಸ್ಥಿತಿಯೊದಗಿತಲ್ಲಾ ಎಂದು ಆತ ಹಲುಬಿದ. ಏನಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಯುವುದರೊಳಗೇ ಆತನಿಗೆ ಏಟುಗಳು ಬಿದ್ದುವು. ತಂದೆ ಮಗನಿಗೆ ಅಂಗೈ ಬೀಸಿ ಹೊಡೆದರು; ಮುಷ್ಟಿಯಿಂದ ಗುದ್ದಿದರು; ತನ್ನ ಕಾಲು ಹಿಡಿಯಲು ಬಂದವನನ್ನು ಪಾದದಿಂದಲೆ ತುಳಿದರು. ತಮ್ಮ ಕುಲಕ್ಕೆ ಮನೆತನಕ್ಕೆ ಕಳಂಕಪ್ರಾಯನಾದ ಆ ಮಗನನ್ನು ಮನಸ್ವೀ ಬಯ್ದರು. ದೇವಯ್ಯನು ಯಾವ ರಕ್ಷಣೆಯೂ ದೊರೆಯದೆ, "ಅಮ್ಮಾ—ಅಮ್ಮಾ—ಸತ್ತೇ ಸತ್ತೆ" ಎಂದು ಕೂಗಾಡಿದ.

ರಾಜಶೇಖರನೂ ಚಿಕ್ಕ ಹುಡುಗನೂ ಗಡಗಡನೆ ನಡುಗುತ್ತಾ ಮೂಲೆ ಸೇರಿದರು.

ಜಯರಾಮು ತನ್ನ ತಾಯಿಯೊಡನೆ ಆ ಕೊಠಡಿಯ ಬಾಗಿಲಿನ ಎದುರು ಬಂದು ನಿಂತ. ಕೆಳಗಿನಿಂದ ಚಿಕ್ಕಪುಟ್ಟ ಹುಡುಗರು ದೇವಯ್ಯನ ಚೀರಾಟದ ಸದ್ದು ಕೇಳಿ ಮೇಲಕ್ಕೆ ಒಡಿ ಬಂದರು. ಗೌಡರು ಶರೀರದ

ಅತ್ಯಂತ ಕಂಪಿಸುತಿದ್ದರು. ನೆಲದ ಮೇಲೆ ಮೂಲೆಯಲ್ಲಿ ಮುದುರಿ ಕುಳಿತು ತನ್ನ ಮಗ ಎಳೆಯ ಮಗುವಿನಂತೆ ಅಳತೊಡಗಿದುದನ್ನು ಕಂಡಾಗ ಗೌಡರ ರೋಷ ಮೆಲ್ಲನೆ ಕರಗಿ ಹೋಯಿತು.

ಹೊಡೆತ ನಿಂತಿತೆಂದು ಜಯರಾಮು ತನ್ನ ತಾಯಿಯೊಡನೆ ಹಿಂತಿರುಗಿದ. ಇಷ್ಟು ಬೇಗನೆ ತಮಾಷೆ ಮುಗಿಯಿತಲ್ಲಾ ಎಂದು ನೆರೆದಿದ್ದ ಹುಡುಗರಿಗೆ ನಿರಾಶೆಯಾಗಿ, ದೇವಣ್ಣನಿಗೆ ಏಟುಬಿದ್ದ ಸುದ್ದಿಯನ್ನಷ್ಟೆ ಕೆಳಗೆ ವಠಾರದಲ್ಲಿ ಪ್ರಸಾರ ಮಾಡಲು ಅವರು ಇಳಿದು ಹೋದರು.

ಗೌಡರು ತಮ್ಮ ಹೃದಯದ ಅಳಲನ್ನು ಯಾರೂ ತಿಳಿದುಕೊಳ್ಳಲಾರರೆಂದು ಮನಸಿನೊಳಗೇ ಕೊರಗುತ್ತ, ಅಸಹನೀಯವಾಗುತ್ತ ಬಂದಿದ್ದ ಮೌನವನ್ನು ಮುರಿದು ಹೇಳಿದರು :

"ಇವತ್ನಿಂದ್ಲೇ ನೀನು ಸುಧಾರಿಸಿದ್ರೆ ಬದುಕ್ದೆ. ಇಲ್ದಿ ಓದ್ರೆ ನನ್ಮಗ ಸತ್ತಾಂತ ತಿಳ್ಕಂತೀನಿ."

ರಾಜಶೇಖರನ ಕಡೆಗೆ ತಿರುಗಿ ಅವರೆಂದರು :

"ಏನಪ್ಪಾ, ದೇವೂನ ಒಂದಿಷ್ಟು ನೋಡ್ಕೊ ಅಂದ್ರೆ ಇಂಗ್ಮಾಡೋದಾ ನೀನು ?"

ರಾಜಶೇಖರ ಉತ್ತರ ಕೊಡಲಾರದೆ ಹೋದ.

ಗೌಡರು ರುಮಾಲನ್ನು ತಲೆಗೇರಿಸಿ ಕೆಳಕ್ಕಿಳಿದು ರಂಗಮ್ಮನನ್ನು ಕರೆದರು.

"ನಾನು ಓಗ್ಬರ್ತೀನಿ ತಾಯಿ."

"ಆಗಲಪ್ಪಾ. ಈವಾಗ್ಲೇ ಹೊರಡ್ತೀರಾ ?"

"ರಾತ್ರೆ ಗಾಡೀಗೇ ಓಯ್ತೀನಿ. ನಮ್ಮ ಹುಡುಗನ ಮೇಲೆ ಒಂದಿಷ್ಟು ನಿಗಾ ಮಡಗಿರಿ ಅವ್ವಾ....ದೊಡ್ಡೋನು ಊರಲ್ಲೇ ಹೊಲ ನೋಡ್ಕೊಂತ ಅವ್ನೆ. ಇವ್ನು ಎರಡ್ನೆಯೋನು. ಒಂದಿಷ್ಟು ಓದಿ ಅಭಿವೃದ್ಧಿಗೆ ಬರ್ಲೀಂತ ಆಸೆ."

"ಆಗಲಪ್ಪಾ ಆಗಲಿ. ನಾನೂ ಹೇಳ್ತಿರ್ತೀನಿ. ನಮ್ಮ ವಠಾರದಲ್ಲಿ ಈವರೆಗೆ ಓದಿದೋರೆಲ್ಲಾ ಒಳ್ಳೊಳ್ಳೇ ಕೆಲಸ್ದಲ್ಲಿದಾರೆ."

"ಬರ್ತೀನಿ ತಾಯಿ"

–ಎಂದು ಮತ್ತೊಮ್ಮೆ ಹೇಳಿ ಗೌಡರು ಹೊರಟು ಹೋದರು.

........ಪಿತೃಭಕ್ತಿ ಪುತ್ರವಾತ್ಸಲ್ಯದ ವಿವಿಧ ರೂಪಗಳು ಜಯರಾಮುವಿನ ಕಣ್ಣೆದುರು ಕಟ್ಟಿದಂತಾಗಿ, ಆ ರಾತ್ರೆ ಬಹಳ ಹೊತ್ತು ಆತನಿಗೆ ನಿದ್ದೆ ಬರಲೇ ಇಲ್ಲ. ಕಥೆಯಲ್ಲಿ ಓದುವುದಕ್ಕಿಂತಲೂ ವಾಸ್ತವತೆಯಲ್ಲಿ ಬದುಕು ಎಷ್ಟೊಂದು ರುದ್ರತರ ಎಂದು ಯೋಚಿಸುತ್ತ ಆತ ಮಲಗಿದ.

ರಾಜಶೇಖರನೂ ಚಿಕ್ಕ ಹುಡುಗನೂ ಊಟಮಾಡಿ ಬಂದರು. ಮೈಕೈ ನೋಯುತಿದ್ದ ದೇವಯ್ಯ ಮುಸುಕೆಳೆದುಕೊಂಡು ಹಾಸಿಗೆಯ ಮೇಲೆ ಉರುಳಿದ. ಆತನನ್ನು ಮಾತನಾಡಿಸಲು ರಾಜಶೇಖರ ಮಾಡಿದ ಯತ್ನಗಳೆಲ್ಲ ವಿಫಲವಾದುವು.

........ದಿನಗಳು ಕಳೆದುವು. ದೇವಯ್ಯ ಹೊತ್ತಿಗೆ ಸರಿಯಾಗಿ ಈಗ ಕೊಠಡಿಗೆ ಬರುತಿದ್ದ. ದುಂದು ವೆಚ್ಚ ಮಾಡುತ್ತಿರಲಿಲ್ಲ. ಸಿಗರೇಟು ಸೇದುವುದು ಕಡಿಮೆಯಾಯಿತು. ಪಾಠ ಪುಸ್ತಕಗಳನ್ನೋದುವ ಪ್ರಯತ್ನವನ್ನೂ ಆತ ಮಾಡುತಿದ್ದುದನ್ನು ರಾಜಶೇಖರ ಗಮನಿಸಿದ.

ತಂದೆ ಬಂದು ಹೋದ ಮೊದಲಲ್ಲಿ ಕೆಲವು ದಿನ ರಾಜಶೇಖರನೊಡನೆ ದೇವಯ್ಯ ಮಾತನಾಡಲೇ ಇಲ್ಲ. ಒಂದು ದಿನ ಅವನ ಅಂತರ್ಯದ ಬೇಗುದಿ ಸ್ಫೋಟನವಾಯಿತು.

"ನನ್ಮೇಲೆ ದೂರು ಹೇಳಿ ನಿಂಗೇನಪ್ಪಾ ಬಂತು?"

ಅಂತಹ ಪ್ರಶ್ನೆಯನ್ನು ರಾಜಶೇಖರ ನಿರೀಕ್ಷಿಸಿರಲಿಲ್ಲ. ತನ್ನ ವಿಷಯದಲ್ಲಿ ದೇವಯ್ಯ ಹಾಗೆ ತಪ್ಪು ತಿಳಿಯಬಹುದೆಂದು ಆತ ಕನಸಿನಲ್ಲೂ ಭಾವಿಸಿರಲಿಲ್ಲ.

"ಇಲ್ಲಪ್ಪೋ. ನಾನು ಹೇಳ್ಲೇ ಇಲ್ಲ!"

ಅದು ನಿಜವೆಂದು ಚಿಕ್ಕವನು ಸಾಕ್ಷ್ಯ ನುಡಿದ.

ರಂಗಮ್ಮನೇ ವರದಿ ಕೊಟ್ಟಿರಬೇಕೆಂಬುದು ಸ್ಪಷ್ಟವಾಯಿತು. ದೇವಯ್ಯ ಆ ಮುದುಕಿ ಕಣ್ಣಿಗೆ ಬಿದ್ದಾಗಲೆಲ್ಲ ಆಕೆಯನ್ನು ನುಂಗಿ ಬಿಡುವವನಂತೆ ನೋಡುತಿದ್ದ.

ಒಂದು ಸಂಜೆ, ಪದ್ಮಾವತಿಯ ಜತೆಯಲ್ಲಿ ಅಂಗಳದಲ್ಲಿ ನಿಂತಿದ್ದ ರಂಗಮ್ಮ, ಕೊಠಡಿಗೆ ಹಿಂತಿರುಗುತಿದ್ದ ದೇವಯ್ಯನನ್ನು ಕಂಡು ಕೇಳಿದರು :

"ಏನಪ್ಪಾ ನಿಮ್ಮುಂದೆ ಕಾಗದ ಬರೆದಿದಾರೇನು ?"

"ಹೂಂ."

ಉತ್ತರ ಚುಟುಕಾಗಿತ್ತು. ಅದೂ ಗೊಗ್ಗರ ಧ್ವನಿಯಲ್ಲಿ.

"ಊರಲ್ಲೆಲ್ಲಾ ಚೆನ್ನಾಗಿದಾರೋ ?"

"ಹೂಂ."

ಮತ್ತೆ ಮೊದಲಿನಂತೆಯೇ.

ಹುಡುಗ ಮೆಟ್ಟಲೇರಿ ಹೋದ ಬಳಿಕ ರಂಗಮ್ಮ ನೊಂದುಕೊಂಡ ಧ್ವನಿಯಲ್ಲಿ ಹೇಳಿದರು :

"ನನ್ಮೇಲೆ ಕೋಪ ಆತನಿಗೆ – ಗೌಡ ಬಂದಾಗ ದೂರು ಹೇಳ್ದೆ ಅಂತ. ನಾನೇನು ದ್ವೇಷಕ್ಕೋಸ್ಕರ ಹೇಳಿದ್ನೆ ? ಆ ಹುಡುಗನಿಗೆ ಒಳ್ಳೇದಾಗ್ಲೀಂತ್ಲೆ ಅಲ್ವೆ?"

ಪದ್ಮಾವತಿ, ತನ್ನ ಮೈಗೆ ಅಂಟಿಕೊಂಡಿದ್ದ ಮಗುವನ್ನು ಎರಡೂ ಕೈಗಳಿಂದ ಮತ್ತಷ್ಟು ಬಿಗಿಯಾಗಿ ತನ್ನೆಡೆಗೆ ಎಳೆದುಕೊಳ್ಳುತ್ತಾ, ಮುಗುಳ್ನಕ್ಕಳು.

೧೮

ಚಳಿಗಾಲ ಬಂದಾಗ ರಂಗಮ್ಮನವ್ರು ಮೈತುಂಬ ಕಂಬಳಿ ಹೊದೆದು ಕೊಳ್ಳುತಿದ್ದರು. ನರನಾಡಿಗಳಲ್ಲೆಲ್ಲಾ ರಕ್ತಸಂಚಾರ ನಿಂತು ಹೋಗಿ ಅವರಿಗೆ ತುಂಬಾ ಸಂಕಟವಾಗುತಿತ್ತು.

ಈ ಸಲ ಅವರೆಂದರು :

"ಅಸಾಧ್ಯ ಚಳಿ ಈ ವರ್ಷ! ಅಸಾಧ್ಯ ಚಳಿ!"

ಆದರೆ ಇದೇ ಮಾತನ್ನು ಅವರು ಪ್ರತಿ ವರ್ಷವೂ ಹೇಳುತಿದ್ದರು. ಪ್ರತಿಯೊಂದು ಸಲವೂ 'ಈ ವರ್ಷದ ಚಳಿ ಅಸಾಧ್ಯವಾದುದು' ಎಂದೇ ಅವರಿಗೆ ತೋರುತಿತ್ತು.

ಹೆಚ್ಚು ಕಡಿಮೆ ಪ್ರತಿ ಮುಂಜಾನೆಯೂ ಇಬ್ಬನಿ ಬೀಳುತ್ತಿತ್ತು. ಬೇಗನೆ ಎಚ್ಚರವಾದರೂ ರಂಗಮ್ಮ ಮನೆಯಿಂದ ಹೊರಬರುತ್ತಿರಲಿಲ್ಲ. ಸೂರ್ಯನ ಬೆಳಕು ಓಣಿಯೊಳಕ್ಕೆ ಬರುವವರೆಗೂ ಅವರು ಗಂಟಲಿನಿಂದ ಒಂದೇ ಸಮನೆ ಏನಾದರೂ ಸದ್ದು ಹೊರಡಿಸುತ್ತಾ ಕುಳಿತುಬಿಡು ತಿದ್ದರು.

ಪೋಲೀಸ್ ಶಿವಸ್ವಾಮಿಯ ಹುಡುಗ, ಮೀನಾಕ್ಷಮ್ಮನ ಮಗ, ಇಲ್ಲವೆ ಉಪಾಧ್ಯಾಯರ ಮಕ್ಕಳು ಬಂದು ಕೂಗಿ ಕರೆಯುತಿದ್ದರು :

"ಅಜ್ಜೀ....ಎದ್ದಿಲ್ವೆ ಅಜ್ಜಿ....ಹಾಲು ಬಂತು ಅಜ್ಜೀ...."

ಅಂತಹ ದಿನಗಳಲ್ಲಿ ರಂಗಮ್ಮನ ಪರವಾಗಿ ಕಮಲಮ್ಮನೇ ಹಾಲು ಹಾಕಿಸಿಕೊಳ್ಳುತಿದ್ದಳು.

ಅದನ್ನು ಆಮೇಲೆ ಇಸಕೊಳ್ಳುತ್ತಾ ರಂಗಮ್ಮನೆನ್ನುತಿದ್ದರು :

"ಏನು ಹಾಲು ಕೊಡುತ್ತೇಂತ ಈ ಚಳಿಗೆ ಹಿಂಡ್ತಾರೋ...."

ಡಿಸೆಂಬರ್‌ನಲ್ಲೊಂದು ರಾತ್ರೆ ಮುಂಜಾನೆ ಚಳಿ ವಿಪರೀತ

ವಾಗಿತ್ತು. 'ಆಹ್' ಎಂದು ಉಸಿರುಬಿಟ್ಟರೆ ಸಾಕು; ಬಾಯಿಯಿಂದ ಉಗಿ ಹೊರಡುತಿತ್ತು.

ಆ ಬೆಳಿಗ್ಗೆ ಎಷ್ಟುಹೊತ್ತಾದರೂ ರಂಗಮ್ಮ ಏಳಲೇ ಇಲ್ಲ.

ಎಷ್ಟು ಸಾರೆ ಬಾಗಿಲು ತಟ್ಟಿದರೂ ಉತ್ತರ ಬರಲಿಲ್ಲ. ಕಮಲಮ್ಮ ಗಾಬರಿಗೊಂಡು ಮೀನಾಕ್ಷಮ್ಮನ ಮನೆಗೆ ಓಡಿದಳು. ಗಂಡಸರಲ್ಲಿ ಹೆಚ್ಚಿನವರೆಲ್ಲ ಕೆಲಸಕ್ಕೆ ಹೊರಟು ಹೋಗಿದ್ದು, ಉಳಿದಿದ್ದವರು ಸುಬ್ಬುಕೃಷ್ಣಯ್ಯ ಮತ್ತು ಶಂಕರನಾರಾಯಣಯ್ಯ ಮಾತ್ರ. ಇಬ್ಬರೂ ಧಾವಿಸಿಬಂದು ಬಾಗಿಲು ತಟ್ಟಿದರು. ಪ್ರಯೋಜನವಾಗಲಿಲ್ಲ.

"ಇನ್ನೇನಪ್ಪಾ ಮಾಡೋದು?"

—ಎಂದ ಸುಬ್ಬುಕೃಷ್ಣಯ್ಯ.

ಶಂಕರನಾರಾಯಣಯ್ಯ ತನ್ನ ಕುರ್ಚಿ ತಂದಿಟ್ಟು ಅದರ ಮೇಲೆ ನಿಂತು ಎರಡು ಹೆಂಚುಗಳನ್ನು ಎತ್ತಿಟ್ಟ. ಸೂರ್ಯನ ಬೆಳಕು ಕಟ್ಟೆಯೊಡೆದ ಕೆರೆಯ ಹಾಗೆ ರಂಗಮ್ಮನ ಮನೆಯೊಳಕ್ಕೆ ನುಗ್ಗಿತು.

ಆದರೆ ಅಷ್ಟುಹೊತ್ತಿಗಾಗಲೆ ಎದ್ದುಬಿಟ್ಟಿದ್ದರು ರಂಗಮ್ಮ. ಬಾಗಿಲ ವರೆಗೆ ತೆವಳಿಬಂದು ಅಗಣಿಯನ್ನು ಅವರು ತೆರೆದರು. ಹೊರಗಿದ್ದವರಿಗೆ ಕಂಡುಬಂದುದು, ಒಂದು ರಾತ್ರೆಯಲ್ಲೇ ಬಹಳ ಕುಗ್ಗಿಹೋಗಿದ್ದ ರಂಗಮ್ಮ. ಅವರ ಕಣ್ಣುಗಳು ಹನಿಗೂಡಿದ್ದುವು. ನೆರೆದಿದ್ದ ಎಲ್ಲರನ್ನೂ ಉದ್ದೇಶಿಸಿ ಮಾತನಾಡುವ ಶಕ್ತಿ ತಮಗಿಲ್ಲವೆನ್ನುವಂತೆ ಸುಬ್ಬುಕೃಷ್ಣಯ್ಯನೊಬ್ಬನನ್ನೇ ನೋಡುತ್ತ ಅವರೆಂದರು :

"ಕಾಲು ಕಣೋ. ಎರಡು ಕಾಲೂ ಹಿಡಕೊಂಬಿಟ್ಟಿತ್ತು. ಮಡಚೋಕೇ ಆಗ್ಲಿಲ್ಲ. ವಯಸ್ಸಾಯ್ತು. ಇನ್ನು ತುಂಬಾ ಕಷ್ಟಾನಪ್ಪಾ."

"ಮಗನಿಗೆ ಕಾಗದ ಬರೀಬೇಕೇನು ?"

—ಎಂದು ಕೇಳಿದ ಸುಬ್ಬುಕೃಷ್ಣಯ್ಯ, ಬರೆಯಬೇಕೆಂದಾದರೆ ಬರೆದು ಕೊಟ್ಟೇ ಕೆಲಸಕ್ಕೆ ಹೋಗೋಣವೆಂದು.

ಆದರೆ ರಂಗಮ್ಮ ಬೇಡವೆಂದರು :

"ಛೆ ! ಛೆ ! ನನಗೇನಾಗಿದೆ ? ಸ್ವಲ ಚಳಿಯಾಯ್ತು ಅಷ್ಟೆ........"

ಅವರ ದೃಷ್ಟಿ ಛಾವಣಿಯತ್ತ ಹೋಯಿತು. ಶಂಕರ

ನಾರಾಯಣಯ್ಯ ಮೌನವಾಗಿ ಮತ್ತೊಮ್ಮೆ ಕುರ್ಚಿಯನ್ನೇರಿ ಹೆಂಚು ಗಳನ್ನು ಮೊದಲಿದ್ದಲ್ಲೇ ಇರಿಸಿದ.

ಆ ದಿನ ರಂಗಮ್ಮ ಮನೆಗೆಲಸಗಳನ್ನು ನಿಧಾನವಾಗಿ ಮಾಡಿದರು.

"ಒಂದು ದಿನ ಹೀಗೆ ಚಳೀಲಿ ಮೈ ಹೆಪ್ಪುಗಟ್ಟಿ ಸತ್ತೇ ಹೋಗ್ತೀನಿ ನಾನು"

—ಎಂದು, ಬಿಸಿಲು ಚೆನ್ನಾಗಿ ಬಂದ ಮೇಲೆ, ರಂಗಮ್ಮ ಹೇಳಿದರು.

........................

ದಿನಗಳುರುಳಿದುವು. ಚಳಿಗಾಲ ಹಿಮ್ಮೆಟ್ಟಿತು. ಹೊಸ ವರ್ಷದ ವಿವಿಧ ಕ್ಯಾಲೆಂಡರುಗಳು ವಠಾರದ ಮನೆ ಗೋಡೆಗಳನ್ನು ಅಲಂಕರಿಸಿದುವು.

ಇಂಟರ್ ಪಾಸ್ ಮಾಡಿದ್ದ ಜಯರಾಮು, ಎರಡು ತಿಂಗಳ ಕಾಲ ಕೆಲಸಕ್ಕಾಗಿ ಅಲೆದ. ಪ್ರತಿಸಲವೂ ಯಾರನ್ನಾದರೂ ಭೇಟಿ ಮಾಡಿದಾಗಲೆಲ್ಲ, ಈ ಸಲ ಸಿಕ್ಕಿಯೇ ಸಿಗುತ್ತದೆ ಎಂದು ತೋರುತಿತ್ತು. ಅದು ಆಶಾವಾದದ ಬಳ್ಳಿ ಬಿಟ್ಟಿದ್ದ ಒಂಟಿ ಹೂ-ಭ್ರಮೆ ಎಂದು ಅದರ ಹೆಸರು. ಉದ್ಯೋಗ ಜಯರಾಮುವಿನ ಪಾಲಿಗೆ ಮಿಸುನಿಜಿಂಕೆಯಾಯಿತು. ರಾತ್ರೆ ಕನಸಿನಲ್ಲೂ ಮರುಕಳಿಸುವ ಹಾಗೆ ಹಗಲು ಯಾರು ಯಾರೋ ಸೀಸದ ಮಾತುಗಳನ್ನು ಅವನ ಕಿವಿಗಳೊಳಕ್ಕೆ ಎರಕ ಹೊಯ್ಯುತಿದ್ದರು.

—"ನೀನು ಪದವೀಧರನಲ್ಲ."

—"ಜಾತಿ ?"

—"ಷಾರ್ಟ್‌ಹ್ಯಾಂಡ್ ಟೈಪ್‌ರೈಟಿಂಗ್ ತಿಳೀದು ಹಾಗಾದ್ರೆ ?"

ಆತ ವಿಶ್ವವಿದ್ಯಾನಿಲಯದ ಪದವೀಧರನಾಗುವ ಮಾತೇ ಇರಲಿಲ್ಲ.

ಜಾತಿಯ ವಿಷಯದಲ್ಲಿ ಆತನೇನೂ ಮಾಡುವಂತಿರಲಿಲ್ಲ.

ಆದರೆ ಕೊನೆಯದು ಸಾಧ್ಯವಿತ್ತು.

ಶೀಘ್ರಲಿಪಿಯನ್ನೂ ಟೈಪು ಮಾಡುವುದನ್ನೂ ಕಲಿಸಿಕೊಡುವ

ಶಾಲೆಗೆ ಆತ ವಿದ್ಯಾರ್ಥಿಯಾಗಿ ಹೋದ.

ಆತನ ಬರೆವಣಿಗೆ ನಡೆದೇ ಇತ್ತು. ಅಹಲ್ಯೆಯ ಮದುವೆಯನ್ನು ಹಿನ್ನೆಲೆಯಾಗಿಟ್ಟು ಹೃದಯ ಸ್ಪರ್ಶಿಯಾದೊಂದು ಕತೆಯನ್ನು ಆತ ಬರೆದ. ಅದನ್ನೋದುತ್ತಾ ರಾಧಾ ಒಂದೇ ಸಮನೆ ಕಣ್ಣೀರು ಸುರಿಸಿದಳು. ಅದನ್ನು ಪತ್ರಿಕೆಗೆ ಕಳುಹಿಸ ಬೇಕೆಂದಿದ್ದ ಜಯರಾಮು. ಆದರೆ ರಾಧಾ ಬಿಡಲಿಲ್ಲ. "ಇದನ್ನು ಬೇರೆ ಯಾರೂ ಓದಬಾರದಣ್ಣಾ" ಎಂದಳು. ಅಹಲ್ಯೆಯ ಬಗೆಗೆ ತನ್ನ ತಂಗಿ ತೋರಿದ ಪ್ರೀತಿಯನ್ನು ಕಂಡು ಜಯರಾಮು ಮೂಕನಾಗಿ ಹೋದ.

ಉದ್ಯೋಗದ ಬೇಟೆ ಹಲವಾರು ಕಥಾವಸ್ತುಗಳನ್ನು ಆತನಿಗೆ ಒದಗಿಸಿತು. 'ದಿನಚರಿ ಕತೆಗಳು' ಎಂದು ಹೆಸರಿಟ್ಟು ಆ ಅನುಭವ ಗಳನ್ನೆಲ್ಲ ಆತ ಟಿಪ್ಪಣಿಮಾಡುತ್ತ ಹೋದ. ಆದರೆ ಅದರಿಂದೆಲ್ಲ ದುಡ್ಡು ಬರುತ್ತಿರಲಿಲ್ಲ.

ಶಂಕರನಾರಾಯಣಯ್ಯ ಹೇಳಿರಲಿಲ್ಲವೆ ಒಂದು ದಿನ ?

"ಚಿತ್ರ ಬರೆದರೆ ದುಡ್ಡು ಬರೋದಿಲ್ಲ ಜಯರಾಮು."

ಆ ಮಾತು ಸಾಹಿತ್ಯದ ವಿಷಯದಲ್ಲೂ ಸತ್ಯವಾಗಿತ್ತು. ಆದರೆ, ಬರೆವಣಿಗೆಯನ್ನು ಬಿಟ್ಟುಕೊಡುವುದು ಮಾತ್ರ ಸಾಧ್ಯವಿರಲಿಲ್ಲ.

........ಎರಡು ತಿಂಗಳ ಅನಂತರವೊಂದು ಸಂಜೆ, ವಠಾರಕ್ಕೆ ಬೇಗನೆ ಹಿಂತಿರುಗಿದ ಚಂದ್ರಶೇಖರಯ್ಯ ಜಯರಾಮುವನ್ನು ಕರೆದು ಕೇಳಿದ :

"ನಮ್ಮ ವಿಮಾಸಂಸ್ಥೆ ಕಚೇರೀಲಿ ಒಂದು ಗುಮಾಸ್ತೆ ಕೆಲಸ ಖಾಲಿ ಬಿದ್ದಿದೆ. ಬರ್ತೀರೇನು ?"

ಅದೇನೋ ಕನಸಿನ ಸಂಭಾಷಣೆಯೆಂಬಂತೆ ಜಯರಾಮು ಉತ್ತರಿಸಿದ :

"ಓ ! ಬರ್ತೀನಿ. ಯಾವ ಕೆಲಸ ಮಾಡೋದಕ್ಕೂ ಸಿದ್ಧವಾಗಿ ದೀನಿ ನಾನು."

"ಸಂಬಳ ಕಡಿಮೆ. ಈಗ ನಾಲ್ವತ್ತೈದು ಕೊಡ್ತಾರೆ. ಒಂದು ವರ್ಷ ಆದ್ಮೇಲೆ ಖಾಯಂ ಮಾಡೋ ವಿಷಯದ ಪರಿಶೀಲನೆ. ಖಾಯಂ

ಆದರೆ, ಸಂಬಳ ಜಾಸ್ತಿ ಮಾಡ್ತಾರೆ. ಬೇಕಿದ್ದರೆ ನಿಮ್ಮ ತಂದೆಗೆ ಕಾಗದ ಬರೆದು ಕೇಳಿ. ಆದರೆ ತಡವಾಗಬಾರದು. ತಮ್ಮ ತಮ್ಮವರಿಗೇ ಕೆಲಸ ಕೊಡಿಸೋಕೆ ಅಲ್ಲಿ ಪ್ರಯತ್ನ ಪಡೋ ಜನ ಬೇಕಾದಷ್ಟಿದಾರೆ."

"ಅದೆಲ್ಲಾ ಯೋಚಿಸ್ಬೇಕಾದ್ದೇ ಇಲ್ಲ ಚಂದ್ರಶೇಖರಯ್ಯ. ನಮ್ಮ ತಂದೇನ ಕೇಳೋದು ಏನೂ ಉಳಿದಿಲ್ಲ."

"ಹಾಗಾದ್ರೆ ನಾಳೇನೆ ಒಂದು ಅರ್ಜಿ ಬರಕೊಡಿ."

"ಹೂ. ಬರಕೊಡ್ತೀನಿ."

ಆಮೇಲೆ ಚಂದ್ರಶೇಖರಯ್ಯ ಮೌನವಾದ. ಕೃತಜ್ಞತೆಯರ್ಪಿಸುವ ಕರ್ತವ್ಯವನ್ನು ತಾನು ಮಾಡಿಲ್ಲವೆಂದು ಜಯರಾಮುಗೆ ನೆನಪಾಯಿತು. ಆದರೆ ಏನನ್ನು ಹೇಳಬೇಕೆಂದು ತೋಚಲಿಲ್ಲ. ಏನನ್ನೋ ಹೇಳಲು ಹೊರಟಾಗ ನಾಲಿಗೆ ತಡವರಿಸಿತು.

"ನೀವು ಮಾಡ್ತಿರೋ ಉಪಕಾರ ಎಂಥದೂಂತ ಖಂಡಿತ ನೀವು ಊಹಿಸಲಾರಿರಿ ಚಂದ್ರಶೇಖರಯ್ಯ."

ಆತ ನಕ್ಕುಬಿಟ್ಟ.

"ಇನ್ನೂ ಕೆಲಸವೇ ಸಿಕ್ಕಿಲ್ವಲ್ಲ ಜಯರಾಮು. ಆಮೇಲೆ ಥ್ಯಾಂಕ್ಸ್ ಕೊಡಿ."

ಜಯರಾಮು ತನ್ನ ಮನೆಯೊಳಕ್ಕೆ ಹೋಗಿ ತಾಯಿಗೂ ತಂಗಿಗೂ ತಾನು ಬರೆಯಲಿರುವ ಹೊಸ ಅರ್ಜಿಯ ವಿಷಯ ತಿಳಿಸಿದ. ಆ ತಾಯಿಯ ಮುಖದ ಮೇಲೆ ಆಸೆಯ ಮುಗುಳು ನಗೆ ಮೂಡಿತು. ರಾಧಾ, ವಿಮೆ ಎಂದರೇನು ? ಕಚೇರಿ ಎಲ್ಲಿರೋದು ? ಎಂದೆಲ್ಲಾ ವಿವರ ವಾಗಿ ಕೇಳಿ ಬೇಸರ ಪಡಿಸಿದಳು.

ಬೇರೆಯೂ ಒಂದು ಯೋಚನೆ ಹೊಳೆದು ರಾಧಾ ಕೇಳಿದಳು :

"ವಿಮಾ ಸಂಸ್ಥೆಯ ಕತೆ ಯಾರೂ ಬರೆದೇ ಇಲ್ಲ, ಅಲ್ವೆ ಅಣ್ಣ ? ನೀನು ಅದನ್ನ ಬರೆದರೆ ಚೆನ್ನಾಗಿರತ್ತೆ."

................

ಬಟ್ಟೆ ಬದಲಾಯಿಸುತಿದ್ದ ಚಂದ್ರಶೇಖರಯ್ಯ, ತಾಯಿ ಮಕ್ಕಳ ಸಂವಾದ ಕೇಳಿಸುವುದೇನೋ ಎಂದು ಕಿವಿಗೊಟ್ಟ. ತನ್ನ ವಿಷಯವಾಗಿ

ಅವರೇನು ಮಾತನಾಡುತಿದ್ದರೆಂದು ತಿಳಿಯುವ ಆತುರ ಆತನಿಗೆ. ಆದರೆ ಏನೂ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ. ರಾಧೆಯ ಕೀಟಲೆ ನಗೆ, ಜಯರಾಮುವಿನ ಹುಸಿ ಮುನಿಸಿನ ಉತ್ತರ........

................

'ನೀವು ಮಾಡ್ತಿರೋ ಉಪಕಾರ ಎಂಥದೂಂತ ನೀವು ಖಂಡಿತ ಊಹಿಸ್ಲಾರಿರಿ ಚಂದ್ರಶೇಖರಯ್ಯ........'

ಹುಚ್ಚು ಹುಡುಗ! ನಾಳೆಯು ದಿನ ಆ ಕೆಲಸ ದೊರೆತು, ರಾಧೆಯೂ ರಾಧೆಯ ತಾಯ್ತಂದೆಯರೂ ತನ್ನ ಬಗೆಗೆ ಒಳ್ಳೆ ಮಾತನ್ನಾಡುವಾಗ ತನಗೆ ಆಗುವ ಸಂತೋಷವೆಷ್ಟೆಂಬುದನ್ನು ಊಹಿಸುವುದು ಅವನಿಂದ ಸಾಧ್ಯವೆ ?

ಚಂದ್ರಶೇಖರಯ್ಯ ಮದುವೆಯಾಗಲು ತೀರ್ಮಾನಿಸಿದ್ದ. ಆ ತೀರ್ಮಾನಕ್ಕೆ ಇದೇ ಕಾರಣವೆಂದು ಯಾವುದಾದರೂ ಒಂದನ್ನಷ್ಟೇ ಎತ್ತಿ ತೋರಿಸುವುದು ಸಾಧ್ಯವಿರಲಿಲ್ಲ. ಊರಿನಲ್ಲಿ ಹಿರಿಯರು ಆಡುತಿದ್ದ ನಿಂದೆಯ ನುಡಿಗಳನ್ನು ಕೇಳಿ ಕೇಳಿ ಆತನಿಗೆ ಸಾಕಾಗಿತ್ತು. ಆದರೆ ಅದಕ್ಕಿಂತಲೂ ಮುಖ್ಯವಾಗಿ ಆತನ ಯೌವನ ಕೇಳುತಿತ್ತು: 'ಒಂಟಿಯಾಗಿಯೇ ಎಷ್ಟು ದಿನ ಇರೋದು ಸಾಧ್ಯ ?' ಒಂದು ಹೆಣ್ಣು ಜೀವದ ಸ್ನೇಹವನ್ನು ಆತನ ಮನಸ್ಸು ದೇಹಗಳೆರಡೂ ಬಯಸುತಿದ್ದವು. ಅದಕ್ಕೆಲ್ಲ ಕಳಶವಿಡುವಂತೆ ಅಹಲ್ಯೆಯ ವಿವಾಹ ಪ್ರಕರಣ ಆತನ ಮೇಲೆ ಬಲವಾದ ಪರಿಣಾಮವನ್ನುಂಟು ಮಾಡಿತು. ಅಹಲ್ಯೆ—ವೆಂಕಟೇಶರು ಪ್ರೀತಿಯ ವಿಷಯ, ವಿವಾಹದ ವಿಷಯ, ಒಬ್ಬರೊಡನೊಬ್ಬರು ಮಾತನಾಡಿದ್ದರೋ ಇಲ್ಲವೊ, ಆತನಿಗೆ ತಿಳಿಯದು. ಆದರೆ ಅಷ್ಟೆಲ್ಲ ರಂಪವಾದ ಮೇಲೆ, 'ಅಹಲ್ಯೆಯನ್ನೇ ಮದುವೆಯಾಗ್ತೇನೆ' ಎಂದು ವೆಂಕಟೇಶ ಹೇಳಬೇಕಾಗಿತ್ತು. ಆದರೆ ಆತ ಅಂತಹ 'ಗಂಡಸುತನ' ತೋರಿರಲಿಲ್ಲ. ಅದಕ್ಕಾಗಿ ಆತನನ್ನೆಂದೂ ಚಂದ್ರಶೇಖರಯ್ಯ ಕ್ಷಮಿಸುವಂತಿರಲಿಲ್ಲ. ಜಯರಾಮುವಿನೆದುರು ವೆಂಕಟೇಶನನ್ನು ಒಂದೆರಡು ಸಾರೆ ಬೈದು ಚಂದ್ರಶೇಖರಯ್ಯ ಸ್ವಲ್ಪ ತೃಪ್ತಿಪಟ್ಟುಕೊಂಡಿದ್ದ. ಏನಾದರೂ ನೆಪ ಮಾಡಿಕೊಂಡು ರಾಮಕೃಷ್ಣಯ್ಯ

ನೊಡನೆ ಆತ್ಮೀಯವಾಗಿ ಆಗಾಗ್ಗೆ ಮಾತನಾಡಿದ್ದ. ಆದರೆ ಆ ಪ್ರಕರಣ ಸ್ವತಃ ಅವನಿಗೇ ಸವಾಲು ಹಾಕಿತ್ತು: 'ನಿನ್ನ ವಿಷಯವೇನು? ರಾಧೆಯ ಬಗ್ಗೆ ನಿನ್ನ ಅಭಿಪ್ರಾಯವೇನು?'

ಆ ಅಭಿಪ್ರಾಯ ಏನೆಂಬುದರ ಬಗ್ಗೆ ಅವನ ಮನಸ್ಸಿನಲ್ಲಿ ಈಗ ಯಾವ ಸಂದೇಹವೂ ಇರಲಿಲ್ಲ.

ಈಗ ಬೀದಿಯಲ್ಲಿ ಬಸ್ಸುಗಳಲ್ಲಿ ಹುಡುಗಿಯರನ್ನು ನೋಡಿದರೂ ರಾಧೆಯ ನೆನಪು ಆತನಿಗೆ ಆಗುತಿತ್ತು. ದಾಂಪತ್ಯ ಜೀವನದ ಯೋಚನೆಗಳು ಮೂಡಿದಾಗಲೆಲ್ಲಾ ರಾಧೆಯೇ ಕಣ್ಣೆದುರು ನಿಲ್ಲುತಿದ್ದಳು.

ಚಂದ್ರಶೇಖರಯ್ಯ ತನಗೆ ತಾನೇ ಪ್ರಶ್ನಿಸಿಕೊಂಡ :

'ರಾಧೆಯಿಲ್ಲದೆ ಹೋಗಿದ್ದರೆ, ಖಾಲಿಯಾದ ಜಾಗವನ್ನು ಜಯರಾಮುಗೆ ಕೊಡಿಸ್ತಿದ್ದೆಯೇನು?'

ಅವನ 'ಅಹಂ' ಎಂದಿತು :

'ಓಹೋ, ಕೊಡಿಸ್ತಿದ್ದೆ.'

ಅದು ಆತ್ಮವಂಚನೆಯ ಉತ್ತರ ಎಂಬುದು ಅವನಿಗೆ ಗೊತ್ತಿತ್ತು.

................

ಜಯರಾಮುಗೆ, ಚಂದ್ರಶೇಖರಯ್ಯ ಪ್ರತಿನಿಧಿಯಾಗಿ ದುಡಿಯುತಿದ್ದ ವಿಮಾ ಸಂಸ್ಥೆಯ ಕಚೇರಿಯಲ್ಲಿ ಕೆಲಸ ಸಿಕ್ಕಿತು.

ಆತನ ತಾಯಿ, ದೇವರೆದುರು ತುಪ್ಪದ ದೀಪ ಹಚ್ಚಿಟ್ಟು ಮಗ ಮಂಡಿಯೂರಿ ಕೈಮುಗಿಯುವಂತೆ ಮಾಡಿದಳು.

ಬೇಗನೆ ಹೊರಟುಬರಲು ತನ್ನ ಗಂಡನಿಗೆ ಕಾಗದ ಬರೆಯಬೇಕೆಂದು ಆಕೆ ಯೋಚಿಸಿದಳು. ಆದರೆ ಅದರ ಅಗತ್ಯವಿಲ್ಲವೆಂಬುದು ತನಗೇ ಹೊಳೆದು, ಕೆಲಸ ಸಿಕ್ಕಿದ ವಿಷಯವನ್ನಷ್ಟೆ ಬರೆದು ತಿಳಿಸುವಂತೆ ಜಯರಾಮುಗೆ ಹೇಳಿದಳು : 'ಚಂದ್ರಶೇಖರಯ್ಯ ಕೆಲಸ ಕೊಡಿಸಿದ್ದು' ಎಂಬುದನ್ನೂ ಬರೆಯುವಂತೆ ಸೂಚಿಸದಿರಲಿಲ್ಲ.

ಆ ತಾಯಿ ಕೆಳಕ್ಕಿಳಿದು ತಾನು ಸಂಧಿಸಿದವರಿಗೆಲ್ಲಾ ಆ ಸುದ್ದಿ ಹೇಳುತ್ತಾ ಬಂದಳು.

"ನಮ್ಮ ಜಯರಾಮುಗೆ ಕೆಲಸ ಸಿಕ್ತು."

ನಮ್ಮ ರಾಧಾಗೆ ಗಂಡು ಗೊತ್ತಾಯ್ತು ಎನ್ನುವಾಗ ಇರಬಹುದಾದ ಸಂತೋಷದ ಧ್ವನಿಯಿತ್ತು ಆ ಮಾತಿನಲ್ಲಿ.

ಅದರ ಜತೆಯಲ್ಲೆ ಇನ್ನೊಂದು ವಾಕ್ಯವನ್ನೂ ಆಕೆ ಹೇಳಿದಳು :

"ಚಂದ್ರಶೇಖರಯ್ಯ ಕೊಡಿಸಿದ್ರು ಅವರ ಕಚೇರೀಲಿ ಕೆಲಸ."

ರಂಗಮ್ಮ ಆಕೆಗೆ ಅಂದರು :

"ಹಾಗೆಯೇ ಮಗಳ ಮದುವೇನೂ ಒಂದು ಮಾಡಿಸ್ಬಿಡಮ್ಮ."

ಬೇರೆ ದಿನವಾಗಿದ್ದರೆ, ಆ ಮಾತು ಕೇಳಿದೊಡನೆಯೇ ಆಕೆಯ ಮುಖ ಬಾಡುತ್ತಿತ್ತು. ಈ ದಿನ ಹಾಗಾಗಲಿಲ್ಲ. ಧೈರ್ಯದಿಂದಲೆ ಆಕೆಯೆಂದಳು :

"ಆಗಲಿ ರಂಗಮ್ನೋರೆ. ನಿಮ್ಮ ಆಶೀರ್ವಾದವಿದ್ದರೆ ಅದೂ ಒಂದು ಆದೀತು, ನೋಡೋಣ."

ಅಣ್ಣನಿಗೆ ಕೆಲಸ ಸಿಕ್ಕಿತೆಂದು ರಾಧಾ ಕುಣಿದಾಡಿದಳು.

ಚಂದ್ರಶೇಖರಯ್ಯನನ್ನು ರಾತ್ರೆ ಊಟಕ್ಕೆ ಕರೆಯಬೇಕೆಂದು ಗೊತ್ತಾಯಿತು. ಆದರೆ ಸಂಜೆಯಾದರೂ ಆತನ ಸುಳಿವೇ ಇರಲಿಲ್ಲ. ಜಯರಾಮು ಆತ ಇರಬಹುದಾದ ಜಾಗಗಳಲ್ಲೆಲ್ಲಾ ಸುತ್ತಾಡಿ. ಒಂದೆಡೆ ಯಶಸ್ವಿಯಾಗಿ, ಕರೆದುಕೊಂಡುಬಂದ.

........ಹಿಗ್ಗುತಿದ್ದ ಹೃದಯವನ್ನು ಬಿಗಿಯಾಗಿ ಹಿಡಿದು ಚಂದ್ರಶೇಖರಯ್ಯ ಊಟಕ್ಕೆ ಕುಳಿತ. ಮೂರು ವರ್ಷಗಳಿಂದ ಪಕ್ಕದ ಮನೆಯಲ್ಲೇ ಇದ್ದ ಆತ, ಮೊದಲ ಬಾರಿ ಕಂಡ ಅಪರಿಚಿತರ ಮನೆಯಲ್ಲಿ ಊಟಕ್ಕೆ ಕುಳಿತವನಂತೆ ಸಂಕೋಚದಿಂದ ವರ್ತಿಸಿದ.

ರಾಧಾ, ಅಣ್ಣನಿಗೂ ಚಂದ್ರಶೇಖರಯ್ಯನಿಗೂ ಬಡಿಸುತ್ತ ಹೋದಳು. ಆತ ರಾಧೆಯನ್ನು ತಲೆಯೆತ್ತಿ ಕೂಡಾ ನೋಡದೆ ಊಟ ಮಾಡಿದ.

ಕೊಠಡಿಗೆ ಹಿಂತಿರುಗಿದ ಚಂದ್ರಶೇಖರಯ್ಯನಿಗೆ ಅಂತಹ ನಿರ್ಮಲ ಒಲವನ್ನು ದೊರಕಿಸಿಕೊಂಡ ತಾನು ಸುಖಿಯೆಂದು ತೋರಿತು. ಸಿಗರೇಟಿನ ನೆನಪಾದರೂ ಸೇದಲು ಮನಸ್ಸಾಗಲಿಲ್ಲ.

೧೯

ಬಿಸಿಲು ಚೆನ್ನಾಗಿ ಬೀಳತೊಡಗಿದಂತೆ ಸ್ಥಿತ್ಯದ ಉತ್ಸಾಹದಿಂದಲೆ ರಂಗಮ್ಮ ಓಡಾಡಿದರು.

"ಈ ವರ್ಷವಾದರೂ ಬೆಂಗಳೂರಿಗೆ ವರ್ಗವಾಗುವಂತೆ ಪ್ರಯತ್ನಿಸಬೇಕು"

—ಎಂದು ಆಗಾಗ್ಗೆ ಕಾಗದದಲ್ಲಿ ರಂಗಮ್ಮ ಮಗನಿಗೆ ಷರಾ ಬರೆಸುವುದಿತ್ತು. ಅದು ಎಷ್ಟೋ ವರ್ಷಗಳಿಂದ ಅವರು ಬರೆಸುತ್ತಲೇ ಬಂದ ಒಕ್ಕಣೆ.

'ಪಾಮಿಸ್ಟ್ರಿ ಪ್ರೊಫೆಸರ್ ಪದ್ಮನಾಭಯ್ಯ' ರಂಗಮ್ಮನ ಕೈ ನೋಡಿ ಭವಿಷ್ಯ ನುಡಿದಿರಲಿಲ್ಲ ನಿಜ. ಆದರೆ, ರಂಗಮ್ಮನನ್ನು ಬಿಟ್ಟು ವಠಾರ ಇದ್ದೀತು ಎಂದು ಹೇಳುವ ಸಾಹಸ ಮಾಡಲು ಯಾರೂ ಸಿದ್ಧರಿರಲಿಲ್ಲ.

ಜಾಗೃತಾವಸ್ಥೆಯಿರಲಿ, ಸ್ವಪ್ನಾವಸ್ಥೆಯಿರಲಿ — ರಂಗಮ್ಮನ ಹೆಚ್ಚಿನ ಆಯುಸ್ಸೆಲ್ಲ ವಠಾರದ ಚಿಂತನೆಯಲ್ಲೆ ಕಳೆದುಹೋಗುತ್ತಿತ್ತು.

"ನಿಮ್ಮ ವಠಾರದಲ್ಲಿ ಎಷ್ಟು ಸಂಸಾರಗಳಿವೆ ರಂಗಮ್ನೋರೆ ?"

—ಎಂದು ಯಾರಾದರೂ ಕೇಳಿದರೆ, ಅವರು ಕೊಡುತ್ತಿದ್ದ ಉತ್ತರ :

"ಹದಿನಾಲ್ಕು."

"ಹದಿನೈದಲ್ವೆ ಅಜ್ಜಿ ?"

—ಎಂದು ಯಾರಾದರೂ ತಿದ್ದಲು ಹೋಗುವುದಿತ್ತು. 'ಅಜ್ಜಿ' ಎಂಬ ಸಂಬೋಧನೆ ಅವರಿಗೆ ಪ್ರಿಯವಾಗಿರಲಿಲ್ಲ. ಸ್ವಲ್ಪ ರೇಗುತ್ತ, ಅವರು ಸಾರುತಿದ್ದರು :

"ಹದಿನೈದಲ್ಲ, ಹದಿನಾಲ್ಕೇ !"

ನಿಜವಾಗಿ, ಅವರವನ್ನೂ ಸೇರಿಸಿ ಹದಿನೈದು ಸಂಸಾರಗಳಾಗು ತಿದ್ದುವು. ಆದರೆ ಅವರ ಲೆಕ್ಕ ಬೇರೆ ರೀತಿಯಾಗಿತ್ತು. ಹದಿನಾಲ್ಕು ಸಂಸಾರಗಳು ತಮ್ಮ ಮನೆಯಲ್ಲಿವೆ, ವಠಾರದಲ್ಲಿವೆ, ಎಂದು ಅವರು ಸಾಧಿಸುತಿದ್ದರು.

ಸ್ವಲ್ಪಕಾಲದ ಹಿಂದೆ ನಡೆದ ಅಹಲ್ಯಾ-ವೆಂಕಟೇಶರ ಪ್ರಕರಣ ವನ್ನು ರಂಗಮ್ಮ ಮರೆತಿರಲಿಲ್ಲ. ಅದರಿಂದ ಅವರ ಮನಸ್ಸಿಗೆ ತುಂಬಾ ನೋವಾಗಿತ್ತು. ರಾಜಮ್ಮ ತನ್ನ ಮಾತಿಗೆ ಬೆಲೆಕೊಡಲಿಲ್ಲವೆಂಬುದು ಆಗಾಗ್ಗೆ ಅವರಿಗೆ ನೆನಪಾಗುತಿತ್ತು.

ಅದನ್ನು ಮರೆಸುವಂತಹ ಒಳ್ಳೆಯ ಕೆಲಸವನ್ನೇನಾದರೂ ಮಾಡಲು ಅವರು ಹಾತೊರೆಯುತಿದ್ದರು.

ಹಿಂದೆಯೇ ಅವರ ಮನಸ್ಸಿನೊಳಗಿದ್ದು ಮೂಲೆ ಸೇರಿದ್ದ ವಿಷಯ, ಚಳಿಗಾಲದ ಅನಂತರದ ಹೊಂಬಿಸಿಲಿನಲ್ಲಿ ಗರಿಗೆದರಿಕೊಂಡು ಹೊರ ಬಂತು.

ಒಂದು ಸಂಜೆ ಹೊರ ಅಂಗಳದಲ್ಲಿ ನಿಂತಿದ್ದ ಅವರು, ವಠಾರಕ್ಕೆ ಹಿಂತಿರುಗುತಿದ್ದ ಚಂದ್ರಶೇಖರಯ್ಯನನ್ನು ಕಂಡರು. ಆತ, ಇತ್ತೀಚೆಗೆ ಇಸ್ತ್ರಿ ಹಾಕಿದ್ದ ತನ್ನ ಹಳೆಯ ಗ್ಯಾಬರ್ಡೀನ್ ಸೂಟನ್ನು ತೊಟ್ಟಿದ್ದ. ರಂಗಮ್ಮನ ಕಣ್ಣಿಗೆ ಸಿಂಗರಿಸಿದ ಮದುಮಣಿಗನ ಹಾಗೆಯೇ ಆತ ಕಂಡ.

"ಏನು ಚಂದ್ರಶೇಖರಯ್ಯ, ನಿಮ್ಮ ಹತ್ತಿರ ಮಾತನಾಡೋಣ ಅಂದ್ರೆ ನಿಮಗೆ ಒಂದು ನಿಮಿಷವೂ ಪುರಸತ್ತೇ ಇಲ್ವಲ್ಲಾ?"

—ಎಂದು ರಂಗಮ್ಮ ಪೀಠಿಕೆ ಹಾಕಿದರು.

"ಪುರಸತ್ತು ನಿಮಗಿರೊಲ್ಲಾಂತ ನಾನೇ ಬಂದು ಮಾತಾಡ್ಲಿಲ್ಲ. ಅಷ್ಟೆ"

—ಎಂದು ಚಂದ್ರಶೇಖರಯ್ಯ ವಿವರಣೆ ಕೊಟ್ಟು, ರಂಗಮ್ಮ ನಿಲ್ಲಿಸಿಕೊಂಡು ಬೈರಿಗೆ ಕೊರೆಯುವರೇನೊ ಎಂಬ ಭಯದಿಂದಲೆ, ಮಹಡಿ ಮೆಟ್ಟಲುಗಳನ್ನೇರತೊಡಗಿದ.

"ಕೆಳಗೆ ನಮ್ಮನೇಗ್ಬನ್ನಿ ಸ್ವಲ್ಪ"

—ಎಂದು ರಂಗಮ್ಮ ಕರೆದರು. ಅವರ ದೃಷ್ಟಿಗೆ, ಕೊನೆಯ

ಕಿಟಕಿಯಲ್ಲಿ ರಾಧೆಯ ಮುಖ ಮಸಕುಮಸಕಾಗಿ ತೋರಿತು.

ಬೇರೆ ಉಪಾಯವಿಲ್ಲದೆ ಚಂದ್ರಶೇಖರಯ್ಯ ಬೂಟ್ಸು ಬಿಚ್ಚಿಟ್ಟು ಬಟ್ಟೆ ಬದಲಾಯಿಸಿ ರಂಗಮ್ಮನ ಮನೆಗೆ ಹೋದ. ಸುಬ್ಬುಕೃಷ್ಣಯ್ಯ ಬರುವುದರೊಳಗೇ ಮೊದಲ ವಾಚನವನ್ನು ಮುಗಿಸಬೇಕಾದ ಕಾಗದ ವಿರಬಹುದು, ಭೂಕಂದಾಯಕ್ಕೆ ಸಂಬಂಧಿಸಿ ನಗರ ಸಭೆಯಿಂದ ನೋಟೀಸು ಬಂದಿರಬಹುದು,–ಎಂದು ಚಂದ್ರಶೇಖರಯ್ಯ ಯೋಚಿಸಿದ್ದ. ಆದರೆ ಅದೊಂದೂ ಇರಲಿಲ್ಲ.

"ಸುಮ್ನೆ ಕರ್ದೆ. ಬಹಳ ದಿವಸವಾಯ್ತು ನೋಡಿ ನಿಮ್ಜತೇಲಿ ಮಾತನಾಡ್ದೆ"

—ಎಂದು ರಂಗಮ್ಮ ನಗೆ ಬೀರಿದರು. ಇಷ್ಟು ವಯಸ್ಸಾದ ಮೇಲೆ ನಕ್ಕಾಗಲೂ ನೋಡಲು ಚೆನ್ನಾಗಿರುತ್ತದೆಂಬ ಅವರ ನಂಬಿಕೆ ಆಶ್ಚರ್ಯಕರವಾಗಿತ್ತು.

ಚಂದ್ರಶೇಖರಯ್ಯನೂ ಮುಗುಳ್ನಕ್ಕ.

"ಏನಪ್ಪಾ, ಆರೋಗ್ಯವಾಗಿದೀರಾ? ಊರಿನಿಂದೇನಾದರೂ ಕಾಗದ ಬಂತೆ?"

ಇಷ್ಟರಲ್ಲೆ ಚಂದ್ರಶೇಖರಯ್ಯನಿಗೆ, ರಂಗಮ್ಮ ಮುಂದೆ ಪ್ರಸ್ತಾಪಿಸಲಿದ್ದ ವಿಷಯ ಯಾವುದೆಂಬುದು ತಿಳಿಯಿತು. ಬೇರೆ ದಿನಗಳಲ್ಲಾದರೆ ತೇಲಿಸಿ ಮಾತನಾಡುತಿದ್ದವನು ಈ ದಿನ ಸ್ವಲ್ಪ ತಬ್ಬಿಬ್ಬಾದ.

"ಮೊನ್ನೆ ಒಂದು ಕಾಗದ ಬಂದಿತ್ತು."

"ಏನ್ಹೇಳ್ತಾರೆ ನಿಮ್ಮ ತಂದೆ? ಮದುವೆ ಬೇಡ. ಹಾಗೇ ಇದ್ಬಿಡೂಂತ್ಲೊ?"

ಚಂದ್ರಶೇಖರಯ್ಯ ಆಕ್ಷಣವೆ, ತಾನು ಹೇಗೆ ಮುಂದುವರಿಯಬೇಕೆಂಬುದನ್ನು ನಿರ್ಧರಿಸಿದ.

"ಹಾಗೇನಿಲ್ಲ ರಂಗಮ್ನೋರೆ. ಬೇಗ್ನೆ ಮಾಡ್ಕೊ ಅಂತ್ಲೇ ಅಪ್ಪ ಹೇಳ್ತಾನೆ. ಆದರೆ ಸರಿಯಾದ ಹುಡುಗಿ ಸಿಗ್ಬೇಕಲ್ಲ?"

ಆತನ ಉತ್ತರದ ಧ್ವನಿಯಲ್ಲಾಗಿದ್ದ ಬದಲಾವಣೆಯನ್ನು ಗಮನಿಸಿ ರಂಗಮ್ಮ ಹಿಗ್ಗಿದರು.

"ಅದೇನು ಹಾಗಂದ್ರೆ? ಈ ಭೂಮಿ ಮೇಲೆ ನಿಮಗೆ ಬೇಕಾದ ಹುಡುಗೀರೇ ಇಲ್ವೆ?"

"ಎಲ್ಲಾದ್ರೂ ಇದ್ರೆ ಪ್ರಯೋಜನವೇನು? ಹೊರಗೆ ಮದುವೆ ಮಾಡ್ಕೊಂಡು ಈ ವಠಾರ ಬಿಟ್ಟು ಹೋಗು ಅಂತೀರೇನು?"

ಅರೆಕ್ಷಣ ರಂಗಮ್ಮನಿಗೆ ಏನು ಹೇಳಬೇಕೋ ತೋಚಲಿಲ್ಲ. ತಮ್ಮ ಮನಸ್ಸಿನಲ್ಲಿದ್ದುದೇ ಆತನ ಮನಸ್ಸಿನಲ್ಲಿಯೂ ಇದೆಯೇ ಎಂದು ತಿಳಿಯಲು ಅವರು ಕಾತರರಾದರು.

"ಹಾಗಾದ್ರೆ ಈ ವಠಾರದಲ್ಲೇ ಯಾವುದಾದರೂ ಹುಡುಗಿ ಇದ್ದರೆ ಗೊತ್ತು ಮಾಡೋಣ್ವೇನು?"

ಹೇಳಬೇಕಾದ್ದನ್ನು ನಗೆಗೀಡಾಗುವಂತೆ ಹೇಳಿದೆನೇನೊ ಎಂದು ಅಳುಕುತ್ತ ಚಂದ್ರಶೇಖರಯ್ಯನೆಂದ:

"ಮಾಡಿ, ಆಗಿಹೋಗ್ಲಿ."

ವಠಾರದಲ್ಲಿ ಮದುವೆಯನ್ನಿದಿರು ನೋಡುತ್ತಿರುವ ಹುಡುಗಿ ರಾಧೆಯೊಬ್ಬಳೇ ಎಂದು ಯಾರಿಗೆ ಗೊತ್ತಿರಲಿಲ್ಲ?

"ಹಾಗಾದರೆ ನಿಮ್ಮ ಜಾತಕ ಒಂದಿಷ್ಟು ತಂದ್ಕೊಡಿ."

"ಜಾತಕ ಇಲ್ವಲ್ಲಾ."

"ಊರಲ್ಲೂ ಇಲ್ವೆ?"

"ಇದೆ. ತರಿಸ್ಕೊಡ್ತೀನಿ."

........ಆ ಬಳಿಕ ಕೆಲವು ದಿನ ರಂಗಮ್ಮ ಗೆಲುವಾಗಿದ್ದರು. ಯಾರಿಗೂ ಅವರು ಬಾಯಿಬಿಟ್ಟು ಏನನ್ನೂ ಹೇಳಲಿಲ್ಲ. ಗುಪ್ತ ಸಂಧಾನಗಳು ಮಾತ್ರ ನಡೆದುವು.

................

ಅಹಲ್ಯೆ ಗಂಡನ ಮನೆಗೆ ಹೊರಟು ಹೋದಬಳಿಕ, ರಾಧೆ ಚಂಪಾವತಿಗೆ ಹೆಚ್ಚು ಆಪ್ತಳಾದ ಸ್ನೇಹಿತೆಯಾದಳು ಆಕೆಗೆ ಹಾಡು ಬರುತ್ತಿರಲಿಲ್ಲ. ಆದರೆ ಹಾಡಿನ ಪುಸ್ತಕವನ್ನು ತಂದು ಆಕೆ ಚಂಪಾವತಿಗೆ ಕೊಡುತಿದ್ದಳು. ಓದಲೆಂದು ಕಾದಂಬರಿಗಳನ್ನು ತರುತಿದ್ದಳು

ಶಂಕರನಾರಾಯಣಯ್ಯನೀಗ ಬೇಗನೆ ಮನೆಗೆ ಬರುತಿದ್ದ;

ಶಡವಾಗಿ ಕೆಲಸಕ್ಕೆ ಹೋಗುತಿದ್ದ. ಚಂಪಾ ತುಂಬಿದ ಗರ್ಭಿಣಿ. ಆತ ಹೊಸ ಗಡಿಯಾರ ಕೊಡು ತಂದಿರಲಿಲ್ಲ. ಆದರೆ ಸಾಲ ಮಾಡಿ ಹೆಂಡತಿಯನ್ನು ಹೆರಿಗೆ ಆಸ್ಪತ್ರೆಗೆ ಸೇರಿಸಲು ಸಿದ್ಧನಾಗಿದ್ದ.

"ಬೇಡವೇ ಬೇಡ ! ಇಲ್ಲಿಯೇ ಹೆರಿಗೆಯಾಗಲಿ !"

–ಎಂದು ಚಂಪಾ ಹಟತೊಟ್ಟಳು.

ಅವರ ಮಗಳೀಗ ಪುಟ್ಟ ಹೆಜ್ಜೆಗಳನ್ನಿಡುತಿದ್ದ, ತೊದಲು ಮಾತನಾಡುತಿದ್ದ, ದಿಟ್ಟೆ. ಆಕೆಯನ್ನೆ ಪ್ರೀತಿಯಿಂದ ನೋಡುತ್ತ ಶಂಕರನಾರಾಯಣಯ್ಯ ಹೇಳಿದ :

"ಬರೋದೂ ಹೆಣ್ಣು ಮಗುವೇ ಆದರೆ ಎಷ್ಟು ಚೆಂದ !"

ಈ ಗಂಡಸಿನ ಆಳ ಕಂಡವರಿಲ್ಲ ಎಂಬಂತೆ ಚಂಪಾ ದುರುಗುಟ್ಟಿಕೊಂಡು ಆತನನ್ನೆ ನೋಡಿ ಅಂದಳು :

"ಏನೂ ಬೇಡಿ. ನಂಗೆ ಗಂಡು ಮಗೂನೇ ಬೇಕು."

"ಯಾಕೆ ? ನಾನೆಲ್ಲಾದರೂ ಓಡಿಹೋದರೆ, ನಿನ್ನನ್ನ ಸಾಕೋದಕ್ಕಾದರೂ ಇರ್ಲಿಂತಾನೊ ?"

ಚಂಪಾ, ತಾನು ಓದುತಿದ್ದ ಕಾದಂಬರಿಯನ್ನು ಕುಳಿತಲ್ಲಿಂದಲೆ ಆತನ ಎದೆಗೆ ಎಸೆದಳು. ಬಿದ್ದ ರಭಸಕ್ಕೆ ಹೊದಿಕೆ ಮಡಚಿಹೋದ ಆ ಪುಸ್ತಕವನ್ನೆತ್ತಿಕೊಂಡು ಆತನೆಂದ :

"ಚಂಪಾ, ಕಪಿಚೇಷ್ಟೆ ಮಾಡ್ದೆ ಸುಮ್ನಿರು. ಆಯಾಸ ಆಗತ್ತೆ ಅನ್ನೋದಾದ್ರೂ ತಿಳೀಬೇಡ್ವೆ ?"

ಆಕೆ ಸುಮ್ಮನಾದಳು. ಆತ ಆ ಪುಸ್ತಕವನ್ನು ನೋಡುತ್ತ ಹೇಳಿದ :

"ಹೀಗೆಲ್ಲಾ ನೀನು ಪುಸ್ತಕ ಎಸೆದ್ರೆ, ಆಮೇಲೆ ರಾಧಾ ತಂದು ಕೊಡೋದೇ ಇಲ್ಲ, ನೋಡು."

ಚಂಪಾವತಿಗೆ ರಾಧೆಯ ನೆನಪಾಯಿತು. ತಾನು ಪ್ರಸ್ತಾಪಿಸಬೇಕಾಗಿದ್ದ ವಿಷಯವನ್ನು ಯೋಚಿಸಿ ಆಕೆ ಮುಗುಳ್ನಕ್ಕಳು. ಆ ಮುಗುಳು ನಗುವನ್ನು ನೋಡಿದ ಶಂಕರನಾರಾಯಣಯ್ಯ ಅದರ ಹಿಂದೆ ಬರಲಿದ್ದ ಮಾತುಗಳನ್ನು ನಿರೀಕ್ಷಿಸಿದ.

"ನಿಮ್ಮ ಸ್ನೇಹಿತ ಚಂದ್ರಶೇಖರಯ್ಯನಿಗೆ ಇನ್ನೂ ಮದುವೆ ಇಲ್ಲ ಅಲ್ವೆ ?"

"ಇಲ್ಲ, ನಿನ್ನ ಮಗಳ್ನ ಕೊಡೋಣಾಂತಿದೀಯೇನು ?"

"ಆತ ರಾಧಾ ಮನೆ ಪಕ್ದಲ್ಲೇ ಇದಾರಂತೆ."

"ಪಾಪ! ಇವತ್ತು ಗೊತ್ತಾಯ್ತೇನೊ ?"

ಚಂಪಾ ಮಾತನಾಡಲಿಲ್ಲ. ಅಹಲ್ಯೆಗೆ ಆದ ಅನುಭವ ರಾಧೆಗೂ ಆಗಬಹುದೆಂದು ಆಕೆಗೆ ಭಯವಾಗಿತ್ತು. ಹಾಗಾಗಬಾರದೆಂದು ಆಕೆ ಆಶಿಸುತಿದ್ದಳು.

ಚಂಪಾ ತಲೆಯೆತ್ತಿ ಗಂಡನ ಮುಖವನ್ನ ದಿಟ್ಟಿಸಿದಳು.

ಶಂಕರನಾರಾಯಣಯ್ಯ ಮೃದುವಾದ ಸ್ವರದಲ್ಲಿ ಮಾತನಾಡಿದ :

"ಚಂಪಾ, ಸುಮ್ನೆ ಏನಾದರೂ ಯೋಚ್ನೆ ಮಾಡ್ಬೇಡ."

"ನಿಮ್ಮ ಸ್ನೇಹಿತ. ಯಾವತ್ತಾದರೂ ಮಾತಾಡಿಸಿ ನೋಡಿ."

"ಹೂಂ."

ಚಂಪಾವತಿಗೆ ಸಮಾಧಾನವಾಯಿತು.

................

ಆ ವಾರವೆ ಒಂದು ಸಂಜೆ ಚಂದ್ರಶೇಖರಯ್ಯ ಹೋಟೆಲಿನಲ್ಲಿ ಶಂಕರನಾರಾಯಣಯ್ಯನಿಗೆ ಕಾಣಲು ಸಿಕ್ಕಿದ. ಚಂಪಾವತಿ ಹೇಳಿದ್ದು ದನ್ನು ನೆನೆಸಿಕೊಳ್ಳುತ್ತ ಶಂಕರನಾರಾಯಣಯ್ಯ ಮಾತು ಹೇಗೆ ಆರಂಭಿಸಬೇಕೆಂದು ಚಡಪಡಿಸಿದ. ಚಂದ್ರಶೇಖರಯ್ಯ ಏನು ತಿಳಿದು ಕೊಳ್ಳುವನೋ ಎಂದು ಆತನಿಗೆ ಸಂಕೋಚವೆನಿಸಿತು. ಹೆಸರು-ಹಲಿಗೆ ಬರೆದುಕೊಟ್ಟದ್ದಕ್ಕಾಗಿ ಚಂಪಾ, 'ನಿಮ್ಮ ಸ್ನೇಹಿತ' ಎಂದು ಹೇಳುತಿದ್ದ ಳಾದರೂ ಹೇಳಿಕೊಳ್ಳುವಂತಹ ಗಾಢಸ್ನೇಹವೇನೂ ಅವರ ನಡುವೆ ಬೆಳೆದಿರಲಿಲ್ಲ. ಹೆಚ್ಚಾಗಿ ಬೆರೆಯಲು ಬಿಡುವು ದೊರೆಯದೆ ಇರು ತಿದ್ದುದೇ ಅದಕ್ಕೆ ಕಾರಣ.

ಚಂದ್ರಶೇಖರಯ್ಯ ಸಿಗರೇಟು ಕೊಟ್ಟ. ಶಂಕರನಾರಾಯಣಯ್ಯ ಕಡ್ಡಿ ಕೊರೆದು ಇಬ್ಬರದಕ್ಕೂ ಹಚ್ಚಿದ. ಹೋಟೆಲಿನ ಆ ಮೂಲೆಯಲ್ಲಿ ಅಷ್ಟಾಗಿ ಜನರೂ ಇರಲಿಲ್ಲ.

"ಇನ್ನೊಂದು ಒನ್-ಬೈ ಟು ಕಾಫಿ ತಗೊಳ್ಳೋಣ್ವೆ?"

ಎಂದು ಚಂದ್ರಶೇಖರಯ್ಯ ಕೇಳಿದ. ಶಂಕರನಾರಾಯಣಯ್ಯ ಸಮ್ಮತಿಸೂಚಕವಾಗಿ ತಲೆಯಾಡಿಸಿದ.

ಮಾತು ಆರಂಭಿಸಲು ವಾತಾವರಣ ಅನುಕೂಲವಾಗಿದ್ದಂತೆ ಕಂಡಿತು.

"ಚಂದ್ರಶೇಖರಯ್ಯ, ನಿಮ್ಮನ್ನು ಒಂದು ವಿಷಯ ಕೇಳ್ಬೇಕೂಂತ. ತಪ್ಪು ತಿಳ್ಕೊಳ್ಳಲ್ಲ ತಾನೆ?"

"ಕೇಳಿ. ಅದಕ್ಕೇನು?"

"ವಿಷಯ ವೈಯಕ್ತಿಕ."

"ಏನೂ ಪರವಾಗಿಲ್ಲ. ನಾನಂತೂ ನನ್ನ ವೃತ್ತೀಲಿ ಯಾವಾಗ್ಲೂ ವೈಯಕ್ತಿಕ ಪ್ರಶ್ನೆನೇ ಕೇಳೋದು."

ಶಂಕರನಾರಾಯಣಯ್ಯನಿಗೆ ನಗು ಬಂತು.

"ನೀವು ಯಾಕೆ ಮದುವೆ ಮಾಡ್ಕೋಬಾರದು?"

"ಮಾಡ್ಕೊಂಡರಾಯ್ತು. ಮದುವೆಯಾದೋರೆಲ್ಲಾ ವಠಾರದಲ್ಲಿ ಅನುಭವಿಸ್ತಿರೋ ಸುಖ ಕಾಣಿಸೋಲ್ವೆ?"

"ಅದೇನೋ ನಿಜ ಅನ್ನಿ."

ಶಂಕರನಾರಾಯಣಯ್ಯನಿಗೆ ಗೊತ್ತಿತ್ತು. ಅದು ಪೂರ್ತಿ ನಿಜವಾಗಿರಲಿಲ್ಲ. ತಾನಿರಲಿಲ್ಲವೆ? ತಾನು ದಾಂಪತ್ಯ ಜೀವನವನ್ನು ರೌರವ ನರಕವೆಂದು ಭಾವಿಸಿದ್ದನೆ? ಆದರೆ, ಸಂಸಾರ ಸುಖದ ವಿಷಯವಾಗಿ ತನ್ನ ಅಭಿಪ್ರಾಯ ಬೇರೆ ಎಂಬುದನ್ನು ಅಲ್ಲಿ ಬಹಿರಂಗವಾಗಿ ಹೇಳಲು ಆತ ಸಮರ್ಥನಾಗಲಿಲ್ಲ.

ಬಲು ಹಿತಕರವಾಗಿದ್ದ ಆ ಸಂಭಾಷಣೆಯನ್ನು ದೀರ್ಘಗೊಳಿಸೋಣವೆಂದು ಚಂದ್ರಶೇಖರಯ್ಯ ಹಾಗೆ ಹೇಳಿದ್ದರೆ, ಆ ಶಂಕರನಾರಾಯಣಯ್ಯ ಮಾತನ್ನೆ ನಿಲ್ಲಿಸಿಬಿಟ್ಟಿದ್ದ! ಆತನ ಬಾಯಿ ತೆರೆಸಲು ತಾನೇ ಮಾತನಾಡಬೇಕಾಯಿತು.

"ಆದರೆ, ಗಂಡಸಾಗಲಿ ಹೆಂಗಸಾಗಲಿ ಆಯುಷ್ಯವೆಲ್ಲಾ ಒಂಟಿಯಾಗೇ ಇರಬೇಕೂಂತ ನನ್ನ ಅಭಿಪ್ರಾಯವಲ್ಲ!"

ಅಷ್ಟು ಹೇಳಿ, ಹುಡುಗ ಮೇಜಿನ ಮೇಲಿರಿಸಿ ಹೋದ ಕಾಫಿಯ ಗ್ಲಾಸನ್ನು ಚಂದ್ರಶೇಖರಯ್ಯ ಕೈಗೆತ್ತಿಕೊಂಡ.

ನಿರಾಶನಾಗಬೇಕಾದ್ದಿಲ್ಲ ಎಂದುಕೊಳ್ಳುತ್ತಾ ಶಂಕರನಾರಾಯಣಯ್ಯ ಹೇಳಿದ :

"ನೀವು ಮದುವೆ ಮಾಡ್ಕೊಳ್ಳೋ ಹಾಗಿದ್ದರೆ ನಮ್ಮ ಕಡೇದೊಂದು ಹುಡುಗಿ ಇದೆ."

ಚಂದ್ರಶೇಖರಯ್ಯನ ಮುಖ ಒಮ್ಮೆಲೆ ಗಂಭೀರವಾಯಿತು. ಇನ್ನು ಆ ಮಾತು ಕತೆಯನ್ನು ಬರಿಯ ತಮಾಷೆಯಾಗಿ ಪರಿಗಣಿಸುವಂತಿರಲಿಲ್ಲ.

"ಕ್ಷಮಿಸಿ ಶಂಕರನಾರಾಯಣಯ್ಯ, ನನಗೆ ಹುಡುಗಿ ಗೊತ್ತಾಗಿದೆ. ಇನ್ನು ನಾಲ್ಕು ತಿಂಗಳಲ್ಲೇ ಮದುವೆ."

"ಸಂತೋಷ !"

ಶಂಕರನಾರಾಯಣಯ್ಯ ನಕ್ಕರೂ ರಾಧೆಗಾಗಿ ಚಂಪಾವತಿಯನ್ನು ಸಂತೋಷ ಪಡಿಸುವುದಕ್ಕಾಗಿ—ತಾನೇನನ್ನೂ ಮಾಡಲಾಗಲಿಲ್ಲವಲ್ಲಾ ಎಂದು ಆತನಿಗೆ ಸಂಕಟವಾಯಿತು. ಆ ದುಃಖವನ್ನು ನುಂಗುವಂತೆ ಗ್ಲಾಸಿನಲ್ಲಿದ್ದ ಕಾಫಿಯನ್ನು ಒಂದೇ ಗುಟುಕಿಗೆ ಕುಡಿದ. ಬಲವಾಗಿ ಒಂದು ಉಸಿರು ಸಿಗರೇಟನ್ನು ಸೇದಿದ.

ಶಂಕರನಾರಾಯಣಯ್ಯನ ಕಡೆಯ ಹುಡುಗಿಯ ಬಗ್ಗೆ ಚಂದ್ರಶೇಖರಯ್ಯನಿಗೆ ಕನಿಕರವಾಯಿತು.

"ಸೋ ಸಾರಿ ಶಂಕರನಾರಾಯಣಯ್ಯ. ನನ್ನದೆಲ್ಲಾ ಆಗ್ಹೋಯ್ತು."

"ಏನೂ ಪರವಾಗಿಲ್ಲ. ನೀವು ಮದುವೆ ಮಾಡ್ಕೋಬೇಕೂಂತ ನಿರ್ಧಾರ ಮಾಡಿದೀರಲ್ಲ. ಅದೇ ಸಂತೋಷ."

"ನನ್ನ ಗೊತ್ತಿನಲ್ಲಿ ಯಾವುದಾದರೂ ಗಂಡು ಇದ್ದರೆ ಹೇಳ್ತೀನಿ."

"ಓ ಯೆಸ್, ದಯವಿಟ್ಟು ಹೇಳಿ. ಉಪಕಾರವಾಗುತ್ತೆ."

"ಹೊರಡೋಣ್ವೊ ? ಮನೆ ಕಡೆ ತಾನೆ ?"

"ಹೌದು. ನಡೀರಿ."

..................

ಮನೆ ಸೇರಿದ ಮೇಲೆ ಶಂಕರನಾರಾಯಣಯ್ಯ ಬೇಸರದ ಧ್ವನಿಯಲ್ಲಿ ಹೇಳಿದ :

"ಚಂದ್ರಶೇಖರಯ್ಯನಿಗೆ ಆಗ್ಲೇ ಮದುವೆ ಗೊತ್ತಾಗ್ಬಿಟ್ಟಿದೆ ಕಣೇ."

"ಆ ವಿಷಯ ನಿಮಗಿಂತ ಮುಂಚೆ ನನಗೇ ತಿಳೀತು."

ಸಂತೋಷದ ಧ್ವನಿ. ಅದು ಅರ್ಥವಾಗದೆ ಹೆಂಡತಿಯ ಮುಖವನ್ನು ಆತ ಮಿಕಿಮಿಕಿ ನೋಡಿದ. ಚಂಪಾ ಕೇಳಿದಳು :

"ಅದ್ಯಾಕೆ ಹಾಗೆ ನೋಡ್ತಿದೀರಾ ?"

"ರಾಧೆ ವಿಷಯ ಆತನ ಜತೇಲಿ ಪ್ರಸ್ತಾಪಿಸ್ಬೇಕೂಂತ ನೀನು ಹೇಳಿದ್ದ ಹಾಗೆ ನೆನಪು."

"ಹೌದು, ಏನಾಯ್ತು ?"

"ಏನು ಆಗೋದು ? ನೀನು ಸಲಹೆ ಮಾಡಿದ್ದೇ ತಡವಾಯ್ತು. ಅಂತೂ ನಿನ್ನ ರಾಧೆಗೆ ಭಾಗ್ಯ ಇಲ್ಲ."

"ರಾಧೆಗೆ ಭಾಗ್ಯ ಇಲ್ಲ ? ಅದೇನ್ರಿ ಹಾಗಂದ್ರೆ ? ಅವಳೇ ಕಣ್ರೀ ಹುಡುಗಿ !"

"ಯಾರು–ಚಂದ್ರಶೇಖರಯ್ಯ–!"

"ಮದುವೆ ಪ್ರಸ್ತಾಪ ಮಾಡೋಕೆ ಹೋದೋರು ಹುಡುಗಿ ಯಾರೂಂತ ಕೂಡಾ ಕೇಳ್ಲಿಲ್ವೆ ನೀವು ?"

'ಬೇಸ್ತು ಬಿದ್ದ' ಗಂಡನನ್ನು ಕಂಡು ಚಂಪಾವತಿಗೆ ಮೋಜೆನಿಸಿತು. ಆಕೆ ಬಿದ್ದು ಬಿದ್ದು ನಕ್ಕಳು. ಆದರೆ ನಗೆಯ ಸುಖವನ್ನು ಬೇಕಾದ ಹಾಗೆ ಅನುಭವಿಸಲು ಆಕೆಯ ದೇಹ ಸಿದ್ಧವಿರಲಿಲ್ಲ. ಉಸಿರಿಗಾಗಿ ಆಕೆ ಅರ್ಧದಲ್ಲೇ ತಡೆದು ನಿಂತಳು.

ಹೆಂಡತಿಯ ದೇಹಸ್ಥಿತಿಯನ್ನು ಗಮನಿಸುತ್ತಾ ಗಂಡನೆಂದ :

"ಅಂತೂ ನಿನ್ನ ಬಯಕೆ ಈಡೇರಿತೋ ಇಲ್ವೊ?"

"ಆದರೆ ಯಾರಿಗೂ ಹೇಳ್ಬೇಡಿ. ಇದು ರಹಸ್ಯ!"

ಹಿರಿಯರಿಗೆ ತಿಳಿಯದೆಯೇ ಏನಾದರೂ ಸಂಭವಿಸಿದೆಯೋ ಏನೋ ಎನ್ನಿಸಿತು ಶಂಕರನಾರಾಯಣಯ್ಯನಿಗೆ.

"ಹಾಗಂದ್ರೆ ?"

"ರಂಗಮ್ಮ ಬಂದು ಗುಟ್ಟಾಗಿ ಹೇಳಿದ್ರು. ಅವರದೇನಂತೆ ರಾಯಭಾರ. ಆದರೆ ಇನ್ನೂ ಎರಡು ತಿಂಗಳು ಯಾರಿಗೂ ಹೇಳ್ಬಾರ್ದು ಅಂದ್ರು."

"ಹಾಗೋ ?"

"ಮೀನಾಕ್ಷಮ್ಮ, ಕಮಲಮ್ಮ, ಪದ್ಮಾವತಿ, ಕಾಮಾಕ್ಷಿ – ಪ್ರತಿಯೊಬ್ಬರ ಹತ್ರಾನೂ ಹಾಗೇನೇ ಗುಟ್ಟಾಗಿ ರಂಗಮ್ಮ ಹೇಳಿ ಹೋದ್ರು!"

ಇದು ತನ್ನ ಸರದಿಯೆಂದು ಶಂಕರನಾರಾಯಣಯ್ಯ ಬಿದ್ದು ಬಿದ್ದು ನಕ್ಕ.

೩೦

ನಾರಾಯಣಿ ಸತ್ತು ಒಂದು ವರ್ಷವಾಗಿತ್ತು ಆಗಲೆ. ಪ್ರತಿ ಯೊಬ್ಬರ ವಯಸ್ಸೂ ಹಿಂದಿಗಿಂತ ಒಂದು ವರ್ಷ ಹೆಚ್ಚಾಗಿತ್ತು.

"ಎಷ್ಟು ಬೇಗ ಕಾಲ ಕಳೆದ್ಹೋಗುತ್ತೆ!"

—ಎಂದು ರಂಗಮ್ಮ ತನ್ನಷ್ಟಕ್ಕೇ ಆಶ್ಚರ್ಯ ವ್ಯಕ್ತಪಡಿಸಿದರು.

ಉಪಾಧ್ಯಾಯ ಲಕ್ಷ್ಮೀನಾರಾಯಣಯ್ಯನಿಗೆ ಮಾಗಡಿಗೆ ವರ್ಗ ವಾದ ವಾರ್ತೆ ಬಂತು. ಒಬ್ಬರೇ ಹೋದರಾಯಿತೆಂದು ಮೊದಲು ಯೋಚಿಸಿದ್ದರೂ ತೀರ್ಮಾನ ಮಾಡುವ ಹೊತ್ತು ಬಂದಾಗ ಸಂಸಾರ ವನ್ನೂ ಜತೆಯಲ್ಲೇ ಕರೆದೊಯ್ಯುವುದು ಮೇಲೆಂದು ಲಕ್ಷ್ಮೀ ನಾರಾಯಣಯ್ಯ ನಿರ್ಧರಿಸಿದರು.

"ಈ ತಿಂಗಳು ಕೊನೇಲಿ ಮನೆ ಖಾಲಿ ಮಾಡ್ತೀನಿ ರಂಗಮ್ನೋರೆ"

—ಎಂದು ಲಕ್ಷ್ಮೀನಾರಾಯಣಯ್ಯ ತಿಳಿಸಿದರು.

"ಬೆಂಗಳೂರಿಗೇ ವಾಪಸು ವರ್ಗವಾದಾಗ ನಿಮ್ಮ ವಠಾರದಲ್ಲೇ ಈ ಮನೆಯನ್ನೇ ನೀವು ಕೊಡ್ಬೇಕು!"

—ಎಂದು ವಿನಂತಿಯನ್ನೂ ಮಾಡಿದರು.

"ಆಗಲಪ್ಪಾ ಆಗಲಿ"

—ಎಂದು ರಂಗಮ್ಮ ಎನ್ನದಿರಲಿಲ್ಲ.

ಆದರೆ ಅವರ ಮನಸ್ಸು ಆಗಲೆ ಎಣಿಕೆ ಹಾಕಿತು: ಎಡಬದಿಯ ಮೊದಲ ಮನೆಗಿನ್ನು ಹತ್ತೊಂಭತ್ತು ರೂಪಾಯಿ ಬಾಡಿಗೆ; ಬೇಗನೆ ವಿವಾಹವಾಗಲಿರುವ ಚಂದ್ರಶೇಖರಯ್ಯನಿಗೇ ಅದನ್ನು ಕೊಡಬೇಕು; ಜಯರಾಮುಗೆ ಮದುವೆಯಾಗಿ ಆತ ಪ್ರತ್ಯೇಕ ಸಂಸಾರ ಹೂಡುವ ವರೆಗೆ ಅವರೆಲ್ಲ ಜತೆಯಾಗಿಯೇ ಇದ್ದರೂ ಇದ್ದರೇ. ಅಂತೂ ಮೇಲಿನ

ಕೊಠಡಿ ಮನೆಗಳು ಖಾಲಿಯಾದರೆ ಅವುಗಳನ್ನೆಲ್ಲಾ ಓದುವ ಹುಡುಗರಿಗೇ ಬಿಟ್ಟುಬಿಡಬೇಕು. ಬೇಸಗೆಯ ರಜಾದಲ್ಲಿ ಹುಡುಗರಿಂದ ಬಾಡಿಗೆ ಸಿಗುತ್ತಿರಲಿಲ್ಲ. ಹಾಗೆ ನಷ್ಟವಾಗದಂತೆ, ತಿಂಗಳ ಬಾಡಿಗೆಯನ್ನೇ ಸ್ವಲ್ಪ ಹೆಚ್ಚಿಸಿದರಾಯಿತು........

ಚಂದ್ರಶೇಖರಯ್ಯನೊಡನೆ ಇದನ್ನೆಲ್ಲಾ ಮಾತನಾಡಿ, ಇನ್ನೆರಡು ದಿನ ಬಿಟ್ಟುಕೊಂಡು 'ಮನೆ ಬಾಡಿಗೆಗೆ ಇದೆ' ಬೋರ್ಡನ್ನು ಹೊರಗೆ ತೂಗುಹಾಕುವುದೇ ಮೇಲೆಂದು ಅವರು ಅಂದುಕೊಂಡರು.

................

ಚಂಪಾವತಿಗೆ ಬೇನೆ ಬರುತಿತ್ತು. ವಠಾರದವರೆಲ್ಲ 'ನಾವು ನೋಡ್ಕೋತೇವೆ, ನಾವು ನೋಡ್ಕೋತೇವೆ' ಎಂದು ಆಶ್ವಾಸನೆ ಕೊಟ್ಟರೂ ಶಂಕರನಾರಾಯಣಯ್ಯ ದಾದಿಯೊಬ್ಬಳನ್ನು ಗೊತ್ತು ಮಾಡಿದ. ಆ ದಾದಿ ತಮ್ಮ ಜನವಲ್ಲವೆಂದು ತಿಳಿದರೂ ವಠಾರದವರು ಆಕ್ರೋಶ ಮಾಡಲಿಲ್ಲ.

ಆ ಸಂಜೆ ಪೋಲೀಸ್ ಶಿವಸ್ವಾಮಿ ಕೆಂಗಣ್ಣು ಉರಿಸಿಕೊಂಡೇ ಮನೆಗೆ ಬಂದ. ರಾಜಾಮಿಲ್ಲಿನೆದುರು 'ಕೂಲಿಕಾರ ಗಲಾಟೆ' ಆಗಿತ್ತು. ಸೇರಿದ್ದ ಗುಂಪನ್ನು ಚದರಿಸಲು ಪೋಲೀಸರು ಲಾಠೀ ಪ್ರಹಾರ ಮಾಡಿದ್ದರು. ಶಿವಸ್ವಾಮಿಯೂ ಲಾಠಿ ತಿರುಗಿಸಿ ಬಡಜನರನ್ನು ಹೊಡೆದಿದ್ದ. ತನ್ನನ್ನು ಎಲ್ಲರೂ ವೈರಿಯಂತೆಯೇ ಕಾಣುವರೆಂಬ ತಿಳಿವಳಿಕೆಯಿಂದಲೆ ಆತ ಮನೆಗೆ ಬಂದ. ಏನೋ ಕುಂಟು ನೆಪ ತೆಗೆದು ಹೆಂಡತಿಯ ಮೇಲೆ ರೇಗಾಡಿದ. ಆಕೆಯನ್ನು ಹಿಡಿದು ಬಲವಾಗಿ ಥಳಿಸಿದ. ಗದ್ದಲವಾಯಿತು. 'ರಂಗಮ್ಮನ ವಠಾರ'ದಲ್ಲಿ ಏನೋ ಆಗುತ್ತಿದೆಯೆಂದು ಬೀದಿಯಲ್ಲಿ ನಡೆದುಹೋಗುತಿದ್ದವರು ಕ್ಷಣಕಾಲ ತಡೆದು ನಿಂತು ಬರಿಯ ಮನೆ ಜಗಳವೆಂದು ಮುಂದುವರಿದರು.

ಎರಡು ದಿನಗಳಿಂದ ರಾಮಕೃಷ್ಣಯ್ಯ ಮರೆಮಾಡಿದ್ದ ಕೆಟ್ಟ ಸುದ್ದಿಯೂ ಆ ಸಂಜೆ ಹೊರಬಂತು.

'ರಾಮಕೃಷ್ಣಯ್ಯನ ಕೆಲಸ ಹೋಯಿತಂತೆ'

ಎಂಬ ಸುದ್ದಿ ಮನೆಯಿಂದ ಮನೆಗೆ ಸಂಚಾರ ಮಾಡಿತು.

ನಿಜವಾಗಿ ಸುದ್ದಿ ಅಷ್ಟೇ ಆಗಿರಲಿಲ್ಲ. ದಾಸ್ತಾನುಗಳ ಲೆಕ್ಕ ಸರಿಯಾಗಿಲ್ಲವೆಂದು ಎರಡು ಮೂರು ಸಾರೆ ಆಡಳಿತದವರು ರಾಮ ಕೃಷ್ಣಯ್ಯನಿಗೆ ಎಚ್ಚರಿಕೆ ಕೊಟ್ಟಿದ್ದರು. ತನ್ನ ಸಹಾಯಕ ಏನಾದರೂ ಮಾಡುತ್ತಿರಬಹುದೆಂದು ರಾಮಕೃಷ್ಣಯ್ಯ ಸಂಶಯ ಗ್ರಸ್ತನಾದ. ಆದರೆ ಸಂಶಯವನ್ನು ಸಿದ್ಧಪಡಿಸಿ ಕೊಡುವ ಯಾವ ಪುರಾವೆಯೂ ಸಿಗಲಿಲ್ಲ. ಆಡಳಿತದವರು ಒಮ್ಮಿಂದೊಮ್ಮೆಲೆ ರಾಮಕೃಷ್ಣಯ್ಯನನ್ನು ಕೆಲಸದಿಂದ ವಜಾ ಮಾಡಿದರು. ಅದು ಅಕ್ರಮವೆಂದು ದೂರುವ ಹಾಗೂ ಇರಲಿಲ್ಲ ತನ್ನ ಮೇಲಿನ ಆಪಾದನೆಗಳನ್ನು ಆಡಳಿತದವರು ಸುಲಭವಾಗಿ ಸಿದ್ಧಪಡಿಸುವರೆಂಬುದು ಆತನಿಗೆ ಗೊತ್ತಿತ್ತು.

....ಇಷ್ಟೆಲ್ಲಾ ಗಲಿಬಿಲಿ ವಠಾರದಲ್ಲಿದ್ದರೂ ಹೆಂಗಸರೆಲ್ಲರ ಗಮನ ಕೊನೆಯ ಮನೆಯ ಕಡೆಗೇ ಇತ್ತು.

ನಾರಾಯಣಿ ಮಲಗಿದ್ದ ಕಡೆಯಲ್ಲ,—ಅದಕ್ಕಿದಿರು ಗೋಡೆಯ ಬಳಿ ಚಂಪಾವತಿಯನ್ನು ಮಲಗಿಸಿದ್ದರು.

ವಠಾರದಲ್ಲಿ ದೀಪ ಆರಿಸದೇ ಇದ್ದ ಆ ರಾತ್ರೆಯೆಲ್ಲ ಸಣ್ಣನೆ ನೋವು ನರಳಾಟ ಕೊನೆ ಮನೆಯಿಂದ ಕೇಳಿಸುತಿತ್ತು.

ಬಹಳ ಹೊತ್ತು ರಂಗಮ್ಮನಿಗೆ ನಿದ್ದೆ ಬರಲಿಲ್ಲ. ನಡು ರಾತ್ರೆ ಯಲ್ಲೊಮ್ಮೆ ಅವರೆದ್ದು ಗೋಡೆ ಮುಟ್ಟಿಕೊಂಡು ಓಣಿಯುದ್ದಕ್ಕೂ ಹೋಗಿ ಬಂದರು. ವಠಾರದಿಂದ ಹೊರಡುತಿದ್ದ ನಿದ್ದೆಯ ಉಸಿರಾಟದ ಗೊರಕೆಯ ಸ್ವರಗಳು ಯಾವುವೂ ಅವರಿಗೆ ಅಪರಿಚಿತವಾಗಿರಲಿಲ್ಲ.

....ಒಮ್ಮೆಲೆ ಕಾಮಾಕ್ಷಿ ಕೂಗಿಕೊಂಡಳು. ಆಕೆಗೆ ಕೆಟ್ಟ ಕನಸು ಬಿದ್ದಿತ್ತು. ನಾರಾಯಣನಿಗೆ ಎಚ್ಚರವಾಯಿತು.

"ಕಾಮೂ, ಕಾಮೂ, ಏನೇ ಅದು?"

ಬೆವತು ಹೋಗಿತ್ತು ಆಕೆಯ ಮೈ. ಗಂಟಲು ಆರಿತ್ತು.

"ನಾರಾಯಣಿ—ಕಾಹಿಲೆ ಮಲಗಿದ್ದ—ಕನಸು ಬಿತ್ತು."

"ಇಷ್ಟೇ ತಾನೆ? ಹಗಲೆಲ್ಲಾ ಅದೇ ಯೋಚ್ನೆ ಮಾಡ್ತಾ ಇದ್ದೆಯೋ ಏನೋ...."

'ಚಂಪಾವತಿಗೆ ಹೆರಿಗೆ ನೋವು ಅಲ್ವೆ ?"

"ಹೌದು. ನಾಳೆ ಬೆಳಿಗ್ಗೆ ಪುತ್ಥಳಿಯಂಥಾ ಒಂದು ಹೊಸ ಮಗು ವಠಾರಕ್ಕೆ ಬರುತ್ತೆ."

ಕಾಮಾಕ್ಷಿ ಗಂಡನ ಸಮೀಪಕ್ಕೆ ಸರಿದಳು. ಏನನ್ನೂ ಮಾತ ನಾಡಲಿಲ್ಲ.

"ಅವರದಾದ್ಮೇಲೆ ನಿನ್ನ ಸರದಿ ಕಾಮೂ........"

................

ರಾತ್ರೆ ಕಳೆದು ಬೆಳಗಾಯಿತು. ಹೆರಿಗೆಯಾಗಿರಲಿಲ್ಲ.

ವಠಾರದವರು ದಿನ ನಿತ್ಯದ ಕೆಲಸಕಾರ್ಯಗಳನ್ನೆಲ್ಲ ಮಾಮೂಲಿ ರೀತಿಯಲ್ಲಿ ನಡೆಸಿದರು. ಚಂದ್ರಶೇಖರಯ್ಯ ಲೇಡಿ ಡಾಕ್ಟರೊಬ್ಬರನ್ನು ಕರೆತಂದ.

ಹೆಂಗಸರು ಹೆಬ್ಬಾಗಿಲಿನಾಚೆ ಹೊರ ಅಂಗಳದಲ್ಲಿ ಗುಂಪು ಕಟ್ಟಿ ನಿಂತು ಗುಸುಗುಸು ಮಾತನಾಡಿದರು.

ರಂಗಮ್ಮ ಹಲ್ಲು ಕಡಿಯುತ್ತ, ಗಂಟಲಿನಿಂದ ಸ್ವರ ಹೊರಡಿಸುತ್ತ, ಏದುಸಿರು ಬಿಟ್ಟುಕೊಂಡು, ನಡೆಗೋಲಿನಿಂದ ಟಕ್‌ಟಕ್ ಸದ್ದು ಮಾಡುತ್ತ, ಅತ್ತಿತ್ತ ಬೆನ್ನು ಬಾಗಿಸಿ ನಡೆದರು.

ಬಹಿರಂಗವಾಗಿ ಅವರೇನನ್ನೂ ಹೇಳಲಿಲ್ಲವಾದರೂ ಅವರ ಅಂತರ್ಯದ ಧ್ವನಿ ನುಡಿಯುತಿತ್ತು :

"ಅದೇ ಮನೆಯಲ್ಲಿ ಹೆರಿಗೆಗೆ ತಾನು ಬಿಡಬಾರದಾಗಿತ್ತು. ಆಸ್ಪತ್ರೆಗೇ ಕಳಿಸ್ಬೇಕಾಗಿತ್ತು."

ಬೇಡ ಬೇಡವೆಂದರೂ, ಒಂದು ವರ್ಷದ ಹಿಂದೆ ನಾರಾಯಣಿ ಆ ಮನೆಯಲ್ಲಿ ಸುಮಾರು ಅದೇ ಹೊತ್ತಿಗೆ ಪ್ರಾಣಸಂಕಟದಿಂದ ನರಳು ತಿದ್ದ ನೆನಪು ಅವರನ್ನು ಕಾಡುತಿತ್ತು.

ಮೀನಾಕ್ಷಮ್ಮ ತನ್ನ ಮನೆಯ ಬಾಗಿಲಲ್ಲೆ, ಕೊನೆಯ ಮನೆಗೆ ಸಮೀಪವಾಗಿಯೇ ನಿಂತಳು.

ರಂಗಮ್ಮ ಕೊಳಾಯಿಯ ಬೀಗ ತೆಗೆದರು. ಆದರೆ ಯಾರೂ ಕೊಡ–ಬಕೀಟು–ತಟ್ಟೆಗಳ ಸಾಲನ್ನು ಕಟ್ಟಿಯೇ ಇರಲಿಲ್ಲ.

ವಠಾರಜೀವನ ಅಸ್ತವ್ಯಸ್ತವಾಗಿತ್ತು.

ಚಂಪಾವತಿಯ ನರಳಾಟ ಹೆಚ್ಚಿದಂತೆ ಹೆಂಗಸರೆಲ್ಲ ಓಣಿಗೇ

ಬಂದಿಳಿದರು.

ನರಳಾಟ ನಿಂತಿತು. 'ಸುಖಪ್ರಸವ'ವಾಗಿತ್ತು ಚಂಪಾವತಿಗೆ.

ಅವರಿಗೂ ಮೊದಲೇ ಅಡುಗೆ ಮನೆಯಲ್ಲೇ ನಿಂತಿದ್ದ ಶಂಕರ ನಾರಾಯಣಯ್ಯನಿಗೆ ದಾದಿ ಸುದ್ದಿ ಮುಟ್ಟಿಸಿದಳು.

ಆತ ಎಲ್ಲಾ ಆಯಾಸವನ್ನೂ ಮರೆತು ಮುಖವರಳಿಸಿಕೊಂಡು ಡಾಕ್ಟರರ ಅನುಮತಿ ಪಡೆದು ಮನೆಯಿಂದ ಹೊರಬಂದ.

ಆತನ ಮುಖ ನೋಡುತ್ತಲೆ ಎಲ್ಲರಿಗೂ ಸಮಾಧಾನವಾಯಿತು.

ರಂಗಮ್ಮ ಮನಸಿನಲ್ಲೆ ಅಂದುಕೊಂಡರು :

'ಗಂಡುಮಗೂಂತ ತೋರುತ್ತೆ. ಅದಕ್ಕೇ ಇಷ್ಟು ಖುಷಿ ಯಾಗಿದಾನೆ.'

ಮಗು ಎಂತಹದೆಂದು ಕೇಳುವ ಕುತೂಹಲ ಎಲ್ಲರಿಗೂ ಇತ್ತು. ಆದರೆ ತಮ್ಮೆಲ್ಲರಿಗಿಂತಲೂ ಹಿರಿಯರಾದ ರಂಗಮ್ಮ ಅಲ್ಲೆ ನಿಂತಿದ್ದಾಗ ಬೇರೆ ಹೆಂಗಸರು ಕೇಳುವಹಾಗಿರಲಿಲ್ಲ.

ಏನನ್ನೂ ಹೇಳದೆ ಆ ಗಂಡಸು ಹಾಗೆಯೇ ನಿಂತಿದ್ದುದನ್ನು ಕಂಡು ರಂಗಮ್ಮನಿಗೆ ರೇಗಿತು. ಆದರೆ ಅದನ್ನು ಅವರು ಹೊರಗೆ ತೋರ್ಪಡಿಸಲಿಲ್ಲ. ಪ್ರಕಾಶವಾಗಿ ನಗುತ್ತಲೆ ಅವರು ಹೇಳಿದರು :

"ಎಂಥದಪ್ಪಾ ಮಗು ? ರಾಜಕುಮಾರ ತಾನೆ ?"

ಶಂಕರನಾರಾಯಣಯ್ಯ ನಗುತ್ತ ಹೇಳಿದ :

"ಇಲ್ಲ ರಂಗಮ್ನೋರೆ. ಸೌಭಾಗ್ಯಲಕ್ಷ್ಮಿ !"

ಆ ಹೆಂಗಸರಿಗೆಲ್ಲ ಒಂದು ಕ್ಷಣ ನಿರಾಶೆಯಾದಂತೆ ತೋರಿತು. ಆದರೆ ಆ ಗಂಡಸಿನ ಉತ್ಸಾಹ ಕಂಡು ಭ್ರಮೆಗೊಂಡು, ಸುಖ ಪ್ರಸವದ ಸುವಾರ್ತೆಯನ್ನು ಸ್ವಾಗತಿಸಿ ಅವರೆಲ್ಲ ಮುಗುಳುನಕ್ಕರು. ಅವರಿಗನಿಸಿತು: ಈತ ವಿಚಿತ್ರ ಮನುಷ್ಯ. ಅಳುಮೋರೆ ಹಾಕಿ 'ಹೆಣ್ಣು' ಅನ್ನೋ ಬದಲು, ನಗುನಗುತ್ತಾ 'ಸೌಭಾಗ್ಯಲಕ್ಷ್ಮಿ' ಅನ್ನೋದೆ ?

ಗಂಭೀರಧ್ವನಿಯಲ್ಲಿ ವಠಾರದ ಒಡತಿ ರಂಗಮ್ಮನೆಂದರು :

"ಸೌಭಾಗ್ಯಲಕ್ಷ್ಮಿಯೇ ಸರಿ. ಹೆಣ್ಣು ಯಾವುದರಲ್ಲೂ ಗಂಡಸಿಗೆ ಕಡಿಮೆ ಇಲ್ಲ. ಸಂತೋಷ–ಸಂತೋಷ !"

# ಓದಿದ ಬಳಿಕ

"ಓದಿಯಾಯಿತೆ ?"

"ಓಹೋ !"

"ಹೇಗಿದೆ ?"

"................."

"ಸುಮ್ಮನಿದ್ದೀರಲ್ಲ ?"

"ಹೇಗಿದೆ ಎಂತ ಹೇಳಲು ಸ್ವಲ್ಪ ಕಾಲಾವಕಾಶಬೇಕು."

"ಆಗಲಿ; ಸಂದೇಹಗಳೇನಾದರೂ ಇದ್ದರೆ ಕೇಳಿ. ವಿವರಿಸಿ ಹೇಳಲು ಪ್ರಯತ್ನಿಸ್ತೇನೆ."

"....ನಿಮ್ಮ ಈ ಕಾದಂಬರಿಗೆ ಕಥಾನಾಯಕ—ಕಥಾನಾಯಿಕೆ ಯಾರು ?"

"ಹಲವರು !"

"ಆದರೆ ಸಾಮಾನ್ಯವಾಗಿ ನಮ್ಮ ಕಾದಂಬರಿಗಳಲ್ಲಿ ಹೀಗಿಲ್ಲ."

"ನಿಜ. ಕಾದಂಬರಿ ಈ ರೀತಿಯಾಗಿಯೂ ಇರಬಹುದು. ಅಲ್ಲದೆ, ಹೀಗಿರುವುದು ಹೊಸತೂ ಅಲ್ಲ."

"ಈ ಕಾದಂಬರಿಯಲ್ಲಿರುವುದು ಮಠಾರ ಜೀವನ, ಅಲ್ಲವೆ ?"

"ಹೌದು."

"ಮಠಾರ ಜೀವನವನ್ನು ಚಿತ್ರಿಸಿದ್ದೇವೆಂದು ಈ ಮೊದಲೇ ಹೇಳಿಕೊಂಡವರುಂಟು"

"ಗೊತ್ತು. ಆದರೆ ಜೀವನವನ್ನು ನೋಡುವ ದೃಷ್ಟಿಗಳಲ್ಲಿ ವ್ಯತ್ಯಾಸವಿರುತ್ತದೆ. ಇಲ್ಲಿರುವುದು ನನ್ನ ದೃಷ್ಟಿ."

"ನೀವು ಈ ಕಾದಂಬರಿಯನ್ನು ಬರೆದ ಉದ್ದೇಶ ?"

"ಕಾದಂಬರಿಗಳನ್ನು ಜನ ಯಾಕೆ ಓದುತ್ತಾರೆ ? ಮನೋ

ರಂಜನೆಗೆಂದು, ಇಲ್ಲವೆ ಕಾಲಹರಣಕ್ಕೆಂದು. ಇದನ್ನಾದರೂ ಅವರು ಕೈಗೆತ್ತಿಕೊಳ್ಳುವುದು ಅದೇ ಉದ್ದೇಶದಿಂದ ಎಂದು ನಾನು ಬಲ್ಲೆ!"

"ಅಷ್ಟೇ ಅಂತೀರಾ?"

"ಅದೀಗ ನಿಜ ಸ್ಥಿತಿ. ಆದರೆ ನಾನು, ಬರಿಯ ಮನೋರಂಜನೆಯನ್ನೇ ಗುರಿಯಾಗಿಟ್ಟು ಎಂದೂ ಕೃತಿ ರಚಿಸುವುದಿಲ್ಲ. ಇಲ್ಲಿಯೂ ಅಷ್ಟೆ. ಇದು, ವಾಸ್ತವ ಜೀವನವನ್ನು ಅವಲಂಬಿಸಿದೊಂದು ಕಟ್ಟು ಕತೆ. ಇದನ್ನೋದುವಾಗ ಓದುಗರಿಗೆ ವಿವಿಧ ರಸಾನುಭವವಾದೀತೆಂಬುದು ನನ್ನ ನಂಬುಗೆ. ಆದರೆ ಅಷ್ಟೇ ಅಲ್ಲ. ಓದಿಯಾದ ಮೇಲೆ ನಮ್ಮ ಸಮಾಜದೊಂದು ಜನವಿಭಾಗದ ಜೀವನಚಿತ್ರ ಅವರ ಕಣ್ಣೆದುರು ಕಟ್ಟಬೇಕೆಂಬುದು ನನ್ನ ಬಯಕೆ. ಹಾಗೆ ನಿಂತ ಚಿತ್ರ ಬೇಗನೆ ಮಾಸಿ ಹೋಗದೆ, ಬದುಕಿನ 'ಏನು'—'ಯಾಕೆ'ಗಳನ್ನು ಪ್ರಚೋದಿಸುವಂತಾಗಬೇಕೆನ್ನುವುದು ನನ್ನ ಅಪೇಕ್ಷೆ."

"ಇಲ್ಲಿ ನೀವು ಚಿತ್ರಿಸಿರುವುದು ಬ್ರಾಹ್ಮಣರ ವಠಾರ."

"ಹೌದು."

"ನೀವು ಬ್ರಾಹ್ಮಣರೆ?"

"................"

"ಬ್ರಾಹ್ಮಣೇತರರೆ?"

"................"

"ಯಾಕೆ ಮುಗುಳ್ನಗುತಿದ್ದೀರಿ?"

"ನಾನು ಮನುಷ್ಯ. ಮಾನವನಾಗಿ ಇಲ್ಲಿ ಬದುಕನ್ನು ನೋಡಿದ್ದೇನೆ."

"ಸಂತೋಷ. ನೀವು ಹೀಗೆ ಉತ್ತರ ಕೊಡುವಿರೆಂದು ನಿರೀಕ್ಷಿಸಿಯೇ ಇದ್ದೆ!"

"ಈ ಕಾದಂಬರಿಯಲ್ಲಿ ಚಿತ್ರಿತವಾಗಿರುವ ಸಮಾಜ ಎಂಥದು? ಸುತ್ತುಮುತ್ತಲೂ ಔದ್ಯೋಗಿಕ ಬೆಳವಣಿಗೆಯಾಗುತ್ತಲೇ ಇದ್ದು, ಪಾಳೆಯಗಾರ ಆಚಾರ ವಿಚಾರಗಳ ಮೇಲೆ ಒಂದೇ ಸಮನೆ ಆಘಾತವಾಗುತ್ತಿದೆ. ಇಲ್ಲಿ ಹೆಚ್ಚಿನ ಜನ, ಬದಲಾವಣೆಯನ್ನು ಸ್ವಾಗತಿಸದೇ

ಇದ್ದರೂ ಅನಿವಾರ್ಯವೆಂದು ಒಪ್ಪಿಕೊಳ್ಳುವುದನ್ನು ಕಾಣುತ್ತೇವೆ. ಹೊಸ ಹಳೆಯ ಮನೋವೃತ್ತಿಗಳ ನಡುವೆ ಮಠಾರ ಜೀವನದಲ್ಲಿ ತಾಕಲಾಟಗಳಾಗುವುದನ್ನು ಕಾಣುತ್ತಲೇ ಇರುತ್ತೇವೆ."

"ಆದರೆ ಬೇರೆ ರೀತಿಯ ಮಠಾರಗಳೂ ಇವೆ, ಅಲ್ಲವೆ ?"

"ಇವೆ. ಔದ್ಯೋಗಿಕ ವ್ಯವಸ್ಥೆಯ ಒತ್ತಡಕ್ಕೆ ಸಿಲುಕಿ, ಹಿಂದಿನ ಜೀವನ ಕ್ರಮ ಎಷ್ಟೋ ಕಡೆ ಬಿರುಕುಬಿಟ್ಟಿದೆ. ಈಗೀಗ ವಿವಿಧ ಜಾತಿ ಕೋಮುಗಳ ಜನ ಒಂದೇ ಕಡೆ ವಾಸವಾಗಿರುವ ಮಠಾರಗಳೂ ಕಾಣಸಿಗುತ್ತವೆ. ಕನ್ನಡ ನಾಡಿನ ದೊಡ್ಡದೊಡ್ಡ ನಗರಗಳಲ್ಲಿ ಅಕ್ಕಪಕ್ಕದ ಮನೆಯವರು ಯಾರೆಂಬುದು ನಮಗೆ ತಿಳಿದಿರುವುದುಂಟು. ಆದರೆ ಅದನ್ನು ತಿಳಿದುಕೊಳ್ಳಲು ಬಿಡುವಾಗಲೀ ಅಪೇಕ್ಷೆಯಾಗಲಿ ಇರದ ಮಠಾರ ಜೀವನವನ್ನು ಮುಂಬಯಿಯಂಥ ಶಹರಗಳಲ್ಲಿ ಕಾಣುತ್ತೇವೆ. ಅಲ್ಲಿ ರೂಪುಗೊಂಡಿರುವ ಹಣದ, ದುಡಿಮೆಯ, ಸಮಾಜ ವ್ಯವಸ್ಥೆಯೊಳಗೆ ಜಾತಿ ಮತಗಳ ಕಟ್ಟುಪಾಡು ಆಶ್ಚರ್ಯವೆನಿಸುವ ರೀತಿಯಲ್ಲಿ ಸಡಿಲವಾಗಿದೆ. ಅದು 'ಚಾಳ್' ಜೀವನ. ನಮ್ಮ ನಾಡಿನ ಮಠಾರ ಜೀವನಕ್ಕಿಂತ ಭಿನ್ನವಾದದ್ದು."

"ನಮ್ಮಲ್ಲಿ ಈಗಿರುವ ಮಠಾರ ಜೀವನವೂ ಕ್ರಮೇಣ ಬದಲಾಗುತ್ತದೆಂದು ನಿಮ್ಮ ಅಭಿಪ್ರಾಯವಲ್ಲವೆ ?"

"ಹೌದು, ಖಂಡಿತವಾಗಿಯೂ ಪ್ರತಿದಿನವೂ ಅದು ಬದಲಾಗುತ್ತಲೇ ಇದೆ. ಮಾರ್ಪಾಟು ಹೊಂದುತ್ತಲೇ ಇರುವ ನಮ್ಮ ಬದುಕಿನ ವ್ಯವಸ್ಥೆ, ಮಠಾರ ಜೀವನದಲ್ಲೂ ಸ್ವಾಭಾವಿಕವಾಗಿಯೇ ಪ್ರತಿಬಿಂಬಿತವಾಗುತ್ತಿದೆ."

"ನಿಮ್ಮ ಪಾತ್ರಗಳು—"

"ಏನು ಹೇಳಿ ?"

"ಪುಸ್ತಕವನ್ನೋದಿದ ಪ್ರತಿಯೊಬ್ಬರೂ ಹೆಚ್ಚಿನ ಪಾತ್ರಗಳನ್ನೆಲ್ಲ ಸುತ್ತುಮುತ್ತಲೂ ಗುರುತಿಸಬಹುದು."

"ಹಾಗಾಯಿತೆಂದರೆ ನಾನು ಧನ್ಯ. ಸಾಹಿತ್ಯಕೃತಿ ಜೀವಂತ ವ್ಯಕ್ತಿಗಳ ಛಾಯಾಗ್ರಹಣವಲ್ಲ; ಅವರ ನಡೆನುಡಿಗಳ ವರದಿಯಲ್ಲ.

ಆದರೆ, ಸೂಕ್ಷ್ಮ ನಿರೀಕ್ಷಣೆಯ ಸಾಮರ್ಥ್ಯವುಳ್ಳ ಬರೆಹಗಾರ, ಬದುಕಿನಲ್ಲಿ ಕಾಣುವ ವಿಧವಿಧದ ವ್ಯಕ್ತಿಗಳಿಂದ ಸಮಾನ ಗುಣಗಳನ್ನು ಆಯ್ದುಕೊಳ್ಳಬೇಕು. ಪ್ರತಿಯೊಂದು ಪಾತ್ರದ ಸೃಷ್ಟಿಯ ಹಿಂದೆಯೂ ಅಂಥದೇ ಗುಣಗಳುಳ್ಳ ಎಷ್ಟೋ ವ್ಯಕ್ತಿಗಳ ಸ್ವಭಾವ ನಿರೀಕ್ಷಣೆಯ ಮೊತ್ತವಿರಬೇಕು. ಅಂತಹ ಮೊತ್ತವೇ ಕಲಾವಿದನಾದ ಬರೆಹಗಾರನಿಗೆ ದೊರೆಯುವ ಆವೆಮಣ್ಣು. ಅದನ್ನು ಹದಗೊಳಿಸಿದ ಬಳಿಕ ಬರೆಹಗಾರ—ಶಿಲ್ಪಿಯ ಕೌಶಲ ಪ್ರತಿಭೆಗಳಿಗೆ ಅನುಗುಣವಾಗಿ ಕೃತಿ ಸಿದ್ಧವಾಗುತ್ತದೆ. ವಾಸ್ತವವಾದದಂಥ ಒಳ್ಳೆಯ ಪ್ರವೃತ್ತಿ ಅಪೇಕ್ಷಿಸುವುದು ಅದನ್ನು."

"ನಿಮ್ಮ 'ರಂಗಮ್ಮನ ವಠಾರ' ಆ ಸಿದ್ಧಾಂತಕ್ಕೆ ಅನುಗುಣವಾಗಿಯೇ ಇದೆ ಎನ್ನುತ್ತೀರಾ ?"

"ಪ್ರಯತ್ನವನ್ನಂತೂ ಮಾಡಿದ್ದೇನೆ."

"ನಮ್ಮ ಆಧುನಿಕ ಸಾಹಿತ್ಯದಲ್ಲಿ ಕಾಣುವ ವಾಸ್ತವವಾದದ ಪ್ರವೃತ್ತಿ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದ ಫಲವಾಗಿ ಹುಟ್ಟಿತು, ಅಲ್ಲವೆ ?"

"ಆರಂಭದಲ್ಲಿ ಹಾಗಾಯಿತು ಎನ್ನದಿರಲಾರೆ. ವಿದೇಶೀಯರ ಆಳ್ವಿಕೆಗೆ ಒಳಗಾದ ನಾವು ಅವರ ಸಾಹಿತ್ಯದ ಪ್ರಭಾವಕ್ಕೆ ಸಿಗುವುದು ಅನಿವಾರ್ಯವೇ ಆಗಿತ್ತು........ಆಧುನಿಕ ಕನ್ನಡ ಸಾಹಿತ್ಯದ ಮೊತ್ತ ಮೊದಲಿನ ಲಲಿತಕೃತಿಗಳೇ ವಾಸ್ತವವಾದದ ಬಾವುಟವನ್ನು ಹಾರಿಸಿದುವೆಂಬುದು ಅಭಿಮಾನದ ಸಂಗತಿ. ೧೮೮೭ನೆಯ ಇಸವಿಯಲ್ಲಿ ಪ್ರಕಟವಾದ ಕನ್ನಡದ ಪ್ರಪ್ರಥಮ ಏಕಾಂಕ ನಾಟಕ 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ' ಮತ್ತು ೧೮೯೯ರಲ್ಲಿ ಪ್ರಕಟವಾದ ಕನ್ನಡದ ಪ್ರಪ್ರಥಮ ಕಾದಂಬರಿ 'ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯವು' — ಇವು ಎರಡೂ ವಾಸ್ತವವಾದದ ಹೆದ್ದಾರಿಯನ್ನೇ ಹಾಕಿಕೊಟ್ಟುವೆಂದು ಧಾರಾಳವಾಗಿ ಹೇಳಬಹುದು."

"ಸಾಹಿತ್ಯ, ಜೀವನವನ್ನು ನಿರೂಪಿಸಬೇಕು ಅಲ್ಲವೆ ?"

"ಸಾಹಿತ್ಯ, ಜೀವನವನ್ನು ನಿರೂಪಿಸಲೂ ಬೇಕು, ರೂಪಿಸಲೂ

ಬೇಕು."

"ಆದರೆ ಬದುಕಿನ ಯಥಾರ್ಥ ಚಿತ್ರಣವೊಂದರಿಂದಲೇ ಎರಡೂ ಕೆಲಸಗಳು ಆಗಲಾರವು, ಅಲ್ಲವೆ?"

"ಸರಿ ಹೇಳಿದಿರಿ. ಯಾವುದೋ ದೇಶದ ಯಾವುದೋ ಕಾಲದ ಸಾಹಿತ್ಯವನ್ನು ಉದಾಹರಿಸಿ ವಾಸ್ತವವಾದವನ್ನು ಒರಟು ನಿಸರ್ಗ ವಾದವಾಗಿ ವಿವರಿಸುವವರಿದ್ದಾರೆ. ಅದು ಸರಿಯಲ್ಲ. ಸಮಾಜದ ಹಿತೇಚ್ಛುವಾದ, ನಾಳೆಯ ನವ್ಯತೆಯನ್ನು ಗುರುತಿಸ ಬಲ್ಲ, ಬರೆಹ ಗಾರನ ಕೈಯಲ್ಲಿ ವಾಸ್ತವವಾದದ ಪ್ರವೃತ್ತಿ ಅಪೂರ್ವ ಶಕ್ತಿಯುಳ್ಳ ಸಂಜೀವಿನಿಯಾಗಬೇಕು. ಯಥಾರ್ಥವಾದಕ್ಕೆ ಕಟ್ಟು ಬಿದ್ದು, ಸುಲಭಲಭ್ಯವಲ್ಲವೆಂಬ ಒಂದೇ ಕಾರಣದಿಂದ ಅಸ್ಪಷ್ಟವಾದ, ಆದರೆ ಒಳ್ಳೆಯ, ಚಿತ್ರಗಳನ್ನು ಎತ್ತಿ ತೋರಿಸದೇ ಇರುವುದೂ ಸರಿಯಲ್ಲ. ನಿಜ ಸ್ಥಿತಿಯ ಚಿತ್ರಣದಲ್ಲಿ ಆಗಾಗ್ಗೆ ಅಪೇಕ್ಷಣೀಯ ಪರಿಸ್ಥಿತಿಯ ಸೂಕ್ಷ್ಮ ಬಣ್ಣಗಳನ್ನೂ ಉಪಯೋಗಿಸಬೇಕು."

"ಪೇಂಟರ್ ಶಂಕರನಾರಾಯಣಯ್ಯ ಮತ್ತು ಚಂಪಾ ಅವರ ಜೋಡಿಯ ವಿಷಯದಲ್ಲಿ ಹಾಗೆ ಹೇಳಬಹುದಲ್ಲವೆ?"

"ಹೌದು, ಸರಿಯಾಗಿಯೇ ಊಹಿಸಿದಿರಿ."

"ಪಾತ್ರಗಳನ್ನು, ಒಂದೋ ಕರಿಯದಾಗಿ ಇಲ್ಲವೆ ಬಿಳಿಯದಾಗಿ ಚಿತ್ರಿಸುವುದು ವಾಸ್ತವವಾದದ ಪ್ರವೃತ್ತಿಗೆ ವಿರುದ್ಧವೆ?"

"ವಿರುದ್ಧ. ನಮ್ಮ ಪಾತ್ರಗಳು ಒಮ್ಮೊಮ್ಮೆ ಸಕಲ ಸದ್ಗುಣ ಸಂಪನ್ನರು ಇಲ್ಲವೆ ದುರಾಚಾರಗಳ ದಾನವರು. ಇದು ಸರಿಯಲ್ಲ. ಪ್ರತಿಯೊಬ್ಬನಲ್ಲಿ ಒಳ್ಳೆಯ ಗುಣಗಳೂ ಇರುತ್ತವೆ, ಕೆಟ್ಟ ಗುಣಗಳೂ ಇರುತ್ತವೆ. ಗುಣಗಳ ದಾಮಾಶಯಕ್ಕೆ ತಕ್ಕಂತೆ ಆ ವ್ಯಕ್ತಿಗಳನ್ನು ಒಳ್ಳೆಯವರೆಂದೋ ಕೆಟ್ಟವರೆಂದೋ ಕರೆಯುತ್ತೇವೆ. ಆದರೆ 'ಒಳ್ಳೆಯ ವರು' ಎಂದೊಡನೆ ಅವರಲ್ಲಿ ದುರ್ಗುಣಗಳೇ ಇಲ್ಲ ಎನ್ನುವುದಾಗಲೀ, 'ಕೆಟ್ಟವರು' ಎಂದೊಡನೆ ಅವರು ಕಡು ಪಾಪಿಗಳೇ ಎಂದಾಗಲೀ ಅರ್ಥವಲ್ಲ."

"ರಂಗಮ್ಮನನ್ನು ಉದಾತ್ತವ್ಯಕ್ತಿಯಾಗಿ ನೀವು ಯಾಕೆ ಚಿತ್ರಿ

ಸಿಲ್ಲವೆಂಬುದು ಈಗ ಅರ್ಥವಾಯಿತು."

"ರಂಗಮ್ಮನನ್ನು 'ದೇವತೆ'ಯಾಗಿ ಚಿತ್ರಿಸುವುದು ಆದರ್ಶದ ಪರಮಾವಧಿಯಾದೀತು. ಹಲವು ಒಳ್ಳೆಯ ಗುಣಗಳಿದ್ದರೂ ರಂಗಮ್ಮ 'ದೇವತೆ'ಯಾಗುವುದು ಸಾಧ್ಯವಿಲ್ಲ. ಆಕೆಯ ಜೀವನ ವಿಧಾನ, ಅದನ್ನು ಕೋದಿರುವ ಆರ್ಥಿಕ ಸೂತ್ರ, ಅಂತಹ ಅವಕಾಶವನ್ನು ಆಕೆಗೆ ಕೊಡುವುದಿಲ್ಲ."

"ಅದು ನಿಜ....ಇತರ ಪಾತ್ರಗಳೂ ಅಷ್ಟೆ. ಒಬ್ಬೊಬ್ಬರ ಮೂರ್ಖತನವನ್ನು ಕಂಡು ನಗು ಬಂದರೂ ಬುದ್ಧಿವಂತಿಕೆಯನ್ನು ನೋಡಿ ಮೆಚ್ಚಬೇಕೆನಿಸಿದರೂ ಅವರು ಆ ರೀತಿ ಇರುವರಲ್ಲಾ ಎಂದು ಮರುಕವಾಗುತ್ತದೆ."

"ಸಮಾಜ ವ್ಯವಸ್ಥೆ ಅವರನ್ನು ಆ ರೀತಿ ಇರಿಸಿದೆಯಲ್ಲಾ ಎಂದು ಮರುಕವಾಗಬೇಕು."

"ಈ ಉದ್ದೇಶದಿಂದಲೆ ನೀವು ಕೃತಿ ರಚಿಸಿದಿರಿ ಅಲ್ಲವೆ ?"

"ಹೌದು....ಆದರೆ ಪ್ರಯತ್ನ ಯಶಸ್ವಿಯಾಗಿದೆಯೋ ಇಲ್ಲವೋ!"

"ಅದನ್ನು ಹೇಳಬೇಕಾದವರು ನಾವು."

"ತಲೆ ಬಾಗಿದೆ !"

"ನಿಮ್ಮ 'ರಂಗಮ್ಮನ ವಠಾರ' ಕೃತಿ ಬರುತ್ತದೆಂದು ಓದಿದಾಗ ಏನನಿಸಿತು ಗೊತ್ತೆ?"

"ಏನು ?"

"ನಿರಂಜನರೂ **ಅದೇ** ವಿಷಯ ಬರೆಯಹೊರಟರಲ್ಲಾ ಎನಿಸಿತು."

"ಆ ವಿಷಯವೆಂದಿರಾ ? ವಿಷಯದ ಬಗ್ಗೆ ನನ್ನ ಜಗಳವಿಲ್ಲ. ಭಿನ್ನಾಭಿಪ್ರಾಯವಿರುವುದು ಆ ವಿಷಯದ ನಿರೂಪಣೆಗೆ ಸಂಬಂಧಿಸಿ. ವಿಷಯ ಯಾವುದೇ ಆದರೂ ಬದುಕನ್ನು ನೋಡುವ ದೃಷ್ಟಿಯೊಂದಿರುತ್ತದೆ!....ನಿಮ್ಮ ಊಹೆಗೆ ಆಧಾರವೇ ಇಲ್ಲ ಎನ್ನಲಾರೆ. ' ವಠಾರ ' ಪದವನ್ನು 'ಗಟಾರ'ವೆಂದು ಈಗಾಗಲೇ ಬಳಸಿದ್ದರಿಂದ ಹಾಗಾಗಿದೆ. ಒಂದೇ ಪದಕ್ಕೆ ಬೇರೆ ಬೇರೆ ಅರ್ಥಗಳಿರುವುದು ಸಾಧ್ಯ. ಆದರೆ,

ಯಾವುದಾದರೂ ಪದಕ್ಕೆ ವಿಪರೀತಾರ್ಥ ಕಲ್ಪಿಸಿ ಅದೇ ಸತ್ಯವೆಂದು ಸಾಧಿಸುವ ಆಧುನಿಕ ಶಬ್ದಬ್ರಹ್ಮರಿಗೂ ನಮ್ಮ ನಾಡಿನಲ್ಲಿ ಅಭಾವವಿಲ್ಲ."

"ನಿಮ್ಮ ಈ ಕೃತಿಯೂ ಕೈಹೊತ್ತಿಗೆಯ ರೂಪದಲ್ಲೇ ಹೊರಗೆ ಬಂದು ಸುಲಭ ಬೆಲೆಗೆ ಓದುಗರಿಗೆ ದೊರೆಯುವಂತಾದುದಕ್ಕೆ ನೀವು ಸಂತೋಷಪಡುವಿರಲ್ಲವೆ ?"

"ಹೌದು. ಅದಕ್ಕಾಗಿ ವಾಹಿನಿ ಪ್ರಕಾಶನದ ಒಡೆಯರಿಗೆ ನಾನು ಕೃತಜ್ಞ. ಕಾದಂಬರಿಗೆ ಹೊಂದಿಕೆಯಾಗುವ ಸುಂದರವಾದ ಹೊದಿಕೆಯ ಚಿತ್ರವನ್ನು ಬರೆದುಕೊಟ್ಟ ಶ್ರೀ. ಮಧುಸೂದನರಿಗೂ ನನ್ನ ನೆನಕೆ ಸಲ್ಲಬೇಕು. ಅಂದವಾಗಿ ಮುದ್ರಿಸಿರುವ ಕೀರ್ತಿ ಈಸ್ಟರ್ನ್ ಪ್ರೆಸ್ಸಿಗೆ ಸೇರಿದ್ದು."

"ವಿವರಣೆಗಳಿಗಾಗಿ ಋಣಿ ಹೊರಡಲು ಸಮ್ಮತಿ ಕೊಡಿ. ಏಕಾಂತದಲ್ಲಿ ಒಂದೆಡೆ ಕುಳಿತು ನಿಮ್ಮ ಪಾತ್ರಗಳಾದ ರಂಗಮ್ಮನೊಡನೆ ಚಂಪಾವತಿ – ಶಂಕರನಾರಾಯಣಯ್ಯರೊಡನೆ, ಚಂದ್ರಶೇಖರಯ್ಯ– ಜಯರಾಮು – ರಾಧೆಯರೊಡನೆ, ಆ ಓದುವ ಹುಡುಗರೊಡನೆ, ವೆಂಕಟೇಶನೊಡನೆ, ಪೋಲೀಸ್ ಶಿವಸ್ವಾಮಿಯೊಡನೆ, ಅವರೆಲ್ಲರೊಡನೆ ಇನ್ನೊಮ್ಮೆ ಬೆರೆಯಬೇಕು. ಆ ಬಳಿಕ 'ರಂಗಮ್ಮನ ವಠಾರ'ದ ಬಗೆಗೆ ಅಭಿಪ್ರಾಯ ತಿಳಿಸುವೆ."

" ಹಾಗೆಯೇ ಆಗಲಿ."

೨೫ ಆಗಸ್ಟ್, ೧೯೫೪
ವಿಲ್ಸನ್ ಗಾರ್ಡನ್
ಬೆಂಗಳೂರು–೨

**ನಿರಂಜನ**

# ಈವರೆಗಿನ ಕೈಹೊತ್ತಿಗೆಗಳು

| | | | |
|---|---|---|---|
| ೧. | *ಗೃಹಲಕ್ಷ್ಮಿ | .... | ಅ. ನ. ಕೃ. |
| ೨. | *ಮಲ್ಲಿ | ... | ದೇವುಡು |
| ೩. | *ವಿಮೋಚನೆ | ... | ನಿರಂಜನ |
| ೪. | *ಪರದೇಶಿ | ... | ಕುಲಕರ್ಣಿ ಬಿಂದುಮಾಧವ |
| ೫. | *ಸ್ವರ್ಣರೇಖೆ | ... | ವೀರಕೇಸರಿ |
| ೬. | *ಅಪಸ್ವರ | ... | ತ್ರಿವೇಣಿ |
| ೭. | *ರಾಯರು ಕಂಡ ರಂಗು | ... | ಬೆಳ್ಳಿ ರಾಮಚಂದ್ರರಾವ್ |
| ೮. | *ರುಕ್ಮಿಣಿ | ... | ಅ. ನ. ಕೃ. |
| ೯. | *ವಜ್ರದುಂಗುರ | ... | ನಾ. ರಾಜಣ್ಣ |
| ೧೦. | *ಕೇದಿಗೆ ವನ | ... | ತ. ರಾ. ಸು. |
| ೧೧. | *ಸಮಾಜ ಗರ್ಭದಲ್ಲಿ | ... | ಸಿ. ಬಿ. ಚಂದ್ರಶೇಖರ್ |
| ೧೨. | ತೀರಿದ ಆಸೆ | ... | ಸೇವ ನಮಿರಾಜಮಲ್ಲ |
| ೧೩. | ಪ್ರಕೃತಿ | ... | ಶ್ರೀರಂಗ |
| ೧೪. | ಹೊಲ–ಮನೆ | ... | ಶ್ರೀಕೃಷ್ಣ ಪಾಟೀಲ |
| ೧೫. | ದೇವದಾಸಿ–ಎಚ್ಚಮನಾಯಕ | ... | ದಿವಂಗತ ಕೆ. ಹಿರಣ್ಣಯ್ಯ |
| ೧೬. | ರಾಣೀ ಅಜ್ಞಾತಾ | ... | ನವಗಿರಿನಂದ |
| ೧೭. | ಬಯಕೆಯ ಬೆಲೆ | ... | ಎಚ್ಚೆಸ್ಕೆ |
| ೧೮. | ರಂಗಮ್ಮನ ವಠಾರ | ... | ನಿರಂಜನ |

## ಅಚ್ಚಿನಲ್ಲಿ

| | | |
|---|---|---|
| ಗೊಂಡಾರಣ್ಯ | ... | ಶಿವರಾಮ ಕಾರಂತ |

## ಮುಂಬರುವ ಕೈಹೊತ್ತಿಗೆಗಳು

| | | |
|---|---|---|
| ಶ್ರೇಯಾಂಸ | ... | ಮಿರ್ಜಿ ಅಣ್ಣಾರಾಯ |
| ತಾಯಿ ಮಕ್ಕಳು | ... | ಅ. ನ. ಕೃ. |
| ನಾಟ್ಯಸರಸ್ವತಿ ಶಾಂತಲಾದೇವಿ | ... | ಅ. ನ. ಕೃ. |

---

*ಪ್ರತಿಗಳು ಮುಗಿದಿವೆ.